₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 28.11.2024 ಸಂಪುಟ: 9 ಸಂಚಿಕೆ: 339 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬುಮ್ರಾ ನಂ.1 ಟೆಸ್ಟ್ ಬೌಲರ್

ಜೈಸ್ವಾಲ್ ನಂ.2 ಬ್ಯಾಟರ್

ಇಂಗ್ಲೆಂಡ್‌ನ ಜೋ ರೂಟ್ ನಂ. 1

ಐಸಿಸಿ ಶ್ರೇಯಾಂಕ ಪಟ್ಟಿಯಲ್ಲಿ ಭಾರತಕ್ಕೆ ಮತ್ತೆ ಅಗ್ರಸ್ಥಾನ

ಪುಟ ತೆರೆದಂತೆ...

ಭೂಕಂಪದಿಂದ ನಲುಗಿದರೂ ಆದರ್ಶಗಳಿಂದ ಭದ್ರವಾಗಿರುವ ಜಪಾನ್!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಬಂಡೀಪುರದ ಆನೆ ಮತ್ತು ಲಾರೆನ್ಸನ ಹಾವು
ಕಾಡುದಾರಿ
ಹರೀಶ್ ಕೇರ
ಸಂ.ಗಮ | 7

ಮಾತಂದ್ರೆ ಮಾತು

ಕುಮಾರಸ್ವಾಮಿ ಇಲ್ಲದೇ ಹೋಗಿದ್ರೆ ಜಿಟಿಡಿ ತಮ್ಮ ಮಗನೊಂದಿಗೆ ಜೈಲಿನಲ್ಲಿರಬೇಕಿತ್ತು.

ಎಚ್.ಡಿ.ರೇವಣ್ಣ
ಮಾಜಿ ಸಚಿವ

ದಾರಿದೀಪೋಕ್ತಿ

ನಿಮಗೇನು ಇಷ್ಟವೋ ಅದನ್ನು ಮಾಡುವುದೇ ಸ್ವಾತಂತ್ರ್ಯ. ನೀವು ಏನನ್ನು ಮಾಡುತ್ತೀರೋ, ಅದನ್ನು ಇಷ್ಟಪಡುವುದು ಸಂತೋಷ. ಹೀಗಾಗಿ ನೀವು ಏನೇ ಮಾಡಿದರೂ ಅದರಿಂದ ಈ ಸ್ವಾತಂತ್ರ್ಯ ಮತ್ತು ಸಂತಸ ಸಿಗುವುದಾ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಅವೆರಡೂ ಸಿಗದಿದ್ದರೆ ಯಾವ ಕೆಲಸವನ್ನೂ ಮಾಡಬಾರದು.

ವಕ್ರತುಂಡೋಕ್ತಿ

ಜೀವನ ಅಂದ್ರೆ, ಒಂದೇ ವರ್ಷವನ್ನು ಎಪ್ಪತ್ತೈದು-ಎಂಬತ್ತು ವರ್ಷ ಬದುಕುವುದು.

ವರಿಷ್ಠರ ಜತೆ ಸಂಪುಟ ಪುನಾರಚನೆ ಚರ್ಚೆ ಬಗ್ಗೆ ಸಂಭವ

ಸಿಎಂ ಇಂದು ದಿಲ್ಲಿಗೆ

ಬೆಂಗಳೂರು: ಉಪಚುನಾವಣೆಯ ಭರ್ಜರಿ ಯಶಸ್ಸು ಹಾಗೂ ಕರ್ನಾಟಕದಲ್ಲಿ ಸಚಿವ ಸಂಪುಟ ಪುನಾರಚನೆಯ ಗುಸುಗುಸು ಆರಂಭವಾಗಿರುವ ಹೊತ್ತಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿ ಪ್ರವಾಸ ಕೈಗೊಂಡಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಐಸಿಸಿ ಕಾರ್ಯಕಾರಿ ಸಭೆಯಲ್ಲಿ ಭಾಗವಹಿಸಲು ಗುರುವಾರ ಸಂಜೆ ದೆಹಲಿಗೆ ಪ್ರಮಾಣ ಬೆಳೆಸಲಿದ್ದಾರೆ. ಶುಕ್ರವಾರ ಕಾರ್ಯಕಾರಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಆದರೆ ಗುರುವಾರ ರಾತ್ರಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾಗಿ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ದೆಹಲಿಯಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಾಗೂ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಉಪಚುನಾವಣಾ ಫಲಿತಾಂಶ ಸೇರಿದಂತೆ ವಿವಿಧ ವಿಷಯಗಳನ್ನು ಚರ್ಚೆ ನಡೆಸುವ ಸಾಧ್ಯತೆಗಳಿವೆ. ಈ ವೇಳೆ ಸಚಿವ ಸಂಪುಟ ಪುನಾರಚನೆ ಸಂಬಂಧ ಚರ್ಚಿಸುವ ಸಾಧ್ಯತೆಯಿದೆ ಎನ್ನಲಾಗಿದೆ. ವಾಲ್ಮೀಕಿ ಹಗರಣದ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಿದ್ದ ನಾಗೇಂದ್ರ ಅವರನ್ನು ವಾಪಸು ಸಂಪುಟಕ್ಕೆ ಸೇರಿಸಿಕೊಳ್ಳಬೇಕೆಂಬ ಒತ್ತಡ ಹೆಚ್ಚಾಗುತ್ತಿದೆ. ಆದ್ದರಿಂದ ಇದೇ ಸಮಯದಲ್ಲಿ ಕೆಲ ಸಚಿವರನ್ನು ಕೈಬಿಡ್ಡು ಹೊಸಬರಿಗೆ ಅವಕಾಶ ನೀಡುವ ಬಗ್ಗೆಯೂ ಚರ್ಚೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಸಂಪುಟ ಪುನಾರಚನೆಗೆ ಪಕ್ಷದಲ್ಲಿ ವಿರೋಧವಿದ್ದು, ಸರಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷದಲ್ಲಿಯೇ ರಾಜೀನಾಮೆ ಪಡೆಯುವುದು ಸರಿಯಲ್ಲ ಎಂದು ಕೆಲ ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈಗಲೇ ರಾಜೀನಾಮೆ ಪಡೆದರೆ, ಪಕ್ಷದಲ್ಲಿ ಆಗಬಹುದಾದ ಅಸಮಾಧಾನ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಹೈಕಮಾಂಡ್ ನಾಯಕರೊಂದಿಗೆ ಚರ್ಚಿಸಿ, ಒಂದು ವೇಳೆ ಅನುಮತಿ ಸಿಕ್ಕರೆ ಡಿಕೆಶಿ ನೀಡಿರುವ ಸುಳಿವಿನಿಂದ ಸಂಪುಟ ಪುನಾರಚನೆಯಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಪ್ರಿಯಾಂಕಾಗೆ ಡಿಕೆ ಅಭಿನಂದನೆ

ವಯನಾಡು ಉಪಚುನಾವಣೆಯಲ್ಲಿ ನಾಲ್ಕು ಲಕ್ಷ ಅಂತರದ ಗೆಲುವು ಸಾಧಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಬುಧವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಈ ವೇಳೆ ಉಪಚುನಾವಣೆ ಫಲಿತಾಂಶ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಕೆಲ ಕಾಲ ಚರ್ಚಿಸಿದರು ಎಂದು ತಿಳಿದುಬಂದಿದೆ.

- ವರಿಷ್ಠರಿಗೆ ಉಪಚುನಾವಣೆಯ ಗೆಲುವಿನ ವರದಿ ಒಪ್ಪಿಸಿದ ಸಿಎಂ, ಡಿಸಿಎಂ
- ಬಿ.ನಾಗೇಂದ್ರ ಅವರನ್ನು ವಾಪಸು ಸಂಪುಟಕ್ಕೆ ಸೇರಿಸಿಕೊಳ್ಳುವ ಕುರಿತು ಚರ್ಚೆ
- ಕೆಲ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಬಗ್ಗೆಯೂ ಚಿಂತನೆ
- ಒಂದೂವರೆ ವರ್ಷದಲ್ಲಿಯೇ ರಾಜೀನಾಮೆ ನೀಡಲು ಅನೇಕ ಸಚಿವರ ವಿರೋಧ
- ಈಗಲೇ ರಾಜೀನಾಮೆ ಪಡೆದರೆ ಪಕ್ಷದಲ್ಲಿ ಅಸಮಾಧಾನವೇಳುವ ಸಾಧ್ಯತೆ

ಹೈಕಮಾಂಡ್‌ಗೆ ವರದಿ ಸಲ್ಲಿಕೆ

ಇತ್ತೀಚೆಗೆ ಮುಕ್ತಾಯಗೊಂಡ ಉಪಚುನಾವಣೆಯಲ್ಲಿ ಮೂರಕ್ಕೆ ಮೂರು ಕ್ಷೇತ್ರಗಳನ್ನು ಗೆದ್ದಿರುವ ಬಗ್ಗೆ ಪಕ್ಷದ ಹೈಕಮಾಂಡ್‌ಗೆ ವರದಿ ನೀಡಲಿದ್ದಾರೆ. ಇದರೊಂದಿಗೆ ಭಾರಿ ವಿವಾದಕ್ಕೆ ಕಾರಣವಾಗಿರುವ ವಕ್ಫ್ ನೋಟಿಸ್, ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದಂತೆ ಶಾಸಕರ ಹೇಳಿಕೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ.

ಕೆಲ ಸಚಿವರ ಭೇಟಿ ಸಾಧ್ಯತೆ: ಗುರುವಾರ ಕಾರ್ಯಕಾರಿ ಸಭೆಯ ಬಳಿಕ ವಿವಿಧ ಯೋಜನೆಗಳಿಗೆ ಅನುದಾನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರದ ಹಲವು ಸಚಿವರನ್ನು ಭೇಟಿಯಾಗುವ ಸಾಧ್ಯತೆಯಿದೆ. ಆದರೆ ಈವರೆಗೆ ದೆಹಲಿಯಲ್ಲಿ ಯಾವೆಲ್ಲ ಸಚಿವರನ್ನು ಭೇಟಿಯಾಗಲಿದ್ದಾರೆ ಎನ್ನುವ ಅಧಿಕೃತ ಮಾಹಿತಿ ಸಿಕ್ಕಿಲ್ಲ.

ಉಭಯ ಸದನಗಳಲ್ಲಿ ಮೋದಾನಿ ವಿವಾದ ಚರ್ಚೆಗೆ ಪ್ರತಿಪಕ್ಷ ಪಟ್ಟು

ಸಂಸತ್ತಿನ ಕಲಾಪಕ್ಕೆ ಅದಾನಿ ಲಂಚ ಅಡ್ಡಿ

ದೆಹಲಿ: ಗೌತಮ್ ಅದಾನಿ ಲಂಚ ವಿವಾದ, ಉತ್ತರ ಪ್ರದೇಶದ ಸಂಭಾಲ್‌ನಲ್ಲಿನ ಮಸೀದಿ ಸರ್ವೆ-ಗಲಭೆ ಮೊದಲಾದ ವಿಷಯಗಳ ಚರ್ಚೆಗೆ ಪ್ರತಿಪಕ್ಷಗಳ ಸದಸ್ಯರ ಪಟ್ಟು ಹಿಡಿದು ಲೋಕಸಭೆ-ರಾಜ್ಯಸಭೆಯಲ್ಲಿ ಪ್ರತಿಭಟನೆ ನಡೆಸಿದ್ದರಿಂದ ಎರಡೂ ಸದನಗಳ ಕಲಾಪವನ್ನು ದಿನದ ಮಟ್ಟಿಗೆ ಕೊನೆಗೊಳಿಸಿ ಗುರುವಾರಕ್ಕೆ ಮುಂದೂಡಲಾಗಿದೆ.

ಅಧಿವೇಶನದ ಆರಂಭದಲ್ಲಿ ಕಾಂಗ್ರೆಸ್ ಸೇರಿದಂತೆ ಇಂಡಿ ಒಕ್ಕೂಟದ ಪಕ್ಷಗಳ ಸದಸ್ಯರು ಅದಾನಿ ವಿರುದ್ಧ ಅಮೆರಿಕ ನ್ಯಾಯಾಲಯದಲ್ಲಿ ಲಂಚ ದೋಷಾರೋಪ ಆಗಿರುವುದು ಮತ್ತು ಸಂಭಾಲ್‌ನಲ್ಲಿನ ಗಲಭೆ ಸೇರಿದಂತೆ ಹಲವು ವಿಷಯಗಳ ಚರ್ಚೆಗೆ ಒತ್ತಾಯಿಸಿದರು. ಆದರೆ, ಸ್ಪೀಕರ್ ಅದಕ್ಕೆ ಅವಕಾಶ ನೀಡಲಿಲ್ಲ. ಆಗ ಪ್ರತಿಪಕ್ಷ ಸದಸ್ಯರೆಲ್ಲಾ ಎದ್ದು ನಿಂತು ಗದ್ದಲ ಮಾಡಲಾರಂಭಿಸಿದರು. ಸ್ಪೀಕರ್ ಓ ಬಿರ್ಲಾ ಅವರು, ಕಲಾಪ ಪಟ್ಟಿಯಲ್ಲಿ ಇರುವಂತೆ ಚರ್ಚೆ ನಡೆಸಲು ಅವಕಾಶ ನೀಡುವಂತೆ ಎಷ್ಟೇ ಮನವಿ ಮಾಡಿದರೂ ಪ್ರತಿಪಕ್ಷ ಸದಸ್ಯರು ಗದ್ದಲ ನಿಲ್ಲಿಸಲಿಲ್ಲ. ಆಗ ಲೋಕಸಭೆಯ ಕಲಾಪವನ್ನು ಆರಂಭದಲ್ಲಿ ಮಧ್ಯಾಹ್ನ 12ರವರೆಗೆ ಮತ್ತು ನಂತರ ಗುರುವಾರಕ್ಕೆ ಮುಂದೂಡಲಾಯಿತು.

ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಕೆಲ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರೆ, ಇತರೆ ವಿರೋಧ ಪಕ್ಷಗಳ ಸದಸ್ಯರು ಸದನದ ಹೊರಗೆ ನಿಂತು ಘೋಷಣೆ ಕೂಗಿದರು. ಪ್ರತಿಪಕ್ಷದವರ ಪ್ರತಿಭಟನೆ ಆರಂಭವಾದಾಗ 6 ನಿಮಿಷಗಳ ಕಾಲವಷ್ಟೇ ನಡೆದಿದ್ದ ಕಲಾಪವನ್ನು ಗದ್ದಲದ ಕಾರಣ ಮಧ್ಯಾಹ್ನದವರೆಗೆ ಮುಂದೂಡಲಾಯಿತು. ಮಧ್ಯಾಹ್ನವೂ ಮತ್ತೆ ಗಲಭೆ ನಡೆದಿದ್ದರಿಂದ ಕಲಾಪ ಗುರುವಾರಕ್ಕೆ ಮುಂದೂಡಲಾಯಿತು.

ಸರಕಾರ ಮೊಂಡು ಹಿಡಿದಿದೆ

'ಮೋದಾನಿ' (ಮೋದಿ-ಅದಾನಿ ಹೆಸರು ಸೇರಿಸಿ ಕಾಂಗ್ರೆಸ್ ಸೃಷ್ಟಿಸಿರುವ ಪದ) ವಿವಾದ ಚರ್ಚೆಗೆ ಅವಕಾಶ ನೀಡದೇ ಸರಕಾರ ಮೊಂಡು ಹಿಡಿದಿದೆ. ವಿಷಯಗಳ ಚರ್ಚೆಗೆ ಅವಕಾಶ ನೀಡುವ ಬದಲಾಗಿ ಕಲಾಪವನ್ನೇ ಮುಂದೂಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಆನೆಗೊಂದಿಯ ನವವೃಂದಾವನ ನಡುಗಡ್ಡೆ ವ್ಯಾಜ್ಯ

ರಾಯರ ಮಠಕ್ಕೆ ಆರಾಧನೆ ಅವಕಾಶ: ಸುಪ್ರೀಂ ಆದೇಶ

ಬೆಂಗಳೂರು: ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ ಬಳಿಯ ನವವೃಂದಾವನ ನಡುಗಡ್ಡೆಯಲ್ಲಿ ಶ್ರೀ ಪದ್ಮನಾಭ ತೀರ್ಥರ ಆರಾಧನೆಯನ್ನು ಮೊದಲು ಶ್ರೀರಾಘವೇಂದ್ರ ಸ್ವಾಮಿಗಳ ಮಠ ನಡೆಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಮೊದಲ ಒಂದೂವರೆ ದಿನ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೂರ್ವಿಕ ಗುರುಗಳಾದ ಶ್ರೀಪದ್ಮನಾಭ ತೀರ್ಥರ ಆರಾಧನೆ ನಡೆಸಲು ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಸರ್ವೋಚ್ಚ ನ್ಯಾಯಾಲಯ ಅನುಮತಿ ನೀಡಿದೆ.

ಶ್ರೀ ಪದ್ಮನಾಭ ತೀರ್ಥರ ಆರಾಧನೆ ನಿಮಿತ್ತ ನ.26ರಂದು ಸುದೀರ್ಘ ಚರ್ಚೆ ನಡೆಸಲು ಅವಕಾಶ ನೀಡಿದ್ದ ಸುಪ್ರೀಂಕೋರ್ಟ್, ನ.29 ರಂದು ಪೂರ್ತಿ ದಿನ ಪೂರ್ವಾರಾಧನೆ ಹಾಗೂ ನ.30ರಂದು ಮಧ್ಯಾಹ್ನದವರೆಗೆ ಮಧ್ಯಾರಾಧನೆ ಅವಕಾಶವನ್ನು ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ನೀಡಿದೆ. ಸುಪ್ರೀಂಕೋರ್ಟ್‌ನ ಮುಂದಿನ ಆದೇಶದವರೆಗೂ ಈ ಆದೇಶ ಚಾಲ್ತಿಯಲ್ಲಿರುತ್ತದೆ. ಉತ್ತರಾಧಿ ಮಠದಿಂದ ನ.30 ಮಧ್ಯಾಹ್ನ ದಿಂದ ಡಿ.1ರವರೆಗೆ ಆರಾಧನೆ ನೆರವೇರಿಸಲಾಗುತ್ತದೆ.

ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತ: 5 ವೈದ್ಯರ ಮೃತ್ಯು

ಕನೌಜ್: ಲಖನೌ-ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಭೀಕರ ಅಪಘಾತದಲ್ಲಿ ನಾಲ್ವರು ವೈದ್ಯರು ಹಾಗೂ ಒಬ್ಬ ಲ್ಯಾಬ್ ಟೆಕ್ನಿಷಿಯನ್ ಮೃತಪಟ್ಟಿದ್ದಾರೆ. ಆಗ್ರಾ ಮೂಲದ ಡಾ.ಅನಿರುದ್ಧ್ ವರ್ಮಾ (29), ಭದೋಹಿಯ ಡಾ.ಸಂತೋಷ್ ಕುಮಾರ್ ಮೌರ್ಯ(46), ಕನೌಜ್‌ನ ಡಾ. ಅರುಣ್ ಕುಮಾರ್(34), ಬರೇಲಿಯ ಡಾ. ನರ್ದೇವ್(35) ಹಾಗೂ ಲ್ಯಾಬ್ ಟೆಕ್ನಿಷಿಯನ್ ರಾಕೇಶ್ ಕುಮಾರ್ (38) ಮೃತರು. ಇವರೆಲ್ಲರೂ ಸೈಫೈನಲ್ಲಿರುವ ಉತ್ತರ ಪ್ರದೇಶ ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಲಖನೌದಲ್ಲಿ ಮದುವೆ ಕಾರ್ಯಕ್ರಮ ಮುಗಿಸಿಕೊಂಡು ಸೈಫೈಗೆ ಹಿಂದಿರುಗುವ ವೇಳೆ ದುರ್ಘಟನೆ ಸಂಭವಿಸಿದೆ.

ಮಹಾ ಸಿಎಂ ಆಯ್ಕೆ; ಬಿಜೆಪಿಗೆ ಶಿಂದೆ ಬೆಂಬಲ

ಫಡ್ನವೀಸ್ ಹಾದಿ ಸುಗಮ

ಮುಂಬೈ: ಮುಂದಿನ ಸಿಎಂ ಆಯ್ಕೆಯಲ್ಲಿ ಬಿಜೆಪಿ ನಾಯಕತ್ವದ ನಿರ್ಧಾರವನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇವೆ. ಅಲ್ಲದೆ ಸಿಎಂ ಆಯ್ಕೆ ವಿಚಾರದಲ್ಲಿ ಅಡ್ಡಿಯಾಗುವುದಿಲ್ಲ ಎಂದು ಮಹಾರಾಷ್ಟ್ರದ ಹಂಗಾಮಿ ಮುಖ್ಯಮಂತ್ರಿ ಏಕನಾಥ ಶಿಂದೆ ಬುಧವಾರ ಸ್ಪಷ್ಟಪಡಿಸಿದ್ದು, ದೇವೇಂದ್ರ ಫಡ್ನವೀಸ್ ಹಾದಿ ಸುಗಮವಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಏಕನಾಥ ಶಿಂದೆ, ನಾನು ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ಅಲ್ಲದೆ ಮೋದಿ, ಶಾ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ ಎಂಬ ಭರವಸೆ ಕೊಟ್ಟಿದ್ದೇನೆ ಎಂದರು.

ಇತ್ತೀಚೆಗೆ ನಡೆದ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಯು ಪ್ರಚಂಡ ಗೆಲುವು ಸಾಧಿಸಿತ್ತು. 288 ಸದಸ್ಯ ಬಲದ ಮಹಾರಾಷ್ಟ್ರದಲ್ಲಿ 230 ಸ್ಥಾನಗಳಲ್ಲಿ ಗೆದ್ದು ಅಧಿಕಾರ ಹಿಡಿದಿತ್ತು. ಮತ್ತೊಂದೆಡೆ ಮಹಾ ವಿಕಾಸ ಅಘಾಡಿ (ಎಂವಿಎ) ಕೇವಲ 46 ಸ್ಥಾನಗಳಲ್ಲಷ್ಟೇ ಜಯಿಸಿತ್ತು.

ಮಹಾರಾಷ್ಟ್ರದ ಮುಂದಿನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಬಿಜೆಪಿಯ ನಿರ್ಧಾರವನ್ನು ಶಿವಸೇನಾ ಬೆಂಬಲಿಸಲಿದೆ. ನಾವು ಅಡ್ಡಗಾಲು ಹಾಕುವುದಿಲ್ಲ. ಯಾರೂ ಅಸಮಾಧಾನಗೊಂಡಿಲ್ಲ. ನಾವೆಲ್ಲರೂ ಮಹಾಯುತಿ ಮೈತ್ರಿಕೂಟದ ಭಾಗವಾಗಿ ಒಗ್ಗಟ್ಟಾಗಿ ಕೆಲಸ ಮಾಡಿದ್ದೇವೆ. **- ಏಕನಾಥ ಶಿಂದೆ** ಮಹಾರಾಷ್ಟ್ರ ಹಂಗಾಮಿ ಸಿಎಂ

ತಾಯಿ, ಪತ್ನಿ, ಮಕ್ಕಳನ್ನು ಕೊಂದವನಿಗೆ ಮರಣದಂಡನೆ

ಮೈಸೂರು: ತಾಯಿ, ಪತ್ನಿ ಹಾಗೂ ಮಕ್ಕಳನ್ನು ಕೊಂದ ಸರಗೂರು ತಾಲೂಕು ಚಾಮೇಗೌಡನಹುಂಡಿ ನಿವಾಸಿ ಮಣಿಕಂಠಸ್ವಾಮಿಗೆ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. 2021ರ ಏಪ್ರಿಲ್ 28ರಂದು ಸಂಜೆ ಪತ್ನಿಯೊಂದಿಗೆ ಜಗಳವಾಡಿದ್ದ ಮಣಿಕಂಠಸ್ವಾಮಿ, ಮನೆಯವರೆಲ್ಲಾ ಮಲಗಿದ ನಂತರ ಕಬ್ಬಿಣದ ಊರುಗೋಲಿನಿಂದ ಪತ್ನಿ, ತಾಯಿ ಹಾಗೂ ಮಗ ಸಾಮ್ರಾಟ್‌ಗೆ ಬಲವಾಗಿ ಹಲ್ಲೆ ಮಾಡಿ ಕೊಂದು, ಮತ್ತೊಬ್ಬ ಮಗ ರೋಹಿತ್ನ ಕುತ್ತಿಗೆ ಹಿಸುಕಿ ಕೊಂದು ಪರಾರಿಯಾಗಿದ್ದ.

ಪೂನಿಯಾ ನಾಲ್ಕು ವರ್ಷ ಅಮಾನತು



ದೆಹಲಿ: ಮಾರ್ಚ್ 10 ರಂದು ರಾಷ್ಟ್ರೀಯ ತಂಡದ ಆಯ್ಕೆ ಟ್ರಯಲ್ಸ್ ವೇಳೆ ಉದ್ದೀಪನ ಮದ್ದು ಸೇವನೆ ಪರೀಕ್ಷೆಗೆ ಮಾದರಿ ನೀಡಲು ನಿರಾಕರಿಸಿದ್ದಕ್ಕೆ ಕುಸ್ತಿಪಟು ಬಜರಂಗ್ ಪೂನಿಯಾ ಅವರ ಮೇಲೆ 4 ವರ್ಷ ಅಮಾನತು ಹೇರಲಾಗಿದೆ. 2024ರ ಏ.23ರಿಂದ ಅಮಾನತು ಶಿಕ್ಷೆ ಅನ್ವಯವಾಗಿದೆ. 2028ರ ಏ.22ರವರೆಗೆ ಇರಲಿದೆ. ಬಜರಂಗ್ ಅವರು 4 ವರ್ಷ ಸ್ಪರ್ಧಾತ್ಮಕ ಕುಸ್ತಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತಿಲ್ಲ. ಹೊರದೇಶದಲ್ಲಿ ಕೋಚಿಂಗ್ ಹೊಣೆ ವಹಿಸಿಕೊಳ್ಳುವಂತಿಲ್ಲ. ಹೀಗಾಗಿ ಕ್ರೀಡಾ ಜೀವನ ಬಹುತೇಕ ಅಂತ್ಯವಾದಂತಾಗಿದೆ.

ಇಸ್ರೇಲ್-ಹಿಜ್ಬುಲ್ಲಾ ಕದನ ವಿರಾಮ ಜಾರಿ

ಜೆರುಸಲೇಂ: ಇಸ್ರೇಲ್ ಮತ್ತು ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರ ನಡುವೆ ಬುಧವಾರ ನಸುಕಿನಿಂದ ಕದನ ವಿರಾಮ ಜಾರಿಗೆ ಬಂದಿದೆ. ಕದನ ವಿರಾಮ ಒಪ್ಪಂದವನ್ನು ಹಿಜ್ಬುಲ್ಲಾ ಮುರಿದರೆ ಮರುಗಳಿಗೆಯಲ್ಲೇ ದಾಳಿ ನಡೆಸುವುದಾಗಿ ಇಸ್ರೇಲ್ ಎಚ್ಚರಿಕೆ ನೀಡಿದೆ. ಗಾಜಾದಲ್ಲಿ, ಇಸ್ರೇಲ್ ಮತ್ತು ಹಮಾಸ್ ನಡುವಿನ ಸುಮಾರು 14 ತಿಂಗಳ ಯುದ್ಧದಲ್ಲಿ 44,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. 1,04,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಯುದ್ಧದಿಂದಾಗಿ ಸುಮಾರು 1.2 ದಶಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಗ್ಯಾರಂಟಿ ತೆಗೆಯುವಂತೆ ಕೈ ಶಾಸಕನ ಆಗ್ರಹ
ನೋಟಿಸ್ ಕೊಡ್ತೀವಿ ಎಂದ ಮುಖಂಡರು



ಫೆಂಗಲ್ ಚಂಡಮಾರುತ ತ.ನಾಡಲ್ಲಿ ಭಾರೀ ಮಳೆ

ಚೆನ್ನೈ: ನೈಋತ್ಯ ಬಂಗಾಳ ಕೊಲ್ಲಿಯಲ್ಲಿ ತೀವ್ರ ಸ್ವರೂಪದ ವಾಯುಭಾರ ಕುಸಿತ ಉಂಟಾಗಿದ್ದು, ಚಂಡಮಾರುತವಾಗಿ ಪರಿವರ್ತನೆಗೊಂಡಿದೆ. ಪರಿಣಾಮ ಗಂಟೆಗೆ 65 ಕಿಮೀ ವೇಗದಲ್ಲಿ ಗಾಳಿ ಬೀಸಲಾರಂಭಿಸಿದೆ. ಚಂಡಮಾರುತ ತಮಿಳುನಾಡು ಕರಾವಳಿಯತ್ತ ಚಲಿಸುತ್ತಾ ಇದೆ. ಮುಂದಿನ ಒಂದೆರಡು ದಿನಗಳಲ್ಲಿ ಶ್ರೀಲಂಕಾ ಕರಾವಳಿಯನ್ನು ದಾಟುತ್ತದೆ. ತಮಿಳುನಾಡಿನ ಕರಾವಳಿ ಪ್ರದೇಶಗಳ ಮೇಲೆ ಪರಿಣಾಮ ಬೀರಲಿದೆ. ಕಡಲೂರು ಮತ್ತು ಮೈಲಾಡುತುರೈ ಜಿಲ್ಲೆಗಳು ಮತ್ತು ಕಾರೈಕಲ್‌ಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ಸದ್ಯ ಫೆಂಗಲ್ ಚಂಡಮಾರುತ ಲಂಕಾದ ಟ್ರಿಂಕೋಮಲಿಯ ಆಗ್ನೇಯಕ್ಕೆ 310 ಕಿಮೀ ದೂರದಲ್ಲಿ, ಪುದುಚೇರಿಯ ದಕ್ಷಿಣ ಆಗ್ನೇಯಕ್ಕೆ 710 ಕಿಮೀ ಮತ್ತು ಚೆನ್ನೈನಿಂದ 800 ಕಿಮೀ ಆಗ್ನೇಯದಲ್ಲಿದೆ ಎಂದು ಹವಾಮಾನ ಇಲಾಖೆ ಬುಧವಾರ ತಿಳಿಸಿದೆ. ಚೆನ್ನೈ, ತಿರುವಳ್ಳೂರು, ಕಾಂಚೀಪುರಂ, ಚೆಂಗಲ್ಪಟ್ಟು, ವಿಲ್ಲುಪುರಂ, ಅರಿಯಲೂರ್, ತಂಜಾವೂರು, ತಿರುವರೂರ್, ನಾಗಪಟ್ಟಣಂ ಮತ್ತು ಪುದುಕೊಟ್ಟೆ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಗಂಟೆಗೆ 65 ಕಿಮೀ ವೇಗದಲ್ಲಿ ಗಾಳಿ ಬೀಸುತ್ತಿದೆ, ಕರಾವಳಿಯುದ್ದಕ್ಕೂ ಸಮುದ್ರದ ಪ್ರಕ್ಷುಬ್ಧತೆ ಕಾಣಬರುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ತಮಿಳುನಾಡು ಕರಾವಳಿಗೆ ಚಂಡಮಾರುತ ಅಪ್ಪಳಿಸುವ ನಿರೀಕ್ಷೆಯಿದೆ. ಮೀನುಗಾರರು ಸಮುದ್ರಕ್ಕಿಳಿಯಬಾರದು ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ನಾಗಪಟ್ಟಣಂನಲ್ಲಿ ಭಾರೀ ಮಳೆ

ಮಂಗಳವಾರ ಸಂಜೆ ತಮಿಳುನಾಡಿನ ನಾಗಪಟ್ಟಣಂನಲ್ಲಿ 127 ಮಿಮೀಗಳಷ್ಟು ಅತ್ಯಧಿಕ ಪ್ರಮಾಣದಲ್ಲಿ ಮಳೆಯಾಗಿದೆ. ಕಡಲೂರು-67 ಮಿಮೀ, ತಂಜಾವೂರಿನ ಅದಿರಾಮಪಟ್ಟಿಣಂ 54 ಮಿಮೀ, ಮೀನಂಬಾಕ್ಕಂ 45.8 ಮತ್ತು ನುಂಗಂಬಾಕ್ಕಂ 41.8 ಮಿಮೀ ಮಳೆಯಾಗಿದೆ. ಪುದುಚೇರಿ, ಅರಿಯಲೂರು, ರಾಮನಾಥಪುರದಲ್ಲಿ ಕ್ರಮವಾಗಿ 25 ಮಿಮೀ, 22 ಮಿಮೀ ಮತ್ತು 19 ಮಿಮೀ ಮಳೆಯಾಗಿದೆ.

ನವಜಾತ ಶಿಶು ಕಳವು ಇಬ್ಬರ ಬಂಧನ

ಕಲಬುರಗಿ: ಜಿಮ್ಸ್ ಆವರಣದ ತಾಯಿ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದಿಂದ ಅಪಹರಣಗೊಂಡಿದ್ದ ನವಜಾತ ಗಂಡು ಶಿಶು ಬುಧವಾರ ಬೆಳಗ್ಗೆ ಸುರಕ್ಷಿತವಾಗಿ ತಾಯಿ ಮಡಿಲು ಸೇರಿದೆ. ಶಿಶುವನ್ನು ಅಪಹರಿಸಿದ ಉಮೇರಾ, ನಸರೀನ್ ಹಾಗೂ ಫಾತಿಮಾ ಎಂಬುವವರನ್ನು ಬಂಧಿಸಲಾಗಿದೆ. ಶುಶ್ರೂಷಕಿಯರ ಸೋಗಿನಲ್ಲಿ ಬಂದಿದ್ದ ಇಬ್ಬರು ಮಹಿಳೆಯರು, ನವಜಾತ ಗಂಡು ಶಿಶುವನ್ನು ಸೋಮವಾರ ಮಧ್ಯಾಹ್ನ ಅಪಹರಿಸಿದ್ದರು. ಈ ಬಗ್ಗೆ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹೊಸ ನಿಯಮ ಜಾರಿಗೆ ತರಲು ಹೊರಟಿರುವ ಟ್ರಾಯ್

ಒಟಿಪಿ ಸಂದೇಶಗಳ ಮಾಹಿತಿಗೆ ಗಡುವು

ದೆಹಲಿ: ಒಟಿಪಿಗಳ ಮೂಲಕ ನಡೆಯುತ್ತಿರುವ ಸೈಬರ್ ವಂಚನೆಗಳನ್ನು ತಡೆಗಟ್ಟುವುದಕ್ಕಾಗಿ ಟ್ರಾಯ್ ಹೊಸ ನಿಯಮಗಳನ್ನು ಜಾರಿಗೆ ತರಲು ಹೊರಟಿದೆ. ಈ ಬಗ್ಗೆ ಒಪ್ಪಿಗೆ ಸೂಚಿಸಲು ಟೆಲಿಕಾಂ ಕಂಪನಿಗಳಿಗೆ ಡಿಸೆಂಬರ್ 1, 2024 ರವರೆಗೆ ಅಂತಿಮ ವಿಸ್ತರಣೆಯನ್ನು ನೀಡಲಾಗಿದೆ. ಟ್ರಾಯ್‌ನ ಹೊಸ ನಿಯಮಗಳು ಸ್ಪ್ಯಾಮ್ ಮತ್ತು ಫಿಶಿಂಗ್ ಸಂದೇಶಗಳನ್ನು ನಿಗ್ರಹಿಸುವ ಗುರಿ ಹೊಂದಿದ್ದು, ಟೆಲಿಕಾಂ ಆಪರೇಟರ್‌ಗಳು ಒಟಿಪಿಗಳು ಸೇರಿದಂತೆ ವಾಣಿಜ್ಯ ಸಂದೇಶಗಳ ಮೂಲವನ್ನು ಪತ್ತೆಹಚ್ಚುವ ಅಗತ್ಯವಿದೆ. ಈ ಕ್ರಮವು ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ಮೋಸದ ಚಟುವಟಿಕೆಗಳಿಂದ ಗ್ರಾಹಕರನ್ನು ರಕ್ಷಿಸಲು ಉದ್ದೇಶಿಸಲಾಗಿದೆ ಎಂದು ಟ್ರಾಯ್ ಹೇಳಿದೆ.

ಆನ್‌ಲೈನ್ ವ್ಯವಹಾರಗಳಿಗೆ ಒಟಿಪಿ ಅವಶ್ಯಕವಾಗಿದ್ದು, ಟ್ರಾಯ್ ನೀಡಿರುವ ಗಡುವಿನೊಳಗೆ ಟೆಲಿಕಾಂ ಕಂಪನಿಗಳು ಒಟಿಪಿ ಮೂಲಗಳನ್ನು ಪತ್ತೆಗೊಳಿಸುವ ಮಾಹಿತಿಯನ್ನು ನೀಡಲು ಒಪ್ಪದಿದ್ದರೆ, ಆನ್‌ಲೈನ್ ವ್ಯವಹಾರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀಳಬಹುದು ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

ನಾಲ್ವರು ಪೊಲೀಸರಿಗೆ 7 ವರ್ಷ ಜೈಲು ಶಿಕ್ಷೆ

ಬೆಂಗಳೂರು: ಅನುಮಾನಾಸ್ಪದವಾಗಿ ವಶಕ್ಕೆ ಪಡೆದಿದ್ದ ಒಡಿಶಾ ಮೂಲದ ಮಹೇಂದ್ರ ರಾಥೋಡ್ (42) ಎಂಬಾತನ ಮೇಲೆ ಹಲ್ಲೆ ನಡೆಸಿ, ಆತನ ಸಾವಿಗೆ ಕಾರಣವಾಗಿದ್ದ ಆರೋಪದಡಿ ನಾಲ್ವರು ಪೊಲೀಸ್ ಸಿಬ್ಬಂದಿಗೆ 7 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಸಿಐಡಿ ವಿಶೇಷ ನ್ಯಾಯಾಲಯವು ಆದೇಶಿಸಿದೆ. ಜೀವನ್ ಭೀಮಾನಗರ ಠಾಣೆಯ ಅಂದಿನ ಅಪರಾಧ ವಿಭಾಗದ ಹೆಡ್ ಕಾನ್ಸ್‌ಟೇಬಲ್ ಎಜಾಜ್ ಖಾನ್, ಕಾನ್ಸ್‌ಟೇಬಲ್‌ಗಳಾದ ಕೇಶವ ಮೂರ್ತಿ, ಮೋಹನ್ ರಾಮ್, ಸಿದ್ದಪ್ಪ ಬೊಮ್ಮನಹಳ್ಳಿ ಶಿಕ್ಷೆಗೊಳಗಾದವರು.

ರಾಜ್ಯಾಧ್ಯಕ್ಷರ ಬದಲಾವಣೆಗೆ ಬಿಜೆಪಿಯಲ್ಲಿ ವಾಕ್ಸಮರ | ಪಕ್ಷ ಬಿಡುವವರನ್ನು ತಡೆಯಲು ಜೆಡಿಎಸ್ ಹರಸಾಹಸ

ಬಿಜೆಪಿ ಬಣ ಬಡಿದಾಟ ಜೆಡಿಎಸ್ ಶಾಸಕರ ಪರದಾಟ

ಬೆಂಗಳೂರು: ಅಧಿವೇಶನದಲ್ಲಿ ಆಡಳಿತ ಪಕ್ಷದ ವಿರುದ್ಧ ಹೋರಾಟ ಮಾಡಬೇಕಾದ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದಲ್ಲೇ ಬಣ ಬಡಿದಾಟ ಜೋರಾಗಿದ್ದು, ಎರಡೂ ಪಕ್ಷಗಳು ಒಡೆದ ಮನೆಯಂತಾಗಿದೆ. ಒಂದು ಕಡೆ ರಾಜ್ಯಾಧ್ಯಕ್ಷರ ಬದಲಾವಣೆಗಾಗಿ ಬಿಜೆಪಿಯಲ್ಲಿ ತಂಡಗಳ ವಾಕ್ಸಮರ ನಡೆಯುತ್ತಿದ್ದರೆ, ಜೆಡಿಎಸ್‌ನಲ್ಲಿ ಕೆಲವರು ಪಕ್ಷ ಬಿಡುವುದನ್ನು ತಡೆಯಲು ಹರಸಾಹಸ ಪಡಬೇಕಾದ ಸನ್ನಿವೇಶ ಎದುರಾಗಿದೆ.

ವಿಶ್ವವಾಣಿ ವಿಶೇಷ

ವಕ್ಫ್ ವಿರುದ್ಧ ಹೋರಾಟ ಮಾಡಲು ಬಂದರೆ ಅದಕ್ಕೆ ಏನೇನೋ ತಡೆ ಮಾಡಲು ಹೊರಟಿದ್ದಾರೆ. ಹೋರಾಟಕ್ಕೆ ಬನ್ನಿ ಅಂದರೆ ಮೇಲಿಂದ ಆದೇಶ ಆಗಿದೆ, ಹಿರಿಯರು ಬೇಡ ಅಂದರು ಎಂದು ಹೇಳುತ್ತಿದ್ದಾರೆ ಎಂದು ಸ್ವಪಕ್ಷದ ನಾಯಕರ ವಿರುದ್ಧವೇ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದ್ದಾರೆ. ಇದೇ ವೇಳೆ ಬೆಂಗಳೂರಿನಲ್ಲಿ ಕಟ್ಟಾಸುಬ್ರಮಣ್ಯ ನಾಯ್ಡು ಮನೆಯಲ್ಲಿ ಸಭೆ ಸೇರಿದ್ದ ಮಾಜಿ ಸಚಿವರ ಬಣ ರಾಜ್ಯಾಧ್ಯಕ್ಷರ ಪರ ಹೋರಾಡಲು ಪಣ ತೊಟ್ಟಿದೆ. ಅಲ್ಲದೆ ಪಕ್ಷ ಕಟ್ಟಿದ ನಾಯಕರ ವಿರುದ್ಧವೇ ಮಾತನಾಡುವುದು ರಾಷ್ಟ್ರೀಯ ನಾಯಕರಿಗೂ ನಿಂದಿಸಿದಂತೆ ಆಗುತ್ತದೆ ಎಂದು ಯತ್ನಾಳ್ ವಿರುದ್ಧ ಗರಂ ಆಗಿದ್ದಾರೆ.

ರಾಯಚೂರಿನಲ್ಲಿ ಮಾತನಾಡಿದ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ನಾವೂ ಕೂಡ ಬಿಜೆಪಿ ಪಕ್ಷದಿಂದ ಅನೇಕ ಬಾರಿ ಆರಿಸಿ ಬಂದಿದ್ದೇವೆ. ನಾವೆಲ್ಲಾ ಪಕ್ಷದ ನಿಷ್ಠಾವಂತ ಹೋರಾಟಗಾರರಲ್ಲವೇ? ಈಗೇನು ಎಂಪಿ, ಎಂಎಲ್‌ಎ ಎಲೆಕ್ಷನ್ ಇದೆಯೇ? ವಕ್ಫ್ ವಿಚಾರವಾಗಿ ನಾವು ಜನರ ಪರವಾಗಿ ಹೋರಾಟ ಮಾಡುತ್ತಿದ್ದೇವೆ.

→ 4

ದಾವಣಗೆರೆಯಲ್ಲಿ ಸಮಾವೇಶ

ಯತ್ನಾಳ್ ಮತ್ತು ತಂಡ ಸಿದ್ದರಾಮಯ್ಯರ ಬಿ ಟೀಮ್ ರೀತಿ ಕೆಲಸ ಮಾಡುತ್ತಿದೆ ಎಂದು ಆರೋಪಿಸಿರುವ ವಿಜಯೇಂದ್ರ ಅವರ ತಂಡ, ಪಕ್ಷ ಬಲವರ್ಧನೆಗೆ ನಾವು ರಾಜ್ಯ ಪ್ರವಾಸ ಮಾಡುತ್ತೇವೆ. ಕುರುಡು ಮಲೆ ದೇವಸ್ಥಾನದಲ್ಲಿ ಪೂಜೆ ಮಾಡಿ ಯತ್ನಾಳ್ ಟೀಮ್ ಗೆ ಒಳ್ಳೆಯ ಬುದ್ಧಿ ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇವೆ. ದಾವಣಗೆರೆಯಲ್ಲಿ ಸಮಾವೇಶ ಮಾಡುತ್ತೇವೆ ಎಂದಿದೆ.

ಜೆಡಿಎಸ್‌ನಲ್ಲಿ ಮುನಿಸು

ಬಿಜೆಪಿಯ ಸಮಸ್ಯೆಯಾದರೆ ಒಂದೆಡೆಯಾದರೆ, ಮೈತ್ರಿ ಪಕ್ಷ ಜೆಡಿಎಸ್‌ನಲ್ಲಿ ಮತ್ತೊಂದು ರೀತಿಯ ಕದನ ನಡೆಯುತ್ತಿದೆ. ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಗೆದ್ದ ಕೂಡಲೇ ಆರಂಭವಾಗ 'ಆಪರೇಷನ್ ಯೋಗಿ' ಭಯ ಶುರುವಾಗಿದೆ. ಗೆದ್ದಿರುವ ರಾಷ್ಟ್ರೀಯ ಪಕ್ಷ ಇನ್ನೊಂದು ಪಕ್ಷದ ಶಾಸಕರನ್ನು ಕರೆದುಕೊಂಡು ಹೋಗುವ ಮಾತು ಆಡುತ್ತಿರುವುದು ಸರಿಯಲ್ಲ. ನಮ್ಮ ಶಾಸಕರು ನಮ್ಮೊಂದಿಗೆ ಇದ್ದಾರೆ ಎಂದು ಜೆಡಿಎಸ್ ಹೇಳಿಕೊಂಡಿದೆ. ಅಲ್ಲದೆ ಡಿಸಿಎಂ ಸ್ಥಾನದ ಆಫರ್ ಕೂಡ ಬಂದಿತ್ತು ಎಂದು ಎಚ್.ಡಿ.ರೇವಣ್ಣ ಹೊಸ ಬಾಂಬ್ ಹಾಕಿದ್ದಾರೆ. ಇದು ಒಂದೆಡೆಯಾದರೆ ಜೆಡಿಎಸ್ ಪ್ರಮುಖ ನಾಯಕರಾದ ಸಾ.ರಾ.ಮಹೇಶ್ ಹಾಗೂ ಜಿ.ಟಿ.ದೇವೇಗೌಡರ ನಡುವಿನ ಮುನಿಸು ಮುಂದುವರಿದಿದ್ದು, ಜಿ.ಟಿ.ದೇವೇಗೌಡ ಹಾಗೂ ಕುಮಾರಸ್ವಾಮಿ ಅವರ ನಡುವಿನ ವೈಮನಸ್ಸು ಚಾಲ್ತಿಯಲ್ಲಿದೆ.

ಯತ್ನಾಳ್ ಅವರ ವಕ್ಫ್ ಹೋರಾಟಕ್ಕೆ ಪಕ್ಷದ ಅನುಮತಿ ಇಲ್ಲ. ರಾಜ್ಯಾಧ್ಯಕ್ಷರೇ ವಕ್ಫ್ ಹೋರಾಟಕ್ಕೆ ತಂಡ ಮಾಡಿದ್ದಾರೆ. ಅವರು ಕಾಂಗ್ರೆಸ್ ಜತೆ ಒಳ ಒಪ್ಪಂದ ಮಾಡಿಕೊಂಡಿರುವ ಅನುಮಾನ ನಮಗಿದೆ. ಕಾಂಗ್ರೆಸ್ ಗೆ ಪೂರಕವಾಗಿ ಅವರು ಹೋರಾಟ ಮಾಡುತ್ತಿರಬಹುದು. **ಬಿ.ಸಿ.ಪಾಟೀಲ್** ಮಾಜಿ ಸಚಿವ

ಹೈಕಮಾಂಡ್ ಬೆಂಬಲ ಇದೆ ಎಂದು ಸುಳ್ಳು ಹೇಳ್ತಾರೆ. ಯತ್ನಾಳ್ ವಿಚಾರ ಸಂಬಂಧ ಹೈಕಮಾಂಡ್ ಕ್ರಮ ವಹಿಸಬೇಕು. ನಾವು ದೆಹಲಿಗೆ ಹೋಗಿ ವಿಚಾರ ತಿಳಿಸುತ್ತೇವೆ. ರಾಜ್ಯವ್ಯಾಪಿ ಪ್ರವಾಸ ಮಾಡುತ್ತೇವೆ. **- ಎಂ.ಪಿ.ರೇಣುಕಾಚಾರ್ಯ** ಮಾಜಿ ಸಚಿವ

ನಗರದಲ್ಲಿ ವ್ಯಾಪಾರಿಗಳ ನಿದ್ದೆಗೆಡಿಸಿದ್ದ ಖತರ್ನಾಕ್ ಗ್ಯಾಂಗ್

ಕುಖ್ಯಾತ ಚಾದರ್ ಗ್ಯಾಂಗ್ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಮೊಬೈಲ್ ಅಂಗಡಿಗಳಿಗೆ ಕನ್ನ ಹಾಕುವ ಮೂಲಕ ವ್ಯಾಪಾರಿಗಳ ನಿದ್ದೆಗೆಡಿಸಿದ್ದ ಖತರ್ನಾಕ್ ಗ್ಯಾಂಗ್ ಅನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಕುಖ್ಯಾತ ಚಾದರ್ ಗ್ಯಾಂಗ್‌ನ 8 ಜನ ಆರೋಪಿ ಗಳನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಕೊನೆಗೂ ಬಂಧಿಸಿದ್ದಾರೆ. ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಇಮ್ತಿಯಾಜ್ ಆಲಂ, ಜಾವೇದ್ ಆಲಂ, ಪವನ್ ಶಾ, ಮುನೀಲ್ ಕುಮಾರ್, ರಿಜ್ವಾನ್ ದೇವನ್, ಸಲೀಂ ಆಲಂ, ರಾಮೇಶ್ವರ ಗಿರಿ ಹಾಗೂ ಸೂರಜ್ ಕುಮಾರ್ ಬಂಧಿತರು. ಬೆಡ್‌ಶೀಟ್ ಹೊದ್ದು ರಾತ್ರಿ ವೇಳೆ ಸುತ್ತಾಡುತ್ತಿದ್ದ ಆರೋಪಿಗಳು, ನಸುಕಿನಜಾವ 3-4 ಗಂಟೆ ಸಮಯಕ್ಕೆ ಮೊಬೈಲ್ ಅಂಗಡಿಗಳ ಬಳಿ ಹೋಗುತ್ತಿದ್ದರು. ಆರೋ ಪಿಗಳಲ್ಲಿ ಕೆಲವರು ಅಂಗಡಿ ಮುಂದಿರುವ ಸಿಸಿಟಿವಿ ಕ್ಯಾಮೆರಾಗಳಿಗೆ ಬೆಡ್‌ಶೀಟ್ ಅಡ್ಡ ಹಿಡಿದುಕೊಳ್ಳು ತ್ತಿದ್ದರು. ಅದೇ ಸಂದರ್ಭದಲ್ಲಿ ಉಳಿದವರು ಅಂಗಡಿ ಶಟರ್ ಮುರಿದು ಅಂಗಡಿಯೊಳಗೆ ನುಗ್ಗುತ್ತಿದ್ದರು. ನಂತರ ಅಂಗಡಿಯೊಳಗಿರುವ ದುಬಾರಿ ಬೆಲೆಯ ಮೊಬೈಲ್ ಫೋನ್‌ಗಳನ್ನು ಕದ್ದು ಸಿಗ್ನಲ್ ಕೊಡುತ್ತಿದ್ದರು. ಪುನಃ ಸಿಸಿಟಿವಿ ಕ್ಯಾಮೆರಾಗಳಿಗೆ ಬೆಡ್ ಶೀಟ್ ಅಡ್ಡಲಾಗಿ ಹಿಡಿದುಕೊಂಡು ಹೊರಬರುತ್ತಿದ್ದರು. ನಂತರ ಬೆಡ್‌ಶೀಟ್ ಮುಖಕ್ಕೆ ಸುತ್ತಿಕೊಂಡು ಪರಾರಿ ಯಾಗುತ್ತಿದ್ದರು. ನಂತರ ನಗರದಲ್ಲಿ ಕೂಲಿ ಕೆಲಸಕ್ಕಾಗಿ ಬಂದ ಕಾರ್ಮಿಕರ ಜತೆ ಸೇರಿಕೊಂಡು ಪೊಲೀಸರ ಕಣ್ತಪ್ಪಿಸುತ್ತಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನಲ್ಲೂ ಕೈಚಳಕ

ಇದೇ ರೀತಿ ಇತ್ತೀಚಿಗೆ ಬೈಯಪ್ಪನಹಳ್ಳಿ ಠಾಣಾ ವ್ಯಾಪ್ತಿಯ ನಾಗವಾರಪಾಳ್ಯದ ಎ. ಎಂ. ಸ್ಯಾಮ್ಸಂಗ್ ಶೋರೂಮಿಗೆ ನುಗ್ಗಿದ್ದ ಆರೋಪಿಗಳು 22 ಲಕ್ಷ ರು. ಬೆಲೆ ಬಾಳುವ ಮೊಬೈಲ್ ಫೋನ್ ಗಳನ್ನು ಕದ್ದು ಪರಾರಿಯಾಗಿದ್ದರು. ಸಿಸಿಟಿವಿ ದೃಶ್ಯಗಳನ್ನು ಆಧರಿಸಿ ತನಿಖೆ ಕೈಗೊಂಡ ಬೈಯಪ್ಪನಹಳ್ಳಿ ಠಾಣೆ ಪೊಲೀಸರು, ಬೊಮ್ಮನಹಳ್ಳಿ ಬಳಿ ಮನೆಯೊಂದರಲ್ಲಿದ್ದ ಆರೋಪಿಗಳನ್ನು ಹೆಡೆಮುರಿ ಕಟ್ಟಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ನೇಪಾಳದಲ್ಲಿ ಮಾರಾಟ

ಆರೋಪಿಗಳು ತಾವು ಕದ್ದ ಮೊಬೈಲ್ ಫೋನ್‌ಗಳನ್ನು ನೇಪಾಳಕ್ಕೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದುದು ವಿಚಾರಣೆ ವೇಳೆ ಬಯಲಾಗಿದೆ. ಆರೋಪಿಗಳು ಉಡುಪಿ, ಉತ್ತರ ಕನ್ನಡದಲ್ಲಿ ಕಳ್ಳತನ ಮಾಡಿದ್ದರು. ಬೆಂಗಳೂರಿನಲ್ಲಿ ಕಳ್ಳತನ ಮಾಡಿದ್ದ ಮೊಬೈಲ್ ಫೋನ್ ಗಳನ್ನು ಆರೋಪಿಯೋರ್ವ ಬಿಹಾರಕ್ಕೆ ಕೊಂಡೊಯ್ದಿದ್ದ. ಆತನನ್ನ ಸಹ ಬಂಧಿಸಲಾಗಿದ್ದು, ಸಾಕಷ್ಟು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಡಿ. ದೇವರಾಜ್ ತಿಳಿಸಿದರು.

ಡಿವೈಎಸ್‌ಪಿ ಸುನೀಲ್ ವೈ ನಾಯಕ್ ನೇತೃತ್ವದಲ್ಲಿ ಎಂಟು ತಂಡಗಳು ದಾಳಿ

ಪಾಲಿಕೆ ಅಧಿಕಾರಿಗಳ ನಿವಾಸದ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಲೋಕಾಯುಕ್ತ ಬೆಳ್ಳಂಬೆಳಗ್ಗೆ ಶಾಕ್ ನೀಡಿದೆ. ದೇವಯ್ಯ ಪಾರ್ಕ್ ಬಳಿಯಿರುವ ಬಿಬಿಎಂಪಿ ಕಲ್ಯಾಣಾಧಿಕಾರಿ ಲಲಿತಾ, ವಯ್ಯಾಲಿ ಕಾವಲ್‌ನಲ್ಲಿರುವ ಉಪ ಹಣಕಾಸು ನಿಯಂತ್ರಕ ಸತ್ಯಮೂರ್ತಿ ನಿವಾಸದ ಮೇಲೆ ಲೋಕಾಯುಕ್ತ ದಾಳಿ ಮಾಡಿ, ದಾಖಲೆ ಪರಿಶೀಲನೆ ನಡೆಸಿದೆ.

ಬಿಬಿಎಂಪಿ ಪಶ್ಚಿಮ ವಲಯದ ಕಲ್ಯಾಣ ವಿಭಾಗದ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಫಲಾನುಭವಿಗಳ ಹಣವನ್ನು ಅಕ್ರಮವಾಗಿ ಸೊಸೈಟಿ ಗಳಿಗೆ ವರ್ಗಾಯಿಸಿದ್ದ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಎಸ್ಪಿ ಶ್ರೀನಾಥ್ ಜೋಷಿ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಸುನೀಲ್ ವೈ ನಾಯಕ್ ನೇತೃತ್ವದಲ್ಲಿ ಎಂಟು ತಂಡಗಳು ಬುಧವಾರ ಬೆಳಗ್ಗೆ 6.30ರ ಸುಮಾರಿಗೆ ಏಕಕಾಲಕ್ಕೆ ದಾಳಿ ಮಾಡಿವೆ.

ಒಂದು ವಾರದ ಹಿಂದೆಯಷ್ಟೇ ಲೋಕಾಯುಕ್ತ ಅಧಿಕಾರಿಗಳು ಕರ್ನಾಟಕದ ಏಳು ಕಡೆಗಳಲ್ಲಿ ದಾಳಿ ಮಾಡಿದ್ದರು. ಬೆಂಗಳೂರಿನಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಎಂಸಿ ಕೃಷ್ಣವೇಣಿ ಮನೆ ಮೇಲೆ ದಾಳಿ ಮಾಡಿದ್ದರು. ಕೃಷ್ಣವೇಣಿ ಮಂಗಳೂರಿಗೆ ವರ್ಗವಾಗಿದ್ದು, ಅಲ್ಲಿಯೂ ಅವರ ಮನೆ ಮೇಲೆ ದಾಳಿ ನಡೆದಿತ್ತು. ಅವರ ಸಂಬಂಧಿಕರ ಮನೆಗಳ ಮೇಲೂ ದಾಳಿ ನಡೆದಿತ್ತು. ಬೆಂಗಳೂರಿನಲ್ಲಿ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ನಿರ್ದೇಶಕ ತಿಪ್ಪೇಸ್ವಾಮಿ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು. ಬೆಂಗಳೂರಿನಲ್ಲಿ ಅಬಕಾರಿ ಇಲಾಖೆ ಎಸ್‌ಪಿ ಮೋಹನ್ ಮನೆ ಮೇಲೆಯೂ ದಾಳಿ ಮಾಡಲಾಗಿತ್ತು. ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಸಂಬಂಧಿಕರ ಮನೆ ಮೇಲೆ ದಾಳಿ ಮಾಡಲಾಗಿತ್ತು.

- ಬಿಬಿಎಂಪಿ ಕಲ್ಯಾಣಾಧಿಕಾರಿ ಲಲಿತಾ, ಉಪ ಹಣಕಾಸು ನಿಯಂತ್ರಕ ಸತ್ಯಮೂರ್ತಿ ನಿವಾಸದಲ್ಲಿ ದಾಖಲೆ ಪರಿಶೀಲನೆ
- ತುಮಕೂರು, ಮಧುಗಿರಿ, ತಿಪಟೂರು ಆರ್‌ಟಿಒ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ

ಆರ್‌ಟಿಒ ಕಚೇರಿ ಮೇಲೆ ದಾಳಿ

ಲೋಕಾಯುಕ್ತ ಅಧಿಕಾರಿಗಳು ತುಮಕೂರು ಜಿಲ್ಲೆ ಆರ್‌ಟಿಒ ಕಚೇರಿಗಳ ಮೇಲೆ ದಾಳಿ ಮಾಡಿದ್ದಾರೆ. ತುಮಕೂರು, ಮಧುಗಿರಿ, ತಿಪಟೂರು ಆರ್‌ಟಿಒ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ಮಾಡಿರುವ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸಲಾಗಿದ್ದು, ಹಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಆರ್‌ಟಿಒ ಕಚೇರಿಗಳಲ್ಲಿ ಬ್ರೋಕರ್‌ಗಳ ಹಾವಳಿ ಬಗ್ಗೆ ದೂರು ಹಿನ್ನೆಲೆಯಲ್ಲಿ ಲೋಕಾಯುಕ್ತ ಎಸ್‌ಪಿ ಲಕ್ಷ್ಮೀ ನಾರಾಯಣ ನೇತೃತ್ವದಲ್ಲಿ ದಾಳಿ ನಡೆದಿದೆ.

ವೃದ್ಧನಿಂದ ಬಾಲಕಿ ಮೇಲೆ ಅತ್ಯಾಚಾರ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದಲ್ಲಿ ಭಯಾನಕ ಘಟನೆಯೊಂದು ಬೆಳಕಿಗೆ ಬಂದಿದೆ. 15 ವರ್ಷದ ಬಾಲಕಿ ಮೇಲೆ 70 ವರ್ಷದ ವೃದ್ಧನಿಂದ ಅತ್ಯಾಚಾರ ನಡೆದಿದೆ. ನೆಲಮಂಗಲ ಗ್ರಾಮಾಂತರ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದೆ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿ ಮೇಲೆ ಅತ್ಯಾಚಾರ ನಡೆಸಲಾಗಿದೆ. ಬಾಲಕಿ ಕಿರುಚಾಡದಂತೆ ಬಾಯಿಗೆ ಬಟ್ಟೆ ತುರುಕಿ ವೃದ್ಧನು ಅತ್ಯಾಚಾರ ನಡೆಸಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ಅತ್ಯಾಚಾರವೆಸಗಿದ ವೃದ್ಧನನ್ನು ಹಿಡಿದು ಥಳಿಸಿದ ಸ್ಥಳೀಯರು ಆತನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಮನೆಯಲ್ಲಿ ಯಾರೂ ಇಲ್ಲದಿದ್ದಾಗ ವೃದ್ಧ ಈ ಅತ್ಯಾಚಾರ ನಡೆಸಿದ್ದಾನೆ. ಎದುರು ಮನೆಯ ಮಹಿಳೆಯಿಂದಾಗಿ ಘಟನೆ ಬೆಳಕಿಗೆ ಬಂದಿದೆ. ವಿಕೃತಿ ಮೆರೆದ ವೃದ್ಧನ ಮೇಲೆ ಗ್ರಾಮಸ್ಥರು ಹಲ್ಲೆ ನಡೆಸಿ, ಬಳಿಕ ಪೊಲೀಸರಿಗೆ ಫೋನ್ ಮಾಡಿದ್ದಾರೆ. ನೆಲಮಂಗಲ ಗ್ರಾಮಾಂತರ ಠಾಣೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಕ್ಸೋ ಪ್ರಕರಣ ದಾಖಲಾಗಿದೆ.

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ

ಸಿ.ಮಿಸ್.ನಂ. 576/2024

ಅರ್ಜಿದಾರರು: ಶ್ರೀಮತಿ ವೆಂಕಟಲಕ್ಷ್ಮಮ್ಮ ಬಿನ್ ಲೇಟ್ ಭೈರೇಗೌಡಸ ವಾಸ: ಚನ್ನಸಂದ್ರ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರಿಗೆ ನಿಂಗೇಗೌಡ ರವರು ಗಂಡನ ಅಣ್ಣನಾಗಬೇಕು ಮತ್ತು 4 ರಿಂದ 6ನೇ ಅರ್ಜಿದಾರರಿಗೆ ಚಿಕ್ಕಪ್ಪನಾಗಬೇಕು 7 ರಿಂದ 9ನೇ ಅರ್ಜಿದಾರ-ರಿಗೆ ತಂದೆಯಾಗಬೇಕು ಮತ್ತು 10 ರಿಂದ 14 ರವರ ದೊಡ್ಡಪ್ಪನಾದ ಶ್ರೀ ನಿಂಗೇಗೌಡ ಬಿನ್ ಲೇಟ್ ಲಿಂಗೇಗೌಡ ಇವರು ದಿನಾಂಕ 20-02-2011 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಚನ್ನಸಂದ್ರ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಹಾಗೂ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿರುವುದು ಸರಿಯಷ್ಟೆ, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 04/01/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 28ನೇ ನವಂಬರ್ 2024 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ರಾಮಚಂದ್ರ
ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯ ಕನಕಪುರ

ಸಿ.ಮಿಸ್ ನಂ. 431/ 2024

ಅರ್ಜಿದಾರರು: ಶ್ರೀ ಚಲುವರಾಜು ಬಿನ್ ಲೇಟ್ ಸಿಂಗ್ರಿಗೌಡ ವಯಸ್ಸು 43 ವರ್ಷ ವಾಸ: ಚೀಲಂದವಾಡಿ ಗ್ರಾಮ, ಆಲಹಳ್ಳಿ ಅಂಚೆ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು 2. ಗ್ರಾಮ ಲೆಕ್ಕಾಧಿಕಾರಿಗಳು ಉಯ್ಯಂಬಳ್ಳಿ ವೃತ್ತ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ,

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 3ನೇ ಅರ್ಜಿದಾರರ ತಂದೆ, ಮತ್ತು 2ನೇ ಅರ್ಜಿದಾರರ ಗಂಡನವರಾದ ಶ್ರೀ ಸಿಂಗ್ರಿಗೌಡ ಬಿನ್ ಲೇಟ್ ಮೋಟೇಗೌಡರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಚೀಲಂದವಾಡಿ ಗ್ರಾಮದಲ್ಲಿ ದಿನಾಂಕ: 02/06/1986 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು. ಅಂ-ದರೆ, 13/01/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ-ಗೊಳಿಸಲಾಗುವುದು.

2024ರ ನವಂಬರ್ 27ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಂ.ಆರ್.ಶ್ರೀನಿವಾಸ
ವಕೀಲರು, ಕನಕಪುರ
ದಿನಾಂಕ:
ಕನಕಪುರ.

बैंक ऑफ़ बड़ौदा Bank of Baroda

ಪ್ರಾದೇಶಿಕ ಕಛೇರಿ, ವಸೂಲಿ ಇಲಾಖೆ, ಬೆಂಗಳೂರು ದಕ್ಷಿಣ,
4ನೇ ಮಹಡಿ, ವಿಜಯಾ ಟವರ್ಸ್, 41/2, ಎಮ್ ಜಿ ರಸ್ತೆ, ಬೆಂಗಳೂರು, ಕರ್ನಾಟಕ-560001.
ದೂರವಾಣಿ ಸಂಖ್ಯೆ: 080-25584066, Extn: 710, 080-25011710,
ಇ-ಮೇಲ್ ಐಡಿ: recovery.blrsouth@bankofbaroda.com, ವೆಬ್‌ಸೈಟ್: www.bankofbaroda.in.

ಇ-ಹರಾಜು ಮಾರಾಟ ಪ್ರಕಟಣೆ

ಚಲನಶೀಲ ಆಸ್ತಿಗಳು/ವಾಹನಗಳ ಮಾರಾಟಕ್ಕಾಗಿ ಇ-ಹರಾಜಿಗಾಗಿ ಸಾರ್ವಜನಿಕ ಸೂಚನೆ

ಬ್ಯಾಂಕ್ ಆಫ್ ಬರೋಡಾ ಅಧಿಕೃತ ಅಧಿಕಾರಿಯು ಈ ಕೆಳಗಿನ ಹೈಪೋತಿಕೇಟೆಡ್ ವಾಹನಗಳನ್ನು ನೋಟಿಸ್‌ಗೆ ಅನುಸಾರವಾಗಿ ಈ ಕೆಳಗಿನ ಸಾಲ ಖಾತೆಗಳಲ್ಲಿ **"ಎಲ್ಲಿ ಇದೆಯೋ ಹಾಗೆ" ಮತ್ತು "ಯಾವುದಾದರೂ ಇದ್ದಂತೆ"** ಮಾರಾಟ ಮಾಡುವ ಹಕ್ಕನ್ನು ಪಡೆದುಕೊಂಡಿದ್ದಾರೆ. "ಇಲ್ಲಿ ವಿವರಿಸಿದಂತೆ ಬ್ಯಾಂಕಿನ ಬಾಕಿ ಮತ್ತು ಬಡ್ಡಿಯ ಸಾಕ್ಷಾತ್ಕಾರಕ್ಕೆ ಆಧಾರವಾಗಿದೆ ಮತ್ತು ಬಾಕಿಗಳನ್ನು ಮರುಪಾವತಿಸಲು ವಿಫಲವಾದ ನಂತರ, ಸದರಿ ನೋಟಿಸ್ ಅಡಿಯಲ್ಲಿ ನೀಡಲಾದ ಅಧಿಕಾರದ ವ್ಯಾಯಾಮದಲ್ಲಿ ಕೆಳಗೆ ಸಹಿ ಮಾಡಿರುವುದು ಹೇಳಲಾದ ಮಾರಾಟದ ಮೂಲಕ ಬ್ಯಾಂಕ್‌ನ ಬಾಕಿಗಳನ್ನು ಸಾಧಿಸಲು ಪ್ರಸ್ತಾಪಿಸುತ್ತದೆ. ವೆಬ್‌ಸೈಟ್‌ನಲ್ಲಿ ಒದಗಿಸಲಾದ ಇ-ಹರಾಜು ವೇದಿಕೆಯ ಮೂಲಕ ಕೆಳಗೆ ಸಹಿ ಮಾಡಿದವರು ಮಾರಾಟವನ್ನು ಮಾಡುತ್ತಾರೆ.

ವಾಹನಗಳ ವಿವರಣೆ

ಕ್ರ. ಸಂ	ಎ. ಶಾಖೆಯ ಹೆಸರು ಬಿ. ಖಾತೆ ಸಂಖ್ಯೆ ಅ. ಸಾಲಗಾರನ ಹೆಸರು ಡಿ.ಬ್ಯಾಲೆನ್ಸ್ ಬಾಕಿಯಿದೆ	ಚಲಿಸಬಲ್ಲ ವಾಹನದ ವಿವರಗಳು ಎ. ವಾಹನದ ಮಾದರಿ ಬಿ. ನೋಂದಣಿ ಸಂಖ್ಯೆ	ಎ. ಮೀಸಲು ಬೆಲೆ ಬಿ. ಇ.ಎಂ.ಡಿ ಸಿ. ಕನಿಷ್ಠ ಇನ್ಕ್ರಿಮೆಂಟ್ ಮೌಲ್ಯ
1	ಎ.ಜೆ.ಪಿ.ನಗರ ಬಿ. 27500600013666 ಸಿ. ಮತ್ತು ಭರತ್ ಕುಮಾರ್ ರೆಡ್ಡಿ ಡಿ. 21,66,684/-	ಎ. JEEP NEW COMPASS ಬಿ. KA05ND9055	ಎ. 15,12,000/- ಬಿ. 1,51,200/- ಸಿ. 10,000/-
2	ಎ.ಇಸ್ರೋ ಲೇಔಟ್ ಬಿ. 36610600001040 ಸಿ.ಮಹೇಶ ನಾಗರಾಜು ಡಿ. 13,61,458/-	ಎ. HYUNDAI CRETA ಬಿ. KA05MW9027	ಎ. 4,48,000/- ಬಿ. 44,800/- ಸಿ. 5,000/-
3	ಎ. ಬನಶಂಕರಿ ಬಿ. 73620600000494 ಸಿ. ರಮಣ ಗೌಡ ಶ್ರೀಕಂಠ ಡಿ. 10,75,356/-	ಎ. HYUNDAI I20 ಬಿ. KA02MQ3671	ಎ. 6,12,000/- ಬಿ. 61,200/- ಸಿ. 5,000/-
4	ಎ. ಬನಶಂಕರಿ ಬಿ. 27710600001909 ಸಿ.ನಾಗೇಶ್ ಜಿ ಡಿ. 2,10,510/-	ಎ. MARUTI SWIFT LXI ಬಿ. KA41MB8423	ಎ. 3,42,000/- ಬಿ. 34,200/- ಸಿ. 5,000/-
5	ಎ. ಬಿಟಿಎಂ ಲೇಔಟ್ ಬಿ. 29600600003870 ಸಿ. ಯೋಗೇಶ್ ಬಾಬು ಸಿ ಡಿ. 6,78,023/-	ಎ. RENAULT TRIBER ಬಿ. KA01MZ4843	ಎ. 4,32,000/- ಬಿ. 43,200/- ಸಿ. 5,000/-

* ಇ-ಹರಾಜಿನ ದಿನಾಂಕ/ಸಮಯ : **30.12.2024 ಮಧ್ಯಾಹ್ನ 2.00 ರಿಂದ ಸಂಜೆ 6.00 ರವರೆಗೆ**
* ಇಎಂಡಿ ಮತ್ತು ಡಾಕ್ಯುಮೆಂಟ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ : 27.12.2024 ಸಂಜೆ 4.00 ಗಂಟೆಗೆ** ಮೊದಲು **ಬ್ಯಾಂಕ್ ಆಫ್ ಬರೋಡಾ,** ವಸೂಲಿ ಇಲಾಖೆ, ಪ್ರಾದೇಶಿಕ ಕಚೇರಿ, ದಕ್ಷಿಣ, 4ನೇ ಮಹಡಿ, ವಿಜಯ ಟವರ್ಸ್, ಟ್ರಿನಿಟಿ ಸರ್ಕಲ್ ಹತ್ತಿರ, ಎಂ.ಜಿ. ರಸ್ತೆ, ಬೆಂಗಳೂರಿಗೆ ಸಲ್ಲಿಸಬೇಕು.
* ಇಎಂಡಿಯನ್ನು ಬ್ಯಾಂಕ್ ಆಫ್ ಬರೋಡಾ ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸಬೇಕು.
* ತಪಾಸಣೆ ದಿನಾಂಕ ಮತ್ತು **ಸಮಯ : 23.12.2024 ಕ್ಕೆ ಬೆಳಿಗ್ಗೆ 10.00 ರಿಂದ ಸಂಜೆ 4.00 ರವರೆಗೆ**
  ಫೀನಿಕ್ಸ್ ಎಂಟರ್‌ಪ್ರೈಸಸ್, ನಂ. 54, 2ನೇ ಮೈನ್, ಮುನಿಸ್ವಾಮಪ್ಪ ಬಡಾವಣೆ, ತಿಂಡ್ಲು, ಬೆಂಗಳೂರು-560097. (ಕ್ರಮ ಸಂಖ್ಯೆ 1 ರಿಂದ 4)
  ನಂ 1186 ಸಾಯಿ ಕರುಣಾ ಪಾರ್ಕಿಂಗ್ ಯಾರ್ಡ್, ಮಲ್ಲತ್ತಹಳ್ಳಿ ಆರ್‌ಟಿಒ ಹತ್ತಿರ, ಉಳ್ಳಾಲ ಮುಖ್ಯರಸ್ತೆ, ಬೆಂಗಳೂರು-560110. (ಕ್ರಮ ಸಂಖ್ಯೆ 5).
* ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-25584066 EXT(710)/25011710,
* ಇ-ಮೇಲ್ : **recovery.blrsouth@bankofbaroda.com**
* (ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ ವಿಚಾರಣೆ ನಡೆಸಬೇಕು)

ಇ-ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳ ಮೂಲಕ ಹೋಗಲು ಬಿಡ್‌ದಾರರಿಗೆ ಸಲಹೆ ನೀಡಲಾಗುತ್ತದೆ. ಹರಾಜು ಟೈಗರ್ ಪ್ರೈ. ಲಿಮಿಟೆಡ್. **https://bob.auctiontiger.net** ಮತ್ತು ಬ್ಯಾಂಕ್ ವೆಬ್‌ಸೈಟ್ **https://www.bankofbaroda.com** ಹರಾಜು ಟ್ಯಾಬ್ ಅಡಿಯಲ್ಲಿ ಅಥವಾ ಅವರ ಬಿಡ್‌ಗಳನ್ನು ಸಲ್ಲಿಸುವ ಮೊದಲು ಮತ್ತು ಇ-ಹರಾಜಿನಲ್ಲಿ ಭಾಗವಹಿಸುವ ಮೊದಲು.

ದಿನಾಂಕ : 27.11.2024
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ವಿಚಾರಣಾಧೀನ ಕೈದಿ ಮೇಲೆ ಹಲವು ಪ್ರಕರಣಗಳಿದ್ದರೆ ಜಾಮೀನು ಇಲ್ಲ: ಹೈಕೋರ್ಟ್

ಕೋರ್ಟ್ ಸುದ್ದಿ

ಬೆಂಗಳೂರು: ವಿಚಾರಣಾಧೀನ ಕೈದಿಯ ವಿರುದ್ಧದ ಅಪರಾಧ ಪ್ರಕರಣಕ್ಕೆ ನಿಗದಿಯಾಗಿರುವ ಒಟ್ಟು ಶಿಕ್ಷೆ ಪ್ರಮಾಣದಲ್ಲಿ ಮೂರನೇ ಒಂದು ಭಾಗದ ದಿನಗಳನ್ನು ಜೈಲಿನಲ್ಲಿ ಕಳೆದರೆ, ಜಾಮೀನು ಪಡೆಯಲು ಅರ್ಹ ಎಂದು ಪ್ರತಿಪಾದಿಸುವ ನೂತನ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಸೆಕ್ಷನ್ 479, ಆರೋಪಿಯ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ ಎಂದು ಹೈಕೋರ್ಟ್ ತಿಳಿಸಿದೆ.

ನಕಲಿ ದಾಖಲೆ ಸೃಷ್ಟಿಸಿ ಠೇವಣಿದಾರರಿಗೆ 1,522 ಕೋಟಿ ರು. ಹಣ ವಂಚಿಸಿದ ಪ್ರಕರಣದಲ್ಲಿ 31 ತಿಂಗಳಿಂದ ಜೈಲಿನಲ್ಲಿರುವ ಕಾರಣಕ್ಕೆ ಬಿಎನ್ ಎನ್‌ಎಸ್ ಸೆಕ್ಷನ್ 479 ಅನ್ನು ಆಧರಿಸಿ ಜಾಮೀನು ನೀಡುವಂತೆ ಕೋರಿ ಶ್ರೀಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ಶ್ರೀಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಅಧ್ಯಕ್ಷ ಕೆ. ರಾಮಕೃಷ್ಣ (73) ಅವರು ಅರ್ಜಿ ಸಲ್ಲಿಸಿದ್ದರು. ಅದನ್ನು ವಜಾಗೊಳಿಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರ ಪೀಠ, ಈ ಆದೇಶ ಮಾಡಿದೆ.

ನ್ಯಾಯಾಂಗ ಬಂಧನಕ್ಕೆ ಒಳಗಾಗಿ ಎರಡು ವರ್ಷ ಏಳು ತಿಂಗಳು ಕಳೆದಿರುವುದರಿಂದ ಬಿಎನ್‌ಎಸ್‌ಎಸ್ ಸೆಕ್ಷನ್ 479(1) ಆಧರಿಸಿ ಜಾಮೀನು ನೀಡಲು ಅರ್ಜಿದಾರರು ಕೋರಿದ್ದಾರೆ. ಆದರೆ, ಬಿಎನ್‌ಎಸ್‌ಎಸ್ ಸೆಕ್ಷನ್ 479 (2) ಪ್ರಕಾರ, ವ್ಯಕ್ತಿಯೋರ್ವನ ವಿರುದ್ಧ ಹಲವು ಪ್ರಕರಣ ದಾಖಲಾಗಿ, ಅದರಲ್ಲಿ ಒಂದಕ್ಕಿಂತ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ತನಿಖೆ, ವಿಚಾರಣೆ ಅಥವಾ ಕೋರ್ಟ್ ವಿಚಾರಣೆ ಬಾಕಿಯಿದ್ದರೆ, ಆ ಆತನನ್ನು ನ್ಯಾಯಾಲಯ ಜಾಮೀನು ಮೇಲೆ ಬಿಡುಗಡೆ ಮಾಡಬಾರದು ಎಂದು ಹೇಳುತ್ತದೆ. ಇನ್ನೂ ವಿಧಿಸಬಹುದಾದ ಗರಿಷ್ಠ ಜೈಲು ಶಿಕ್ಷೆ ಅವಧಿಯ ಅರ್ಧಕ್ಕಿಂತ ಹೆಚ್ಚು ಅವಧಿಯವರೆಗೆ ಒಬ್ಬ ವ್ಯಕ್ತಿಯನ್ನು ಬಂಧನದಲ್ಲಿ ಮುಂದುವರೆಸಿ ಆದೇಶಿಸಲು ಬಿಎನ್‌ಎಸ್‌ಎಸ್ ಸೆಕ್ಷನ್ 479(1) ನ್ಯಾಯಾಲಯಕ್ಕೆ ಅಧಿಕಾರ ನೀಡುತ್ತದೆ. ಹಾಗಾಗಿ, ಜಾಮೀನು ನೀಡಬೇಕಾದ ಸಂದರ್ಭದಲ್ಲಿ ಸೆಕ್ಷನ್ 479, 479(1) ಮತ್ತು 479(2) ಅನ್ನು ಜೊತೆಗೂಡಿ ಓದಬೇಕಾಗುತ್ತದೆ ಎಂದು ನ್ಯಾಯಪೀಠ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಅರ್ಜಿದಾರರ ವಿರುದ್ಧ ಅಕ್ರಮ ಹಣ ವರ್ಗಾವಣೆ(ಪಿಎಂಎಲ್ಎ)ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅಡಿಯ ಪ್ರತ್ಯೇಕವಾಗಿ ಅಂದರೆ, ಒಂದಕ್ಕಿಂತ ಹೆಚ್ಚು ಅಪರಾಧ ಪ್ರಕರಣಗಳು ದಾಖಲಾಗಿವೆ. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಹೂಡಿಕೆದಾರರ ಹಿತಾಸಕ್ತಿ ರಕ್ಷಣಾ ಕಾಯ್ದೆಯ ಸೆಕ್ಷನ್ 9 ಅಡಿಯೂ ಕೇಸ್ ದಾಖಲಾಗಿದೆ. ಆ ಪ್ರಕರಣಗಳ ಆರೋಪಗಳು ಒಂದಕ್ಕಿಂತ ಹೆಚ್ಚಿವೆ ಮತ್ತು ಒಂದಕ್ಕೊಂದು ವಿಭಿನ್ನವಾಗಿಯೂ ಇವೆ ಎಂದಿದೆ.

ಲಾಕಪ್ ಡೆತ್ ಪ್ರಕರಣ: ನಾಲ್ವರು ಪೊಲೀಸ್ ಸಿಬ್ಬಂದಿಗೆ 7 ವರ್ಷ ಸಜೆ

ಅಪರಾಧ ಸುದ್ದಿ

ಬೆಂಗಳೂರು: ಅನುಮಾನಾಸ್ಪದವಾಗಿ ವಶಕ್ಕೆ ಪಡೆದಿದ್ದ ವ್ಯಕ್ತಿಯ ಲಾಕಪ್ ಡೆತ್ ಪ್ರಕರಣದಲ್ಲಿ ನಾಲ್ವರು ಪೊಲೀಸ್ ಸಿಬ್ಬಂದಿಗೆ 7 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಬೆಂಗಳೂರಿನ ಸಿಐಡಿ ವಿಶೇಷ ನ್ಯಾಯಾಲಯವು ಆದೇಶಿಸಿದೆ.

ಒಡಿಶಾ ಮೂಲದ ಮಹೇಂದ್ರ ರಾಥೋಡ್ (42) ಎಂಬಾತನ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿ ಆತನ ಸಾವಿಗೆ ಕಾರಣರಾಗಿದ್ದ ಆರೋಪದಡಿ ಪೊಲೀಸ್ ಸಿಬ್ಬಂದಿಗೆ ಶಿಕ್ಷೆ ಪ್ರಕಟವಾಗಿದೆ. ಜೀವನ್ ಭೀಮಾನಗರ ಠಾಣೆಯ ಅಂದಿನ ಅಪರಾಧ ವಿಭಾಗದ ಹೆಡ್ ಕಾನ್‌ಸ್ಟೇಬಲ್ ಎಜಾಜ್ ಖಾನ್, ಕಾನ್‌ಸ್ಟೇಬಲ್‌ಗಳಾದ ಕೇಶವ ಮೂರ್ತಿ, ಮೋಹನ್ ರಾಮ್ ಹಾಗೂ ಸಿದ್ದಪ್ಪ ಬೊಮ್ಮನಹಳ್ಳಿ ಅವರಿಗೆ 7 ವರ್ಷಗಳ ಸಜೆ ಹಾಗೂ 30 ಸಾವಿರ ಹಾಗೂ 25 ಸಾವಿರ ರು. ದಂಡ ವಿಧಿಸಲಾಗಿದೆ.

ಪ್ರಕರಣದ ಹಿನ್ನೆಲೆ: ಜೀವನ್ ಭೀಮಾನಗರ ಠಾಣೆಯಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣದಲ್ಲಿ ಶಂಕಿತ ಆರೋಪಿಯಾಗಿದ್ದ ಮಹೇಂದ್ರ ರಾಥೋಡ್ ಎಂಬಾತನನ್ನು 2016ರ ಮಾರ್ಚ್ 19ರಂದು ಠಾಣೆಗೆ ಕರೆತರಲಾಗಿತ್ತು. ಎಚ್‌ಎಎಲ್ 2ನೇ ಹಂತದಲ್ಲಿರುವ ಮನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮಹೇಂದ್ರ ರಾಥೋಡ್, ಅದೇ ಮನೆಯಲ್ಲಿ 3.2 ಲಕ್ಷ ರು. ಕಳ್ಳತನ ಮಾಡಿದ್ದ ಆರೋಪ ಕೇಳಿಬಂದಿತ್ತು. ಅದರಂತೆ ಠಾಣೆಗೆ ಕರೆತಂದಿದ್ದ ಮಹೇಂದ್ರ ರಾಥೋಡ್ ಸಂಜೆ ವೇಳೆಗೆ ಉಸಿರಾಟದ ತೊಂದರೆ, ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದು ಸಾವನ್ನಪ್ಪಿದ್ದ. ಪೊಲೀಸ್ ಸಿಬ್ಬಂದಿಯ ನಿರ್ಲಕ್ಷ್ಯತೆ ಹಾಗೂ ದೈಹಿಕವಾಗಿ ಹಲ್ಲೆ ಮಾಡಿದ್ದರ ಪರಿಣಾಮವಾಗಿ ಆತನು ಪೊಲೀಸ್ ವಶದಲ್ಲಿದ್ದಾಗ ಮೃತಪಟ್ಟಿರುವುದು ಸಿಐಡಿ ತನಿಖೆಯಲ್ಲಿ ದೃಢಪಟ್ಟಿತ್ತು. ಮೃತನ ಸಾವಿಗೆ ಕಾರಣರಾದ ನಾಲ್ವರು ಸಿಬ್ಬಂದಿ ವಿರುದ್ಧ 2019ರಲ್ಲಿ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಪ್ರಕರಣದಲ್ಲಿ ವಿಶೇಷ ಸರಕಾರಿ ಅಭಿಯೋಜಕರಾಗಿ ಕೃಷ್ಣವೇಣಿ ಅವರು ವಾದ ಮಂಡಿಸಿದ್ದರು. ವಿಚಾರಣೆ ನಡೆಸಿದ ಸಿಐಡಿ ವಿಶೇಷ ನ್ಯಾಯಾಲಯವು ಆರೋಪಿತ ಪೊಲೀಸ್ ಸಿಬ್ಬಂದಿಯನ್ನು ದೋಷಿಗಳೆಂದು ಪರಿಗಣಿಸಿ ತೀರ್ಪು ನೀಡಿದೆ.

ಯುವತಿಗೆ ಬ್ಯಾಡ್ ಟಚ್: ಆರೋಪಿ ಬಂಧನ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ಬಂದ ವ್ಯಕ್ತಿಯೊಬ್ಬ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಯುವತಿಗೆ ಬ್ಯಾಡ್ ಟಚ್ ಮಾಡಿ ಪರಾರಿಯಾದ ಘಟನೆ ಬೆಳಕಿಗೆ ಬಂದಿದೆ. ನ.11ರ ರಾತ್ರಿ 7.40ರ ಸುಮಾರಿಗೆ ರಾಮಮೂರ್ತಿ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಆರೋಪಿಯ ಕೃತ್ಯವು ರಸ್ತೆಯ ಬದಿಯಲ್ಲಿದ್ದ ಸಿಸಿ ಟಿ.ವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಬಗ್ಗೆ ಯುವತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ರಾಮಮೂರ್ತಿ ನಗರ ಠಾಣೆಯ ಪೊಲೀಸರು, ಕೆಲವೇ ಗಂಟೆಗಳ ಅವಧಿಯಲ್ಲಿ ಆರೋಪಿ ಅರುಣ್ ಎಂಬಾತನನ್ನು ಬಂಧಿಸಿರುವುದಾಗಿ ತಿಳಿಸಿದ್ದಾರೆ. ಅಪ್ರಾಪ್ತನೊಬ್ಬ ರಸ್ತೆಯಲ್ಲಿ ಸೆಲ್ಫಿ ವಿಡಿಯೊ ಮಾಡಿಕೊಂಡು ಹೋಗುತ್ತಿದ್ದ ಯುವತಿಯೊಬ್ಬಳ ಖಾಸಗಿ ಭಾಗ ಸ್ಪರ್ಶಿಸಿ ಪರಾರಿಯಾಗಲು ಯತ್ನಿಸಿದ್ದ ಘಟನೆ ಇತ್ತೀಚೆಗೆ ಬಿಟಿಎಂ ಲೇಔಟ್ ವ್ಯಾಪ್ತಿಯಲ್ಲಿ ನಡೆದಿತ್ತು. ಈ ಘಟನೆಯ ಕುರಿತು ಇನ್‌ಸ್ಟಾಗ್ರಾಂನಲ್ಲಿ ಮೂಲಕ ಆತಂಕ ವ್ಯಕ್ತಪಡಿಸಿದ್ದ ಯುವತಿ ಕಣ್ಣೀರಿಟ್ಟಿದ್ದರು.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT.
THIS DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES.
THIS PUBLIC ANNOUNCEMENT IS NOT INTENDED FOR PUBLICATION OR DISTRIBUTION, DIRECTLY OR INDIRECTLY OUTSIDE INDIA.

C2C ADVANCED SYSTEMS LIMITED

Corporate Identity Numbers: U72200KA2018PLC110361

Our Company was incorporated as 'C2C – DB Systems Private Limited, a private limited company, under the Companies Act, 2013, pursuant to a Certificate of Incorporation dated February 21, 2018 issued by the Registrar of Companies, Bengaluru, Karnataka **("RoC")**. Subsequently, the name of our Company was changed to C2C Advanced Systems Private Limited and a fresh Certificate of Incorporation dated May 12, 2022 was issued by the RoC. Pursuant to a special resolution passed by our shareholders in the Extra Ordinary General Meeting held on October 28, 2023 our Company was converted into a public limited company and the name of our Company was changed to 'C2C Advanced Systems Limited and a fresh Certificate of Incorporation dated December 22, 2023 was issued to our Company by the RoC. For further details on the changes in the name and registered office of our Company, see *"History and Certain Corporate Matters"* on page 168 of the Red Herring Prospectus.

Registered Office: No 86, Wings of Eagles, SS Commercial Estate, Varthur Road, Nagavarapalaya Main Road, C V Raman Nagar, Bengaluru – 560 093, Karnataka, India
Corporate Office: C4, Anand Niketan, New Delhi – 110 021, India
E-mail: compliance@ c2c-as.com; | **Tel :** +91 80 4372 4052; | **Website:** www.c2c-as.com | **Company Secretary and Compliance Officer:** Mr. Manjeet Singh

PROMOTERS OF OUR COMPANY: C2C INNOVATIONS PRIVATE LIMITED, PVR MULTIMEDIA PRIVATE LIMITED, LAKSHMI CHANDRA, MAYA CHANDRA, SUBRAHMANYA SRINIVASA NARENDRA LANKA, KURIYEDATH RAMESH AND MURTAZA ALI SOOMAR

C2C Advanced Systems as the pre-eminent domain agnostic technology company focused on "Intelligent Platform" is in a very unique position to dominate this space. We have a technological advantage over our existing competitors, as reflected in our higher margins and globally competitive offerings. Our expertise in architecture design, data acquisition, data analytics and modelling, AI/ML has dual use in the civilian applications. The rigorous requirements placed by Military requirements allows us to innovate for the highest levels of performance.

THE ISSUE

INITIAL PUBLIC ISSUE OF 43,83,600 EQUITY SHARES OF FACE VALUE OF ₹ 10.00 EACH ("EQUITY SHARES") OF C2C ADVANCED SYSTEMS LIMITED (THE "COMPANY" OR THE "ISSUER") FOR CASH AT A PRICE OF ₹ [●] PER EQUITY SHARE INCLUDING A SHARE PREMIUM OF ₹ [●] PER EQUITY SHARE (THE "ISSUE PRICE") AGGREGATING TO ₹ [●] LAKHS ("THE ISSUE") OF WHICH 2,19,600 EQUITY SHARES AGGREGATING TO ₹ [●] LAKHS WILL BE RESERVED FOR SUBSCRIPTION BY MARKET MAKER TO THE ISSUE (THE "MARKET MAKER RESERVATION PORTION"). THE ISSUE LESS THE MARKET MAKER RESERVATION PORTION I.E. NET ISSUE OF 41,64,000 EQUITY SHARES AGGREGATING TO ₹ [●] LAKHS (THE "NET ISSUE"). THE ISSUE AND THE NET ISSUE WILL CONSTITUTE 26.34% AND 25.02% RESPECTIVELY OF THE POST ISSUE PAID-UP EQUITY SHARE CAPITAL OF OUR COMPANY.

PRICE BAND: ₹ 214/- TO ₹ 226/- PER EQUITY SHARE OF FACE VALUE ₹ 10/- EACH
The Floor Price is 21.40 times of the Face Value and the Cap Price is 22.60 times of the Face Value
Bids can be made for a minimum of 600 Equity Shares and in multiples of 600 Equity Shares thereafter

CORRIGENDUM CUM ADDENDUM TO THE RED HERRING PROSPECTUS DATED NOVEMBER 11, 2024 AND ISSUE OPENING ADVERTISEMENT DATED NOVEMBER 14, 2024
NOTICE TO THE INVESTORS READ WITH CORRIGENDUM CUM ADDENDUM DATED NOVEMBER 20, 2024, NOVEMBER 24, 2024, NOVEMBER 25, 2024 AND NOVEMBER 26, 2024 ("THE CORRIGENDUM CUM ADDEDNUM")

This corrigendum cum Addendum is with reference to the Issue Opening Advertisement dated November 14, 2024 in the Financial Express (English), Jansatta (Hindi) and Bengaluru edition of Vishwavani (Kannada). In this regard, please note the following:

"We refer to the directions received from National Stock Exchange of India Limited ("NSE"), vide letter no. NSE/LIST/3837E dated November 25, 2024. Accordingly, the issuer company is giving an option to withdraw the application from this IPO. Please contact your broker/ASBA banker through whom the bid was placed. This email is to be read along with the Red Herring Prospectus dated November 11, 2024, corrigendum cum addendum dated November 20, 2024, November 24, 2024, November 25, 2024 and November 26, 2024.

Procedure for withdrawal of application/bid:
Step 1: Investor to approach the Designated Intermediary for withdrawal of its application/bid;
Step 2: Designated Intermediary to acknowledge the request received from the investors;
Step 3: Designated Intermediary based on the request received to cancel the bid on the National Stock Exchange of India Limited ("NSE") Portal;
Step 4: Designated Intermediary to receive the acknowledgement (TRS slip) received from NSE, as required.

You can also mention the details of your broker/bidder, in case you are not able to place your bid (withdrawal) on their platform.

Your reply with the above details should be addressed to us at our email, c2csmeipo@linkintime.co.in and in the subject line please mention PAN Number of the sole / first bidder/applicant with the wording withdrawal. It should read us **XXXXX1234F – Appl. No. XXXXXXXX Withdrawal request".**

In case if any further clarifications or details are required please contact on c2csmeipo@linkintime.co.in, smeipo@markcorporateadvisors.com, investorgrievance@markcorporateadvisors.com and ig@beelinemb.com.

REVISED BID / ISSUE PROGRAM

Bid Closing Date (T day)	Tuesday, November 26, 2024	Initiation of Unblocking of Funds/refunds (T +2 Days)*	On or before Monday, December 02, 2024
Withdrawal Option to all the Investors (Excluding Anchor Investor)	On or before Thursday, November 28, 2024 before 5 pm	Credit of Equity Shares to demat accounts of Allotees (T +2 Days)	On or before Monday, December 02, 2024
Finalization of basis of allotment with the Designated Stock Exchange/ Allotment of Securities (T +1 Day)	On or before Friday, November 29, 2024	Commencement of Trading of Equity Shares on the Stock Exchanges/ Listing Date (T + 3 Days)	On or before Tuesday, December 03, 2024

*In case of any delay in unblocking of amounts in the ASBA Accounts (including amounts blocked through the UPI Mechanism) exceeding two Working Days from the closure of withdrawal option date (Nov 28, 2024) the Bidder shall be compensated at a uniform rate of ₹ 100 per day or 15% per annum of the Bid Amount, whichever is higher, for the entire duration of delay exceeding two Working Days from the closure of withdrawal option date (Nov 28, 2024) by the intermediary responsible for causing such delay in unblocking. The BRLM shall, in their sole discretion, identify and fix the liability on such intermediary or entity responsible for such delay in unblocking.

All capitalized terms used herein and not specifically defined shall have the same meaning as ascribed to them in the Red Herring Prospectus dated November 11, 2024 read with corrigendum cum addendum dated November 20, 2024, November 24, 2024, November 25, 2024 and November 26, 2024

LAST DATE FOR WITHDRAWAL OF BIDS: THURSDAY, NOVEMBER 28, 2024 BEFORE 5:00 P.M.

BOOK RUNNING LEAD MANAGERS TO THE ISSUE

MARK CORPORATE ADVISORS PRIVATE LIMITED
CIN Number : U67190MH2008PTC181996
Address: 404/1, The Summit Business Bay, Sant Janabai Road (Service Lane), Off W. E. Highway, Vile Parle (East), Mumbai-400 057. Maharashtra
Tel. No.: +91 22 2612 3207/08
Email id: smeipo@markcorporateadvisors.com
Investor Grievance Email id: investorsgrievance@markcorporateadvisors.com
Website: www.markcorporateadvisors.com
Contact Person: Mr Manish Gaur
SEBI Registration Number.: INM000012128

BEELINE CAPITAL ADVISORS PRIVATE LIMITED
Address: B 1311-1314, Thirteenth Floor, Shilp Corporate Park, Rajpath Rangoli Road, Thaltej, Ahmadabad, Gujarat – 380054, India.
Telephone Number: 079 4918 5784
Email Id: mb@beelinemb.com
Investors Grievance Id: ig@beelinemb.com
Website: www.beelinemb.com
Contact Person: Mr. Nikhil Shah
CIN: U67190GJ2020PTC114322
SEBI Registration Number: INM000012917

REGISTRAR TO THE ISSUE

LINK INTIME INDIA PRIVATE LIMITED
Address: C-101, 1st Floor, 247 Park, L.B. S. Marg, Vikhroli (West) Mumbai 400 083 Maharashtra, India
Tel. No: + 91 22 4918 6200
Email id: c2csme.ipo@linkintime.co.in
Investor grievance e-mail: c2csmeipo@linkintime.co.in
Website: www.linkintime.co.in
Contact Person: Ms. Shanthi Gopalkrishnan.
SEBI Registration No.: INR000004058

COMPANY SECRETARY AND COMPLIANCE OFFICER

C2C Advanced Systems Limited
Mr. Manjeet Singh
Address: C4, Anand Niketan, New Delhi – 110 021, India | **Tel No:** +91 80 4372 4052 | **Email:** compliance@ c2c-as.com
Website: www.c2c-as.com

Investors can contact the Company Secretary and Compliance Officer or the BRLMs or the Registrar to the Issue in case of any pre-Issue or post-issue related problems, such as non-receipt of letters of Allotment, non-credit of Allotted Equity Shares in the respective beneficiary account and refund orders, etc.

Place: Bengaluru
Date: November 27, 2024

On behalf of Board of Directors
For, C2C ADVANCED SYSTEMS LIMITED
sd/-
Lakshmi Chandra
Managing Director

Disclaimer: C2C Advanced Systems Limited is proposing, subject to applicable statutory and regulatory requirements, receipt of requisite approvals, market conditions and other considerations, to make an initial public issue of its Equity Shares and has filed the RHP with the Registrar of Companies, Bengaluru, Karnataka on November 12, 2024 and thereafter with SEBI and the Stock Exchanges. The RHP is available on the websites of SEBI at www.sebi.gov.in, website of the Company at www.c2c-as.com, the website of NSE i.e. www.nseindia.com, the website of the BRLMs i.e. Mark Corporate Advisors Private Limited and Beeline Capital Advisors Private Limited at www.markcorporateadvisors.com and www.beelinemb.com, respectively. Any potential investors should note that investment in equity shares involves a high degree of risk and for details relating to the same, please refer to the RHP including the section titled "Risk Factors" beginning on page 26 of the Red Herring Prospectus.

The Equity Shares have not been and will not be registered under the U.S. Securities Act of 1933, as amended (the "Securities Act") or any state securities laws in the United States, and unless so registered, and may not be issued or sold within the United States, except pursuant to an exemption from, or in a transaction not subject to, the registration requirements of the Securities Act and in accordance with any applicable U.S. state securities laws. The Equity Shares are being Offered and sold outside the United States in 'offshore transactions' in reliance on Regulation S under the Securities Act and the applicable laws of each jurisdiction where such Offers and sales are made. There will be no public offering in the United States.

garima advt.

ಸಮಾಚಾರ ಸಣ್ಣದಲ್ಲ

ಅನಿಲ್ ಕುಮಾರ್‌ಗೆ ಪಿಎಚ್.ಡಿ ಪದವಿ

ಬೆಂಗಳೂರು: ಕೋಲಾರ ತಾಲೂಕಿನ ಕಾಳಹಸ್ತಿಪುರ ಗ್ರಾಮದ ವೆಂಕಟಮುನಿಯಪ್ಪ ಮತ್ತು ಲಕ್ಷ್ಮೀದೇವಮ್ಮ ಅವರ ಪುತ್ರರಾದ ಅನಿಲ್ ಕುಮಾರ್ ಕೆ.ವಿ.ಯವರು ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಎಸ್. ದುರ್ಗಾ ಪ್ರವೀಣರವರ ಮಾರ್ಗದರ್ಶನ ದಲ್ಲಿ ಸಲ್ಲಿಸಿದ ಕೋಲಾರ ತಾಲೂಕಿನ ಸ್ಥಳ ಪುರಾಣಗಳು (ಭೋವಿ ಸಮುದಾಯದ ಸ್ಮೃತಿ ಪರಂಪರೆಯನ್ನು ಅನುಲಕ್ಷಿಸಿ)'' ಎಂಬ ಮಹಾ ಪ್ರಬಂಧಕ್ಕೆ ದ್ರಾವಿಡ ವಿಶ್ವವಿದ್ಯಾಲಯವು ಡಾಕ್ಟರೇಟ್ (ಪಿಎಚ್.ಡಿ) ಪದವಿ ನೀಡಿ ಗೌರವಿಸಿದೆ.

ಇಂದು ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯು ನ.28ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್ ನಡೆಸಲಿದೆ ಎಂದು ಮಂಡಳಿ ತಿಳಿಸಿದೆ. ನಗರದ (ಆಗ್ನೇಯ-3), (ಆಗ್ನೇಯ-6) (ಪಶ್ಚಿಮ-1-3), (ವಾಯುವ್ಯ -5), (ಉತ್ತರ-2-3), (ದಕ್ಷಿಣ-1-3), (ನೈರುತ್ಯ-3), (ನೈರುತ್ಯ-6)ಮತ್ತು (ಪೂರ್ವ-2-4) ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಗೆ ಕರೆಮಾಡಿ ಹಾಗೂ ವಾಟ್‌ಆಪ್ ಸಂಖ್ಯೆ:8762228888 ಸಂದೇಶದ ಮೂಲಕ ದೂರು ದಾಖಲಿಸಬಹುದಾಗಿದೆ.

ಇಂದಿನಿಂದ ಅಥ್ಲೆಟಿಕ್ಸ್ ಕ್ರೀಡಾಕೂಟ

ಬೆಂಗಳೂರು: ಬೆಂಗಳೂರು ವಿವಿಯ ದೈಹಿಕ ಶಿಕ್ಷಣ ನಿರ್ದೇಶನಾಲಯ ನ.28,29 ಮತ್ತು 30 ರಂದು ಜ್ಞಾನಭಾರತಿ ಆವರಣದ ಭಾರತೀಯ ಕ್ರೀಡಾ ಪ್ರಾಧಿಕಾರ ಕ್ರೀಡಾಂಗಣದಲ್ಲಿ 2024-25ನೇ ಸಾಲಿನ ಅಂತರ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್ ಕ್ರೀಡಾ ಕೂಟ ಆಯೋಜಿಸಿದೆ. ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದು, ಬೆಂಗಳೂರು ವಿವಿಯ ಸುಮಾರು 296 ಸಂಯೋಜಿತ ಕಾಲೇಜುಗಳಿಂದ 2000 ಕ್ರೀಡಾಪಟು ಗಳು 49 ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವರು. ಕ್ರೀಡಾಕೂಟವನ್ನು ವಿವಿ ಕುಲಪತಿ ಪ್ರೊ.ಡಾ.ಜಯಕರ ಎಸ್ ಎಂ ಮತ್ತು ಅಂತಾರಾಷ್ಟ್ರೀಯ ಕ್ರೀಡಾಪಟು ಸಹನಾಕುಮಾರಿ ಉದ್ಘಾಟಿಸುವರು. ಇದು ಡಿಸೆಂಬರ್ ಕೊನೆಯಲ್ಲಿ ಭುವನೇಶ್ವರದಲ್ಲಿ ನಡೆಯುವ ಅಖಿಲ ಭಾರತ ಮಟ್ಟದ ಅಂತರ್ ವಿವಿ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಬೆಂಗಳೂರು ವಿವಿಯ ತಂಡದ ಆಯ್ಕೆಗೆ ವೇದಿಕೆಯೂ ಆಗಿರಲಿದೆ.

30ಕ್ಕೆ ಮುದ್ದುರಾಮ ಪ್ರಶಸ್ತಿ ಪ್ರದಾನ

ಬೆಂಗಳೂರು: ಮೈಸೂರಿನ ಮುದ್ದುರಾಮ ಪ್ರತಿಷ್ಠಾನ ಹಾಗೂ ಅಭಿನವ, ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಮುದ್ದುರಾಮ ಪ್ರಶಸ್ತಿ ಪ್ರದಾನ ಹಾಗೂ ಮುದ್ದುರಾಮ ಚೌಪದಿಗಳ 10 ಸಂಪುಟಗಳ ಲೋಕಾರ್ಪಣಾ ಕಾರ್ಯಕ್ರಮವು ನ.30 ರಂದು ನಡೆಯಲಿದೆ. ಕಾಯಕ್ರಮಕ್ಕೆ ಸುತ್ತೂರು ಕ್ಷೇತ್ರದ ವೀರ ಸಿಂಹಾಸನ ಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಸಾಹಿತಿ ಪ್ರೊ.ಅ.ರಾ.ಮಿತ್ರ ಅವರಿಗೆ ಮುದ್ದುರಾಮ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಮುದ್ದುರಾಮ ಸಂಪುಟಗಳ ಕುರಿತು ಅಂಕಣಕಾರ ಡಾ.ಗುರುರಾಜ ಕರಜಗಿ ಅವರು ಪರಿಚಯಿಸಲಿದ್ದಾರೆ. ಪ್ರಶಸ್ತಿ ಪುರ ಸ್ಕೃತರ ಕುರಿತು ಮೈಸೂರಿನ ಸೇಂಟ್ ಫಿಲೋಮಿನ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಪ್ರೊ.ಎಂ.ಕೃಷ್ಣೇಗೌಡ ಅವರು ಪರಿಚಯಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್, ಪ್ರತಿಷ್ಠಾನದ ಅಧ್ಯಕ್ಷ ಕೆ.ಸಿ.ಶಿವಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಡಾ.ಸಿ.ಸೋಮಶೇಖರ್ ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

30ಕ್ಕೆ ಸ್ಫೂರ್ತಿ ರಂಗಪ್ರವೇಶ

ಬೆಂಗಳೂರು: ಕಥಕ್ ನೃತ್ಯ ಪ್ರಕಾರದ ನಿರುಪಮಾ ರಾಜೇಂದ್ರ ಮತ್ತು ಟಿ.ಡಿ.ರಾಜೇಂದ್ರ ಅವರ ಶಿಷ್ಯೆ ಸ್ಫೂರ್ತಿ ಎಸ್.ಜೋಶಿ ಅವರ ಕಥಕ್ ರಂಗಪ್ರವೇಶ ನ.30ರಂದು ಸಂಜೆ 4 ಗಂಟೆಗೆ ನಗರದ ಹೊಂಬೇಗೌಡ ನಗರದ ಪ್ರಭಾತ್ ಕಲಾ ಸಂಭ್ರಮ ಸಭಾಂಗಣದಲ್ಲಿ ನಡೆಯಲಿದೆ. ನಿರುಪಮಾ ಮತ್ತು ರಾಜೇಂದ್ರ ಅವರ ಅಭಿನವ ಡ್ಯಾನ್ಸ್ ಕಂಪನಿಯಲ್ಲಿ 14 ವರ್ಷಗಳಿಂದ ಕಥಕ್ ನೃತ್ಯಾಭ್ಯಾಸ ಮಾಡುತ್ತಿ ರುವ ಸ್ಫೂರ್ತಿ ಎಸ್ ಈ ಅಕಾಡೆಮಿಯ ಹಿರಿಯ ನೃತ್ಯ ಗುರು ರೋಹಿಣಿ ಪ್ರಭಾತ್ ಅವರಿಂದಲೂ ಸಾಕಷ್ಟು ನೃತ್ಯ ತರಬೇತಿ ಪಡೆದು ಕೊಂಡವರು. ಬೆಂಗಳೂರು ಗಣೇಶ ಉತ್ಸವ, ಚಿನ್ನ ಕಲಾ ನಾದಂ ನಂತಹ ಪ್ರಮುಖ ವೇದಿಕೆಗಳಲ್ಲಿ ನೃತ್ಯ ಪ್ರದರ್ಶಿಸಿ ರುವ ಸ್ಫೂರ್ತಿ, ಎಡಿಸಿಯ ಮಹತ್ವದ ನೃತ್ಯ ಕಾರ್ಯಕ್ರಮಗಳಾದ ರಾಮ ಕಥಾ ವಿಸ್ಮಯ', ಸಿಲ್ವರ್ ಟು ಸಿಲಿಕಾನ್' ಮೊದಲಾದವುಗಳ ಭಾಗವಾಗಿದ್ದವರು. ಚೆನ್ನೈ, ದೆಹಲಿ ಸಹಿತ ಹಲವು ಕಡೆಗಳಲ್ಲಿ ಅಭಿನವ ತಂಡದೊಂದಿಗೆ ಕಾರ್ಯಕ್ರಮ ನೀಡಿದ್ದಾರೆ. ತಮ್ಮ ಪ್ರತಿಭೆಗಾಗಿ ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾಸೌರಭ 2020' ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಸಮಾರಂಭದಲ್ಲಿ ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ, ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ.

ಸ್ವಚ್ಛ ವೃಷಭಾವತಿಗೆ ವಿವಿ ಯೋಜನೆ

ಆರ್ಟ್ ಆಫ್ ಲಿವಿಂಗ್, ಎಂಪ್ರಿ, ಸಂಸ್ಥೆಯೊಂದಿಗೆ ಒಡಂಬಡಿಕೆ | ಶುದ್ಧೀಕರಿಸಿದ ನೀರನ್ನು ಬಳಸಿಕೊಂಡು ಬೆಂಗಳೂರು ವಿಶ್ವವಿದ್ಯಾಲಯ ಹಸಿರೀಕರಣಕ್ಕೆ ಚಿಂತನೆ

ಅಪರ್ಣಾ ಎ.ಎಸ್ ಬೆಂಗಳೂರು

ರಾಜಧಾನಿ ಬೆಂಗಳೂರಿನ ಪ್ರಮುಖ ಜಲಮೂಲವಾಗಿರುವ ವೃಷಭಾವತಿಯ ಸ್ವಚ್ಛತೆಗೆ ಮತ್ತೊಂದು ಪ್ರಯತ್ನ ಆರಂಭ ವಾಗಿದೆ. ಕಲುಷಿತ ನೀರಿಗೆ ಹೆಸರಾಗಿರುವ ವೃಷಭಾವತಿಯನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮಹತ್ವದ ಹೆಜ್ಜೆಯಿಟ್ಟಿದ್ದು, ನೀಲನಕ್ಷೆಗೆ ವಿವಿ ಮುಂದಾಗಿದೆ.

ಎಂಪ್ರಿ ಹಾಗೂ ಆರ್ಟ್ ಆಫ್ ಲಿವಿಂಗ್‌ನ ಸಹಯೋಗ ದೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯ ವೃಷಭಾವತಿಯನ್ನು ಸ್ವಚ್ಛಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಪ್ರಮುಖವಾಗಿ ಬೆಂಗಳೂರು ವಿವಿ ಸುತ್ತಮುತ್ತಲಿರುವ ವೃಷಭಾವತಿಯನ್ನು ಸ್ವಚ್ಛಗೊಳಿಸುವುದರೊಂದಿಗೆ ಈ ಶುದ್ಧೀಕರಿಸಿದ ನೀರನ್ನು ಬಳಸಿಕೊಂಡು ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸುತ್ತಮುತ್ತ ಹಸಿರೀಕರಣಗೊಳಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಹಾಕಿಕೊಂಡಿದೆ. ಈ ಮೂಲಕ ಸ್ವಚ್ಛ ಆವರಣದೊಂದಿಗೆ ಹಸಿರು ಆವರಣ ನಿರ್ಮಾಣಕ್ಕೆ ವಿವಿಯು ಮುಂದಾಗಿದೆ.

ವೃಷಭಾವತಿ ನದಿಯು ಕೊಳಚೆ ನೀರು, ಪ್ಲಾಸ್ಟಿಕ್, ಘನತ್ಯಾಜ್ಯಗಳಿಂದಾಗಿ ಹಾಳಾಗಿದ್ದು, ಇದರಿಂದಾಗಿ ಜ್ಞಾನ ಭಾರತಿ ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು, ಬೋಧನಾ ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಕಲುಷಿತವಾದ ನದಿಯಿಂದಾಗಿ ಹಲವಾರು ಸಮಸ್ಯೆಯುಂಟಾಗುತ್ತಿದೆ. ಈ ಸಮಸ್ಯೆಗೆ ಪರಿಹಾರವಾಗಿ ವೃಷಭಾವತಿಯ ಸ್ವಚ್ಛತೆಗೆ ಮುಂದಾಗಿದ್ದಾರೆ. ಇದಕ್ಕಾಗಿ ಬೆಂಗಳೂರು ವಿವಿಯ ಪಿಎಂಇಬಿ ನಿರ್ದೇಶಕ ಪ್ರೊ.ಅಶೋಕ್ ಡಿ.ಹಂಜರಗಿ ನೇತೃತ್ವದಲ್ಲಿ ತಂಡವೊಂದು ಸಜ್ಜಾಗಿದ್ದು, ಉಪಕುಲಪತಿ ಸೇರಿದಂತೆ ಇತರೆ ಸಿಬ್ಬಂದಿ, ಆರ್ಟ್ ಆಫ್ ಲಿವಿಂಗ್‌ನ ವ್ಯಕ್ತಿವಿಕಾಸ ಕೇಂದ್ರದೊಂದಿಗೆ, ಸಿಎಸ್‌ಆರ್ ಸಹಾಯದೊಂದಿಗೆ ಪ್ರಕೃತಿ ಆಧಾರಿತ ಸೊಲ್ಯೂಷನ್‌ಗಳನ್ನು ಬಳಸಿಕೊಂಡು ಸ್ವಚ್ಛತೆಗೆ ಮುಂದಾಗಿದ್ದಾರೆ.

ಅನುದಾನ ಸೇರಿದಂತೆ ವಿವಿಧ ನೀಲನಕ್ಷೆ ಸಿದ್ಧತೆ: ನೀರಿನ ಸ್ವಚ್ಛತೆ ಕುರಿತು ಹಲವು ಸಂಶೋಧನೆಯನ್ನು ಕೈಗೊಳ್ಳಲಾಗಿದ್ದು, ವರ್ಕ್ ಶಾಪ್‌ಗಳನ್ನು ಮಾಡಲಾಗಿದೆ. ಕ್ಯಾಂಪಸ್‌ನ ಮ್ಯಾಪಿಂಗ್ ಮಾಡಲಾಗುತ್ತಿದ್ದು, ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಸರಕಾರಿ ವಿಶ್ವವಿದ್ಯಾಲಯವಾಗಿರುವುದರಿಂದ, ಸರಕಾರಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಬಡ ವರ್ಗದವರಾಗಿರುತ್ತಾರೆ. ಹೀಗಾಗಿ ವಿವಿಯಿಂದ ಯಾವುದೇ ಹಣಕಾಸಿನ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುವುದಿಲ್ಲ. ಸಿಎಸ್‌ಆರ್ ನಿಧಿಯನ್ನು ಬಳಸಿಕೊಳ್ಳಲು ಕಂಪನಿಗಳಿಗೆ ಈ ಮೂಲಕ ಉತ್ತೇಜನವನ್ನು ನೀಡಲಾಗುವುದು. ಈ ಮೂಲಕ ವೃಷಭಾವತಿ ಸ್ವಚ್ಛತೆಯನ್ನು ಕಂಪನಿಗಳ ಸಹಕಾರದೊಂದಿಗೆ ಮಾಡಲು ವಿವಿ ಸಿದ್ಧತೆ ನಡೆಸಿಕೊಂಡಿದೆ.

ಈ ಸ್ವಚ್ಛತಾ ಕಾರ್ಯಕ್ರಮಕ್ಕೆ ವಿವಿ ಯೋಜನೆ ಸಿದ್ಧಪಡಿಸುತ್ತದೆ. ಆದರೆ ಯಾವುದೇ ಅನುದಾನವನ್ನು ನೀಡುವುದಿಲ್ಲ. ಖಾಸಗಿ ಸಂಸ್ಥೆಗಳು ಎಲ್ಲಾ ಸಿದ್ಧತೆ ಮಾಡಿಕೊಡಬೇಕಾಗಿದ್ದು, ಈ ಕುರಿತು ಚರ್ಚೆಯನ್ನೂ ನಡೆಸಲಾಗಿದೆ. ಇದರ ಜತೆಗೆ ಚೆಕ್ ಡ್ಯಾಮ್ ನಿರ್ಮಾಣ, ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಮಾಡಿಕೊಡಲು ಟಾಟಾ ಕಂಪನಿಯು ಮುಂದಾಗಿದೆ. ಹಾಸ್ಟೆಲ್ ಕ್ಲಸ್ಟರ್‌ಗಳಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಕುರಿತು ಇನ್ನೂ ಚರ್ಚೆ ನಡೆಸಬೇಕಾಗಿದ್ದು, ಯಾವ ರೀತಿ ಎನ್ನುವ ಕುರಿತು ಚಿಂತನೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲುಷಿತವಾಗಿರುವುದರಿಂದ ಆರೋಗ್ಯದ ಮೇಲೆ ಭಾರಿ ಸಮಸ್ಯೆ: ವೃಷಭಾವತಿ ನದಿಯು ಕೊಳಚೆ ನೀರು, ಪ್ಲಾಸ್ಟಿಕ್, ಘನತ್ಯಾಜ್ಯಗಳಿಂದಾಗಿ ಹಾಳಾಗಿದ್ದು, ಇದರಿಂದಾಗಿ ಜ್ಞಾನ ಭಾರತಿ ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು, ಬೋಧನಾ ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಕಲುಷಿತವಾದ ನದಿಯಿಂದಾಗಿ ಹಲವಾರು ಸಮಸ್ಯೆಯುಂಟಾಗುತ್ತಿದ್ದು, ಆರೋಗ್ಯ ಸಮಸ್ಯೆಯೂ ಉಂಟಾಗುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ. ಆದ್ದರಿಂದ ಇದೀಗ ನದಿಯ ಸ್ವಚ್ಛತೆಗೆ ವಿವಿ ಮುಂದಾಗಿದೆ.

ಸ್ವಚ್ಛ ನೀರನ್ನು ಬಳಸಿಕೊಂಡು ವಿವಿ ಮರಗಳಿಗೆ ಬಳಕೆ

ವೃಷಭಾವತಿಯನ್ನು ಶುದ್ಧೀಕರಣಗೊಳಿಸಿದ ಬಳಿಕ ಈ ಶುದ್ಧೀಕರಣಗೊಂಡ ನೀರನ್ನು ಕ್ಯಾಂಪಸ್‌ನಲ್ಲಿ ನಿರ್ಮಿಸುವ ಸಣ್ಣ ಕೆರೆಗೆ ಹರಿಸಲಾಗುವುದು. ಈ ನೀರನ್ನು ಹಸಿರೀಕರಣಕ್ಕೆ ಉಪಯೋಗಿಸಿಕೊಂಡು ಕಾಲೇಜಿನ ಆವರಣದಲ್ಲಿ ಗಿಡಗಳನ್ನು, ವಿವಿಧ ಸಸಿಗಳನ್ನು ನೆಡಲು ಬಳಸಿಕೊಳ್ಳಲು ಚಿಂತನೆ ನಡೆಸಲಾಗಿದೆ. ಈ ಮೂಲಕ ಸಂಪೂರ್ಣ ವಿವಿಯಲ್ಲಿ ಹಸಿರೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಹಲಸಿನ ಹಣ್ಣು, ಅತ್ತಿ ಹಣ್ಣಿನ ಗಿಡಗಳನ್ನು, ತರಕಾರಿ ಸೊಪ್ಪಿನ ಗಿಡಗಳನ್ನು ಬೆಳಸಲಾಗುವುದು ಇವುಗಳಿಂದ ಹಾಸ್ಟೆಲ್ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ. ಜತೆಗೆ ಹಾವು, ಕಪ್ಪೆ, ಏಡಿ, ಮೀನಿನಂತಹ ಜೀವಿಗಳಿಗೂ ಆಸರೆಯಾಗುವುದರಿಂದ ಪಕ್ಷಿಗಳಿಗೂ ಆಶ್ರಯ ಕಲ್ಪಿಸುವ ಉದ್ದೇಶವೂ ಇದೆ ಎನ್ನುವ ಮಾತನ್ನು ಇಡೀ ಯೋಜನೆಯ ನೇತೃತ್ವ ವಹಿಸಿರುವ ಪ್ರೊ. ಅಶೋಕ್ ಡಿ.ಹಂಜರಗಿ ಹೇಳಿದ್ದಾರೆ.

ನೈಸರ್ಗಿಕವಾಗಿಯೇ ಸ್ವಚ್ಛಗೊಳಿಸುವ ಪ್ರಯತ್ನ

ಜ್ಞಾನ ಭಾರತಿ ಕ್ಯಾಂಪಸ್‌ನಲ್ಲಿ ವಿವಿಧ ಹಂತಗಳಲ್ಲಿ ನದಿ ನೀರನ್ನು ಸ್ವಚ್ಛಗೊಳಿಸಲು ಮುಂದಾಗಿದ್ದು, ಮೊದಲ ಹಂತದಲ್ಲಿ ಮೆಷ್ ನೆಟ್‌ಗಳನ್ನು ಬಳಸಿಕೊಂಡು ಘನತ್ಯಾಜ್ಯ ಗಳನ್ನು ತೆಗೆಯಲಾಗುವುದು, ಬಳಿಕ ಈ ನೀರನ್ನು ಸಣ್ಣ ಸಣ್ಣ ತಡೆಗೋಡೆಗಳ ಮಾದರಿಯನ್ನು ನಿರ್ಮಿಸಿದರೆ ಸಣ್ಣ ಪ್ರಮಾಣ ದಲ್ಲಿ ನೀರನ್ನು ಶುದ್ಧವಾಗುವುದು, ಕಲ್ಲು, ಮರಳುಗಳನ್ನು ಬಳಸಿಕೊಂಡು ಸ್ವಚ್ಛತೆಗೆ ಕೈಗೊಳ್ಳಲಾಗುವುದು. ಈ ವ್ಯವಸ್ಥೆಯ ಮೂಲಕ ನೀರನ್ನು ಸ್ವಚ್ಛಗೊಳಿಸಲಾಗುವುದು ಈ ಕುರಿತಂತೆ ಹಲವು ವಿಧಾನಗಳನ್ನು ಸಿದ್ಧಗೊಳಿಸಲಾಗುತ್ತಿದ್ದು, ಖರ್ಚು ವೆಚ್ಚಗಳ ಮೂಲದ ಕುರಿತು ಚಿಂತನೆ ನಡೆಸಲಾಗುತ್ತಿದೆ.

ಜ್ಞಾನಭಾರತಿ ಸುತ್ತಮುತ್ತ ವೃಷಭಾವತಿ ನದಿ ಹರಿಯುತ್ತಿದ್ದು, ಈ ನದಿಯಲ್ಲಾಗಿರುವ ಮಾಲಿನ್ಯದಿಂದ ಅನೇಕ ಸಮಸ್ಯೆಯಾಗುತ್ತಿದೆ. ಇದರಿಂದ ವಿವಿಯಲ್ಲಿರುವ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಗೆ ಆರೋಗ್ಯ ಸಮಸ್ಯೆ ಆಗುತ್ತಿದೆ. ಆದ್ದರಿಂದ ಎಂಪ್ರಿ ಹಾಗೂ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ಈ ಸ್ವಚ್ಛತಾ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗಿದೆ.

-**ಪ್ರೊ.ಅಶೋಕ್ ಡಿ.ಹಂಜರಗಿ** ಡೀನರು, ವಿಜ್ಞಾನ ವಿಭಾಗ, ಬೆಂಗಳೂರು ವಿವಿ, ನಿರ್ದೇಶಕರು ಪಿಎಂಇಬಿ

ಅಕ್ಷರ ತಪ್ಪಾದರೂ ಇ-ಖಾತಾ ಮಾಹಿತಿ ದೊರೆಯದು

ಬೆಂಗಳೂರು: ರಾಜ್ಯ ಸರಕಾರವು ಆಸ್ತಿಗಳ ನೋಂದಣಿಗೆ ಇ-ಖಾತಾ ವ್ಯವಸ್ಥೆ ಕಡ್ಡಾಯಗೊಳಿಸಿದ್ದು, ಭೂ ಮಾಲೀಕರು, ಆಸ್ತಿ ಖರೀದಿ ಮತ್ತು ಮಾರಾಟಗಾರರಲ್ಲಿ ಅನೇಕ ಗೊಂದಲ ಉಂಟಾಗಿವೆ.

ಈ ಗೊಂದಲ ಪರಿಹರಿಸುವ ನಿಟ್ಟಿನಲ್ಲಿ ಸರಕಾರ, ಪಾಲಿಕೆ ಮುಂದಾಗಿದ್ದು, ನಗರದ ಆಸ್ತಿ ಮಾಲೀಕರು ಕರಡು ಇ-ಖಾತಾವನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲನೆ ನಡೆಸುತ್ತಿದ್ದಾರೆ.

ಶೇ.40ರಷ್ಟು ಆಸ್ತಿ ಮಾಲೀಕರು ಇ-ಖಾತಾ ಕರಡು ಡೌನ್‌ಲೋಡ್

ನಗರದಲ್ಲಿ ಬಿಬಿಎಂಪಿಯ ವಿಭಾಗವಾರು ವ್ಯಾಪ್ತಿಯಲ್ಲಿ ಎಷ್ಟು ಆಸ್ತಿ ಮಾಲೀಕರು ಇ-ಖಾತಾ ಪರಿಶೀಲನೆ ಮಾಡಿಸಿದ್ದಾರೆ ಎನ್ನುವ ಮಾಹಿತಿ ದೊರೆತಿದ್ದು, ದಾಸರಹಳ್ಳಿ ವಲಯದಲ್ಲಿ ಅತ್ಯಧಿಕ ಜನರು ಇ-ಖಾತಾ ಡೌನ್ ಲೋಡ್ ಮಾಡಿಕೊಂಡಿದ್ದು, ಶೇ.40ರಷ್ಟು ಆಸ್ತಿ ಮಾಲೀಕರು ಇ-ಖಾತಾ ಕರಡು ಡೌನ್‌ಲೋಡ್ ಮಾಡಿಕೊಂಡು ಪರಿಶೀಲನೆ ನಡೆಸಿದ್ದಾರೆ.

ಅಂತಿಮ ಇ-ಖಾತಾ ಪಡೆಯುವ ಮೊದಲು ಕರಡು ಡೌನ್ ಲೋಡ್ ಮಾಡಿಕೊಂಡು ಪರಿಶೀಲಿಸಿ ತಿದ್ದುಪಡಿಗಳಿದ್ದರೆ ಸರಿ ಮಾಡಿಸಿಕೊಳ್ಳಲು ಸಹ ಅವಕಾಶ ನೀಡಲಾಗಿದೆ.

ಬಿಬಿಎಂಪಿ ಮಾಹಿತಿ ಪ್ರಕಾರ, ದಕ್ಷಿಣ ವಲಯದಲ್ಲಿ 1.2 ಲಕ್ಷ ಅಥವಾ ಶೇ.43ರಷ್ಟು ಕರಡು ಡೌನ್‌ಲೋಡ್ ಆಗಿದ್ದು, ಈ ವಲಯದ 2.8 ಲಕ್ಷ ಕರಡು ಇ-ಖಾತಾ ಅಪ್‌ಲೋಡ್ ಮಾಡಲಾಗಿದೆ.

ದಾಸರಹಳ್ಳಿ ವಲಯದಲ್ಲಿ 25,300 ಅಥವಾ ಶೇ 41ರಷ್ಟು ಡೌನ್‌ಲೋಡ್ ಆಗಿದ್ದು, 61,700 ಆಸ್ತಿಗಳ ಇ-ಖಾತಾ ಅಪ್ ಲೋಡ್ ಮಾಡಲಾಗಿದೆ. ಪಶ್ಚಿಮ ವಲಯದಲ್ಲಿ 2,57,000ದಲ್ಲಿ 94,200, ಯಲಹಂಕ ಮತ್ತು ಆರ್ ಆರ್ ನಗರ ವ್ಯಾಪ್ತಿಯಲ್ಲಿ 2.1 ಲಕ್ಷ ಇ-ಖಾತಾಗಳ ಪೈಕಿ 63,500 ಡೌನ್‌ಲೋಡ್ ಆಗಿದೆ. ಮಹದೇವಪುರದಲ್ಲಿ 92,000, ಪೂರ್ವದಲ್ಲಿ 87,200 ಮತ್ತು ಬೊಮ್ಮನಹಳ್ಳಿಯಲ್ಲಿ 81,200 ಡೌನ್‌ಲೋಡ್ ಆಗಿದೆ. ನಗರದಲ್ಲಿ ಒಟ್ಟಾರೆ ಶೇ.25ರಷ್ಟು ಕರಡು ಇ-ಖಾತಾ ಡೌನ್ ಲೋಡ್ ಆಗಿದೆ.

ಬಿಬಿಎಂಪಿ ಅಧಿಕಾರಿಗಳು ಈ ಕುರಿತು ಮಾಹಿತಿ ನೀಡಿ, ಕೆಲವು ಆಸ್ತಿ ಮಾಲೀಕರು ತಮ್ಮ ವಾರ್ಡ್ ಮತ್ತು ನಂಬರ್ ಬಗ್ಗೆ ಸರಿಯಾಗಿ ಮಾಹಿತಿ ತಿಳಿದಿಲ್ಲ. ಆದ್ದರಿಂದ ಡೌನ್‌ಲೋಡ್ ಮಾಡಿಕೊಂಡಿಲ್ಲ. ಕೆಲವು ಜನರು ತಮ್ಮ ಹೆಸರಿನ ಸ್ಪೆಲ್ಲಿಂಗ್ ತಪ್ಪಾಗಿ ನಮೂದಿಸಿರುತ್ತಾರೆ. ಅವರ ಇ-ಖಾತಾ ತೋರಿಸುವುದಿಲ್ಲ ಎಂದು ಹೇಳಿದರು.

ಔಷಧ ದುರ್ಬಳಕೆಗೆ ಕಡಿವಾಣ ಹಾಕಿ

ಬೆಂಗಳೂರು: ಅಧಿಕೃತವಾಗಿ ಮಾರಾಟವಾಗುವ ಕೆಲ ಔಷಧಗಳು ಮಾದಕ ದ್ರವ್ಯದ ಉದ್ದೇಶಕ್ಕೂ ದುರ್ಬಳಕೆಯಾಗುತ್ತಿವೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆಲ್ ಇಂಡಿಯಾ ಡ್ರಗ್ಸ್ ಕಂಟ್ರೋಲ್ ಆಫೀಸರ್ಸ್ ಕಾನ್ಫಡರೇಷನ್ 30ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕೊಕೇನ್ ಸೇರಿದಂತೆ ಮತ್ತಿತರೆ ಮಾದಕ ವಸ್ತುಗಳು ಅಕ್ರಮವಾಗಿ ಸಿಗುತ್ತಿವೆ. ಇತ್ತೀಚಿಗೆ ಇಲಾಖೆ ಅಧಿಕಾರಿಗಳು ಟ್ರಮ್ಮಡಾಲ್ ಖರೀದಿರಾರರನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದರು.

ಆದರೆ, ಇಂತಹ ಕಾರ್ಯಾಚರಣೆ ನಿರಂತರವಾಗಿ ನಡೆಯಬೇಕು. ವೈದ್ಯರ ಶಿಫಾರಸು ಇಲ್ಲದೆ ಔಷಧ ಖರೀದಿ, ಮಾರಾಟ ನಿಯಂತ್ರಿಸಬೇಕು. ವೈದ್ಯರ ಶಿಫಾರಸು ಚೀಟಿ ಇಲ್ಲದಿದ್ದರೂ ಔಷಧ ಮಾರಾಟ ಮಾಡುವ ಫಾರ್ಮಸಿ, ಮೆಡಿಕಲ್ ಸ್ಟೋರ್‌ಗಳ ಮೇಲೆ ಅಧಿಕಾರಿಗಳು ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು. ಇದರಲ್ಲಿ ರಾಜಕಾರಣಿಗಳು ಸೇರಿದಂತೆ ಯಾರ ಹಸ್ತಕ್ಷೇಪ ಇರುವುದಿಲ್ಲ ಎಂದು ಭರವಸೆ ನೀಡಿದರು.

ಅನೇಕ ವೈದ್ಯರು ರೋಗಿಗಳಿಗೆ ಹೆಚ್ಚು ಆಂಟಿ ಬಯಾಟಿಕ್ ಔಷಧ ನೀಡುತ್ತಾರೆ. ರೋಗಿಯ ಕಾಯಿಲೆಗೆ ಅಗತ್ಯವಿರುವ ಔಷಧ ಕುರಿತು ಯೋಚಿಸುವುದಿಲ್ಲ. ವೈದ್ಯರು ಔಷಧಗಳನ್ನು ಶಿಫಾರಸು ಮಾಡುವ ವಿಧಾನ ಮತ್ತು ಉದ್ದೇಶಗಳನ್ನೂ ಮೇಲ್ವಿಚಾರಣೆ ಮಾಡಬೇಕು. ಅಲ್ಲದೆ, ಫಾರ್ಮಸಿ ವಲಯ ಹೊಸ ಆಂಟಿಬಯಾಟಿಕ್ ಔಷಧಗಳಿಗೆ ಸಂಬಂದಿಸಿದಂತೆ ಸಂಶೋಧನೆ ಮತ್ತು ಅಧ್ಯಯನಗಳನ್ನು ಕೈಗೊಳ್ಳಬೇಕು ಎಂದರು.

ಆಲ್ ಇಂಡಿಯಾ ಡ್ರಗ್ಸ್ ಕಂಟ್ರೋಲ್ ಆಫೀಸರ್ಸ್ ಕಾನ್ಫಡರೇಷನ್ 30ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಉದ್ಘಾಟಿಸಿದರು.

ಗುಣಮಟ್ಟದಲ್ಲಿ ರಾಜಿ ಬೇಡ

ಔಷಧಗಳು ಜನರ ಜೀವನದ ಮೇಲೆ ನೇರ ಪರಿಣಾಮ ಬೀರಲಿವೆ. ಹಾಗಾಗಿ ಯಾವುದೇ ರೀತಿಯಲ್ಲಿ ರಾಜಿ ಮಾಡಿಕೊಳ್ಳದೆ ಔಷಧಗಳ ತಯಾರಿಕೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ತಯಾರಿಕಾ ಕಾರ್ಯ, ಮಾರ್ಗಸೂಚಿ ಪಾಲಿಸಬೇಕು. ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ. ಅಗತ್ಯ ಮಾಹಿತಿ, ದತ್ತಾಂಶ ಪಡೆಯಲು ಮತ್ತು ಬಳಸಲು ಅನೇಕ ಮಾರ್ಗಗಳಿವೆ. ದೇಶಾದ್ಯಂತ ಇರುವ ಔಷಧ ತಯಾರಕರು, ಪೂರೈಕೆದಾರನನ್ನು ಹೇಗೆ ಸಮನ್ವಯಗೊಳಿಸಬಹುದು. ಅಗತ್ಯ ಔಷಧಗಳನ್ನು ಶೀಘ್ರ ಹೇಗೆ ಆಮದು ಮಾಡಿಕೊಳ್ಳಬೇಕು. ಹಾಗೆಯೇ ಪ್ರಯೋಗಾಲಯ ಉನ್ನತೀಕರಣದತ್ತ ಅಧಿಕಾರಿಗಳು ಗಮನಹರಿಸಬೇಕು ಎಂದರು.

ಅಭಿವೃದ್ಧಿ ಹಣ ಕೇಳುವುದರಲ್ಲಿ ತಪ್ಪಿಲ್ಲ: ಗೃಹ ಸಚಿವ ಪರಮೇಶ್ವರ್

ಕೇಂದ್ರದಿಂದ ಬರಬೇಕಿರುವ ಅನುದಾನ ಪಡೆದು ಅಭಿವೃದ್ಧಿಗೆ ಬಳಕೆ

ಬೆಂಗಳೂರು: ಕ್ಷೇತ್ರಗಳ ಅಭಿವೃದ್ಧಿಗೆ ಶಾಸಕರು ಅನುದಾನ ಕೇಳುವುದರಲ್ಲಿ ತಪ್ಪಿಲ್ಲ. ಕೇಂದ್ರದಿಂದ ಬರಬೇಕಿರುವ ಅನುದಾನ ಪಡೆದು ಅಭಿವೃದ್ಧಿ ಕಾರ್ಯಗಳಿಗೆ ಹಣ ಒದಗಿಸುತ್ತೇವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ನಿಂತಿಲ್ಲ. ಹಿಂದಿನ ಸರಕಾರವು ಲಕ್ಷಾಂತರ ಕೋಟಿ ರು. ಬಿಲ್ ಬಾಕಿ ಉಳಿಸಿ ಹೋಗಿತ್ತು. ಅದನ್ನೆಲ್ಲ ನಾವು ಭರಿಸಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ 56 ಸಾವಿರ ಕೋಟಿ ಹೆಚ್ಚುವರಿ ಖರ್ಚಾಗಿದೆ. ಬಜೆಟ್ ಮೊತ್ತ 3.27 ಲಕ್ಷ ಕೋಟಿಯಿಂದ 3.75 ಲಕ್ಷ ಕೋಟಿಗೆ ಹೆಚ್ಚಾಗಿದೆ. ಮುಂದಿನ ವರ್ಷಕ್ಕೆ ಗ್ಯಾರಂಟಿ ಯೋಜನೆಗಳಿಗೆ ಕೊಟ್ಟರು, ಹೆಚ್ಚಿನ ಹಣ ದೊರಕುತ್ತದೆ ಎಂದರು.

ಗ್ಯಾರಂಟಿ ಯೋಜನೆ ನಿಲ್ಲಿಸುವಂತೆ ಶಾಸಕ ಗವಿಯಪ್ಪ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, ಗ್ಯಾರಂಟಿ ಯೋಜನೆಗಳ ಬಗ್ಗೆ ಪಕ್ಷ ಮತ್ತು ಸರಕಾರ ತೀರ್ಮಾನ ತೆಗೆದುಕೊಂಡಿದೆ. ಯಾರಿಗೂ ಗೊತ್ತಿಲ್ಲದೇ ಕದ್ದು ಮುಚ್ಚಿ ತೆಗೆದುಕೊಂಡಿರುವ ತೀರ್ಮಾನ ವೇನಲ್ಲ. ಚುನಾವಣೆಗೂ ಮೊದಲೇ ಪ್ರಣಾಳಿಕೆಯಲ್ಲಿ ತಿಳಿಸಲಾಗಿತ್ತು. ಗ್ಯಾರಂಟಿ ಯೋಜನೆಗಳ ವಿಚಾರ ದಲ್ಲಿ ಜನಸಮುದಾಯ ನಮ್ಮನ್ನು ನಂಬಿ ಮತ ಚಲಾಯಿಸಿರಬಹುದು. ಹೀಗಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡುವುದು ನಮ್ಮ ಕರ್ತವ್ಯ. ನಮ್ಮನಮ್ಮ ಅಭಿಪ್ರಾಯಗಳು ಬೇರೆ ಇರಬಹುದು. ನಾವು ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳಬೇಕು. ಯಾವುದೇ ಶಾಸಕರು ತಮ್ಮ ಕ್ಷೇತ್ರಕ್ಕೆ ಅನುದಾನ ಕೇಳುವುದರಲ್ಲಿ ತಪ್ಪಿಲ್ಲ ಎಂದರು.

ತನಿಖೆ ಬಳಿಕ ಸ್ಪಷ್ಟನೆ

ಭೋವಿ ನಿಗಮದಲ್ಲಿನ ಅವ್ಯವಹಾರ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಅವರು, ಸಿಐಡಿ ಎಸ್‌ಐಟಿ ತನಿಖೆ ಮಾಡುತ್ತಿದೆ. ತನಿಖೆ ಪೂರ್ಣಗೊಳ್ಳುವವರೆಗೂ ಹೆಚ್ಚಿಗೆ ಏನು ಹೇಳಲು ಆಗುವುದಿಲ್ಲ. ಹಣ ಕೇಳಿರುವ ಆರೋಪಕ್ಕೆ ಸಬಂಧಿಸಿದಂತೆ ಸಿಐಡಿ ಅಧಿಕಾರಿಗಳ ಮೇಲೆ ಬೇರೆ ರೀತಿಯಲ್ಲಿ ತನಿಖೆ ಮಾಡುತ್ತೇವೆ. ಹಿರಿಯ ಅಧಿಕಾರಿಗಳಿಂದ ತನಿಖೆ ಮಾಡಿಸುತ್ತೇವೆ ಎಂದು ಡಾ. ಜಿ. ಪರಮೇಶ್ವರ್ ಹೇಳಿದರು.

ಸಂಪುಟ ಪುನಾರಚನೆ ಬಗ್ಗೆ ಸಿಎಂ ಕೆಪಿಸಿಸಿ ಅಧ್ಯಕ್ಷರೊಂದಿಗೆ ಸಮಾಲೋಚನೆ ಮಾಡಿಕೊಂಡು ಮಾಡುವ ಪದ್ಧತಿ ಇದೆ. ಹೈಕಮಾಂಡ್‌ನೊಂದಿಗೆ ಚರ್ಚೆ ಮಾಡಿ, ಅವರಿಬ್ಬರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ

- **ಡಾ.ಜಿ. ಪರಮೇಶ್ವರ** ಗೃಹ ಸಚಿವ

ಬಿಡಿಎ ಎಂಜಿನಿಯರ್ ಅಕ್ರಮ ತನಿಖೆಗೆ ಆದೇಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪಶ್ಚಿಮ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಅಶೋಕ ಬಾಗಿ ಅವರ ಅಕ್ರಮಗಳ ವಿರುದ್ಧ ಉಪ ಮುಖ್ಯಮಂತ್ರಿ ಹಾಗೂ ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಕಚೇರಿಯಿಂದ ತನಿಖೆಗೆ ಆದೇಶಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ಪಿ.ಆರ್.ಆರ್. ರಿಂಗ್ ರಸ್ತೆಗೆ ಜಮೀನು ಕಳೆದು ಕೊಂಡ ರೈತರುಗಳು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಚೇರಿಗೆ ದೂರು ಸಲ್ಲಿಸಿದ ಹಿನ್ನಲೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯಎರ್ ಅಶೋಕ್ ಬಾಗಿ ವಿರುದ್ಧ ತನಿಖೆ ನಡೆಸಿ ವಾರದೊಳಗೆ ವರದಿ ಸಲ್ಲಿಸುವಂತೆ ಉಪ ಮುಖ್ಯಮಂತ್ರಿಯವರ ಆಪ್ತಕಾರ್ಯದರ್ಶಿ ಡಾ ರಾಜೇಂದ್ರ ಪ್ರಸಾದ್ ಅವರು ಬಿಡಿಎ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ ಬಾಗಿ ಅವರು ಕೆಂಪೇಗೌಡ ಬಡಾವಣೆ ಮತ್ತು ಪಿ.ಆರ್.ಅರ್ ರಸ್ತೆಗಾಗಿ ಜಮೀನು ಕಳೆದುಕೊಂಡ ರೈತರಿಗೆ ತುಂಬಾ ತೊಂದರೆ ನೀಡಿರುವುದರ ಜತೆಗೆ ಬೇಜವಾಬ್ದಾರಿಯಿಂದ ನಡೆದುಕೊಂಡಿರುವುದಾಗಿ ರೈತರು ಉಪಮುಖ್ಯಮಂತ್ರಿಗಳ ಕಚೇರಿಗೆ ದೂರು ಸಲ್ಲಿಸಿದ ಹಿನ್ನಲೆಯಲ್ಲಿ ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಆದೇಶಿಸಲಾಗಿದೆ. ಈ ವಿಷಯ ಉಪ ಮುಖ್ಯಮಂತ್ರಿಗಳ ಕಚೇರಿಯು ಬಿಡಿಎ ಆಯುಕ್ತರಿಗೆ ಬರೆದ ಪತ್ರದಿಂದ ಬಹಿರಂಗವಾಗಿದೆ.

ಭ್ರಷ್ಟಾಚಾರ ಮುಚ್ಚಿಡಲು ಅನಧಿಕೃತವಾಗಿ ಬಿಡಿಎನಲ್ಲಿ ಮುಂದುವರಿಕೆ: ಆರೋಪ

ಕೆಂಪೇಗೌಡ ಬಡಾವಣೆಯಲ್ಲಿ ಅಶೋಕ್ ಬಾಗಿ ಕಾರ್ಯವ್ಯಾಪ್ತಿಗೆ ಬರುವ ಹಲವಾರು ಎಕರೆ ಜಮೀನಿನ ಸ್ಥಳ ಪರಿವೀಕ್ಷಣೆ ಮಾಡಿದ್ದಲ್ಲಿ ಅವರು ನಡೆಸಿರುವ ಭ್ರಷ್ಟಾಚಾರ ಬಯಲಿಗೆ ಬರುತ್ತದೆ ಎಂದು ರೈತರು ದೂರಿದ್ದಾರೆ. ಅವ್ಯವಹಾರದ ಬಗ್ಗೆ ಕೆಂಪೇಗೌಡ ಬಡಾವಣೆಯಲ್ಲಿ ಜಮೀನು ಕಳೆದುಕೊಂಡ ರೈತರು ಈಗಾಗಲೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಲಿಖಿತ ದೂರು ನೀಡಿದ್ದಾರೆ. ಈ ದೂರಿನ ಹಿನ್ನಲೆಯಲ್ಲಿ ಡಿ.ಕೆ.ಶಿವಕುಮಾರ್ ಆಪ್ತ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ 03-08-2024 ರಂದು ಪತ್ರಬರೆದು ಎಇಇ ಅಶೋಕ್ ಬಾಗಿ ಅವರ ವಿರುದ್ಧ ತನಿಖೆ ನಡೆಸಿ ಕಚೇರಿಗೆ ವರದಿ ನೀಡಲು ಸೂಚಿಸಿರುತ್ತಾರೆ. ಅದಾಗ್ಯೂ ಮಾತ್ರ ಇಲಾಖೆಗೆ ವರ್ಗಾವಣೆ ಆದ ಮೇಲೂ, ಇವರ ಭ್ರಷ್ಟಾಚಾರ ಮುಚ್ಚಿಡಲು ಅನಧಿಕೃತವಾಗಿ ಬಿಡಿಎನಲ್ಲಿ ಮುಂದುವರಿಸಿದ್ದಾರೆ.

ಈ ನಡುವೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ಬಾಗಿ ಅವರ ಮಾತೃ ಇಲಾಖೆ ಜಲಸಂಪನ್ಮೂಲ ಇಲಾಖೆಯಾಗಿದ್ದು 2024 ರ ಅಗಸ್ಟ್ 2 ರಂದು ಅವರನ್ನು ಮಾತೃ ಇಲಾಖೆ ಸೇವೆಗೆ ಹಿಂದಿರುಗಿಸಿ ಆದೇಶ ಹೊರಡಿಸಿದರು. ಆ ಇಲಾಖೆಗೆ ವಾಪಾಸ್ ಆಗದೆ ನಿಯಮ ಬಾಹಿರವಾಗಿ ಬಿಡಿಎಯಲ್ಲಿ ಮುಂದುವರಿಯುವ ಮೂಲಕ ಸರಕಾರಿ ನೌಕರರ ಸೇವಾ ನಿಯಮ ಉಲ್ಲಂಘಿಸಿದ್ದಾರೆ ಎಂದು ರೈತರು ಆರೋಪಿಸಿದ್ದಾರೆ.

ತಾಪಮಾನ ಕುಸಿತ; ತೀವ್ರ ಚಳಿ ಅನುಭವ

ಬೆಂಗಳೂರು: ರಾಜ್ಯಾದ್ಯಂತ ತೀವ್ರರ ಚಳಿಯ ಅನುಭವವಾಗುತ್ತಿದ್ದು, ಬೆಂಗಳೂರು ಸೇರಿದಂತೆ ಹಲವು ಪ್ರದೇಶಗಳಲ್ಲಿ ತಾಪಮಾನ ಗಣನೀಯ ಇಳಿಕೆ ಕಂಡಿದೆ.

ಭಾರೀ ಪ್ರಮಾಣದ ಚಳಿಯಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಜನರು ಎಚ್ಚರಿಕೆ ವಹಿಸಬೇಕು ಎಂದು ವೈದ್ಯರು ಹೇಳಿದ್ದಾರೆ. ಗುರುವಾರ ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ 24 ಡಿಗ್ರಿ ಸೆಲ್ಸಿಯಸ್ ಇರಲಿದ್ದು, ಕನಿಷ್ಠ ತಾಪಮಾನ 19 ಡಿಗ್ರಿ ಸೆಲ್ಸಿಯಸ್ ಇರಲಿದೆ.



ಮಂಗಳೂರಿನಲ್ಲಿ ಗರಿಷ್ಠ 31 ಮತ್ತು ಕನಿಷ್ಠ 24, ಶಿವಮೊಗ್ಗದಲ್ಲಿ ಗರಿಷ್ಠ 29 ಮತ್ತು ಕನಿಷ್ಠ 18, ಬೆಳಗಾವಿಯಲ್ಲಿ ಗರಿಷ್ಠ 28 ಮತ್ತು ಕನಿಷ್ಠ 17, ಮೈಸೂರಿನಲ್ಲಿ ಗರಿಷ್ಠ 26 ಮತ್ತು ಕನಿಷ್ಠ 20, ಮಂಡ್ಯದಲ್ಲಿ ಗರಿಷ್ಠ 27 ಮತ್ತು ಕನಿಷ್ಠ 20 ಮತ್ತು ಹುಬ್ಬಳ್ಳಿಯಲ್ಲಿ ಗರಿಷ್ಠ 29 ಕನಿಷ್ಠ 17 ಇರಲಿದೆ. ಬೆಂಗಳೂರಿನಲ್ಲಿ ವಾಡಿಕೆಯಂತೆ ಡಿಸೆಂಬರ್ ಎರಡನೇ ವಾರ ಚಳಿ ತೀವ್ರವಾಗುತ್ತಿತ್ತು. ಆದರೆ, ಈ ಬಾರಿ ನವೆಂಬರ್‌ನಲ್ಲೇ ಚಳಿಯ ಪ್ರಮಾಣ ಹೆಚ್ಚಳವಾಗಿದೆ. ಮುಂದಿನ 48 ಗಂಟೆಗಳ ಕಾಲ ಮೋಡ ಕವಿದ ವಾತಾವರಣ ಇರಲಿದೆ. ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2-5 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗಿದೆ.

ಮಳೆ ಎಚ್ಚರಿಕೆ

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಮತ್ತು ಚಳಿ ಹೆಚ್ಚಾಗಿದೆ. ಬೆಂಗಳೂರಿನಲ್ಲಿ ಮುಂದಿನ ಮೂರು ದಿನ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡು, ಉತ್ತರ ಒಳನಾಡು, ಕಾರಾವಳಿಗೂ ಮಳೆ ಮುನ್ಸೂಚನೆ ನೀಡಲಾಗಿದೆ. ಆದರೆ ಹವಾಮಾನ ವೈಪರೀತ್ಯ ಕಾರಣ ಬೆಂಗಳೂರಿನಲ್ಲಿ ಇನ್ನೂ ಮೂರು ದಿನ ಮೈಕೊರೆಯುವಂತಹ ಚಳಿ ಇರಲಿದೆ.

ಉಪಚುನಾವಣೆ: ಬಿಜೆಪಿ 3, ಕಾಂಗ್ರೆಸ್‌ಗೆ ಒಂದು ಸ್ಥಾನ



ಆನೇಕಲ್ ತಾಲೂಕು ಬಳ್ಳೂರ್ ಪಂಚಾಯತ್‌ಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಬಿ ಎಸ್. ಸತೀಶ್ ರೆಡ್ಡಿರವರು ಅತ್ಯಧಿಕ ಬಹುಮತದಿಂದ ಆಯ್ಕೆಯಾದರು. ಗ್ರಾಮಸ್ಥರು, ಮುಖಂಡರು ಅಭಿನಂದನೆಗಳನ್ನು ಸಲ್ಲಿಸಿದರು.

ಆನೇಕಲ್: ತಾಲೂಕಿನ 4 ಸ್ಥಳೀಯ ಸಂಸ್ಥೆಗಳಿಗೆ ನಡೆದ ಉಪ ಚುನಾವಣೆ ಯಲ್ಲಿ ಬಿಜೆಪಿಗೆ ಎರಡು, ಕಾಂಗ್ರೆಸ್‌ಗೆ ಒಂದು ಸ್ಥಾನ ಲಭಿಸಿದೆ. ಇನ್ನು ಬಳ್ಳೂರು ಗ್ರಾಮ ಪಂಚಾಯಿತಿಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಅತ್ಯಧಿಕ ಮತಗಳನ್ನು ಪಡೆಯುವ ಮೂಲಕ ವಿಜಯ ಮಾಲೆಯನ್ನು ಧರಿಸಿದ್ದಾರೆ.

ಹೆಬ್ಬಗೋಡಿ ನಗರಸಭಾ ವಾರ್ಡ್ 27ರಲ್ಲಿ ಕಾಂಗ್ರೆಸ್‌ನ ಲಕ್ಷ್ಮಮ್ಮ ನಾರಾಯಣ ಸ್ವಾಮಿ 880 ಮತಗಳನ್ನು ಗಳಿಸಿ ತಮ್ಮ ಪ್ರತಿಸ್ಪರ್ಧಿ ಬಿಜೆಪಿಯ ಸ್ವಪ್ನ ರವರನ್ನು ಪರಭಾವಗೊಳಿಸಿದ್ದಾರೆ. ಆನೇಕಲ್ ಪುರಸಭೆಯ ವಾರ್ಡ್ 22ರಲಿ ಬಿಜೆಪಿ ಯ ಹರೀಶ್ ವಿ. 900 ಮತಗಳನ್ನು ಗಳಿಸಿ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ ನ ಮಹೇಶ್ ಎಂ. ರವರನ್ನು ಪರಭಾವಗೊಳಿಸಿದ್ದಾರೆ. ಚಂದಾಪುರ ಪುರಸಭೆಯ ವಾರ್ಡ್ ಸಂಖ್ಯೆ 21ಕ್ಕೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯ ರೂಪಶ್ರೀ 557 ಮತಗಳನ್ನು ಪಡೆದು ಪ್ರತಿಸ್ಪರ್ಧಿ ಕಾಂಗ್ರೆಸ್ ನ ಸುರೇಖಾರವರನ್ನು ಪರಭಾವಗೊಳಿಸಿದ್ದಾರೆ.

ಬಳ್ಳೂರ್ ಪಂಚಾಯಿತಿಗೆ ನಡೆದ ಉಪ ಚುನಾವಣೆಯಲ್ಲಿ ಏಳು ಅಭ್ಯರ್ಥಿಗಳು ಸ್ಪರ್ಧಿಸಿದ್ದ ಬಿ.ಎನ್. ಸತೀಶ್ ರೆಡ್ಡಿ ಅತ್ಯಧಿಕ 624 ಮತಗಳನ್ನು ಪಡೆದು ವಿಜಯ ಮಾಲೆ ಧರಿಸಿದರೇ ಕಣದಲ್ಲಿ ಉಳಿದ ಇತರ 6 ಮಂದಿ ಗರಿಷ್ಠ 34, 7, 5, 3, 2, 1, ಮತಗಳನ್ನು ಪಡೆದು ಠೇವಣಿ ಕಳೆದು ಕೊಂಡಿದ್ದಾರೆ.

ಅಕ್ರಮ ನಾಡ ಬಂದೂಕು ಪತ್ತೆ: ಆರು ಮಂದಿ ಬಂಧನ

ತುಮಕೂರು: ಅಕ್ರಮವಾಗಿ ನಾಡ ಬಂದೂಕುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆ ಹಚ್ಚಿರುವ ತುಮಕೂರು ಜಿಲ್ಲಾ ಪೊಲೀಸರು ಆರು ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮಧುಚಂದ್ರ, ಶಿವಕುಮಾರ್, ಮಂಜುನಾಥ, ತಿಮ್ಮರಾಜ, ರವೀಶ್, ಇಮ್ರಾನ್ ಪಾಷ ಎಂಬುವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

ಆ.12ರಂದು ಗುಬ್ಬಿ ತಾಲೂಕಿನ ತಿಪೂರು ಗ್ರಾಮದ ಆರೋಪಿ ಮಧುಚಂದ್ರ ಎಂಬಾತ ಅಕ್ರಮವಾಗಿ ಯಾವುದೇ ಲೈಸೆನ್ಸ್ ಇಲ್ಲದೆ ನಾಡ ಬಂದೂಕಿನೊಂದಿಗೆ ಮೀಸಲು ಅರಣ್ಯ ಪ್ರದೇಶದಲ್ಲಿ ಬೇಟೆಯಾಡುತ್ತಿದ್ದನು. ಇದನ್ನು ಆಕ್ಷೇಪಿಸಿದ ದರ್ಶನ್ ಎಂಬುವರ ಜೊತೆ ಮಾತಿಗೆ ಮಾತು ಬೆಳೆಯುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಬಂದೂಕು ಕೆಳಗೆ ಬಿದ್ದು ಸ್ಥಳದಲ್ಲಿಯೇ ಇದ್ದ ಚೈತ್ರ ಎಂಬುವರಿಗೆ ಗಾಯವಾಗಿತ್ತು. ಈ ಸಂಬಂಧ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿತ್ತು.

ಆರೋಪಿ ಹೊಂದಿದ್ದ ಲೈಸೆನ್ಸ್ ಇಲ್ಲದ ಬಂದೂಕಿನ ಬಗ್ಗೆ ತನಿಖೆ ನಡೆಸಿದಾಗ ಜಿಲ್ಲೆಯಲ್ಲಿ ನಾಡ ಬಂದೂಕುಗಳನ್ನು ತಯಾರಿಸಿ 25,000 ರಿಂದ 30,000 ರು. ಗಳಿಗೆ ಮಾರಾಟ ಮಾಡುತ್ತಿರುವ ಜಾಲ ಬೆಳಕಿಗೆ ಬಂದಿದೆ. ಬಂಧಿತ ಆರು ಮಂದಿ ಆರೋಪಿಗಳಿಂದ ಒಟ್ಟು ನಾಲ್ಕು ಬಂದೂಕುಗಳನ್ನು, ಬಿಡಿ ಭಾಗಗಳನ್ನು ಹಾಗೂ ಇದಕ್ಕೆ ತಯಾರಿಸಲು ಬಳಸಲಾಗಿದ್ದ ಕಚ್ಚಾ ಸಾಮಗ್ರಿಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ನಾನು ಎಲ್ಲ ಧರ್ಮಗಳನ್ನೂ ಗೌರವಿಸುತ್ತೇನೆ: ಸಿದ್ದರಾಮಯ್ಯ

ಕ್ರೈಸ್ತ ಧರ್ಮ ಕ್ಷೇತ್ರದ ಅಮೃತ ಮಹೋತ್ಸವದಲ್ಲಿ ಮುಖ್ಯಮಂತ್ರಿ ಅಭಿಮತ

ಬಳ್ಳಾರಿ: ಸಿದ್ದರಾಮಯ್ಯ ಕ್ರಿಶ್ಚಿಯನ್, ಮುಸ್ಲಿಮರನ್ನು ಓಲೈಸುತ್ತಾರೆ, ಹಿಂದೂಗಳನ್ನು ವಿರೋಧಿಸುತ್ತಾರೆ ಎಂದು ಹೇಳುತ್ತಾರೆ. ಆದರೆ ನಾನು ಯಾರನ್ನೂ ವಿರೋಧಿಸಲ್ಲ. ಎಲ್ಲ ಧರ್ಮಗಳನ್ನೂ ಗೌರವಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಳ್ಳಾರಿಯ ಕ್ರೈಸ್ತ ಧರ್ಮ ಕ್ಷೇತ್ರದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಳ್ಳಾರಿ ಧರ್ಮ ಕ್ಷೇತ್ರದ ಮಹೋತ್ಸವ ಕಾರ್ಯಕ್ರಮದಲ್ಲಿ ಸಂತೋಷದಿಂದ ಭಾಗವಹಿಸಿದ್ದೇನೆ. ಭಾರತ ದೇಶ ಬಹುತ್ವದ ದೇಶ. ಎಲ್ಲಾ ಜಾತಿ ಧರ್ಮ ಭಾಷೆಯ ಜನರು ಇಲ್ಲಿ ಇದ್ದಾರೆ. ನಾವು ಮೂಲತಃ ಮನುಷ್ಯರು, ಹಾಗಾಗಿ ಸರ್ವಧರ್ಮ ಸಮನ್ವಯ ಪರಂಪರೆಯನ್ನು ನಾವೆಲ್ಲ ಉಳಿಸಿಕೊಂಡು ಹೋಗಬೇಕು. ಕುವೆಂಪು ಅವರು ಹೇಳಿದಂತೆ ಹುಟ್ಟುವಾಗ ವಿಶ್ವಮಾನವರಾಗಿ, ಬೆಳೆಯುತ್ತಾ ಅಲ್ಪಮಾನವರಾಗುತ್ತೇವೆ. ನಾವು ಪರಸ್ಪರ ಪ್ರೀತಿಸಬೇಕು. ಬೇರೆ ಧರ್ಮಗಳನ್ನು ದ್ವೇಷಿಸಬಾರದು. ಬಸವಾದಿ ಶರಣರು ಕೂಡ ದಯವೇ ಧರ್ಮದ ಮೂಲವಯ್ಯ ಎಂದೇ ಹೇಳಿದ್ದಾರೆ ಎಂದರು.

ಧರ್ಮಕ್ಕೆ ಬೇರೆ ಅರ್ಥ ಹುಡುಕಬಾರದು. ಒಬ್ಬರನ್ನು ದಯೆಯಿಂದ ನೋಡಬೇಕು. ದ್ವೇಷ ಅಸೂಯೆ ನಮ್ಮ ಮಧ್ಯೆ ಇರಬಾರದು. ದ್ವೇಷ ಅಸೂಯೆಯಿಂದ ಸಮಾಜ ಒಡೆದು ಹೋಗುತ್ತದೆ. ನಿಮ್ಮ ಧರ್ಮವನ್ನು ಪ್ರೀತಿಯಿಂದ ಕಂಡರೆ, ಬೇರೆ ಧರ್ಮವನ್ನು ಸಹಿಷ್ಣುತೆಯಿಂದ ಕಾಣಬೇಕು. ಸರ್ವ ಜನಾಂಗದ ಶಾಂತಿಯ ತೋಟ ಮಾಡಬೇಕು ಎಂದು ಕುವೆಂಪು ಹೇಳಿದ್ದಾರೆ. ಆದರೆ ನಾವು ನೂರಾರು ಜಾತಿಗಳನ್ನು ಮಾಡಿ ಅಸಮಾನತೆಗೆ ಕಾರಣವಾಗಿದ್ದೇವೆ ಎಂದು ಸಿಎಂ ಅಭಿಪ್ರಾಯಪಟ್ಟರು.

ಕ್ರೈಸ್ತ ಧರ್ಮಪ್ರಾಂತದ ಅಮೃತ ಮಹೋತ್ಸವದ ಎರಡು ದಿನಗಳ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿ, ಮಾತನಾಡಿದರು.

ಜಾತಿ ವ್ಯವಸ್ಥೆ ಹೋಗಬೇಕು

ಸಮಾಜವನ್ನು ಒಡೆಯುವವರ ವಿರುದ್ಧ ಎಚ್ಚರಿಕೆಯಿಂದ ಇರಬೇಕು. ಪ್ರತಿಯೊಬ್ಬರು ಧರ್ಮಾತೀತವಾಗಿ ಇರಬೇಕು. ನಾವೆಲ್ಲರೂ ಜಾತ್ಯತೀತವಾದಿಗಳು. ಪ್ರತಿಯೊಂದು ಸರ್ಕಾರ, ರಾಜಕೀಯ ಪಕ್ಷಗಳು ಕೂಡ ಸಂವಿಧಾನದ ಆಶಯವನ್ನು ಈಡೇರಿಸಬೇಕು. ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಗ್ಯಾರೆಂಟಿ ಯೋಜನೆ ತಂದಿದ್ದೇವೆ. ಆದರೆ ಇದಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ. . ಕ್ರೈಸ್ತ ಧರ್ಮದವರು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಸಿಎಂ ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ಬಣ ಬಡಿದಾಟ, ಜೆಡಿಎಸ್ ಶಾಸಕರ ಪರದಾಟ

← ಮೊದಲಪುಟದಿಂದ

ಈಶಾನ್ಯ ವಾಸ್ತು ಪ್ರಕಾರ ಒಳ್ಳೆಯದು ಅಂತ ಬಂದೆವು. ಎಲ್ಲಿ ನಮ್ಮ ಪಕ್ಷ ವೀಕ್ ಇದೆ, ಅಲ್ಲಿ ಸಂಘಟನೆ ಮಾಡಲು ಬಂದಿದ್ದೇವೆ. ನಾವು ಬರುವುದರಿಂದ ಎಂಎಲ್‌ಎ, ಎಂಪಿ ಸೀಟು ಹೆಚ್ಚಳ ಆಗುತ್ತವೆ. ಯಾರಿಗೆ ನಮ್ಮ ದೇಶದ ಬಗ್ಗೆ ಕಳಕಳಿ ಇದೆಯೋ ಅವರು ಹೋರಾಟಕ್ಕೆ ಬನ್ನಿ. ನಾವು ಪಕ್ಷದ ಪರವಾಗಿ ಹೋರಾಟ ಮಾಡಿ ನಾಯಕರಾದವರು. ಮಧ್ಯದಲ್ಲಿ ಬಂದು ನಾಯಕರಾ ದವರಲ್ಲ. ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಕುಳಿತು ಎರಡು ಬೆರಳು ತೋರಿಸಿ ಹೋರಾಟ ಮಾಡಿದವರಲ್ಲ. ಯತ್ನಾಳ್ ಹೋರಾಟದ ಕಾರ್ಯಕ್ರಮಕ್ಕೆ ಹೋದರೆ ಹುಷಾರ್ ಎಂದು ಎಚ್ಚರಿಸೋದಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಬೆಂಗಳೂರಿನಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಬಿ.ಸಿ.ಪಾಟೀಲ್ ಸೇರಿದಂತೆ ಹಲವರು ಸಭೆ ಸೇರಿ ಯತ್ನಾಳ್ ಅವರ ವಿರುದ್ಧ ಸಮರ ಸಾರಿದಂತಿದೆ. ಬಿಎಸ್ ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರನ್ನು ಯತ್ನಾಳ್ ಟೀಕಿಸುವುದು ಸರಿಯಲ್ಲ, ಸೋತವರು ಮತ್ತು ಟಿಕೆಟ್ ಸಿಗದ 4-5 ಜನರನ್ನು ಜತೆಗಿಟ್ಟುಕೊಂಡು ಅವರು ಹೋರಾಟ ಅಂತ ಮಾಡುತ್ತಿದ್ದಾರೆ. ವಿಜಯೇಂದ್ರರನ್ನು ರಾಜ್ಯಾಧ್ಯಕ್ಷ ಮಾಡಿದ್ದು ರಾಷ್ಟ್ರೀಯ ನಾಯಕರು. ಹಾಗಾಗಿ ಅವರನ್ನು ಟೀಕಿಸು ವುದು ವರಿಷ್ಠರನ್ನು ಟೀಕಿಸಿದಂತೆ, ಯಡಿಯೂರಪ್ಪ ಅವರು ಬಿಜೆಪಿ ಕಟ್ಟಿ ಬೆಳೆಸುವಾಗ ಇವರಲ್ಲಿ ಯಾರೂ ಕಣ್ಣು ಬಿಟ್ಟಿರಲಿಲ್ಲ ಎಂದಿದ್ದಾರೆ.

3 ವಿದ್ಯಾರ್ಥಿಗಳು ನೀರುಪಾಲು

ಬೆಳ್ತಂಗಡಿ: ವೇಣೂರು ಸಮೀಪದ ಬರ್ಕಜೆ ಡ್ಯಾಂ ಬಳಿ ನದಿಗೆ ಸ್ನಾನಕ್ಕೆ ತೆರಳಿದ ಮೂವರು ವಿದ್ಯಾರ್ಥಿಗಳು ನೀರುಪಾಲಾಗಿರುವ ಘಟನೆ ಬುಧವಾರ ಸಂಜೆ ನಡೆದಿದೆ. ತಾಲೂಕಿನ ಮೂಡುಕೋಡಿ ಗ್ರಾಮದ ವಾಲ್ಟರ್ ಎಂಬವರ ಮನೆಗೆ ಕಾರ್ಯಕ್ರಮದ ಹಿನ್ನೆಲೆ ಬಂದಿದ್ದ ಮೂಡುಬಿದಿರೆ ತಾಲೂಕಿನ ಎಡಪದವು ನಿವಾಸಿ ಲಾರೆನ್ಸ್(20), ಬೆಳ್ತಂಗಡಿ ತಾಲೂಕಿನ ಪಾರೆಂಕಿ ಗ್ರಾಮದ ಸೂರಜ್(19), ಬಂಟ್ವಾಳ ಗ್ರಾಮದ ವಗ್ಗದ ಜೈಸನ್(19) ಎಂಬವರು ನ.27ರಂದು ಊಟ ಮೂಗಿಸಿ ಮೂಡುಕೋಡಿ ಗ್ರಾಮದ ಬರ್ಕಜೆ ಡ್ಯಾಂ ಬಳಿ ಸ್ನಾನಕ್ಕೆ ತೆರಳಿದ್ದರು. ಈ ವೇಳೆ ನೀರಿನ ಸೆಳೆತಕ್ಕೆ ಸಿಲುಕಿ ಮೂವರು ಯುವಕರು ನೀರುಪಾಲಾಗಿದ್ದಾರೆ. ಮೂವರ ಮೃತದೇಹವನ್ನೂ ನೀರಿನಿಂದ ಹೊರ ತೆಗೆಯಲಾಗಿದ್ದು. ಈ ಬಗ್ಗೆ ವೇಣೂರು ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸುತ್ತಿದ್ದಾರೆ. ಮೃತಪಟ್ಟ ಮೂವರು ಮಂಗಳೂರು ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಎಂದು ತಿಳಿದು ಬಂದಿದೆ.

ಭೀಕರ ಅಪಘಾತ: ದಂಪತಿ ಸಾವು

ಚಿಂತಾಮಣಿ: ಕೆಎಸ್‌ಆರ್‌ಟಿಸಿ ಬಸ್ ಚಕ್ರದ ಕೆಳಗೆ ಬೈಕ್ ಸಿಲುಕಿ ದಂಪತಿ ಮೃತಪಟ್ಟ ಘಟನೆ ಶಿಡ್ಲಘಟ್ಟ ತಾಲೂಕಿನಲ್ಲಿ ಬುಧವಾರ ನಡೆದಿದೆ.

ಕೊಮ್ಮಸಂದ್ರ ನಿವಾಸಿ ವೆಂಕಟೇಶ್ ಹಾಗೂ ಸರಸ್ವತಮ್ಮ ಮೃತ ದಂಪತಿ. ಚಿಂತಾಮಣಿ ತಾಲೂಕಿನ ನಾರಾಯಣಳ್ಳಿ ಗ್ರಾಮಕ್ಕೆ ತೆರಳುವಾಗ ನಗರದ ಆದರ್ಶ ಟಾಕೀಸ್ ಬಳಿ ಬುಧವಾರ ಬೆಳಗ್ಗೆ ಈ ಅಪಘಾತ ಸಂಭವಿಸಿದೆ.ಅಪಘಾತದ ಪರಿಣಾಮ ವೆಂಕಟೇಶ್ ಅವರ ತಲೆ ದೇಹದಿಂದ ಸಂಪೂರ್ಣ ಬೇರ್ಪಟ್ಟಿದೆ. ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಅತಿವೇಗವೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಸ್ಥಳಕ್ಕೆ ಚಿಂತಾಮಣಿ ನಗರ ಠಾಣೆ ಪೊಲೀಸರು ಭೇಟಿ ನೀಡಿದ್ದಾರೆ.

ಕೊಳ್ಳೇಗಾಲ: ವಾಂತಿ-ಭೇದಿಗೆ 13 ಜನರು ಆಸ್ಪತ್ರೆಗೆ ದಾಖಲು

ಕೊಳ್ಳೇಗಾಲ: ತಾಲೂಕಿನ ಸತ್ತೇಗಾಲ ಗ್ರಾಮಕ್ಕೆ ಬಳ್ಳಾರಿಯಿಂದ ಕಬ್ಬು ಕಟಾವಿಗೆಂದು ಬಂದ ಮಹಿಳೆಯರು ಮತ್ತು ಮಕ್ಕಳಿಗೆ ಮರಳೆಕಾಯಿ ತಿಂದು ವಾಂತಿ-ಭೇದಿ ಕಾಣಿಸಿಕೊಂಡ ಘಟನೆ ನಡೆದಿದೆ. ಒಟ್ಟು 13 ಜನರಲ್ಲಿ ಮರಳೆಕಾಯಿ ತಿಂದು ವಾಂತಿ-ಭೇದಿ ಕಾಣಿಸಿಕೊಂಡ ಪರಿಣಾಮ ನಗರದ ಸರಕಾರಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಎಲ್ಲರಿಗೂ ಚಿಕಿತ್ಸೆ ನೀಡಲಾಗುತ್ತಿದ್ದು. ಯಾವುದೇ ಪ್ರಾಣ ಹಾನಿಯಗುವುದಿಲ್ಲ ಎಂದು ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ರಾಜಶೇಖರ್ ತಿಳಿಸಿದ್ದಾರೆ.

ಕರ್ತವ್ಯಲೋಪ: ಇನ್ಸ್‌ಪೆಕ್ಟರ್ ಅಮಾನತು

ಚಿಕ್ಕಮಗಳೂರು: ಕರ್ತವ್ಯ ಲೋಪ ಹಿನ್ನೆಲೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರೇಣುಕಾ ಪ್ರಸಾದ್ ಅವರನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ. ಮೂಲತಃ ಚನ್ನಪಟ್ಟಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಓಓಡಿಯಲ್ಲಿ ಇನ್ಸ್‌ಪೆಕ್ಟರ್ ಆಗಿ ರೇಣುಕಾ ಪ್ರಸಾದ್ ಚಿಕ್ಕಮಗಳೂರು ನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ದನಗಳ್ಳರು ಪೊಲೀಸರಿಗೆ ಮಚ್ಚು ತೋರಿಸಿದ್ದು ಠಾಣೆ ಮೇಲೆ ಕಲ್ಲು ಎಸೆತ ಪ್ರಕರಣ, ವಕೀಲರು ಪೊಲೀಸರ ನಡುವಿನ ಸಂಘರ್ಷ ಸೇರಿ ಹಲವು ಘಟನೆಯಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಅಮಾನತ್ತುಗೊಳಿಸಿ ಪಶ್ಚಿಮ ವಲಯ ಐಜಿಪಿ ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ:ಅಇಂ(ವಿ)/ಪ್ರ(ನಿ)/ರಾಮನಗರ/ಕಾಇಂ/ಸ.ಕಾ.ನಿ-1/ಕ-34/24-25/2504-06 ದಿನಾಂಕ: 25.11.2024

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯ ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿ/ಅಇಂ(ವಿ)/ಪ್ರ(ನಿ)/ರಾಮನಗರ/ಕಾಇಂ/ಸ.ಕಾ.ನಿ-2/ಪಾಳಿ & ನಿರ್ವಹಣೆ ದಿನಾಂಕ:25.11.2024 ರ ಅನ್ವಯ ರಾಮನಗರ ವೃತ್ತದ ವ್ಯಾಪ್ತಿಯಲ್ಲಿ ಬರುವ 33 ಸಂಖ್ಯೆಯ 220ಕೆವಿ ಸ್ವೀಕರಣಾ ಕೇಂದ್ರ ಮತ್ತು 66ಕೆವಿ ಉಪಕೇಂದ್ರಗಳಲ್ಲಿ ಪಾಳಿ ನಿರ್ವಹಣೆ ಮತ್ತು ಸಣ್ಣ ಕಾರ್ಯಗಳನ್ನು ವ್ಯವಸ್ಥೆಗೊಳಿಸಲು ಬಿಡ್‌ಗಳನ್ನು ಆಹ್ವಾನಿಸಲಾಗಿದೆ.
ಕೆಪಿಪಿ ಪೋರ್ಟಲ್ ಪ್ರಕ್ರಿಯೆ ಸಂಪೂರ್ಣ ವಿವರಗಳನ್ನು ಕವಿಪ್ರನಿನಿಯ https://kptcl.karnataka.gov.in ನ ಹೈಪರ್‌ಲಿಂಕ್ 'E Procurement KPTCL' ನಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ: 28.11.2024 ರಂದು ಅಥವಾ ತದನಂತರ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿ), ರಾಮನಗರ ವೃತ್ತ, ಕ.ವಿ.ಪ್ರ.ನಿ.ನಿ. ಆರ್. ಆರ್. ನಗರ ಮೆಟ್ರೋ ಸ್ಟೇಷನ್ ಎದುರು, ಮೈಸೂರು ರಸ್ತೆ, ಬೆಂಗಳೂರು-26. ದೂ:080-29620155.

ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್. ಕೋಲಾರ ಜಿಲ್ಲೆ
ದೂರವಾಣಿ ಸಂಖ್ಯೆ: 08153-200898, e-mail: dsghkgf@gmail.com
ಸಂಖ್ಯೆ:ಸಾಆಕೆ/ಪತ್ರಾವಾರ/03/2024-25 ದಿನಾಂಕ: 19.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಕೆ.ಜಿ.ಎಫ್. ಆಸ್ಪತ್ರೆಯ 2024-25ನೇ ಸಾಲಿಗಾಗಿ ಟೆಂಡರ್ ಅಂಗೀಕೃತಗೊಂಡ ದಿನಾಂಕದಿಂದ 31.03.2025 ಅವಧಿಗೆ ಆಹಾರ ಪದಾರ್ಥಗಳು ಹಾಗೂ ಬ್ರೆಡ್ ಸರಬರಾಜಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅಲ್ಪಾವಧಿ ಟೆಂಡರ್ ಫಾರಂನ್ನು ದಿನಾಂಕ: 20.11.2024 ರಿಂದ ದಿನಾಂಕ: 04.12.2024 ಅಪರಾಹ್ನ 4.00 ಗಂಟೆವರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.12.2024 ರಂದು ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-
ಜಿಲ್ಲಾ ಶಸ್ತ್ರಚಿಕಿತ್ಸಕರು,
ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:333/ಕೆಎಸ್‌ಎಂಸಿಎ/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಷನ್ : 19/2024-25 ದಿನಾಂಕ : 22.11.2024
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ KPWD Class-II & above ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.
Construction of Retaining wall to protect Shri Moksha Mandira Jainamata from Varada River Flood water in Lakkavalli village of Soraba Taluk in Shivamogga dist (Indent No-2163) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 494.91 ಲಕ್ಷಗಳು & ಇ.ಎಂ.ಡಿ ಮೊತ್ತ ರೂ.6.29 ಲಕ್ಷಗಳು.
1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ : 26.11.2024 ರಿಂದ 03.12.2024 ಸಂಜೆ 5.30 ರವರೆಗೆ 2) ಪ್ರೀಬಿಡ್ ಸಭೆಯ ದಿನಾಂಕ: 30-11-2024 ಬೆಳಿಗ್ಗೆ 11.00 ಗಂಟೆಗೆ (ಸ್ಥಳ : ಕಾರ್ಯಪಾಲಕ ಇಂಜನೀಯರವರ ಕಛೇರಿ, ಕನೀನಿನಿ, ದಂ.ಜಯೋ, ಶಿಕಾರಿಪುರ, 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 05-12-2024 ಬೆಳಿಗ್ಗೆ 11.00 ಗಂಟೆಗೆ 4)ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.
ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ಶಿ/ನಂ.134-11/ಘೋಂಕಾರ್/2024-25
ಸಹಿ/- ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurucity.mrc.gov.in
ಇಮೇಲ್: ka.tumkuru.cc@gmail.com, itstaff_ulb_tumkur@yahoo.com
ದೂರವಾಣಿ : 2278480, ಫ್ಯಾಕ್ಸ್ 2275106, ಸಾರ್ವಜನಿಕ : 0816-2271200, 2272200
ಸಂಖ್ಯೆ:ತುಮಪಾ/ಆಶಾ/ಸಿಆರ್-8/2024-25 ದಿನಾಂಕ: 25-11-2024

ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಈ ಕೆಳಕಂಡ ವಿವಿಧ ಕಾಮಗಾರಿಗೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡುವವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು kppp.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಮ್.ಡಿ ಮೊತ್ತ (ರೂ. ಗಳಲ್ಲಿ)
1	ತುಮಕೂರು ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ಘನತ್ಯಾಜ್ಯ ವಾಹನ ಚಾಲಕರು, ಹೆಲ್ಪರ್ಸ್ ಲೋಡರ್ಸ್, ಕ್ಲೀನರ್ಸ್‌ಗಳಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವ ಕಾಮಗಾರಿ	112.16	As per KPPP portal

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ :
1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 26.11.2024 ರಿಂದ 10.12.2024 ರವರೆಗೆ.
2. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 10.12.2024 ರಂದು ಸಾಯಂಕಾಲ 4.30 ಗಂಟೆವರೆಗೆ.
3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 11.12.2024 ಸಾಯಂಕಾಲ 4.45 ಗಂಟೆಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ
ತುಮಕೂರು.
DIPR/TUM/RO-93/24-25/Oysters

ಉಪನಿರ್ದೇಶಕರು(ಗ್ರಾಕೈ) ,ರವರ ಕಛೇರಿ ಗ್ರಾಮೀಣ ಕೈಗಾರಿಕೆಗಳು, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ ಚಿಕ್ಕಮಗಳೂರು-577102, Ph: 08262-295788.
ಸಂಖ್ಯೆ:ಜಿಪಂಚಿ/ಗ್ರಾಕೈ/ಉನಿ/ಖರೀದಿ/2024-25 ದಿನಾಂಕ: 27.11.2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

2024-25 ನೇ ಸಾಲಿಗೆ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಯೋಜನೆಯಡಿ ಮರಗೆಲಸ, ಗಾರೆಕೆಲಸ, ಕ್ಷೌರಿಕ, ದೋಬಿ, ಕಮ್ಮಾರಿಕೆ ಕಸಬಿನ 438 ಫಲಾನುಭವಿಗಳಿಗೆ ಸರಬರಾಜು ಮಾಡಲು ಸುಧಾರಿತ ಉಪಕರಣ ಖರೀದಿಗಾಗಿ ದಿನಾಂಕ:-27.11.2024 ರಂದು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಅಲ್ಪಾವಧಿ ಮರು ಟೆಂಡರ್ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದು. ಹೆಚ್ಚಿನ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ 05.12.2024 ಸಂಜೆ 5.00 ಗಂಟೆವರೆಗೆ, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ https://kppp.karnataka.gov.in [IC/2024-25/IND0073/CALL-2] ನಲ್ಲಿ ಲಾಗಿನ್ ಆಗಿ ಪಡೆಯಬಹುದು.

ಸಹಿ/- ಉಪನಿರ್ದೇಶಕರು (ಗ್ರಾಕೈ), ಗ್ರಾಮೀಣ ಕೈಗಾರಿಕೆಗಳು, ಜಿ.ಪಂ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24-25/113/1116

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿ(ನಿ), ಮುಖ್ಯ ವಿಭಾಗ ನಂ.2, ಬಬಲೇಶ್ವರ, ತಾ:ಬಬಲೇಶ್ವರ, ಜಿ: ವಿಜಯಪುರ.
ದೂರವಾಣಿ:08355-200020,
ಇ-ಮೇಲ್:eemli2babaleshwar@gmail.com
ಸಂ:ಕೃಭಾಜನಿನಿ/ಎಂ.ಎಲ್.ಐ/ವಿ.ಸಂ.2/ಯೋ.ಶಾ-4/ಸರ್ವೀಸ್/2024-25/834 ದಿನಾಂಕ: 26.11.2024

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿ[ನಿ], ಬೆಂಗಳೂರು, ಇವರ ಪರವಾಗಿ "Providing Manpower Services [ಐ.ಸಂ.SE0079] ಗೆ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಇ-ಟೆಂಡರನ್ನು ಆಹ್ವಾನಿಸಲಾಗಿದೆ.ಕೆಟಿಪಿಪಿ ನಿಯಮಗಳನ್ವಯ ಏಕಮಾತ್ರ ಲಕೋಟೆಯಲ್ಲಿ ಸೂಚಿಸಿರುವ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು.
1. ಇ-ಟೆಂಡರ ದಾಖಲಾತಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ :07.12.2024 ಸಾ:5.00 ಘಂಟೆವರೆಗೆ.
2. ಇ-ಟೆಂಡರ್ ತೆರೆಯುವ ದಿನಾಂಕ:09.12.2024 ರ ಬೆಳಗ್ಗೆ 11.00 ಘಂಟೆಗೆ.
ಹೆಚ್ಚಿನ ವಿವರಗಳಿಗಾಗಿ http://kppp.karnataka.gov.in ಮುಖಾಂತರ ಅಥವಾ ಕೆಳಗಿನ ಕಛೇರಿಯಿಂದ ಪಡೆಯಬಹುದಾಗಿದೆ.

ವಾಸಾಸಂಇ/ವಿಜಯಪುರ/454/ಕೆಎಸ್‌ಎಂಸಿಎ/2024-25
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ಸಂ.2, ಬಬಲೇಶ್ವರ.

ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ, ಲಕ್ಷ್ಮೇಶ್ವರ
ತಾ: ಲಕ್ಷ್ಮೇಶ್ವರ ಜಿ:ಗದಗ
e-mail: itstaff_ulb_laxmeshwar@yahoo.co.in
Website:www.lakmishwaratown.mrc.gov.in
Phone:08487-272916 Fax no:08487-272916
ಕಂ/ಪುಸಲ/ತಾಂ.ವಿ/ಘ.ತ್ಯಾವಿ/ಇ-ಟೆಂಡರ್/ವಹಿ/2024-25 ದಿ: 26-11-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ ವಸ್ತು ವಿಲೇವಾರಿ ಜಮೀನನಲ್ಲಿ ನೆಲಭರ್ತಿ ಜಾಗೆಯಲ್ಲಿ ಹೆ ಚ್ ಡಿ ಪಿ ಜಿಯೋ ಮೆಂಬರೇನ ಮತ್ತು **Bio-Cultcure, RDF, UNSKILLED LABOURS** ಕಾಮಗಾರಿ ಎಸ್ ಬಿ ಎಮ್ 2.0 (ಎಸ್ ಎಲ್ ಎಫ 2024-25) ಅನುದಾನದಲ್ಲಿ ಒಟ್ಟು 4 ಕಾಮಗಾರಿ ಅಂದಾಜು ಮೊತ್ತ ರೂ 58.45 ಲಕ್ಷಗಳಿಗೆ ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡಂಟ್‌ಗಳಲ್ಲಿ ಇ ಟೆಂಡರಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ **https://kppp.karnataka.gov.in** ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 05-12-2024 ರ ಸಂಜೆ 4.00 ಗಂಟೆಯವರೆಗೆ ಟೆಂಡರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು **E-portal** ನಲ್ಲಿ ಪ್ರಕಟಿಸಲಾಗುವುದು.

ಅ. ನಂ	ಕಾಮಗಾರಿಯ ಇಂಡಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2024-25/OW/WORK_INDENT32374	4.60
2	DMA/2024-25/IND3536/CALL-2	2.33
3	DMA/2024-25/SE3759/CALL-2	25.56
4	DMA/2024-25/SE3761/CALL-2	25.96

ಸಹಿ/- ಮುಖ್ಯಾಧಿಕಾರಿಗಳು (ಶ್ರೀ ಮಹೇಶ ಎಸ್ ಹಡಪದ) ಪುರಸಭೆ, ಲಕ್ಷ್ಮೇಶ್ವರ
ಸಹಿ/- ಅಧ್ಯಕ್ಷರು (ಶ್ರೀಮತಿ ಯಲ್ಲವ್ವ ಗಂ ದುರಗಣ್ಣವರ) ಪುರಸಭೆ, ಲಕ್ಷ್ಮೇಶ್ವರ
ವಾ.ಸಾ.ಇ/ಗದಗ/414/ದೇಶಪಾಂಡೆಪಬ್ಲಿಸಿಟಿ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ನಿರ್ದೇಶಕರು (ಪಶುಪಾಲನೆ) ರವರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು-560 002.
ಸಂಖ್ಯೆ: ಜಂನಿ/ಪಪಾ/ಪಿಆರ್/380/2024-25 ದಿನಾಂಕ: 27.11.2024

ಟೆಂಡರ್ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆಸಕ್ತ ಸರ್ಕಾರೇತರ ಸಂಸ್ಥೆ/ಸಂಸ್ಥೆ/ಆರ್ಗನೈಜೇಷನ್‌ಗಳಿಂದ ಬೆಂಗಳೂರು, ಫ್ರೇಜರ್ ಟೌನಿನ, ಟ್ಯಾನರಿ ರಸ್ತೆಯಲ್ಲಿರುವ ನಾಗರೀಕ ಮಾಂಸ ಉತ್ಪಾದನೆ ಮತ್ತು ಸಂಸ್ಕರಣೆ ಘಟಕದಲ್ಲಿ ಬರುವ ಸಣ್ಣ ಪ್ರಾಣಿಗಳ ಪ್ರವೇಶ ಶುಲ್ಕ ಮತ್ತು ವಧಾಗಾರ ಶುಲ್ಕವನ್ನು ಸಂಗ್ರಹ ಮಾಡಲು ಪ್ರಸ್ತಾವನೆ ಕೋರಿಕೆಗಳನ್ನು ಆಹ್ವಾನಿಸಿದೆ.
ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತವೆ

1.	ಆರ್‌ಎಫ್‌ಪಿ ಉಲ್ಲೇಖ ಸಂಖ್ಯೆ	BBMP/2024-25/SE1090
2.	ದಸ್ತಾವೇಜುಗಳನ್ನು ಕೆಪಿಪಿ ವೆಬ್‌ಸೈಟ್ http://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಕ ದಿನಾಂಕ 27.11.2024ರಿಂದ	
3.	ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಜಂಟಿ ನಿರ್ದೇಶಕರು (ಪಶುಪಾಲನೆ) ಬೃ.ಬೆಂ.ಮ.ಪಾಲಿಕೆ	
4	ಟೆಂಡರ್ ಒಪ್ಪಿಗೆ ಪ್ರಾಧಿಕಾರ ಮುಖ್ಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ	
5.	ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 02.12.2024ರ ಸಂಜೆ 5:00 ಗಂಟೆಯವರೆಗೆ	
6.	ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ ವಿಳಾಸ: ಜಂಟಿ ನಿರ್ದೇಶಕರು (ಪಶುಪಾಲನೆ) ರವರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು -560 002 ಇಲ್ಲಿ ದಿನಾಂಕ: 02.12.2024ರ ಬೆಳಿಗ್ಗೆ 11:00 ಗಂಟೆಗೆ ನಡೆಸಲಾಗುವುದು.	
7.	ಆರ್‌ಎಫ್‌ಪಿಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ 11.12.2024ರ ಸಂಜೆ 5:00 ಗಂಟೆಯವರೆಗೆ.	
8.	ಆರ್‌ಎಫ್‌ಪಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ದಿನಾಂಕ 12.12.2024ರ ಸಂಜೆ 5:10 ಗಂಟೆಗೆ ತೆರೆಯಲಾಗುವುದು.	
9.	ಸಂವಹನ ವಿಳಾಸ: ಜಂಟಿ ನಿರ್ದೇಶಕರು (ಪಶುಪಾಲನೆ) ನರಸಿಂಹರಾಜ ಚೌಕ, ಬೆಂಗಳೂರು- 02 ದೂ: 9480685653 ಇ-ಮೇಲ್: jointdirector01@gmail.com	

1. ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಇನ್ನುಳಿದ ವಿವರಣೆಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಸಹಿ/- ಜಂಟಿ ನಿರ್ದೇಶಕರು (ಪಶುಪಾಲನೆ)

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲಾ ಪಂಚಾಯತ್ ಕಟ್ಟಡ, 1ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು - 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/11/2024-25 ದಿನಾಂಕ: 27-11-2024

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2024-25 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 04-12-2024 ರಂದು ಸಂಜೆ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/3462/ಅಡ್ವರ್ಟೋರ್/2024-25

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ
Ref. VTU/BGM/SAP/CW1/T-678, 680/2024-25/4515 Dated: 26/11/2024

ಟೆಂಡರ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ
1	T-678: Tender for Procurement of Equipments for Collaborative Research Culture (CRC) at VTU Regional Centre, Bengaluru	S-I: Rs. 13,53,722/- S-II: Rs. 20,97,300/- S-III: Rs. 8,56,368/-	S-I: Rs. 33,900/- S-II: Rs. 42,000/- S-III: Rs. 21,500/-
2	T-680: Tender for procurement of Software & Hardware Bundle for establishment of Interdisciplinary Centre of Excellence of Immersive (AR, VR, MR, Metaverse) technologies as Turnkey Solutions at VTU P.G. Center Belagavi.	1,09,50,000/-	1,64,500/-

ಟೆಂಡರ್ ಪ್ರಿ ಬಿಡ್ ಮೀಟಿಂಗ್ ದಿನಾಂಕ: 30-11-2024 ರಂದು.1100 ಗಂಟೆಗೆ ಆನ್‌ಲೈನ್ ಮೂಲಕ. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 10-12-2024 ರ 2.30 ರ ವರೆಗೆ. **ಟೆಂಡರ ತೆರೆಯುವ ದಿನಾಂಕ:** 11-12-2024 ರ 400 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ **www.karnataka.gov.in** ಮತ್ತು **www.vtu.ac.in** ನೋಡಬಹುದು.

ಡಿಐಪಿಆರ್/ಬೆಳಗಾವಿ/1208/ಅಡ್ವರ್ಟೋರ್/2024-25
ಸಹಿ/- ಕುಲಸಚಿವರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:09/2024-25
Date: 25.11.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಸಿ.3 ಮತ್ತು ಕೆ.ಸಿ4ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ PWD Company/ Firm Registration with Labour License ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಒಟ್ಟು 13 ಮಾನವ ಸಂಪನ್ಮೂಲ ಒದಗಿಸುವ ಸೇವಾ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಟ ಟೆಂಡರ್ ಮೊತ್ತ ರೂ.85.54ಲಕ್ಷ ಮತ್ತು ಕನಿಷ್ಟ ಟೆಂಡರ್ ಮೊತ್ತ ರೂ.3.23ಲಕ್ಷ (GST ಒಳಗೊಂಡು). EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆ.ಪಿ.ಪಿ.ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ: 28.11.2024 ರಿಂದ 06.12.2024 ರ ವರೆಗೆ ಪಡೆಯಬಹುದು (Down load), ತಾಂತ್ರಿಕ ಬಿಡ್ ತೆರೆಯುವ ದಿನಾಂಕ 07.12.2024 ರ ಸಂಜೆ 5.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://kppp.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು
ವಾಸಾಸಂಇ/ಹಿಸನಿ/ಹಾಸನ/700/ಕೆಎಸ್‌ಎಂಸಿಎ/2024-25

ನೋಟಿಸ್

1) ರಾಮಚಂದ್ರೇಗೌಡ ಕೆ ಸಿ S/O ಚಿಕ್ಕೇಗೌಡ ವಯಸ್ಸು 54, ಕಾರ್ಮಿಕ ಸಂಖ್ಯೆ 1163, ವಿಳಾಸ 356 ಹೊಸಹಳ್ಳಿ ಗ್ರಾಮ, ತುಳಸಿ ನಗರ ಬೆಂಗಳೂರು ನಾರ್ತ್ ವಿಶ್ವನೀಡಂ ಪೋಸ್ಟ್, ಬೆಂಗಳೂರು ನಗರ - 560091 ಮತ್ತು 2) ಕುಡಿಬಳು ಹಳ್ಳಿ ಕುಡಿಬಳು ಪೋಸ್ಟ್ ದೇವಲಾಪುರ ಹೋಬಳಿ ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ ಆದ ನೀವು ಬಗಾಡಿಯ ಚೈತ್ರ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಆಪರೇಟರ್ ಆಗಿ ಉತ್ಪಾದನೆ ವಿಭಾಗದಲ್ಲಿ ವೃತ್ತಿ ಮಾಡುತ್ತಿದ್ದು. ದಿನಾಂಕ 7-5-2019 ರಿಂದ ಈ ದಿನದವರೆಗೂ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಿರಿ ಮತ್ತು ತಾವು ಕೆಲಸಕ್ಕೆ ಗೈರುಹಾಜರಾತಿ ಬಗ್ಗೆ ಕಂಪನಿಗೆ ಯಾವುದೇ ಲಿಖಿತ ಮಾಹಿತಿಯನ್ನು ನೀಡಿರುವುದಿಲ್ಲ ಮತ್ತು ಅಧಿಕೃತವಾಗಿ ರಜೆಯನ್ನು ಪಡೆಯದೆ ನಿರಂತರವಾಗಿ ಕೆಲಸಕ್ಕೆ ಗೈರು ಹಾಜರಾಗಿದ್ದು ಆ ಸಂಬಂಧ ನೀಡಿದ ನೋಟಿಸ್ ಅನ್ನು ತಾವುಗಳು ಪಡೆದಿರುವುದಿಲ್ಲ. ಆದ್ದರಿಂದ ನೀವು ಈ ಕೂಡಲೇ 7 ದಿನದ ಒಳಗಾಗಿ ಕೆಲಸಕ್ಕೆ ಹಾಜರಾಗಲು ಈ ಮೂಲಕ ಅಂತಿಮ ನೋಟಿಸು ನೀಡಿದೆ.

— ವಿಳಾಸ: —
ಬಾಗಡಿಯಾ ಚೈತ್ರ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್
ಪ್ಲಾಟ್ ನಂ 7 & 8, ಕೆಐಎಡಿಬಿ, ವಸಂತಾನರಸಾಪುರ, 2ನೇ ಹಂತ, ಕೋರ (ಹೋ), ತುಮಕೂರು (ತಾ)&(ಜಿ)-572128
ಮಾನವ ಸಂಪನ್ಮೂಲ ಅಧಿಕಾರಿಯವರ ಸಂಪರ್ಕ
ಚಂದ್ರಶೇಖರ್ ಬಿ. ಜಿ.
ಡೆಪ್ಯುಟಿ ಮ್ಯಾನೇಜರ್
ಮೊಬೈಲ್ ಸಂಖ್ಯೆ - 9743588005

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ತುಷ್ಟೀಕರಣದ ಜಿದ್ದಿಗೆ ಬಿದ್ದಿರುವ ಭ್ರಷ್ಟ siddaramaiah ಸರಕಾರ ತನ್ನ ವೋಟ್ ಬ್ಯಾಂಕ್‌ಗಾಗಿ ಹಿಂದೂ ಕಾರ್ಯಕರ್ತರನ್ನು ಗುರಿಯಾಗಿಸಿ ಸುಮೋಟೋ ಕೇಸ್ ದಾಖಲಿಸುತ್ತಿದೆ. ಹಿಂದೂ ಕಾರ್ಯಕರ್ತರಿಗೆ ಕಿರುಕುಳ ನೀಡಲು ಸಣ್ಣಪುಟ್ಟ ವಿಷಯಗಳಿಗೂ ಸುಮೋಟೋ ಪ್ರಕರಣ ದಾಖಲಿ ಸುತ್ತಿದೆ. ದ್ವೇಷದ ರಾಜಕಾರಣ ಮಾಡುವುದು ಬಿಟ್ಟು INCKarnataka ಸರಕಾರ ಈ ಕೂಡಲೇ ಪ್ರಕರಣಗಳನ್ನು ರದ್ದು ಮಾಡಿ ಅಭಿವೃದ್ಧಿ ಕಡೆ ಗಮನ ನೀಡಬೇಕು.

ಕೆ.ಎಸ್.ರಾಜಣ್ಣ

ಬಿಜೆಪಿ ಮತ್ತು ಅದರ ಪಟಾಲಂ ಒಂದು ಸಾಮಾಜಿಕ ಪಿಡುಗು ಇದ್ದಂತೆ, ಧರ್ಮದ ಹೆಸರಲ್ಲಿ ಜಾತಿ ಹೆಸರಲ್ಲಿ ಸಮಾಜವನ್ನು ಶೋಷಣೆ ಮಾಡಿ ಸಾಮಾಜಿಕ ನ್ಯಾಯದ ಆಶಾಯಗಳಿಗೆ ಕೊಳ್ಳಿ ಇಡುವ ಕೆಲಸ ಮಾಡುತ್ತಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಮಂಡ್ಯ**

ಸಮಸ್ಯೆಯೇನು..?

- ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು, ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.- ಬಿ.ಟಿ. ರಸ್ತೆಯಿಂದ ಪಟ್ಟಸೋಮನಹಳ್ಳಿ ಮುಖಾಂತರ ಶ್ರೀ ಶಿವಶೈಲಕ್ಕೆ ಸೇರುವ ರಸ್ತೆಯ ಸ:1.70 ಕಿ.ಮೀ.ನಲ್ಲಿರುವ ಸೇತುವೆ ದುರಸ್ತಿ ಹಾಗೂ ರಸ್ತೆ ನಿರ್ಮಾಣ ಕಾಮಗಾರಿ ಸಮಸ್ಯೆ.
- **ಪರಿಹಾರ:** ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು, ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.- ಬಿ.ಟಿ. ರಸ್ತೆಯಿಂದ ಪಟ್ಟಸೋಮನಹಳ್ಳಿ ಮುಖಾಂತರ ಶ್ರೀ ಶಿವಶೈಲಕ್ಕೆ ಸೇರುವ ರಸ್ತೆಯ ಸ:1.70 ಕಿ.ಮೀ.ನಲ್ಲಿರುವ ಸೇತುವೆ ದುರಸ್ತಿ ಹಾಗೂ ರಸ್ತೆ ನಿರ್ಮಾಣ ಕಾಮಗಾರಿ ಮಾಡಲು ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ಅನುದಾನ ಪಡೆದು ಸೇತುವೆ ದುರಸ್ತಿ ಪೂರ್ಣಗೊಳಿಸಲಾಗುವುದು.



ದೆಹಲಿಯಲ್ಲಿ ವಿವಿಧ ಸಚಿವರನ್ನು ಭೇಟಿಯಾದ ಡಿಕೆಶಿ | ಮೇಕೆದಾಟು, ಭದ್ರಾ ಮೇಲ್ದಂಡೆ ಸಂಬಂಧ ಜೋಶಿಗೆ ಮನವಿ | ಕಳಸಾ ಬಂಡೂರಿ ಯೋಜನೆ ಸಂಬಂಧ ಪರಿಸರ ಸಚಿವರ ಭೇಟಿ

ನೀರಾವರಿ ಯೋಜನೆ: ಕೇಂದ್ರದ ಮೇಲೆ ಒತ್ತಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ದೆಹಲಿ

ರಾಜ್ಯದ ಮಹತ್ವಾಕಾಂಕ್ಷಿ ನೀರಾವರಿ ಯೋಜನೆಗಳ 'ಭಾರ'ವನ್ನು ಕೇಂದ್ರ ಸರಕಾರದ ಮೇಲೆ ಹೊರಿಸುವ ಪ್ರಯತ್ನದ ಮುಂದುವರಿದ ಭಾಗವಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ವಿವಿಧ ಸಚಿವರನ್ನು ಭೇಟಿಯಾಗಿ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ಹಾಗೂ ಅನುದಾನ ನೀಡುವಂತೆ ಒತ್ತಡ ಹೇರಿದ್ದಾರೆ.

ಕರ್ನಾಟಕದಲ್ಲಿ ಸದ್ಯ ಕಳಸಾ-ಬಂಡೂರಿ, ಮೇಕೆದಾಟು ಯೋಜನೆಗಳಿಗೆ ಕೇಂದ್ರದ ವಿವಿಧ ಇಲಾಖೆಯಿಂದ ಅನುಮತಿ ಸಿಗಬೇಕಿದ್ದರೆ, ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿಸಿರುವ ಅನುದಾನವನ್ನು ಬಿಡುಗಡೆ ಮಾಡಬೇಕಿದೆ. ಈಗಾಗಲೇ ಎತ್ತಿನಹೊಳೆ ಹಾಗೂ ಕಾವೇರಿ ಐದನೇ ಹಂತವನ್ನು ಅಧಿಕಾರಕ್ಕೆ ಬಂದ ಕೂಡಲೇ ಪೂರ್ಣಗೊಳಿಸಿರುವ ಕಾಂಗ್ರೆಸ್ ಸರಕಾರದ ಇದೀಗ ಈ ಮೂರು ಯೋಜನೆಗಳನ್ನು ಪೂರೈಸಲು ಸಿದ್ಧತೆ ಆರಂಭಿಸಿದೆ.

ಆದರೆ ಈ ಮೂರು ಯೋಜನೆಗಳಿಗೆ ಕೇಂದ್ರ ಸರಕಾರದಿಂದ ಅನುಮತಿ ಸಿಗಬೇಕಿದೆ. ಈ ನೀರಾವರಿ ಯೋಜನೆಗಳಿಗೆ ಅನುಮತಿ ಸಿಕ್ಕರೆ, ಮುಂದಿನ ಮೂರು ವರ್ಷದಲ್ಲಿಯೇ ಈ ಯೋಜನೆಗಳಿಗೆ ವೇಗ ನೀಡುವ ಮೂಲಕ ಮುಂದಿನ ಚುನಾವಣೆಗೆ 'ಕ್ರೆಡಿಟ್' ತೆಗೆದುಕೊಳ್ಳುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ. ಒಂದು ವೇಳೆ ಬಿಜೆಪಿಯಿಂದ ಸಕಾರಾತ್ಮಕ ಸ್ಪಂದನೆ ಬಾರದೇ, ಅನುಮತಿ ನೀಡದಿದ್ದರೆ ಮುಂದಿನ ದಿನದಲ್ಲಿ ಇದೇ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ ವಿರುದ್ಧ ಜನಾಭಿಪ್ರಾಯ ಮೂಡಿಸುವ ಲೆಕ್ಕಾಚರಗಳಿವೆ ಎನ್ನುವ ಮಾತುಗಳು ಕೇಳಿಬಂದಿದೆ.

ದೆಹಲಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿಯಾಗಿ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ಕೊಡಿಸುವಂತೆ ಮನವಿ ಮಾಡಿದರು.

ಜೋಶಿ ಭೇಟಿಯಾದ ಡಿಕೆಶಿ: ನೀರಾವರಿ ಯೋಜನೆಗಳಿಗೆ ಅನುಮತಿ ಹಾಗೂ ಅನುದಾನ ಪಡೆಯುವ ನಿಟ್ಟಿನಲ್ಲಿ ದೆಹಲಿ ಪ್ರವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರದ ವಿವಿಧ ಸಚಿವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಇದರೊಂದಿಗೆ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿಯಾಗಿ ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ಕೊಡಿಸುವಂತೆ ಮನವಿ ಮಾಡಿದ್ದಾರೆ.

ಪ್ರಲ್ಹಾದ್ ಜೋಶಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ ಶಿವಕುಮಾರ್, ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಿದರು. ಮೇಕೆದಾಟು ಯೋಜನೆಯು ಸುಸ್ಥಿರ ಕುಡಿಯುವ ನೀರಿನ ಯೋಜನೆಯಾಗಿದ್ದು, ಈ ಯೋಜನೆ ಜಾರಿ ಅಗತ್ಯವಾಗಿದೆ. ಕೃಷ್ಣಾ ವಿವಾದಿತ ನೀರು ನ್ಯಾಯಾಧಿಕರಣ 2ರ ತೀರ್ಪಿನ ಅನ್ವಯ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕು. ಇದರ ಜತೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡಬೇಕು ಎಂದು ಮನವಿ ಮಾಡಿದರು.

ಕಳಸಾ ಬಂಡೂರಿ: ರಾಜ್ಯದ ವಾದವೇನು?

- ಕಳಸಾ ನಾಲೆ ಯೋಜನೆಗೆ ಕಾಳಿ ಹಾಗೂ ಸಹ್ಯಾದ್ರಿ, ಹುಲಿ ಸಂರಕ್ಷಣಾ ಪ್ರದೇಶದಲ್ಲಿ 10.88 ಹೆಕ್ಟೇರ್ ಅರಣ್ಯ ಭೂಮಿ ಅಗತ್ಯ.
- ಖಾನಾಪುರ ತಾಲೂಕಿನ ಕಣಕುಂಬಿ ಸುತ್ತಲಿನ ಹಳ್ಳಿಗಳ ಪ್ರದೇಶದಲ್ಲಿ ಜಾಕ್‌ವೆಲ್ ಸಹಿತ ಪಂಪ್ ಹೌಸ್, ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಭೂಮಿ ಅಗತ್ಯ.
- ಅರಣ್ಯ ಪ್ರದೇಶ ಭೂಮಿಯ ಪ್ರಮಾಣವನ್ನು 258 ಹೆಕ್ಟೇರ್ ಪ್ರದೇಶದಿಂದ ಕೇವಲ 26.92 ಹೆಕ್ಟೇರ್‌ಗೆ ಇಳಿಸಿದೆ.
- ಪರಿಸರ ಸಂರಕ್ಷಣೆಗೆ ರಾಜ್ಯ ತನ್ನ ಬದ್ಧತೆ ಪ್ರದರ್ಶಿಸಿದೆ.
- ರಾಜ್ಯದ ಹಿತಾಸಕ್ತಿ ಕಾಪಾಡಲು ಕೇಂದ್ರ ಸರಕಾರವು ವಿಳಂಬ ಮಾಡದೇ ಈ ಯೋಜನೆಗೆ ಅನುಮತಿ ನೀಡಬೇಕು.

ನೀರಾವರಿ ಯೋಜನೆ ಅನುಮತಿಗೆ ಮನವಿ

ಉತ್ತರ ಕರ್ನಾಟಕ ಭಾಗದ ಪ್ರಮುಖ ನೀರಾವರಿ ಯೋಜನೆಯಾಗಿರುವ ಕಳಸಾ ಬಂಡೂರಿ ಯೋಜನೆಗೆ ಅರಣ್ಯ ಇಲಾಖೆಯಿಂದ ಅನುಮತಿ ನೀಡುವಂತೆ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರನ್ನು ಮನವಿ ಮಾಡಿದರು. ಕಳಸಾ ಬಂಡೂರಿ ಯೋಜನೆ ಸುಮಾರು 10.88 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಸಾಗಬೇಕಿದೆ. ಇದರಿಂದಾಗಿ ಅರಣ್ಯ ಇಲಾಖೆ ಅನುಮತಿ ನೀಡುತ್ತಿಲ್ಲ. ನಾಲಾ ಯೋಜನೆಯೂ ಅಭಯಾರಣ್ಯದಲ್ಲಿ ಹಾದು ಹೋಗುವುದರಿಂದ ಅನುಮತಿ ನೀಡಿಲ್ಲ ಎನ್ನುವ ಮಾತು ಕೇಳಿಬಂದಿದೆ. ಈ ಎಲ್ಲಾ ವಿಚಾರವಾಗಿ ರಾಜ್ಯ ಅರಣ್ಯ ಮತ್ತು ಪರಿಸರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಸ್ಪಷ್ಟನೆ ನೀಡಿದ್ದು, ಸುಪ್ರೀಂ ಕೋರ್ಟ್ ಈ ಯೋಜನೆ ಜಾರಿ ವಿಚಾರದಲ್ಲಿ ಕರ್ನಾಟಕ ರಾಜ್ಯಕ್ಕೆ ಯಾವುದೇ ಆಕ್ಷೇಪ ವ್ಯಕ್ತಪಡಿಸಿಲ್ಲ. ಇದರ ಜತೆಗೆ ಕಾನೂನು ಪ್ರಕಾರವಾಗಿ ಕೇಂದ್ರ ಸರಕಾರದ ಎಲ್ಲಾ ಅನುಮತಿಗಳು ಸಿಕ್ಕ ನಂತರವಷ್ಟೇ ಈ ಯೋಜನೆ ಕಾಮಗಾರಿ ಕೈಗೊಳ್ಳಲು ನಿರ್ಧರಿಸಿದೆ. ಆದ್ದರಿಂದ ಮನವಿ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸಿ ನೀರಾವರಿ ಸೌಲಭ್ಯ ಹೆಚ್ಚಿಸಿ ರೈತರಿಗೆ ನೀರು ಒದಗಿಸಿಕೊಡಬೇಕು. ಇನ್ನು ಮಹದಾಯಿ ಯೋಜನೆಗೆ ಅಗತ್ಯ ಅನುಮತಿ ಕೊಡಿಸಿ ಈ ಭಾಗದಲ್ಲಿರುವ ನೀರಿನ ಅಭಾವ ನೀಗಿಸಬೇಕಿದೆ. ಈ ಪ್ರಮುಖ ಯೋಜನೆಗಳ ಜಾರಿಗೆ ಕೇಂದ್ರ ಸರಕಾರವು ರಾಜ್ಯಕ್ಕೆ ಅಗತ್ಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಶಾಸಕ ಶಾಸಕ ಬಸನಗೌಡ ಯತ್ನಾಳ ಕಿಡಿ

ವಕ್ಫ್ ಕ್ಯಾನ್ಸರ್ ಇದ್ದಂತೆ

ಶಹಾಪುರ ತಾಲೂಕಿನಲ್ಲಿ ಕೊಂಗಂಡಿ ಗ್ರಾಮದ ರೈತರ ಜಮೀನುಗಳಿಗೆ ಬುಧವಾರ ಭೇಟಿ ನೀಡಿದ ಶಾಸಕ ಯತ್ನಾಳ ನೇತೃತ್ವದ ನಿಯೋಗ, ವಕ್ಫ್ ಆಸ್ತಿ ಎಂದು ನಮೂದಾಗಿರುವ ಜಮೀನು ಮಾಲೀಕರೋದಿಗೆ ಸಂವಾದ ನಡೆಸಿದರು.

ಶಹಾಪುರ: ರೈತರಿಗೆ ವಕ್ಫ್ ಕ್ಯಾನ್ಸರ್ ಇದ್ದಂತೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲಂ11 ರಲ್ಲಿ ತೆಗೆದುಹಾಕಲು ಸೂಚಿಸಿದ್ದಾರೆ, ಆದರೆ ಜಮೀನು ಅಕ್ರಮ ಮಾಡಿಕೊಂಡು ಧಮ್ಕಿ ಹಾಕುತ್ತಿದ್ದಾರೆ ಎಂದು ಶಾಸಕ ಬಸನಗೌಡ ಯತ್ನಾಳ ಹೇಳಿದರು.

ತಾಲೂಕಿನ ಕೊಂಗಂಡಿ ಗ್ರಾಮದ ರೈತರ ಜಮೀನುಗಳಿಗೆ ಭೇಟಿ ನೀಡಿದ ಶಾಸಕ ಯತ್ನಾಳ ನೇತೃತ್ವದ ನಿಯೋಗ , ವಕ್ಫ್ ಆಸ್ತಿ ಎಂದು ನಮೂದಾಗಿರುವ ಜಮೀನು ಮಾಲೀಕರೊಂದಿಗೆ ಸಂವಾದ ನಡೆಸಿದರು. ನಮ್ಮ ಜಮೀನು ರೈಲ್ವೆ ಕಾಮಗಾರಿ ಭೂಸ್ವಾಧೀ ನಕ್ಕಾಗಿ ವಶಪಡಿಸಿ ಕೊಂಡಿದ್ದಾರೆ. ಆದರೆ, ವಕ್ಫ್ ಆಸ್ತಿ ಎಂದು ತಕರಾರು ಮಾಡುತ್ತಿದ್ದಾರೆ. ಇದರಿಂದ ಭೂ ಪರಿಹಾರ ಸಿಕ್ಕಿಲ್ಲ ಎಂದು ರೈತರು ಮಾಹಿತಿ ನೀಡಿದರು. ಗ್ರಾಮದ ಸುಮಾರು 150 ಎಕರೆ ಜಮೀನು ವಕ್ಫ್ ಆಸ್ತಿ ಎಂದು ನಮೂದಾಗಿದೆ ಎಂದು ಗ್ರಾಮಸ್ಥರು ತಿಳಿಸಿದರು.

ಮುಖಂಡರಾದ ರಮೇಶ ಜಾರಕಿಹೊಳಿ, ಜಿ.ಎಂ ಸಿದ್ದೇಶ್ವರ, ಬಿ.ವಿ ನಾಯಕ, ಬಿ.ಪಿ ಹರೀಶ, ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ಎನ್.ಆರ್ ಸಂತೋಷ, ಶರಣಗೌಡ ಬಾಡಿಯಾಳ, ಶರಣಗೌಡ ಮದ್ರಕಲ್ ಸೇರಿದಂತೆ ರೈತರು ಇದ್ದರು.



ಚನ್ನಪಟ್ಟಣ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿರುವ ನೂತನ ಶಾಸಕ ಸಿ.ಪಿ. ಯೋಗೇಶ್ವರ ಅವರ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಧನ್ಯವಾದ ಸಲ್ಲಿಸಿದರು.

ನಮ್ಮ ಪಕ್ಷ ಮುಗಿಸೋಕೆ ಯಾರಿಂದಲೂ ಸಾಧ್ಯವಿಲ್ಲ

ಡಿಸಿಎಂ ಆಗಲು ಆಮಿಷವಿತ್ತು: ರೇವಣ್ಣ

ಬೆಂಗಳೂರು: ''ನನಗೂ ಬೇರೆ ಪಕ್ಷದಿಂದ ಆಫರ್ ಬಂದಿತ್ತು. ಅಲ್ಲದೆ ಡಿಸಿಎಂ ಸ್ಥಾನ ಕೊಡುವುದಾಗಿ ತಿಳಿಸಿದ್ದರು'' ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಹೇಳಿದ್ದಾರೆ.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಯಾರೋ ಒಬ್ಬರು ನಾಯಕರು ನನ್ನನ್ನು ವಿಧಾನಸೌಧಕ್ಕೆ ಕರೆದು ಉನ್ನತ ಹುದ್ದೆಯ ಆಫರ್ ಮಾಡಿದ್ದರು. ಈಗ ಅವರ ಹೆಸರು ಬೇಡ ಎಂದರು. ಐದು ಜನ ಕರೆದುಕೊಂಡು ಬರುತ್ತೇನೆ. ನೀನು ಡಿಸಿಎಂ ಆಗು ಅಂದಿದ್ದರು ಒಬ್ಬ ನಾಯಕರು. ಇದಕ್ಕಾಗಿ ದೆಹಲಿಯಿಂದ ದೂರವಾಣಿ ಮಾಡಿಸಿದ್ದರು ಎಂದರು.

ಚನ್ನಪಟ್ಟಣ ಉಪಚುನಾವಣೆ ಪ್ರಚಾರದಿಂದ ದೂರವುಳಿದ ಬಗ್ಗೆ ಮಾತನಾಡಿದ ಅವರು, ದೇವೇಗೌಡರು ಹಾಗೂ ಕುಮಾರಸ್ವಾಮಿ ನಮ್ಮ ನಾಯಕರು. ಕುಮಾರಸ್ವಾಮಿ ಜತೆ ಸಂಬಂಧ ಚೆನ್ನಾಗಿಲ್ಲ ಎಂದು ತಿಳಿದುಕೊಂಡರೆ ಅದು ಭ್ರಮೆ ಅಷ್ಟೆ.

ರಾಜಕೀಯ ಜೀವನದಲ್ಲಿ ಏಳು ಬೀಳು ನೋಡಿದ್ದೇವೆ. ನಮ್ಮ ಪಕ್ಷ ಮುಗಿಸೋಕೆ ಆಗುವುದಿಲ್ಲ. 2004 ರಲ್ಲಿ ಕುಮಾರಸ್ವಾಮಿ ಮೋದಿ ಮಾತು ಕೇಳಿದಿದ್ದರೆ ರಾಜಕೀಯವೇ ಬೇರೆ ಆಗುತ್ತಿತ್ತು. 50 ವರ್ಷದ ಕಾಂಗ್ರೆಸ್ ಇತಿಹಾಸದಲ್ಲಿ 48 ತಾಲೂಕು ಕೇಂದ್ರಗಳಲ್ಲಿ ಪಿಯು ಕಾಲೇಜುಗಳು ಇರಲಿಲ್ಲ. ಉತ್ತಮವಾದ ಶಿಕ್ಷಣ ಕೊಟ್ಟಿರಲಿಲ್ಲ. ಕುಮಾರಸ್ವಾಮಿ ,ಯಡಿಯೂರಪ್ಪ ಸೇರಿ ಕಾಲೇಜುಗಳನ್ನ ಗ್ರಾಂಟ್ ಮಾಡಿದ್ದರು. ಕುಮಾರಸ್ವಾಮಿ ಯಡಿಯೂರಪ್ಪ ಜೊತೆ ಮುಂದುವರೆದಿದ್ದರೆ ರಾಜ್ಯದ ರಾಜಕೀಯವೇ ಬೇರೆ ಆಗುತ್ತಿತ್ತು. ಆದರೆ, ಅದು ತಪ್ಪು ನನ್ನ ಹಾಗೂ ದೇವೇಗೌಡರಿಂದ ಆಗಿದೆ ಎಂದರು.

ಜಿಟಿಡಿ ಜೈಲಿಗೆ ಹೋಗಬೇಕಿತ್ತು!: ಪಕ್ಷದಲ್ಲಿನ ಅಸಮಾಧಾನದ ಬಗ್ಗೆ ಮಾತನಾಡಿದ ರೇವಣ್ಣ, ಕಾಂಗ್ರೆಸ್ ಸರಕಾರ 2018ರಲ್ಲಿ ಜಿ.ಟಿ ದೇವೇಗೌಡರನ್ನು ಅರೆಸ್ಟ್ ಮಾಡಲು ಸಿದ್ಧತೆ ಮಾಡಿಕೊಂಡಿತ್ತು. ಕುಮಾರಸ್ವಾಮಿ ಇಲ್ಲದೆ ಹೋಗಿದ್ರೆ ನನ್ನ ರೀತಿ ಜಿ.ಟಿ ದೇವೇಗೌಡ ಮತ್ತು ಅವರ ಪುತ್ರ ಜೈಲಿನಲ್ಲಿ ಇರಬೇಕಾಗಿತ್ತು ಎಂದು ಹೇಳಿದರು. ಜಿ.ಟಿ ದೇವೇಗೌಡರನ್ನು ಬಂಧಿಸಲು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ನನಗೆ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದರು. ಬಳಿಕ ಕುಮಾರಸ್ವಾಮಿ ಅವರು ಪೊಲೀಸರಿಗೆ ಫೋನ್ ಮೂಲಕ ಮಾತನಾಡಿ, ಬಂಧನವನ್ನು ತಪ್ಪಿಸಿದರು. ಇಲ್ಲದೇ ಹೋಗಿದ್ರೆ ನನ್ನ ರೀತಿ ಜಿ.ಟಿ ದೇವೇಗೌಡ ಮತ್ತು ಅವರ ಪುತ್ರ 20 ದಿನ ಜೈಲಲ್ಲಿ ಕಳೆಯಬೇಕಾಗಿತ್ತು ಹೇಳಿದರು.

ಜಿಟಿಡಿ ಮಾತಾಡಿದ್ರೆ ಎಲ್ಲವೂ ಸರಿಯಾಗುತ್ತೆ

ಕುಮಾರಸ್ವಾಮಿ ವಿರುದ್ಧ ಜಿಟಿ ದೇವೇಗೌಡ ಅಸಮಾಧಾನ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಜಿಟಿ ದೇವೇಗೌಡರಿಗೆ ಅಸಮಾಧಾನ ಇರೋದು ನಿಜ. ಅವರಿಗೆ ಸ್ಥಾನಮಾನದ ಬಗ್ಗೆ ಅಸಮಾಧಾನ ಇದೆ. ಇವತ್ತು ನಾನು ಸುದ್ದಿಗೋಷ್ಠಿಗೆ ಬರೋಕೆ ಹೇಳಿದ್ದೆ ಅವರು ಬರಲಿಲ್ಲ. ಚನ್ನಪಟ್ಟಣ ಚುನಾವಣೆ ಸಮಯದಲ್ಲಿ ಪ್ರಚಾರಕ್ಕೆ ಬರುವಂತೆ ದೇವೇಗೌಡ ಕರೆ ಮಾಡಿದ್ದು ನಿಜ. ಆದರೆ ಅವರು ಬರಲಿಲ್ಲ, ಪಕ್ಷದ ಮೇಲೆ ಅವರಿಗೆ ಅಸಮಾಧಾನ ಇದೆ. ದೇವೇಗೌಡರು, ಕುಮಾರಸ್ವಾಮಿ ಜೊತೆ ಮಾತಾಡಿದ್ರೆ ಎಲ್ಲವೂ ಸರಿ ಆಗುತ್ತೆ. ಪಕ್ಷದಲ್ಲಿ ಎಲ್ಲವೂ ಸರಿ ಆಗಲಿದೆ ಅಂತ ವಿಶ್ವಾಸ ವ್ಯಕ್ತಪಡಿಸಿದರು. ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್, ವಾಮಮಾರ್ಗದಿಂದ ಗೆದ್ದಿದೆ. ಗೆದ್ದ ನಂತರ ಮಾತಿನ ದಾಟಿ ಬದಲಾಗಿ ಅವರ ಭಾವನೆಗಳು ಮಾತಿನ ಮೂಲಕ ಹೊರ ಬರುತ್ತಿದೆ. ಚನ್ನಪಟ್ಟಣದ ಅಭ್ಯರ್ಥಿ ಯಾವತ್ತಿದ್ದರೂ ಮುಳ್ಳೆ. ಡಿಸಿಎಂ ಶಿವಕುಮಾರ್ ಅವರು ಇದನ್ನ ಅರಿತುಕೊಳ್ಳಬೇಕು ಎಂದು ಆಪರೇಷನ್ ಬಗ್ಗೆ ಮಾತನಾಡಿದ್ದ ಶಾಸಕ ಸಿ.ಪಿ.ಯೋಗೇಶ್ವರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈವರೆಗೆ ನಮ್ಮ ಯಾವುದೇ ಶಾಸಕರನ್ನು ಯಾರೂ ಸಂಪರ್ಕ ಮಾಡಿಲ್ಲ. ಬೊಮ್ಮಾಯಿ, ದೇವೇಗೌಡರು ಉಳಿಸಿಕೊಂಡ ಬಂದ ಪಕ್ಷ ಇದಾಗಿದ್ದು ನಮ್ಮ ಕಾರ್ಯಕರ್ತರ ಪಡೆ ಬಲವಾಗಿದೆ ಎಂದರು.

> ದೇವೇಗೌಡರನ್ನು ಜನ ನಾಯಕರ ರೀತಿ ನೋಡುತ್ತಿದ್ದಾರೆ. ಎಲ್ಲ ಸಮಾಜಕ್ಕೂ ಅವರ ಪರ ಗೌರವ ಇದೆ. ಸೋತರು, ಗೆದ್ದರೂ ಜೆಡಿಎಸ್ ಪಕ್ಷ ಜಗ್ಗುವುದಿಲ್ಲ. ದೇವೇಗೌಡರ ಬಗ್ಗೆ ಮಾತಾಡೋಕೆ ಯೋಗೇಶ್ವರ್‌ಗೆ ಯೋಗ್ಯತೆಯೂ ಇಲ್ಲ , ನೈತಿಕತೆಯೂ ಇಲ್ಲ
>
> **ಸುರೇಶ್ ಬಾಬು,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸಿಎಂ ಕುಟುಂಬದ ವಿರುದ್ಧ ಕೇಸು

ಮೈಸೂರು: ಮುಡಾ ಹಗರಣ ವಿಚಾರ ಕುರಿತು ನಾನಾ ಹಂತಗಳಲ್ಲಿ ತನಿಖೆ ನಡೆಯುತ್ತಿರುವ ಸಂದರ್ಭದಲ್ಲೇ ಸಿಎಂ ಸಿದ್ದರಾಮಯ್ಯ ಕುಟುಂಬದ ವಿರುದ್ಧ ಇದೀಗ ಮತ್ತೊಂದು ಕೇಸ್ ದಾಖಲಾಗುವ ಮೂಲಕ ಪ್ರಕರಣಕ್ಕೆ ಮತ್ತೊಂದು ತಿರುವು ಸಿಕ್ಕಿದೆ. ಪ್ರಕರಣದ ನಾಲ್ಕನೇ ಆರೋಪಿ ಜೆ.ದೇವರಾಜು ಅವರ ಅಣ್ಣ ಮೈಲಾರಯ್ಯ ಅವರ ಮಗಳು ಜಮುನಾ ಎಂಬುವವರು ಸಿಎಂ ಪತ್ನಿ ಬಿ.ಎನ್.ಪಾರ್ವತಿ ಅವರ ವಿರುದ್ಧ ಮೈಸೂರಿನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಸಿಎಂ ಸಿದ್ದರಾಮಯ್ಯ ತಮ್ಮ ಜಮೀನು ಎಂದು ಹೇಳುವ ಸಂಬಂಧ ಪ್ರಕರಣ ದಾಖಲಿಸಿದ್ದಾರೆ.

ಕೆಸರೆ ಗ್ರಾಮದ ಸರ್ವೆ ನಂಬರ್ 464 ರ ಜಮೀನಿನಲ್ಲಿ ನಮಗೂ ಭಾಗ ಬರಬೇಕು. ಪಿತ್ರಾರ್ಜಿತ ಆಸ್ತಿಯಲ್ಲಿ ನನಗೂ ಪಾಲು ಕೊಡಿ ಎಂದು ಜಮುನಾ ಅವರು ಸಿಎಂ ಸಿದ್ದರಾಮಯ್ಯ ಕುಟುಂಬದ ವಿರುದ್ಧ ಮೈಸೂರಿನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

ಸರ್ವೆ ನಂ.464ರ 3.16 ಎಕರೆ ಭೂಮಿ ಇದಾಗಿದ್ದು, ಸಿಎಂ ಸಿದ್ದರಾಮಯ್ಯ ಬಾಮೈದ ಮಲ್ಲಿಕಾರ್ಜುನಸ್ವಾಮಿ ವಿರುದ್ಧ ಕೂಡ ಪ್ರಕರಣ ದಾಖಲಿಸಿದ್ದಾರೆ. ಸ್ವಂತ ದೊಡ್ಡಪ್ಪ ದೇವರಾಜು ಹಾಗೂ ಕುಟುಂಬದವರನ್ನು ಎದುರಾಳಿ ಮಾಡಿದ್ದು, ಮೈಸೂರು ಮುಡಾ ಕಮೀಷನರ್, ಜಿಲ್ಲಾಧಿಕಾರಿಯನ್ನೂ ಪಾರ್ಟಿ ಮಾಡಿದ್ದಾರೆ. ಸಿ.ಎನ್.ಆರ್ ಅಡಿ ದಾವೆ ಹೂಡಿದ್ದು, ಮಂಜುನಾಥ್ ಸ್ವಾಮಿ, ಜೆ.ದೇವರಾಜು, ಸರೋಜಮ್ಮ , ಡಿ.ಶೋಭಾ, ಡಿ.ದಿನಕರ್, ಡಿ.ಪ್ರಭಾ, ಡಿ.ಪ್ರತಿಭಾ, ಡಿ. ಶಶಿಧರ್, ಬಿ.ಎಂ.ಮಲ್ಲಿಕಾರ್ಜುನ್ ಸ್ವಾಮಿ, ಡಿ.ಎನ್.ಪಾರ್ವತಿ, ಮುಡಾ ಆಯುಕ್ತ, ಹಾಗೂ ಮೈಸೂರು ಜಿಲ್ಲಾಧಿಕಾರಿಗಳು ಎಂದು ಉಲ್ಲೇಖಿಸಿದ್ದಾರೆ.

ಮುಡಾ ಹಗರಣ ಸಂಬಂಧ ಸಿಬಿಐ ತನಿಖೆಗೆ ಕೋರಿ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಈಗಾಗಲೇ ಹೈಕೋರ್ಟ್ ಡಿಸೆಂಬರ್ 10ಕ್ಕೆ ಮುಂದೂಡಿದೆ. ಈ ನಡುವೆ ಹಗರಣ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ತನಿಖೆ ನಡೆಸಿದ್ದು ಡಿಸೆಂಬರ್ 10ರಂದು ವರದಿ ಸಲ್ಲಿಕೆಗೆ ಕೋರ್ಟ್ ಸೂಚಿಸಿದೆ.

ಕೋಮು ವೈಷಮ್ಯ ಪೋಸ್ಟ್: ಬಂಧನ

ತುಮಕೂರು: ಸಾಮಾಜಿಕ ಜಾಲತಾಣ ದಲ್ಲಿ ಕೋಮು ವೈಷಮ್ಯದ ಪೋಸ್ಟ್ ಹಾಕಿದ ಆರೋಪದಡಿ ಬಿಜೆಪಿ ಕಾರ್ಯಕರ್ತೆ ಶಕುಂತಲಾ ನಟರಾಜ್ ಬಂಧನ ಆಗಿದ್ದಾರೆ. ಶಕುಂತಲಾ ನಟರಾಜ್ ವಿರುದ್ಧ ನ.24ರಂದು ಎಫ್‌ಐಆರ್ ದಾಖ ಲಾಗಿತ್ತು. ಈ ಹಿನ್ನೆಲೆ ತುಮಕೂರು ಜಯನಗರ ಪೊಲೀಸರು ಶಕುಂತ ಲಾರನ್ನು ಬಂಧಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಕೋಮು ವೈಷಮ್ಯದ ಪೋಸ್ಟ್ ಹಾಕಿದ ಹಿನ್ನೆಲೆ ಪೊಲೀಸ್ ಕಾನ್ಸ್ಟೆಬಲ್ ಉಮಾಶಂಕರ್ ದೂರು ನೀಡಿದ್ದರು. ಅದರಂತೆ ಕಲಂ 299 ಬಿಎನ್ಎಸ್ ಅಡಿ ಎಫ್‌ಐಆರ್ ದಾಖಲಾಗಿತ್ತು. ಬುಧವಾರ ಸಂಜೆ ಪೊಲೀಸರು ಶಕುಂತಲಾರನ್ನು ಬಂಧಿಸಿ ದ್ದಾರೆ.

ಸಮಾಚಾರ ಸಣ್ಣದಲ್ಲ

ಕಾರು ಅಪಘಾತ: ಮೂವರ ಸಾವು

ರಾಮನಗರ: ತಾಲ್ಲೂಕಿನ ಸಂಗಬಸವನದೊಡ್ಡಿ ಬಳಿ ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ರಾತ್ರಿ, ಸಂಭವಿಸಿದ ಅಪಘಾತದಲ್ಲಿ ಮಹಿಳೆ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ. ಬೆಂಗಳೂರಿನ ಶಿವಾಜಿನಗರದ ಗುಜರಿ ವ್ಯಾಪಾರಿ ಲಿಯಾಖತ್ ಅಲಿ ಖಾನ್ (55), ಪತ್ನಿ ಅಸ್ಮಾ ಪರ್ವೀನ್ (45) ಹಾಗೂ ಸ್ನೇಹಿತ ನೂರ್ ಉಲ್ಲಾ ಷರೀಫ್ (50) ಮೃತರು. ಮೈಸೂರಿನಲ್ಲಿರುವ ಪುತ್ರಿಯ ಮನೆಗೆ ಲಿಯಾಖತ್ ಅವರು ಪತ್ನಿಯೊಂದಿಗೆ ಸ್ನೇಹಿತನ ಕಾರಿನಲ್ಲಿ ಹೊರಟಿದ್ದರು. ಕಾರು ಚಾಲನೆ ಮಾಡುತ್ತಿದ್ದ ನೂರ್ ಅವರು ಸಂಗಬಸವನದೊಡ್ಡಿ ಬಳಿ ರಾತ್ರಿ 9.30ರ ಸುಮಾರಿಗೆ ನಿಯಂತ್ರಣ ಕಳೆದುಕೊಂಡಿದ್ದು, ಕಾರು ರಸ್ತೆ ವಿಭಜಕದ ಮೇಲೆ ಹತ್ತಿ ಪಲ್ಟಿಯಾಗಿ ಬೆಂಗಳೂರು ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಅಶ್ವಮೇಧ ಬಸ್ಸಿಗೆ ಡಿಕ್ಕಿ ಹೊಡೆದಿದೆ.ಡಿಕ್ಕಿಯ ರಭಸಕ್ಕೆ ಕಾರಿನಲ್ಲಿದ್ದ ಮೂವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ತೆರಳಿ ಶವಗಳನ್ನು ರಾಮನಗರ ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ವಾಹನಗಳನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಘಟನೆಯಲ್ಲಿ ಕಾರು ನಜ್ಜುಗುಜ್ಜಾಗಿದ್ದು, ಬಸ್ಸಿನ ಮುಂಭಾಗ ಹಾನಿಗೊಂಡಿದೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿಕೆ

ಸುವರ್ಣ ಸೌಧಕ್ಕೆ ಮುತ್ತಿಗೆ ಡಿ.10ರಂದು

ದಾವಣಗೆರೆ: ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ-2ಎ ಮೀಸಲಾತಿ ಮತ್ತು ಲಿಂಗಾಯತ ಉಪ ಸಮಾಜಗಳಿಗೆ ಕೇಂದ್ರ ಸರಕಾರದ ಒಬಿಸಿ ಮೀಸಲಾತಿಗೆ ಒತ್ತಾಯಿಸಿ ಡಿ.10 ರಂದು ಬೆಳಗಾವಿಯ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದ ಮೀಸಲು ಹೋರಾಟ ಪ್ರಾರಂಭಿಸಿ, ಎಲ್ಲ ಹಂತದಲ್ಲೂ ಪಾಲ್ಗೊಂಡವರು. ಹಾಗಾಗಿ ಡಿ.10ರ ಬೆಳಗಾವಿಯ ಹೋರಾಟದಲ್ಲೂ ಪಾಲ್ಗೊಳ್ಳಲಿದ್ದಾರೆ ಎಂದರು.

ಮೀಸಲಾತಿ ಹೋರಾಟದ ಸಂದರ್ಭದಲ್ಲಿ ಕಾಂಗ್ರೆಸ್‌ನಲ್ಲಿದ್ದಂತಹವರು ಬಿಜೆಪಿಯ ವಿರುದ್ಧ ಮಾತನಾಡುತ್ತಿದ್ದರು. ಈಗ ಅವರು ಸರಕಾರಕ್ಕೆ ಮುಜುಗರ ಆಗಬಾರದು ಎಂದು ಹಿಂದಿನಂತೆ ಮಾತನಾಡುತ್ತಿಲ್ಲ. ಆದರೆ, ಹೋರಾಟ ನಿಲ್ಲಿಸಿಲ್ಲ. ಸರಕಾರದ ಮೇಲೆ ಒತ್ತಡ ಹಾಕುವ ಕೆಲಸ ಮಾಡುತ್ತಿದ್ದಾರೆ. ಕಾಶಪ್ಪನವರ್ ಡಿ. 1 ರಂದು ಬೆಂಗಳೂರಲ್ಲಿ ಸಭೆ ನಡೆಸುವುದಾಗಿ ಹೇಳಿದ್ದಾರೆ. ಸರಕಾರದ ಪರ ಏನೇ ಮಾಡಿದರೂ, ಮಾತನಾಡಿದರೂ ಎಲ್ಲರೂ ಡಿ.10ರ ಹೋರಾಟದಲ್ಲಿ ಭಾಗವಹಿಸುವರು ಎಂಬ ವಿಶ್ವಾಸ ತಮಗಿದೆ ಎಂದರು.

ಜಿಮ್ಸ್ ಆಸ್ಪತ್ರೆ ನವಜಾತ ಶಿಶು ಅಪಹರಣ ಪ್ರಕರಣ

30 ಗಂಟೆಯೊಳಗೆ ತಾಯಿಯ ಮಡಿಲು ಸೇರಿದ ನವಜಾತ ಶಿಶು

ಕಲಬುರಗಿ: ಜಿಮ್ಸ್ ಆಸ್ಪತ್ರೆಯಲ್ಲಿ ಸೋಮವಾರ ಮಧ್ಯಾಹ್ನ ನವಜಾತ ಶಿಶುವನ್ನು ಅಪಹರಣ ಮಾಡಿದ ವಿಡಿಯೊ ಎಲ್ಲೆಡೆ ವೈರಲ್ ಆಗಿ, ರಾಜ್ಯಾದ್ಯಂತ ಸದ್ದು ಮಾಡಿದ್ದ ಬೆನ್ನಲ್ಲೇ, ನಗರ ಪೊಲೀಸ್ ಅಧಿಕಾರಿಗಳು ಚುರುಕಿನ ಕಾರ್ಯಾಚರಣೆ ನಡೆಸುವ ಮೂಲಕ ಪುಟ್ಟ ಕಂದಮ್ಮ ಮತ್ತೆ ತನ್ನ ತಾಯಿಯ ಮಡಿಲು ಸೇರುವ ಹಾಗೇ ಮಾಡಿದ್ದಾರೆ. ಪೊಲೀಸರ ಈ ಕಾರ್ಯಕ್ಕೆ ಜಿಲ್ಲೆಯಲ್ಲಿ ಬಾರಿ ಮೆಚ್ಚುಗೆ ವ್ಯಕ್ತವಾಗಿದೆ.

ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದ ದಂಪತಿಗಳಾದ ರಾಮಕೃಷ್ಣ ಸಗರ ಹಾಗೂ ಕಸ್ತೂರಿ ದಂಪತಿಯ ಗಂಡು ಮಗುವನ್ನು ನರ್ಸ್ ವೇಷದಲ್ಲಿ ಆಗಮಿಸಿದ ಇಬ್ಬರು ಮಹಿಳೆಯರು ಜಿಮ್ಸ್ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಚಿಕಿತ್ಸಾ ಘಟಕದಿಂದ ಅಪಹರಣ ಮಾಡಿದ ವಿಡಿಯೊ ಬಾರಿ ವೈರಲ್ ಆಗಿತ್ತು. ಈ ಕುರಿತು ನಗರ ಪೊಲೀಸ್ ಅಧಿಕಾರಿಗಳು ನಡೆಸಿದ 30 ಗಂಟೆಗಳ ಸತತ ಕಾರ್ಯಾಚರಣೆಯಿಂದಾಗಿ ಇದೀಗ ತಾಯಿ-ಮಗು ಒಂದುಗೂಡುವಂತಾಗಿದ್ದು, ಬೇರ್ಪಟ್ಟ ತಾಯಿ-ಮಗುವನ್ನು ಕೇವಲ ಒಂದೇ ದಿನದಲ್ಲಿ ಸೇರಿಸಿರುವ ಪೊಲೀಸರ ಕೆಲಸಕ್ಕೆ ಸಾರ್ವಜನಿಕರು ಸಾಮಾಜಿಕ ಜಾಲತಾಣದಲ್ಲಿ ಬಾರಿ ಪ್ರಶಂಸೆ ವ್ಯಕ್ತಪಡಿಸಿ, ಶಬ್ಬಾಸ್ ನೀಡಿದ್ದಾರೆ.

ಬಳ್ಳಾರಿಯಲ್ಲಿ ಮುಂದುವರಿದ ಸರಣಿ ಸಾವು

ಬಿಮ್ಸ್‌ನಲ್ಲಿ ಹೆರಿಗೆ ಬಳಿಕ ಬಾಣಂತಿ ಸಾವು: ಆಕ್ರೋಶ

ಬಳ್ಳಾರಿ: ಜಿಲ್ಲೆಯಲ್ಲಿ ಬಾಣಂತಿಯರ ಸಾವಿನ ಸಂಖ್ಯೆ ಮುಂದುವರಿದಿದ್ದು, ವೈದ್ಯರ ವಿರುದ್ಧ ಸಾರ್ವಜನಿಕರ ಆಕ್ರೋಶ ವ್ಯಾಪಕವಾಗಿದೆ.

ಇತ್ತೀಚೆಗಷ್ಟೇ ಜಿಲ್ಲಾಸ್ಪತ್ರೆಯಲ್ಲಿ ಸಿಸೇರಿ ಯನ್ ಮಾಡಿಸಿಕೊಂಡ ಬಳಿಕ ಮೂವರು ಬಾಣಂತಿಯರು ಸಾವನ್ನಪ್ಪಿದ್ದರು. ಸೋಮ ವಾರ ರಾತ್ರಿ ಹೊಸಪೇಟೆ ಮೂಲದ ಮುಸ್ಕಾನ್ (22) ಮಂಗಳವಾರ ಮೃತಪಟ್ಟಿದ್ದರು.

ಈ ಬೆನ್ನಲ್ಲೇ ಬಿಮ್ಸ್ ಆಸ್ಪತ್ರೆಯಲ್ಲಿ ಹೆರಿಗೆ ಬಳಿಕ ಬಾಣಂತಿ ಸಾವನ್ನಪ್ಪಿರುವ ಘಟನೆ ಬೆಳಕಿಗೆ ಬಂದಿದೆ. ಕೂಡ್ಲಿಗಿ ತಾಲೂಕಿನ ಹಾಲಸಾಗರ ಗ್ರಾಮದ ಮಹಾಲಕ್ಷ್ಮೀ (20) ಸಾವಿಗೀಡಾದ ಮಹಿಳೆ. ಭಾನುವಾರ ನಾರ್ಮಲ್ ಹೆರಿಗೆಯಾ ಗಿದ್ದ ಮಹಾಲಕ್ಷ್ಮೀಗೆ ಗಂಡು ಮಗುವಿಗೆ ಜನಿಸಿತ್ತು. ಹೆರಿಗೆ ಬಳಿಕ ಮಹಾಲಕ್ಷ್ಮೀಗೆ ಆರೋಗ್ಯದಲ್ಲಿ ಏರುಪೇರಾಗಿತ್ತು, ಹೀಗಾಗಿ ಐಸಿಯುನಲ್ಲಿ ಇಟ್ಟು ಮೂರು ದಿನ ಚಿಕಿತ್ಸೆ ನೀಡಿದ್ದರು. ವೈದ್ಯರ ನಿರ್ಲಕ್ಷ್ಯದಿಂದ ಮಹಾಲಕ್ಷ್ಮೀ ಸಾವಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಆಸ್ಪತ್ರೆಗೆ ಕರೆತರುವ ಮುನ್ನ ಮಹಾಲಕ್ಷ್ಮೀಗೆ ಚೆನ್ನಾಗಿದ್ದಳು ಎಂದು ದೂರಿದ್ದಾರೆ.

ಮಹಾಲಕ್ಷ್ಮೀಗೆ ರಕಹೀನತೆ ಇತ್ತು

ಈ ಕುರಿತು ಬಿಮ್ಸ್ ವೈದ್ಯರು ಹಾಗೂ ನಿರ್ದೇಶಕ ಗಂಗಾಧರ ಗೌಡ ಸ್ಪಷ್ಟನೆ ನೀಡಿದ್ದು, ಮಹಾಲಕ್ಷ್ಮೀಗೆ ರಕ್ತಹೀನತೆ ಇತ್ತು, ಮೊದಲು ಅವರು ಕೂಡ್ಲಿಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದಿದ್ದರು. ಅಲ್ಲಿ ಆರೋಗ್ಯದಲ್ಲಿ ಏರುಪೇರಾಗಿದ್ದು, ನಂತರ ಇಲ್ಲಿಗೆ ಕರೆದುಕೊಂಡು ಬಂದಿದ್ದರು. ನಾವು ಮೊದಲೇ ತಿಳಿಸಿದ್ದೆವು, ಅಲ್ಲದೇ ನಮ್ಮ ಪ್ರಯತ್ನ ನಾವು ಮಾಡಿದ್ದೇವೆ ಎಂದು ತಿಳಿಸಿದ್ದಾರೆ. ಸದ್ಯ ಆಸ್ಪತ್ರೆ ಆವರಣದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಬಿಮ್ಸ್ ಆಸ್ಪತ್ರೆಯಲ್ಲಿ ನಡೆದಿರುವ ಈ ಪ್ರಕರಣಗಳು ರಾಜ್ಯಾದ್ಯಂತ ಚರ್ಚೆಗೆ ಕಾರಣವಾಗಿವೆ.

ವಿಶ್ವವಾಣಿ

ಸಂಪಾದಕೀಯ

ಜಾಲತಾಣಗಳ ನಿಯಂತ್ರಣ ಅಗತ್ಯ

ಸಾಮಾಜಿಕ ಜಾಲತಾಣಗಳಲ್ಲಿ ಅಸಭ್ಯ ಪೋಸ್ಟ್‌ಗಳನ್ನು ತಡೆಯಲು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಇನ್ನಷ್ಟು ಕಠಿಣಗೊಳಿಸುವ ಅಗತ್ಯವಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಗೆ ತಿಳಿಸಿದ್ದಾರೆ. ಇದು ನಿಜಕ್ಕೂ ಜರೂರಿನ ವಿಚಾರ. ಸಾಮಾಜಿಕ ಮಾಧ್ಯಮ ಸಾಂಪ್ರದಾಯಿಕ ಮಾಧ್ಯಮಗಳಿಗಿಂತ ಭಿನ್ನ. ಇಲ್ಲಿನ ಸ್ವಾತಂತ್ರ್ಯ ಅನಿಯಂತ್ರಿತವಾಗಿದೆ. ಇಲ್ಲಿ ಯಾರು ಬೇಕಾದರೂ ತಮಗೆ ತೋಚಿದ ಪೋಸ್ಟ್‌ಗಳನ್ನು ಹಾಕಬಹುದು. ಮೊಬೈಲ್ ಎಂಬ ಸಾಧನದ ಮೂಲಕ ಸಾಮಾಜಿಕ ಮಾಧ್ಯಮಗಳು ಪ್ರತಿಯೊಬ್ಬರನ್ನು ತಲುಪುತ್ತಿವೆ. ಇದನ್ನು ಸದುಪಯೋಗಪಡಿಸಿಕೊಂಡು ಯಾರು ಬೇಕಾದರೂ ಕ್ಷಣಾರ್ಧದಲ್ಲಿ ತಮ್ಮ ವಿಚಾರ, ಕೌಶಲ, ಪ್ರತಿಭೆಯನ್ನು ಜಗತ್ತಿಗೆ ತಿಳಿಸಲು ಸಾಧ್ಯ. ಆದರೆ ಕೆಲವರು ಈ ಮಾಧ್ಯಮವನ್ನು ದುರ್ಬಳಕೆ ಮಾಡಿಕೊಂಡು ಅಶ್ಲೀಲ, ಅಸಭ್ಯ ಮತ್ತು ಸಮಾಜಕ್ಕೆ ಮಾರಕವಾದ ಸಂದೇಶಗಳನ್ನು ಹರಡುತ್ತಿರುವುದು ದುರದೃಷ್ಟಕರ. ಈ ನಿಟ್ಟಿನಲ್ಲಿ ಕೇಂದ್ರ ಸಚಿವರ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಅಸಭ್ಯ ಮತ್ತು ಲೈಂಗಿಕ ವಿಷಯಗಳ ಪ್ರಸಾರವನ್ನು ಪರಿಶೀಲಿಸಲು ಅಸ್ತಿತ್ವದಲ್ಲಿರುವ ಕಾನೂನುಗಳ ಕುರಿತು ಬಿಜೆಪಿ ಸದಸ್ಯ ಅರುಣ್ ಗೋವಿಲ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವ ಅಶ್ವಿನಿ ವೈಷ್ಣವ್, ಅಸ್ತಿತ್ವದಲ್ಲಿರುವ ಕಾನೂನು ಗಳನ್ನು ಇನ್ನಷ್ಟು ಕಠಿಣಗೊಳಿಸಲು ಸರಕಾರ ಉದ್ದೇಶಿಸಿದೆ ಎಂದಿದ್ದಾರೆ. ಈ ತಿದ್ದುಪಡಿ ಕೇವಲ ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ ಪೋಸ್ಟ್ ಮೇಲೆ ಸೀಮಿತವಾಗಬಾರದು. ಸಾಮಾಜಿಕ ಜಾಲತಾಣ ಬಳಸಿ ದೇಶದ್ರೋಹಿ ಕೃತ್ಯ ಗಳಿಗೆ ಪ್ರೇರಣೆ ನೀಡುವವರು, ಆನ್‌ಲೈನ್ ವಂಚನೆ ಎಸಗುವವರು, ಸುಳ್ಳು ಜಾಹೀರಾತು ನೀಡಿ ವಂಚಿಸುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳ ಬೇಕಾಗಿದೆ. ಸಾಮಾಜಿಕ ಮಾಧ್ಯಮಗಳನ್ನು ಬಳಸಿ ವಿಮಾನಯಾನ ಸಂಸ್ಥೆಗಳಿಗೆ ಹುಸಿ ಬಾಂಬ್ ಬೆದರಿಕೆ ಹಾಕುವ ಕೃತ್ಯಗಳು ವರದಿಯಾಗುತ್ತಿವೆ. 'ಎಕ್ಸ್', ಫೇಸ್‌ಬುಕ್‌ನಂಥ ಜಾಲತಾಣಗಳು ಇವುಗಳ ಮೂಲ ಪತ್ತೆ ಮಾಡು ವಲ್ಲಿ ಸರಕಾರ ದೊಂದಿಗೆ ಸ್ಪಂದಿಸಿಲ್ಲ. ಅಂತಾರಾಷ್ಟ್ರೀಯ ಸಂದೇಶವಾಹಕ ಜಾಲತಾಣಗಳು ನೆಲದ ಕಾನೂನಿಗೆ ಬದ್ಧರಾಗಿರಬೇಕು. ಈ ಸಂಬಂಧವೂ ಸ್ಪಷ್ಟ ನೀತಿ ಮತ್ತು ಕಾನೂನು ಅಗತ್ಯವಿದೆ.

ಸೊಂಪಾದಕೀಯ

ಇವಿಎಂ ಪ್ರೊಡಕ್ಷನ್ಸ್

ಭಾರತದಲ್ಲಿ ಎಲೆಕ್ಷನ್ ಮುಗಿದಾಗಲೆಲ್ಲಾ, ಅಂದರೆ ಎಲೆಕ್ಷನ್ ರಿಸಲ್ಟ್ ಬಂದಾಗಲೆಲ್ಲಾ ಕೇಳಿಬರುವ ಮಾತು ಅಂದ್ರೆ ಇವಿಎಂ ದೋಷ ಅನ್ನೋದು. ಅದರಲ್ಲೂ ಬಿಜೆಪಿ ಗೆದ್ದಾಗ ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಈ ಮಾತನ್ನು ಹೇಳೋದು ಕಾಮನ್ ಆಗಿದೆ. ಯಾಕಂದ್ರೆ ಕಾಮನ್ ಮ್ಯಾನ್ ಬಿಜೆಪಿಗೆ ವೋಟು ಹಾಕಲ್ಲ ಅವನು ನಮಗೇ ಮತ ಹಾಕೋದು ಅನ್ನೋದು ಕಾಂಗ್ರೆಸ್ ಪಕ್ಷದ ಮೂಢನಂಬಿಕೆ. ಹಾಗಾಗಿ ಈಗ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದ ಕೂಡಲೆ ಮತ್ತೊಮ್ಮೆ ವಿರೋಧ ಪಕ್ಷಗಳು ಇವಿಎಂ ಹ್ಯಾಕ್ ಮಾಡಿ ಬಿಜೆಪಿ ಗೆದ್ದಿದೆ ಅಂತ ಹುಯಿಲೆಬ್ಬಿಸುತ್ತಿವೆ. ಆದರೆ ಅದೇ ಬಿಜೆಪಿ ಜಾರ್ಖಂಡ್‌ನಲ್ಲಿ ನೆಲಕಚ್ಚಿದೆ. ಆದರೆ ಅಲ್ಲಿನ ಇವಿಎಂ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಕರ್ನಾಟಕದ ಉಪಚುನಾವಣೆಯಲ್ಲೂ ಕಾಂಗ್ರೆಸ್ ಮೂರಕ್ಕೇರಿದೆ. ಇಲ್ಲೂ ಇವಿಎಂನ ಸದ್ದಿಲ್ಲ. ಇದೇ ಸಮಯದಲ್ಲಿ ಸುಪ್ರೀ ಕೋರ್ಟ್‌ನಲ್ಲಿ ಈ ಇವಿಎಂ ಬೇಡ, ಬ್ಯಾಲೆಟ್ ಪೇಪರ್ ಬೇಕು ಅಂತ ಹಾಕಿದ್ದ ಕೇಸೊಂದು ವಜಾ ಆಗಿದೆ. ಮತಯಂತ್ರಗಳ ಬಗೆಗಿನ ಟೀಕೆ ಚುನಾವಣಾ ಸುಧಾರಣೆಗೆ ಮಾರಕ, ಇವಿಎಂಗಳನ್ನು ಹ್ಯಾಕ್ ಮಾಡಬಹುದು ಅನ್ನೋ ಮಾತಲ್ಲಿ ಯಾವುದೇ ಹುರುಳಿಲ್ಲ ಅಂತ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಕೇಸು ಹಾಕಿದ ಕಕ್ಷಿದಾರರ ಪರ ವಕೀಲರು, ಚಂದ್ರಬಾಬುನಾಯ್ಡು, ಜಗನ್ ಮೋಹನ್ ರೆಡ್ಡಿ ಅವರು 'ಇವಿಎಂನಲ್ಲಿ ನಂಬಿಕೆ ಇಲ್ಲ' ಅಂತ ಹೇಳಿದ್ದನ್ನು ಉಲ್ಲೇಖ ಮಾಡಿದಾಗ, ನ್ಯಾಯಾಧೀಶರು ಅದೇ ಜಗನ್ ಮತ್ತು ನಾಯ್ಡು ಗೆದ್ದಾಗ ಇವಿಎಂ ಬಗ್ಗೆ ಯಾಕೆ ಮಾತಾಡಲ್ಲ, ಅವರ ಮಾತು ಕೇಳಿ ತೀರ್ಪು ಕೊಡೋಕೆ ಸಾಧ್ಯ ಇಲ್ಲ ಅಂತ ತಿರುಗೇಟು ನೀಡಿದ್ದಾರೆ. ಜಾಗತಿಕ ಮಟ್ಟದಲ್ಲಿ ಇವಿಎಂ ಬಳಸುತ್ತಿರುವ ದೇಶಗಳ ಸಂಖ್ಯೆ ಕಡಿಮೆ ಇದ್ದರೂ ಇತ್ತೀಚೆಗೆ ಇವಿಎಂ ಒಲವು ಹೆಚ್ಚಾಗಿದೆ. ಇದನ್ನು ಈಗ ಸುಪ್ರೀಂ ಕೋರ್ಟ್ ಕೂಡಾ ಅನುಮೋದನೆ ಮಾಡಿದೆ. ಈ ತೀರ್ಪಿನಿಂದ ಈಗ ಕಂಗಾಲಾಗಿರೋದು ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು. ಅವಕ್ಕೆ ಇವಿಎಂ ಸಿಸ್ಟಮ್ ಬದಲಾಗಲ್ಲ ಅನ್ನೋದಕ್ಕಿಂತ, ಇನ್ನು ಮುಂದೆ ಚುನಾವಣೆಯಲ್ಲಿ ಸೋತ ಬಳಿಕ ಹೇಳಲು ಯಾವ ಹೊಸ ನೆಪ ಹುಡುಕಬೇಕು ಅನ್ನೋದೇ ಚಿಂತೆ ಆಗಿದೆಯಂತೆ.

ಸಂಪಾದಕರ ಸದ್ಯಶೋಧನೆ

ಬುಲೆಟ್ ಟ್ರೇನಿನ ಶಿಷ್ಟಾಚಾರಗಳು

ಜಗತ್ತಿನಲ್ಲಿಯೇ ಜಪಾನಿನ ಬುಲೆಟ್ ಟ್ರೇನ್ ಸರ್ವೋತ್ಕೃಷ್ಟ ಎಂದು ಹೆಸರುವಾಸಿಯಾಗಿದೆ. ಬುಲೆಟ್ ಟ್ರೇನ್ ಆರಂಭವಾಗಿ 60 ವರ್ಷ (ಅಕ್ಟೋಬರ್ 1,1964) ಗಳಾದರೂ ಇಲ್ಲಿ ತನಕ, ಯಾವ ದುರಂತ ಸಂಭವಿಸದೇ ಇರುವುದರಿಂದ, ಅದು ಅತ್ಯಂತ ವಿಶ್ವಾಸಾರ್ಹ ಮತ್ತು ಸುರಕ್ಷಿತ ಸಾರಿಗೆ ವ್ಯವಸ್ಥೆ ಎಂದು ಕರೆಯಿಸಿಕೊಂಡಿದೆ. ಇಡೀ ವ್ಯವಸ್ಥೆಯಲ್ಲಿ ಯಾವ ದೋಷವೂ ಇಲ್ಲದಿರುವುದು ಅದರ ದಕ್ಷತೆ ಮತ್ತು ಕಾರ್ಯಕ್ಷಮತೆ ಬಗ್ಗೆ ಸಂಪೂರ್ಣ ವಿಶ್ವಾಸ ನೆಲೆಸುವಂತೆ ಮಾಡಿದೆ. ಇಂಥ ಬುಲೆಟ್ ಟ್ರೇನಿನಲ್ಲಿ ಪ್ರಯಾಣ ಮಾಡುವಾಗ ಕೆಲವು ಶಿಷ್ಟಾಚಾರ ಮತ್ತು ಸಾಮಾಜಿಕ ಅಭ್ಯಾಸಗಳನ್ನು ಪಾಲಿಸಬೇಕೆಂದು ಅಪೇಕ್ಷಿಸಲಾಗಿದೆ. ಬುಲೆಟ್ ಟ್ರೇನಿನಲ್ಲಿ ಒಂದು ಹ್ಯಾಂಡ್ ಬ್ಯಾಗ್ ಅಥವಾ ಕ್ಯಾಬಿನ್ ಬ್ಯಾಗ್ ಹೊರತಾಗಿ ಮತ್ತೇನನ್ನೂ ಒಯ್ಯುವಂತಿಲ್ಲ. ಪ್ರಯಾಣಿಕರ ಸರಾಗ ಓಡಾಟಕ್ಕೆ ತೊಂದರೆಯಾಗುವುದರಿಂದ ಮತ್ತು ಬ್ಯಾಗನ್ನು ಮೇಲೆ ಎತ್ತಿ ಇಡುವುದು, ಇಳಿಸುವುದು ಕಷ್ಟವಾಗುವುದರಿಂದ ದೊಡ್ಡ ಗಾತ್ರದ ಸೂಟ್‌ಕೇಸನ್ನು ಒಳಗೆ ಬಿಡುವುದಿಲ್ಲ. ಪ್ರಯಾಣಿಕರು ಓಡಾಡುವ ಮಾರ್ಗದಲ್ಲಿ ಯಾವ ಬ್ಯಾಗುಗಳನ್ನೂ ಇಡುವಂತಿಲ್ಲ. ರಿಸರ್ವೇಶನ್ ಹೊಂದಿದವರು ಬೋಗಿಯ ಹಿಂಭಾಗದಲ್ಲಿ ದೊಡ್ಡ ಸೂಟ್‌ಕೇಸುಗಳನ್ನು ಇಡಬಹುದು. ಅರ್ಬನ್ ಮತ್ತು ಲೋಕಲ್ ಟ್ರೇನುಗಳಲ್ಲಿ ಆಹಾರ ಪದಾರ್ಥಗಳನ್ನು ಸೇವಿಸುವುದು ಒರಟು ವರ್ತನೆ ಎಂದು ಕರೆಯಿಸಿಕೊಳ್ಳುತ್ತದೆ. ಟ್ರೇನು ಚಲಿಸುವಾಗ, ಆಹಾರವನ್ನು ಸೇವಿಸಿದರೆ ಅದು ಕೆಳಗೆ ಅಥವಾ ಅಕ್ಕ-ಪಕ್ಕದಲ್ಲಿದ್ದವರ ಮೇಲೆ ಬೀಳಬಹುದು ಮತ್ತು ಆಹಾರದ ವಾಸನೆ ಪಕ್ಕದವರಿಗೆ ಕಿರಿಕಿರಿಯಾಗಬಹುದು ಎಂಬ ಕಾರಣಕ್ಕೆ ಸಾಮಾನ್ಯವಾಗಿ ಯಾರೂ ಆಹಾರ ಸೇವಿಸುವುದಿಲ್ಲ. ಆದರೆ ನೀರು ಕುಡಿಯಬಹುದು. ಆದರೆ ಬುಲೆಟ್ ಟ್ರೇನ್‌ನಲ್ಲಿ ಸ್ನ್ಯಾಕ್ ಸೇವಿಸಬಹುದು. ಪ್ರಯಾಣಿಕರಿಗೆಂದೇ, ಕೆಲವು ಸ್ಟೇಷನ್‌ಗಳಲ್ಲಿ ಲಘು ತಿಂಡಿಗಳನ್ನು ಮಾರಾಟ ಮಾಡಲಾಗುತ್ತದೆ. ಅಲ್ಲಿ ಹೋಗಿ ಖರೀದಿಸಿ ಬರಬಹುದು. ಬುಲೆಟ್ ಟ್ರೇನಿನಲ್ಲಿ ಕಾಫಿ, ಟೀ ಕುಡಿಯುವುದು ಸಹ ಒಳ್ಳೆಯ ವರ್ತನೆಯಲ್ಲ. ಕೋಕ್ ಮತ್ತು ಸೋಡಾ ಬಾಟಲಿ ಓಪನ್ ಮಾಡುವಾಗ ಅದು ಹೊರಗೆ ಚೆಲ್ಲದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಪಕ್ಕದಲ್ಲಿದ್ದವರ ಜತೆ ಮಾತಾಡಬಹುದು, ಆದರೆ ಮೆಲುದನಿಯಲ್ಲಿ. ಜೋರಾಗಿ ಮಾತಾಡುವುದು, ಕೇಕೆ ಹಾಕುವುದು, ಹಾಡುವುದು ಇವೆಲ್ಲ ನಿಷಿದ್ಧ. ಮೊಬೈಲ್ ಫೋನಿನಲ್ಲಿ ಜೋರಾಗಿ ಮಾತಾಡುವಂತಿಲ್ಲ. ಮೊಬೈಲ್‌ನಲ್ಲಿ ಮಾತಾಡುವಾಗಲೂ ಒಳದನಿಯಲ್ಲಿದ್ದರೆ ಯಾರೂ ದುರುಗುಟ್ಟಿ ನೋಡುವುದಿಲ್ಲ. ಬುಲೆಟ್ ಟ್ರೇನಿನಲ್ಲಿ ಫೋಟೋ ತೆಗೆಯುವುದು ಮತ್ತು ವಿಡಿಯೋ ಮಾಡುವುದು ಒಳ್ಳೆಯ ನಡತೆಯಲ್ಲ, ಅಲ್ಲಿ ಸಿಗರೇಟು ಸೇದುವಂತಿಲ್ಲ. ಆದರೆ ಸ್ಮೋಕಿಂಗ್ ಕಾರ್ ವ್ಯವಸ್ಥೆ ಇರುವ ಬುಲೆಟ್ ಟ್ರೇನುಗಳಲ್ಲಿ ಸಿಗರೇಟು ಸೇದಬಹುದು. ಬಾಗಿಲ ಹತ್ತಿರದಲ್ಲಿರುವ ಆಸನಗಳು ವಯಸ್ಸಾದವರಿಗೆ, ವಿಕಲಚೇತನರಿಗೆ, ಗರ್ಭಿಣಿಯರಿಗೆ ಮತ್ತು ಮಕ್ಕಳನ್ನು ಎತ್ತಿಕೊಂಡವರಿಗೆ ಮೀಸಲು. ಈ ಆಸನಗಳ ಬಣ್ಣವೇ ಬೇರೆ. ಆಸನಗಳನ್ನು ಹಿಂದಕ್ಕೆ ಬಾಗಿಸುವಾಗ, ಹಿಂದಿನವರನ್ನು ಗಮನಿಸುವುದು ಲೇಸು. ಬುಲೆಟ್ ಟ್ರೇನಿನಲ್ಲಿ ಪತ್ರಿಕೆಗಳನ್ನು ಓದಬಹುದು, ಆದರೆ ಎದ್ದು ಹೋಗುವಾಗ ಅದನ್ನು ತೆಗೆದುಕೊಂಡು ಹೋಗಬೇಕು. ಪತ್ರಿಕೆಗಳನ್ನು ಬೇರೆಯವರ ಮುಖದ ತನಕ ತೆಗೆದುಕೊಂಡು ಹೋಗುವುದು ಸಭ್ಯ ನಡತೆ ಅಲ್ಲ. ಓದಿದ ಪತ್ರಿಕೆಗಳನ್ನು ಬಿಟ್ಟು ಹೋಗುವುದು ರದ್ದಿ ಅಥವಾ ಕಸ ಎಂದೇ ಕರೆಯಿಸಿಕೊಳ್ಳುತ್ತದೆ. ಬುಲೆಟ್ ಟ್ರೇನಿನಲ್ಲಿ ಚಾಕಲೇಟ್ ಹೊದಿಕೆಯನ್ನೂ ಚೆಲ್ಲಿ ಹೋಗುವುದನ್ನು ಜಪಾನಿಯರು ಇಷ್ಟಪಡುವುದಿಲ್ಲ. ಕೆಲವರು ಖಾಲಿಯಾದ ನೀರಿನ ಬಾಟಲಿ, ಕೋಕ್ ಬಾಟಲಿ ಮತ್ತು ಚಿಪ್ಸ್ ಪ್ಯಾಕೆಟ್‌ಗಳನ್ನು ಅಲ್ಲಿಯೇ ಬಿಟ್ಟು ಹೋಗುವುದನ್ನು ಸಹಿಸುವುದಿಲ್ಲ. ಬುಲೆಟ್ ಟ್ರೇನ್ ಆಗಮಿಸುತ್ತಿದ್ದಂತೆ ಬೇರೆಯವರನ್ನು ನೂಕುವಂತಿಲ್ಲ. ಮತ್ತೊಬ್ಬರಿಂದ ಕನಿಷ್ಠ ಎರಡು ಅಡಿ ಅಂತರವನ್ನಾದರೂ ಕಾಪಾಡಬೇಕು. ಯಾವ ಕಾರಣಕ್ಕೂ ತಳ್ಳಾಟ, ನೂಕುನುಗ್ಗಲಿಗೆ ಆಸ್ಪದವಿಲ್ಲ. ಟ್ರೇನ್ ಏರುತ್ತಿದ್ದಂತೆ, ಮುಂದಕ್ಕೆ ಚಲಿಸಬೇಕು. ಯಾವ ಕಾರಣಕ್ಕೂ ಬಾಗಿಲ ಹತ್ತಿರ ನಿಲ್ಲುವಂತಿಲ್ಲ. ನಿಲ್ದಾಣದಲ್ಲಿ ನಡೆಯುತ್ತಾ ಆಹಾರ ಸೇವಿಸುವುದು ಒಳ್ಳೆಯ ನಡೆಯಲ್ಲ. ನಿಲ್ದಾಣದಲ್ಲಿ ಕಾಲಿಟ್ಟು, ರೈಲು ಪ್ರಯಾಣ ಮುಗಿಸಿ, ಹೊರಬೀಳುವ ತನಕ ಎಲ್ಲೂ ಗೊಂದಲ, ಗಲಿಬಿಲಿ ಆಗುವುದಿಲ್ಲ. ಅದೇ ಸ್ವಾರಸ್ಯ.

ಭೂಕಂಪದಿಂದ ನಲುಗಿದರೂ ಆದರ್ಶಗಳಿಂದ ಭದ್ರವಾಗಿರುವ ಜಪಾನ್!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ನಾನೇನು ಜಪಾನಿನ ರಾಯಭಾರಿಯೂ ಅಲ್ಲ. ಬ್ರ್ಯಾಂಡ್ ಅಂಬಾಸಿಡರ್ ಅಲ್ಲವೇ ಅಲ್ಲ. ಅದನ್ನು ಹೊಗಳಿ ನನಗೇನೂ ಆಗಬೇಕಿಲ್ಲ ಎಂಬ ಹಕ್ಕುತ್ಯಾಗ (Disclaimer)ದೊಂದಿಗೇ ಆರಂಭಿಸುವುದು ವಾಸಿ. ಅಲ್ಲಿ ಕಂಡಿದ್ದನ್ನು, ಕೇಳಿದ್ದನ್ನು, ಆ ದೇಶದ ಬಗ್ಗೆ ಓದಿದ್ದನ್ನು ನಿಮಗೆ ಒಪ್ಪಿಸುವುದಷ್ಟೇ ನನ್ನ ಚೋದುಗ. ಅದಕ್ಕಿಂತ ಮಿಗಿಲಾದ ಹಿತಾಸಕ್ತಿ ನನಗಿಲ್ಲ.

ಜಪಾನಿನ ಬಗ್ಗೆ ಒಂದು ಮಾತನ್ನು ನಾನು ಬಹಳ ಹಿಂದೆಯೇ ಕೇಳಿದ್ದೆ. ಅದೇನೆಂದರೆ- Japan is a magical place. The more you learn, the more you know you don't know. It's a lifelong journey. ಒಂದು ವಾರ ಕಾಲ ಆ ದೇಶದಲ್ಲಿದ್ದಾಗ, ಈ ಮಾತು ಅಪ್ಪಟ ನಿಜ ಎಂದೆನಿಸಿತು.

ಸಾಮಾನ್ಯವಾಗಿ ನಾವು ಕೆಲವು ದೇಶಗಳನ್ನು ನೋಡಲು ಹೋಗುತ್ತೇವೆ. ಆದರೆ ಜಪಾನಿಗೆ ಕಲಿಯಲು ಹೋಗಬೇಕು. ಪ್ರೇರಣೆ ಪಡೆಯಲು ಹೋಗಬೇಕು. ಹಾಗಂತ ಅಲ್ಲಿ ನೋಡುವುದೂ ಸಾಕಷ್ಟಿದೆ. ಜಪಾನಿನಲ್ಲಿ ಇರುವಷ್ಟು ಹೊತ್ತು ಕಲಿಕೆ ನೂರು ನೂರು ಥರ ಮತ್ತು ನಿರಂತರ. ಒಮ್ಮೆ ಕಣ್ಣು ಅಗಲಿಸಿ ಸುತ್ತ ದೃಷ್ಟಿ ಹಾಯಿಸಿದರೆ ಸಾಕು, ಏನೋ ಒಂದು ಹೊಸ ಸಂಗತಿಯನ್ನು ನೋಡಬಹುದು. ಏನೂ ಇಲ್ಲದಿದ್ದರೂ ನಾವು ನಿಂತ ಜಾಗದ ಸ್ವಚ್ಛತೆ ನಮಗೆ ನೂರು ಪಾಠಗಳನ್ನು ಹೇಳುತ್ತದೆ. ನಮ್ಮ ಕಣ್ಣಿಗೆ ಬೀಳುವ ಜನರಿಂದ ಏನೋ ಒಂದು ಹೊಸ ಅಂಶವನ್ನು ಕಲಿಯಬಹುದು. ಏನೂ ಇಲ್ಲದಿದ್ದರೂ ಅವರಿಗೊಂದು ನಮಸ್ಕಾರ ಅಂತ ಹೇಳಿ, ಅವರು ಸೊಂಟ ಬಗ್ಗಿಸಿ, ಮೆಲು ದನಿಯಲ್ಲಿ ತಮ್ಮ ಭಾಷೆಯಲ್ಲಿ ನಮಗೆ ವಾಪಸ್ ನಮಸ್ಕಾರ ಹೇಳುವ ರೀತಿಯೇ ಅನನ್ಯ ಮತ್ತು ಆಪ್ತ. ಭಾಷೆ ಬರದಿದ್ದರೇನಾಯಿತು, ನಾನು ಅಲ್ಲಿ ಇರುವಷ್ಟು ಹೊತ್ತು, ಅಲ್ಲಿನ ಜನರೊಂದಿಗೆ, ಪರಿಸರದೊಂದಿಗೆ ಮಾತಾಡುತ್ತಲೇ ಇದ್ದೆ, ವ್ಯವಹರಿಸುತ್ತಿದ್ದೆ. ಹೊಸ ಹೊಸ ಸಂಗತಿಗಳನ್ನು ತಿಳಿದುಕೊಳ್ಳುತ್ತಲೇ ಇದ್ದೆ. ಜಪಾನ್ ಇಷ್ಟವಾಗುವುದು ಈ ಕಾರಣಕ್ಕೆ.

ಟೋಕಿಯೋಕ್ಕೆ ಬಂದ ಮರುದಿನ, ಎಂಟನೇ ಮಹಡಿಯಲ್ಲಿನ ಹೋಟೆಲ್ ಕಾರಿಡಾರ್‌ನಲ್ಲಿ ಬರುವಾಗ, ಅಲ್ಲಿಯೇ ಇದ್ದ ಪರಿಚಾರಿಕೆಯನ್ನು 'ಬ್ರೆಕ್‌ಫಾಸ್ಟ್ ಹಾಲ್' ಎಷ್ಟನೇ ಮಹಡಿಯಲ್ಲಿದೆ ಎಂದು ಕೇಳಿದೆ. 'ನೆಲಮಹಡಿಯಲ್ಲಿ, ರಿಸೆಪ್ಷನ್ ಪಕ್ಕದಲ್ಲಿದೆ' ಎಂದು ಆಕೆ ಹೇಳಬಹುದಿತ್ತು. ಅದರ ಬದಲು ಆಕೆ, ತನ್ನನ್ನು ಹಿಂಬಾಲಿಸುವಂತೆ ಹೇಳಿದಳು. ಲಿಫ್ಟಿನಲ್ಲಿ ಕೆಳಗಿಳಿದು ಬಂದು, ಸುಮಾರು ಐವತ್ತು ಮೀಟರ್ ನಡೆದು ನನ್ನನ್ನು ಬ್ರೆಕ್‌ಫಾಸ್ಟ್ ಹಾಲ್ ತನಕ ಬಂದು ಬಿಟ್ಟು, ತನ್ನ ಸೊಂಟ ಬಗ್ಗಿಸಿ, 'ಎಂಜಾಯ್ ದಿ ಬ್ರೆಕ್‌ಫಾಸ್ಟ್' ಎಂದು ಹೇಳಿ ಹೊರಟುಹೋದಳು. ಅವಳ ಆ ನಡೆ ನನಗೆ ವಿಶೇಷವಾಗಿ ಕಂಡಿತು.

ಅದೇ ದಿನ ನಾನು ಹೊಸ ಶೂ ಖರೀದಿಸಲೆಂದು ಮಾಲ್‌ಗೆ ಹೊರಟಿದ್ದೆ. ಅದೋ, ಬೃಹತ್ ಮಾಲ್. ಎಲ್ಲೆಡೆ ಜಪಾನಿ ಭಾಷೆಯಲ್ಲಿಯೇ ಬರೆದ ಫಲಕಗಳು. ನನಗೆ ಹೆಚ್ಚು ಸಮಯವಿರಲಿಲ್ಲ. ಎದುರಿಗೆ ಬರುತ್ತಿದ್ದ ಮಧ್ಯವಯಸ್ಕ ದಂಪತಿಗಳನ್ನು ನಿಲ್ಲಿಸಿ, 'ನನಗೆ ಈ ಅಂಗಡಿಗೆ ಹೋಗಬೇಕು. ಅದು ಎಲ್ಲಿದೆ ಎಂಬುದು ಗೊತ್ತಾಗುತ್ತಿಲ್ಲ. ಜಪಾನಿ ಭಾಷೆಯಲ್ಲಿ ಫಲಕಗಳಿರುವುದರಿಂದ ಎಲ್ಲಿಗೆ ಹೋಗಬೇಕು ಎಂಬುದು ತಿಳಿಯುತ್ತಿಲ್ಲ. ದಯವಿಟ್ಟು ಆ ಅಂಗಡಿ ಎಲ್ಲಿದೆ ಎಂದು ಹೇಳಬಹುದಾ?' ಎಂದು ಕೇಳಿದೆ. ಅವರಿಗೆ ಅದ್ಯಾವ ತುರ್ತು ಕೆಲಸವಿತ್ತೋ, ಗೊತ್ತಿಲ್ಲ. ಅವರು ವಿರುದ್ಧ ದಿಕ್ಕಿನಡೆಗೆ ಹೆಜ್ಜೆ ಹಾಕುತ್ತಾ ತಮ್ಮನ್ನು ಹಿಂಬಾಲಿಸುವಂತೆ ನನಗೆ ಹೇಳಿದರು. ನಾನು ಅವರನ್ನು ಅನುಸರಿಸತೊಡಗಿದೆ. ಸುಮಾರು ನಾನೂರು ಮೀಟರ್ ನಡೆದು, 'ನೀವು ಹುಡುಕುತ್ತಿರುವ ಅಂಗಡಿ ಇದೇ' ಎಂದು ಹೇಳಿಹೋದರು. ಅವರು ಅಲ್ಲಿ ತನಕ ಬರಬೇಕಾದ ಅಗತ್ಯವಿರಲಿಲ್ಲ. 'ಹೀಗೆ ಹೋಗಿ, ಹಾಗೆ ಹೋಗಿ, ಬಲಕ್ಕೆ ಹೊರಳಿ, ನಂತರ ತುಸು ದೂರ ನಡೆದು ಎಡಕ್ಕೆ ತಿರುಗಿದರೆ ಅಲ್ಲಿಯೇ ನಿಮ್ಮ ಅಂಗಡಿಯಿದೆ' ಎಂದು ಹೇಳಬಹುದಿತ್ತು. ಆದರೆ ಅವರು ಅಂಗಡಿ ತನಕ ಬಂದು ನನಗೆ ಮಾರ್ಗದರ್ಶನ ಮಾಡಿ ಹೋದರು.

ಹಾಗೆ ಇನ್ನೊಂದು ಪ್ರಸಂಗ. ನಾನು ಬೆಳಗ್ಗೆ ವಾಕಿಂಗ್ ಹೋದಾಗ, ಒಂದು ಅಡ್ಡರಸ್ತೆಯಲ್ಲಿ ತಪ್ಪಾಗಿ ತಿರುಗಿದ್ದರಿಂದ ದಾರಿ ತಪ್ಪಿಸಿಕೊಂಡೆ. ಅಲ್ಲಿಯೇ ಸುತ್ತುತ್ತಿದ್ದರೂ, ನಾನು ಉಳಿದುಕೊಂಡ ಹೋಟೆಲ್ ಸಿಗುತ್ತಿರಲಿಲ್ಲ. ಆ ಬೀದಿಯಲ್ಲಿ ಬರುತ್ತಿದ್ದ ಸುಮಾರು ಎಪ್ಪತ್ತು ವರ್ಷದ ಹಿರಿಯರೊಬ್ಬರನ್ನು 'ಪ್ರಿನ್ಸ್ ಹೋಟೆಲಿಗೆ ಹೋಗುವ ದಾರಿ ಯಾವುದು?' ಎಂದು ಕೇಳಿದೆ. ಆ ವ್ಯಕ್ತಿಗೆ ಅದ್ಯಾವ ಕೆಲಸವಿತ್ತೋ, ಅವರು ತಮ್ಮ ಮಾರ್ಗ ಬದಲಿಸಿ, ಸುಮಾರು ಅರ್ಧ ಕಿ.ಮೀ. ನಡೆದು, ಹೋಟೆಲ್ ತನಕ ಬಂದು, ತಮ್ಮ ನಡು ಬಗ್ಗಿಸಿ, ಅತ್ಯಂತ ವಿಧೇಯರಾಗಿ 'ನೀವು ಹುಡುಕುತ್ತಿರುವ ಹೋಟೆಲ್ ಇದೇ' ಎಂದು ಹೇಳಿ ಹೊರಟುಹೋದರು. ನಾನು ವಿಳಾಸ ಕೇಳಿದ ಜಾಗದಲ್ಲಿಯೇ ಅವರು ನನಗೆ ಹೋಟೆಲ್ ದಾರಿಯನ್ನು ಹೇಳಬಹುದಿತ್ತು. ಆದರೆ ಅವರೇ ಖುದ್ದಾಗಿ ಹೋಟೆಲ್ ತನಕ ಬಂದು ಬಿಟ್ಟುಹೋದರು.

ನನಗೆ ಈ ಅನುಭವ, ನಮ್ಮ ದೇಶವೂ ಸೇರಿದಂತೆ, ಬೇರೆ

ಯಾವ ದೇಶದಲ್ಲೂ ಆಗಿರಲಿಲ್ಲ. ಈ ದಿನಗಳಲ್ಲಿ ಗೂಗಲ್ ಮ್ಯಾಪ್ ಇರುವುದರಿಂದ ಯಾರೂ ವಿಳಾಸ ಕೇಳುವುದಿಲ್ಲ. ಒಂದು ವೇಳೆ ಕೇಳಿದರೂ, ಅಡ್ರೆಸ್ ತನಕ ಬಂದು ಯಾರೂ ಹೇಳುವುದಿಲ್ಲ. ಆದರೆ ಟೋಕಿಯೋದಲ್ಲಿ ಯಾರನ್ನಾದರೂ ದಾರಿ, ವಿಳಾಸ ಕೇಳಿದರೆ, ತಮ್ಮ ಕೆಲಸವನ್ನು ಬದಿಗೊತ್ತಿ ನಾವು ಕೇಳಿದ ಅಡ್ರೆಸ್ ತನಕ ಬಿಟ್ಟು ಹೋಗುತ್ತಾರೆ. ಈ ಒತ್ತಡದ, ಪುರುಸೊತ್ತು ಇಲ್ಲದ ದಿನಗಳಲ್ಲಿ, ತಮ್ಮ ಕೆಲಸ-ಕಾರ್ಯ ಬದಿಗೊತ್ತಿ ಪರರ ನೆರವಿಗೆ ನಿಲ್ಲುವ ಅನನ್ಯ ಸಂಸ್ಕೃತಿಯ ಪರಿಚಯ ಎಂಥವರನ್ನಾದರೂ ಬೆರಗು ಮೂಡಿಸದೇ ಇರದು. ನಮ್ಮ ಹಳ್ಳಿಗಳಲ್ಲಿ ಯಾರದ್ದಾದರೂ ಮನೆ ಎಲ್ಲಿ ಎಂದು ಕೇಳಿದರೆ, ಆ ಮನೆ ತನಕ ಬಂದು ದಾರಿ ತೋರಿಸಿ ಹೋಗುತ್ತಿದ್ದ ಕಾಲವಿತ್ತು. ಈಗ ಯಾರೂ ಹಾಗೆ ಮಾಡುವುದಿಲ್ಲ. ಕಾರಣ ಯಾರಿಗೂ ಪುರುಸೊತ್ತು, ಸಂಯಮ ಇಲ್ಲ. ಆದರೆ ಟೋಕಿಯೋದಂಥ ವಿಶ್ವದಲ್ಲಿಯೇ ಅತಿ ಆಧುನಿಕ ಮತ್ತು ಬಿಜಿ ನಗರದಲ್ಲಿ ಇಂದಿಗೂ ಆ ಗುಣವನ್ನು ಕಾಪಾಡಿಕೊಂಡಿರುವುದು ವಿಶೇಷವೇ. ದಾರಿಹೋಕರು ವಿಳಾಸ ಕೇಳಿದರೆ, ಆ ವಿಳಾಸ ಗೊತ್ತಿದ್ದರೆ, ಅಲ್ಲಿ ತನಕ ಬಂದು ವಿಳಾಸ ತೋರಿಸಿ ಹೋಗುವುದು ಜಪಾನಿಯರ ಸಂಸ್ಕೃತಿ, ಸೌಜನ್ಯ. ಅದರಲ್ಲೂ ವಿಳಾಸ ಕೇಳಿದವರು ವಿದೇಶಿಯರಾಗಿದ್ದರೆ, ವಿಳಾಸ ಗೊತ್ತಿಲ್ಲದಿದ್ದರೂ ಬೇರೆಯವರನ್ನು ಕೇಳಿ ತಿಳಿದುಕೊಂಡು, ಅಡ್ರೆಸ್ ತನಕ ಬಂದು ಬಿಟ್ಟು ಹೋಗುವುದು ತೀರಾ ಅಪರೂಪದ ಗುಣವೇ.

ಜಪಾನಿನ ಉದ್ದಗಲಕ್ಕೆ ನಾನು ಒಂದು ವಾರ ಕಾಲ ಓಡಾಡಿದ್ದೇನೆ. ಪ್ರಮುಖವಾಗಿ ಒಸಾಕಾ, ಕ್ಯೋಟೋ, ಮೌಂಟ್ ಫ್ಯೂಜಿ, ಹನೋಕೆ ಮತ್ತು ಟೋಕಿಯೋ ನಗರಗಳಲ್ಲಿ ತಿರುಗಾಡಿದ್ದೇನೆ. ಯಾವ ಅತಿಶಯೋಕ್ತಿಯೂ ಇಲ್ಲ, ಇಡೀ ದೇಶದ ರಸ್ತೆಯಲ್ಲಿ ಒಂದೇ ಒಂದು ಉಬ್ಬಾಗಲಿ, ತಗ್ಗಾಗಲಿ, ಹಳ್ಳವಾಗಲಿ ಕಾಣಲಿಲ್ಲ. ಸ್ಯಾಂಪಲ್ಲಿಗೆ ಅಂತ ಒಂದು ಸಣ್ಣ ಕಸವನ್ನೂ ಕಾಣುವ 'ಭಾಗ್ಯ' ನನಗೆ ಸಿಗದೇ ಹೋಯಿತು. ನಮ್ಮ ಮನೆಯ ಜಗುಲಿಗಿಂತ ಆ ದೇಶದ ರಸ್ತೆ ಸ್ವಚ್ಛವಾಗಿತ್ತು. ಹಾಗಂತ ಕಸವನ್ನು ಹಾಕಲು ಕಸದ ಡಬ್ಬ ಅಥವಾ ಬುಟ್ಟಿಗಳನ್ನಾದರೂ ಎಲ್ಲೆಡೆ ಇಟ್ಟಿದ್ದಾರಾ, ಅದೂ ಇಲ್ಲ. ಒಂದೇ ಒಂದು ಕಸದ ಬುಟ್ಟಿಯೂ ನೋಡಲು ಸಿಗಲಿಲ್ಲ. ಜಪಾನಿನಲ್ಲಿ ಯಾರೂ ಕಸವನ್ನು ರಸ್ತೆಗೆ ಅಥವಾ ಕಂಡಲ್ಲೆಲ್ಲ ಎಸೆಯುವುದಿಲ್ಲ. ಎಸೆಯಬೇಕಾದ ಕಸವನ್ನು ತಮ್ಮ ಜೇಬಿನಲ್ಲಿಯೇ ಇಟ್ಟುಕೊಳ್ಳುತ್ತಾರೆ. ಕಸದ ಬುಟ್ಟಿ ಎಲ್ಲೂ ಕಾಣದಿದ್ದರೆ ಮನೆಗೆ ಬಂದು ಅಲ್ಲಿ ಹಾಕುತ್ತಾರೆ.

ಸಾರ್ವಜನಿಕ ಶೌಚಾಲಯ, ವೆಂಡಿಂಗ್ ಮಷೀನ್ ಪಕ್ಕದಲ್ಲಿ ಕಸದ ಬುಟ್ಟಿ ಕಂಡೀತು. ಕಸಕ್ಕಿಂತ ಕಸದಬುಟ್ಟಿಯೇ ಗಬ್ಬು ನಾರುವುದರಿಂದ, ಇಡೀ ದೇಶದಲ್ಲಿ ಕಸದಬುಟ್ಟಿಗೆ ಮೋಕ್ಷ ನೀಡಲಾಗಿದೆ. ಅಮೆರಿಕದಂಥ ಮುಂದುವರಿದ ದೇಶದಲ್ಲೂ ಕಸವನ್ನು ಕಾಣದಿದ್ದರೂ ಕಸದಬುಟ್ಟಿಗಳನ್ನಾದರೂ ನೋಡಬಹುದು. ಆದರೆ ಜಪಾನಿನಲ್ಲಿ ಅದನ್ನೂ ಹಂತಹಂತವಾಗಿ ಕಮ್ಮಿ ಮಾಡಲಾಗಿದೆ. ಇನ್ನು ಬೀದಿಗಳಲ್ಲಿ, ಪ್ರೇಕ್ಷಣೀಯ ತಾಣಗಳಲ್ಲಿ ಕಸ-ಕಡ್ಡಿ, ಚಿಪ್ಸ್ ಪ್ಯಾಕೆಟ್, ಗುಟಖಾ, ಸೇದಿ ಬಿಸಾಡಿದ ಸಿಗರೇಟ್ ತುಂಡು, ಖಾಲಿಯಾದ ನೀರಿನ ಬಾಟಲಿ, ಬಿಯರ್ ಬಾಟಲಿಗಳನ್ನು ಭೂತಗನ್ನಡಿ ಹಾಕಿ ನೋಡಿದರೂ ಸಿಗುವುದಿಲ್ಲ. ಹಾಗಂತ ಅಲ್ಲಿ ಯಾರೂ ಸಿಗರೇಟನ್ನು ಸೇದುವುದಿಲ್ಲ ಅಂತಿಲ್ಲ. ಸಿಗರೇಟನ್ನು ಸೇದುತ್ತಾರೆ. ಆದರೆ ಸಿಗರೇಟು ಸೇದುವವರೆಲ್ಲರೂ ತಮ್ಮ ಕಿಸೆಯಲ್ಲಿ ಬೂದಿಕುಂಡ (ashtray)ವನ್ನು ಇಟ್ಟುಕೊಂಡಿರುತ್ತಾರೆ. ಸೇದಿಬಿಟ್ಟ ತುಂಡನ್ನು ಎಸೆಯುವುದಿಲ್ಲ, ಬೂದಿಯನ್ನೂ ಬಿಸಾಡುವುದಿಲ್ಲ. ಇಡೀ ದೇಶಕ್ಕೆ ದೇಶವೇ ಸಾಫ್ ಸ್ವಚ್ಛ!

ಜಪಾನಿನ ಆಫೀಸು ಹೇಗಿರಬಹುದು ಎಂಬುದನ್ನು ನೋಡಬೇಕೆಂದು ಅನಿಸಿದ್ದರಿಂದ ಗೆಳೆಯ ಸಿದ್ದೇಶ ಜತೆಗೆ ಒಂದು ಆಫೀಸಿಗೆ ಹೋಗಿದ್ದೆ. ರಿಸೆಪ್ಷನ್ ನೋಡಿಯೇ ದಂಗಾಗಿಹೋದೆ. ಸುಮಾರು ಎರಡು ಸಾವಿರಕ್ಕೂ ಅಧಿಕ ಚದರ ಅಡಿ ಜಾಗದಲ್ಲಿ ವಿಸಿಟರ್‌ಗಳಿಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಸುತ್ತಲೂ ಹಸಿರೋ ಹಸಿರು. ಅಲ್ಲಿ ಪುಟ್ಟ ಉದ್ಯಾನವನ್ನೇ ನಿರ್ಮಿಸಿದ್ದರು. ಆಫೀಸಿನ ಒಳಗೆ ಹೋಗುವಾಗ ಚಪ್ಪಲಿ ಅಥವಾ ಶೂಗಳನ್ನು ಹೊರಗೆ ಬಿಚ್ಚಿಯೇ ಹೋಗಬೇಕು. ಆಫೀಸಿನ ಒಳಗೆ ಪಾದರಕ್ಷೆಗಳನ್ನು ಇಟ್ಟಿದ್ದಾರೆಂದರೆ, ಹೊರಗೆ ಅವುಗಳನ್ನು ಬಿಚ್ಚಿ ಹೋಗಬೇಕು ಎಂದರ್ಥ. ಒಳಗಿಟ್ಟ ಪಾದರಕ್ಷೆ ಧರಿಸಿ ಆಫೀಸಿನಲ್ಲಿ ಓಡಾಡಬಹುದು. ಆಫೀಸಿನಲ್ಲಿ ಪಾದರಕ್ಷೆಗಳನ್ನು ಜೋಡಿಸುವ ಕೆಲಸವನ್ನು ಎಲ್ಲರೂ ಮಾಡಬೇಕು. ಆ ಕೆಲಸ ಮಾಡುತ್ತಿರುವವ ಸಂಸ್ಥೆಯ ಮಾಲೀಕನ ಮಗನೂ ಆಗಿರಬಹುದು, ಮಾಲೀಕನೂ ಆಗಿರಬಹುದು! ಹಾಗೆ ಯಾರದ್ದಾದರೂ ಮನೆಗೆ ಹೋದರೆ, ಬಾಗಿಲ ಹೊರಗೇ ಪಾದರಕ್ಷೆಗಳನ್ನು ಬಿಟ್ಟು ಹೋಗಬೇಕು.

ಟೋಕಿಯೋ ನಗರದಲ್ಲಿ ಓಡಾಡುವಾಗ ಮೈ ಪರಚಿಕೊಂಡ, ಮೈ-ಕೈ ಉಜ್ಜಿಸಿಕೊಂಡ, ಹಿಂಭಾಗ ತೇಯ್ದ ಒಂದೇ ಒಂದು ವಾಹನ ನೋಡಲು ಸಿಗಲಿಲ್ಲ, ಯಾರೂ ಅನಗತ್ಯವಾಗಿ ಓವರ್‌ಟೇಕ್ ಮಾಡಿದ್ದನ್ನೂ ನೋಡಲಿಲ್ಲ, ಹಾರ್ನ್ ಸಪ್ಪಳವಂತೂ ಇಲ್ಲವೇ ಇಲ್ಲ ಬಿಡಿ. ಹಾಗೆಯೇ ರಸ್ತೆಯ ಮೇಲೆ ಒಂದೇ ಒಂದು ವಾಹನವನ್ನು ಪಾರ್ಕ್ (ಸ್ಟ್ರೀಟ್ ಪಾರ್ಕಿಂಗ್) ಮಾಡಿದ್ದನ್ನೂ ನೋಡಲಿಲ್ಲ. ನ್ಯೂಯಾರ್ಕ್, ಲಂಡನ್, ಪ್ಯಾರಿಸ್ ನಗರಗಳಲ್ಲಿ ವಾಹನಗಳನ್ನು ರಸ್ತೆಯಲ್ಲಿಯೇ ಪಾರ್ಕ್ ಮಾಡುವುದು ಸಾಮಾನ್ಯ. ಆದರೆ ಜಪಾನಿನಲ್ಲಿ ಯಾರೂ ವಾಹನಗಳನ್ನು ರಸ್ತೆಯಲ್ಲಿಯೇ ತಾಸುಗಟ್ಟಲೆ ನಿಲ್ಲಿಸಿ ಹೋಗುವುದಿಲ್ಲ. ನಿರ್ದಿಷ್ಟ ಅವಧಿಗೆ, ಮೀಟರ್ ಪಾರ್ಕಿಂಗ್ ಇರುವ ಕಡೆ ಮಾತ್ರ ನಿಲ್ಲಿಸಬಹುದಷ್ಟೆ. ರಸ್ತೆ ಇರುವುದು ವಾಹನ ಸಂಚಾರಕ್ಕೆ ಹೊರತು ವಾಹನ ನಿಲುಗಡೆಗೆ ಅಲ್ಲ. ನಾಲ್ಕು ಲೇನ್‌ಗಳಿರುವ ರಸ್ತೆಯಲ್ಲಿ ಕೊನೆಯ ಲೇನ್‌ನಲ್ಲೂ ವಾಹನ ನಿಲ್ಲಿಸುವಂತಿಲ್ಲ. 1957ರಲ್ಲಿಯೇ ಪಾರ್ಕಿಂಗ್ ನಿಯಮಗಳನ್ನು ರೂಪಿಸಿದ ಜಪಾನ್, ರಸ್ತೆ ಎಷ್ಟೇ ವಿಶಾಲವಾಗಿರಲಿ, ರಾತ್ರಿ ವೇಳೆ ರಸ್ತೆ ಮೇಲೆ ಪಾರ್ಕ್ ಮಾಡುವುದನ್ನು ನಿಷೇಧಿಸಿದೆ. ಜಪಾನಿನಲ್ಲಿ ವಾಹನ ಖರೀದಿಸುವುದಕ್ಕೆ ಮುನ್ನ ಪಾರ್ಕಿಂಗ್ ಜಾಗವನ್ನು ಹೊಂದಬೇಕು ಅಥವಾ ಖರೀದಿಸಬೇಕು. ಹೀಗಾಗಿ ಇಡೀ ರಸ್ತೆ ಅಡೆ-ತಡೆಯಿಲ್ಲದೇ ಸರಾಗ.

ಟೋಕಿಯೋ ಜಗತ್ತಿನಲ್ಲಿಯೇ ಅತಿ ಜನದಟ್ಟಣೆಯ, ಆಧುನಿಕ ಮತ್ತು ದುಬಾರಿ ನಗರವಾದರೂ, ಅದರ ಅಂತಃಸತ್ವವಿರುವುದು ನಯ, ವಿನಯ, ಸೌಜನ್ಯ ಮತ್ತು ಸಭ್ಯತೆಯಲ್ಲಿ. ಅಲ್ಲಿನ ಜನರಲ್ಲಿ ಇದನ್ನು ಧಾರಾಳವಾಗಿ ಕಾಣಬಹುದು. ಪರಸ್ಪರ ಗೌರವ, ಆದರವನ್ನು ಎಲ್ಲರಲ್ಲೂ ಕಾಣಬಹುದು. ಒತ್ತಡದ ಜೀವನದಲ್ಲೂ ಮಾನವೀಯ ಅಂತಃಕರಣ ಬಿಟ್ಟುಕೊಡದ, ಉದಾತ್ತ ಮೌಲ್ಯಗಳನ್ನು ಪೊರೆಯುವ ಗುಣಗಳನ್ನು ಕಾಪಾಡಿಕೊಂಡಿರುವ ಟೋಕಿಯೋದಲ್ಲಿ ಕಂಗಾಲು ಅಬ್ಬೇಪಾರಿಗಳೂ, ವಿದೇಶಿಯರೂ 'ಮನೆಗೆ ಬಂದ ಭಾವನೆ' ಮೂಡಿಸಿಕೊಳ್ಳಲು ನೆರವಾಗುವ ಸಹಜತೆ ಎದ್ದು ಕಾಣುತ್ತದೆ. Old meets New ಎಂಬುದು ಟೋಕಿಯೋ ನಗರದ ಬಗೆಗಿರುವ ಘೋಷವಾಕ್ಯ. ಅಲ್ಲಿ ಹಳೆ ಬೇರು ಮತ್ತು ಹೊಸ ಚಿಗುರು, ವೃದ್ಧರ ಜತೆಗೆ ಯುವಕರು ಮತ್ತು ಸಂಪ್ರದಾಯದ ಜತೆಗೆ ಆಧುನಿಕತೆಯನ್ನು ಜತೆಜತೆಯಾಗಿ ನೋಡಬಹುದು. ಹಳತು-ಹೊಸತರ ಕೂಡುತಾಣವಾಗಿರುವ ಆ ನಗರ, ಆ ದೇಶದ ಅಂತಃಸತ್ವವಾಗಿರುವ Endless disovery ಎಂಬ ಮಂತ್ರವನ್ನು ಪಠಿಸುತ್ತಲೇ ಇರುವಂತೆ ಭಾಸವಾಗುತ್ತದೆ. ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ ಒಂದು ಆದರ್ಶವಾಗಿ, ಮಹೋನ್ನತ ಮೌಲ್ಯವಾಗಿ ಅಲ್ಲಿನ ಕಣಕಣಗಳಲ್ಲೂ ದಟ್ಟೈಸಿರುವುದು ಎಂಥವರಿಗಾದರೂ ಅನುಭವಕ್ಕೆ ಬರುತ್ತದೆ.

ನನ್ನ ಜತೆಯಲ್ಲಿ ಬಂದಿದ್ದ ಸ್ನೇಹಿತರೊಬ್ಬರು ತಮಗಾದ ಒಂದು ಪ್ರಸಂಗವನ್ನು ಹೇಳುತ್ತಿದ್ದರು. ಅವರು ಟ್ಯಾಕ್ಸಿಯಲ್ಲಿ ಸಂಚರಿಸುವಾಗ ತಾವು ಹೋಗಬೇಕಾದ ಜಾಗ ಹನ್ನೊಂದು ಕಿ.ಮೀ. ದೂರದಲ್ಲಿದೆ ಎಂದು ಗೂಗಲ್ ಮ್ಯಾಪಿನಲ್ಲಿ ತೋರಿಸುತ್ತಿತ್ತಂತೆ. ಟ್ಯಾಕ್ಸಿ ಡ್ರೈವರ್ ಊರಲ್ಲೆಲ್ಲ ಸುತ್ತಿಸಿ, ಹೆಚ್ಚಿನ ಹಣ ಕೀಳಬಹುದು ಎಂದು ಅವರು ಭಾವಿಸಿದ್ದರಂತೆ. ಆದರೆ ಆತ ಒಳದಾರಿಯಲ್ಲಿ, ಕೇವಲ ಆರು ಕಿಮೀ ಕ್ರಮಿಸಿ, ಅವರ ನಿರೀಕ್ಷೆಗಿಂತ ಬೇಗ ತಲುಪಿಸಿದನಂತೆ. ಒಂದು ವೇಳೆ ಆತ ಹದಿನಾರು ಕಿ.ಮೀ. ಸುತ್ತಿಸಿ ಅವರನ್ನು ತಂದು ಬಿಟ್ಟಿದ್ದರೂ ಗೊತ್ತಾಗುತ್ತಿರಲಿಲ್ಲ. ಆದರೆ ಆತ ಅವರು ಎಣಿಸಿದ್ದಕ್ಕಿಂತ ಬೇಗ, ಕಡಿಮೆ ದೂರದ ಹಾದಿಯಲ್ಲಿ ಕರೆದುಕೊಂಡು ಬಂದಿದ್ದ. ಜಪಾನಿಯರು ತಮ್ಮ ಬಗ್ಗೆ ಯಾರಾದರೂ, ಏನಾದರೂ ಹೇಳಿದರೆ ಸಹಿಸಿಕೊಂಡಾರು. ಆದರೆ ತಮ್ಮ ದೇಶದ ಬಗ್ಗೆ ಅಪದ್ಧ ಹೇಳಿದರೆ ಸಹಿಸರು. ಅದಕ್ಕಿಂತ ಮುಖ್ಯವಾಗಿ ಅಂಥ ಸಂದರ್ಭವೇ ಬರದಂತೆ ನೋಡಿಕೊಳ್ಳುತ್ತಾರೆ ಎಂಬುದು ತಮಗೆ ಮನವರಿಕೆ ಯಾಯಿತು ಎಂದು ಹೇಳುತ್ತಿದ್ದರು. ಅದು ಅಕ್ಷರಶಃ ಸತ್ಯ.

ಆಗಾಗ ಭೂಕಂಪದಿಂದ ನಲುಗುತ್ತಿದ್ದರೂ, ಮಾನವ ಸಹಜ ಗುಣಗಳನ್ನು ಗಟ್ಟಿಯಾಗಿ ಸ್ಥಾಪಿಸಿರುವ ಜಪಾನ್, ಮಾನವ ಸಂಬಂಧಗಳ ಭದ್ರ ನೆಲೆಯಲ್ಲಿ ಉಳಿದ ದೇಶಗಳಿಗಿಂತ ಭಿನ್ನವಾಗಿ ಕಾಣುತ್ತದೆ. Money can't buy you happiness but it can buy a ticket to Japan ಎಂದು ಯಾರಾದರೂ ಹೇಳಿದರೆ ನಂಬಬಹುದು. ಹಾಗೆಯೇ A bad day in Tokyo is still better than a good day anywhere else ಎಂದು ಹೇಳಿದರೂ..!

ಆದರೆ ನಾನು ಹೇಳುವುದೇ ಬೇರೆ- My good mood is sponsored by Japan!

ಈ ಚುನಾವಣೆ ಮತ್ತು ರಾಜಕಾರಣದ ಆ ಯುಗ!

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಇಂದು, ನನ್ನ ತಂದೆ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಜವಾಹರಲಾಲ್‌ಜಿ ದರಡಾ ಅಲಿಯಾಸ್ 'ಬಾಬುಜೀ' ಅವರ ಪುಣ್ಯತಿಥಿ. ಕಾಕತಾಳೀಯ ಎಂಬಂತೆ ಮಹಾರಾಷ್ಟ್ರದ ರಾಜಕಾರಣವೂ ಇದೇ ಸಂದರ್ಭದಲ್ಲಿ ಉಚ್ಛ್ರಾಯದಲ್ಲಿದೆ. ವಿಧಾನಸಭೆ ಚುನಾವಣೆ ಈಗಷ್ಟೇ ಮುಗಿದಿದೆ. ಸರಕಾರ ರಚನೆಯಾಗುವ ಸನ್ನಾಹದಲ್ಲಿದೆ. ಮುಂದಿನ ಐದು ವರ್ಷಗಳ ಕಾಲ ತಮ್ಮನ್ನು ಆಳಲು ಯಾರು ಯೋಗ್ಯರು ಎಂದು ಜನರಿಗೆ ಅನ್ನಿಸಿದೆಯೋ ಅವರನ್ನು ಜನರು ಚುನಾಯಿಸಿದ್ದಾರೆ. ಈ ಸಂದರ್ಭದಲ್ಲಿ ನನ್ನ ತಂದೆಯವರ ಕಾಲದ ರಾಜಕಾರಣ ನೆನಪಾಗುತ್ತದೆ. ಅಂದಿನದು ಸ್ವಚ್ಛ ರಾಜಕಾರಣ. ಇಂದಿನ ರಾಜಕಾರಣದ ಬಗ್ಗೆಯಂತೂ ನಮಗೆ ಗೊತ್ತೇ ಇದೆ. ಇದೇನೂ ರಹಸ್ಯ ಸಂಗತಿಯಲ್ಲ. ಈ ಅಂಕಣವನ್ನು ರಾಜಕಾರಣದ ಚರ್ಚೆಗೇ ಮೀಸಲಿಡುತ್ತೇನೆ.

ಬಹಳ ಸಣ್ಣ ವಯಸ್ಸಿನಲ್ಲೇ ನಾನು ರಾಜಕಾರಣಕ್ಕೆ ತೆರೆದುಕೊಂಡವನು. ರಾಜಕಾರಣದ ಆಡುಂಬೊಲದಲ್ಲೇ ಬೆಳೆದವನು. ಆ ಕಾಲದ ರಾಜಕಾರಣಿಗಳಿಗೆ ಭಾರತವೆಂಬ ದುರ್ಬಲ, ಬಡ ಮತ್ತು ದೀರ್ಘಕಾಲದ ದಮನಿತ ದೇಶವನ್ನು ಜಾಗತಿಕ ರಂಗದಲ್ಲಿ ತಲೆಯೆತ್ತಿಸಿ ನಿಲ್ಲಿಸಬೇಕು ಎಂಬ ಅದಮ್ಯ ತುಡಿತವಿತ್ತು. ಅವರು ರಾಜಕಾರಣ ಮಾಡುವುದರ ಏಕಮಾತ್ರ ಉದ್ದೇಶ ಅದೇ ಆಗಿತ್ತು. ಆಗ ದೇಶದ ಬೊಕ್ಕಸದಲ್ಲಿ ಹಣವಿರಲಿಲ್ಲ. ಆದರೂ ರಾಜಕೀಯ ನಾಯಕರು ದೊಡ್ಡ ದೊಡ್ಡ ಕನಸನ್ನೇ ಕಾಣುತ್ತಿದ್ದರು. ಅದಕ್ಕೆ ನನ್ನ ತಂದೆಯವರೂ ಹೊರತಾಗಿರಲಿಲ್ಲ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಲಾಲ್‌ಬಹಾದೂರ್ ಶಾಸ್ತ್ರಿ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್‌ರವರು ದೇಶದ ಉದ್ಧಾರಕ್ಕಾಗಿ ಕಂಡ ಕನಸು ಮತ್ತು ಆದರ್ಶಗಳನ್ನು ಸಾಕಾರಗೊಳಿಸಲು ಬಾಬುಜೀ ಅವಿರತ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದರು. ದೇಶಕ್ಕಾಗಿ ಅವರಲ್ಲೂ ದೂರದೃಷ್ಟಿಯ ಕನಸುಗಳಿದ್ದವು. ಆ ದೊಡ್ಡ ದೊಡ್ಡ ನಾಯಕರ ಬಗ್ಗೆ ಯಾವಾಗಲೂ ಅವರು ನಮ್ಮ ಜತೆ ಮಾತನಾಡುತ್ತಿದ್ದರು. ಅವರ ರಾಜಕಾರಣ, ಕನಸು, ದೂರದೃಷ್ಟಿಯ ಬಗ್ಗೆ ಅನೇಕ ಕುತೂಹಲಕರ ಸಂಗತಿಗಳನ್ನು ಹೇಳುತ್ತಿದ್ದರು. ದೇಶದ ಜನಸಾಮಾನ್ಯರ ಸಂಕಷ್ಟಗಳ ಬಗ್ಗೆ ಅವರಿಗಿದ್ದ ಕಳವಳ ಮತ್ತು ಕಾಳಜಿಗಳು ಅವರ ಮಾತಿನಲ್ಲಿ ಎದ್ದು ಕಾಣುತ್ತಿದ್ದವು.

ನಾನು ಮತ್ತು ನನ್ನ ತಮ್ಮ ರಾಜೇಂದ್ರ ಬಹಳ ಆಸಕ್ತಿಯಿಂದ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆವು. ದೇಶದ ಮೂಲಭೂತ ಸ್ಥಿತಿಯನ್ನು ನಾವಿಬ್ಬರೂ ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ತಂದೆಯವರು ಬಯಸುತ್ತಿದ್ದರು. ಅದಕ್ಕಾಗಿ ಅವರು ಭಾರತೀಯ ರೈಲ್ವೆಯ ಮೂರನೇ ದರ್ಜೆಯ ಬೋಗಿಯಲ್ಲಿ ನಮ್ಮಿಬ್ಬರನ್ನೂ ಕರೆದುಕೊಂಡು ವರ್ಷಗಟ್ಟಲೆ ದೇಶ ಸುತ್ತಿಸಿದ್ದರು. ಅಲ್ಲಿ ಜನಸಾಮಾನ್ಯರು ಅನುಭವಿಸುವ ಕಷ್ಟಕಾರ್ಪಣ್ಯಗಳು ನಮ್ಮ ಅರಿವಿಗೆ ಬರಲಿ ಮತ್ತು ಅವರ ಬಗ್ಗೆ ನಮ್ಮಲ್ಲಿ ಕರುಣೆ ಬೆಳೆಯಲಿ ಎಂಬುದು ಅವರ ಉದ್ದೇಶವಾಗಿತ್ತು. ನಮ್ಮಿಬ್ಬರಲ್ಲಿ ಯಾರೂ ರಾಜಕಾರಣಕ್ಕೆ ಬರುವುದು ತಂದೆಯವರಿಗೆ ಇಷ್ಟವಿರಲಿಲ್ಲ. 1962ರಲ್ಲಿ ವಸಂತರಾವ್ ನಾಯಕ್ ''ಏಕೆ ನೀವು ಇಬ್ಬರೂ ಮಕ್ಕಳನ್ನು ರಾಜಕಾರಣದಿಂದ ದೂರವಿರಿಸಿದ್ದೀರಿ?'' ಎಂದು ತಂದೆಯವರ ಬಳಿ ಕೇಳಿದ್ದರು. ಅದಕ್ಕೆ ಅವರು, ''ಇವತ್ತಿನ ರಾಜಕಾರಣ ಬೇರೆ ರೀತಿಯದು'' ಎಂದು ಚುಟುಕಾಗಿ ಉತ್ತರಿಸಿದ್ದರು. ಅಂದೇ ಅವರಿಗೆ ಭವಿಷ್ಯದ ಭಾರತದಲ್ಲಿ ಅಬ್ಬರಿಸುವ ಜಾತಿ, ಧರ್ಮ ಮತ್ತು ವೈರತ್ವದ ರಾಜಕಾರಣದ ಸುಳಿವು ಸಿಕ್ಕಿತ್ತು. ಇಂಥ ಬೇಡದ ವಿಚಾರಗಳೇ ಮುಂದೆ ಈ ದೇಶದ ರಾಜಕಾರಣದ ಪ್ರಮುಖ ಸಂಗತಿಗಳಾಗುತ್ತವೆ ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು. ತಮ್ಮ ಮಕ್ಕಳು ರಾಜಕಾರಣಕ್ಕೆ ಬಂದು ಭ್ರಮನಿರಸನರಾಗುವುದು ಬೇಡ ಮತ್ತು ಸಮಾಜದಲ್ಲಿ ನಂಬಿಕೆ ಕಳೆದುಕೊಳ್ಳುವುದು ಬೇಡ ಎಂದು ಅವರು ಬಯಸಿದ್ದರು. ಹೀಗಾಗಿ ನಾವಿಬ್ಬರೂ ರಾಜಕಾರಣದಿಂದ ದೂರವಿದ್ದರೇ ಒಳ್ಳೆಯದು ಎಂಬುದು ಅವರ ಯೋಚನೆಯಾಗಿತ್ತು.

ಆದರೆ ವಿಧಿಯ ಬಳಿ ಬೇರೆಯದೇ ಯೋಜನೆಗಳಿದ್ದವು. 1998ರಲ್ಲಿ ಬಾಳಾಸಾಹೇಬ್ ಠಾಕ್ರೆಯವರು ನಮ್ಮ ನಾಗ್ಪುರದ ಮನೆಗೆ ಭೇಟಿ ನೀಡಿ, ನನ್ನನ್ನು ರಾಜ್ಯಸಭೆಗೆ ಕಳುಹಿಸುವ ಬಯಕೆ ವ್ಯಕ್ತಪಡಿಸಿದರು. ನನ್ನ ತಾಯಿ ''ಮೊದಲು ಸೋನಿಯಾ ಗಾಂಧಿಯವರನ್ನು ಭೇಟಿಯಾಗು'' ಎಂದರು. ನಾನು ಸೋನಿಯಾರನ್ನು ಭೇಟಿಯಾದೆ. ಅವರು ''ನಾನಿದರ ಬಗ್ಗೆ ಯೋಚನೆ ಮಾಡುತ್ತೇನೆ'' ಅಂದರು. ಅದರ ನಡುವೆ ನಾನು ಸ್ವತಂತ್ರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ. ಎಲ್ಲಾ ರಾಜಕೀಯ ಪಕ್ಷಗಳಿಂದಲೂ ನನಗೆ ವೋಟು ಸಿಕ್ಕವು. ಗೆದ್ದೆ.

ಬಳಿಕ ಅಟಲ್ ಬಿಹಾರಿ ವಾಜಪೇಯಿಯವರಿಗೆ ಧನ್ಯವಾದ ಹೇಳಲು ಹೋಗಿದ್ದೆ. ಅವರೊಂದು ಮಹತ್ವದ ಸಲಹೆ ನೀಡಿದರು. ''ಕಾಲ ಕೂಡಿ ಬಂದಾಗ ನಿಮ್ಮ ನಾಯಕರ ಜತೆಗೆ ಸ್ನೇಹ ಸಂಪಾದಿಸಿಕೊಳ್ಳಿ'' ಎಂದರು. ನಂತರ ಆಗಿದ್ದು ಕೂಡ ಅದೇ. ಮಾಧವರಾವ್ ಸಿಂಧಿಯಾ ಅವರು, ''ಸೋನಿಯಾ ಗಾಂಧಿಯವರನ್ನು ನೀವು ಭೇಟಿಯಾಗಬೇಕಂತೆ'' ಎಂದು ಕರೆ ಕಳುಹಿಸಿದರು. ಆ ಸಭೆಯ ಬಳಿಕ ಕಾಂಗ್ರೆಸ್ ಪಕ್ಷ ನನಗೆ ಎರಡು ಅವಧಿಗೆ ರಾಜ್ಯಸಭಾ ಸದಸ್ಯತ್ವ ನೀಡಿತು.

ರಾಜೇಂದ್ರನ ರಾಜಕೀಯ ಪ್ರವೇಶ ಕೂಡ ಇದೇ ರೀತಿ ಯೋಜನಾರಹಿತವಾಗಿತ್ತು. ಮಾಧವರಾವ್ ಸಿಂಧಿಯಾ ಮತ್ತು ಎ.ಆರ್.ಅಂತುಳೆಯವರಂಥ ನಾಯಕರು ಔರಂಗಾಬಾದ್ (ಈಗ ಛತ್ರಪತಿ ಸಂಭಾಜಿನಗರ) ಕ್ಷೇತ್ರದಿಂದ ರಾಜೇಂದ್ರ ಸ್ಪರ್ಧಿಸಬೇಕೆಂದು ಒತ್ತಾಯಿಸುತ್ತಿದ್ದರು. ಅವನು ಅದಾಗಲೇ ಬಹಳ ಜನಪ್ರಿಯ ಮುಖಂಡನಾಗಿ ಬೆಳೆದಿದ್ದ. ಹೀಗಾಗಿ ಸುಲಭವಾಗಿ ಚುನಾವಣೆಯಲ್ಲಿ ಗೆದ್ದು, ಮೊದಲ ಬಾರಿಗೇ ಸಚಿವನೂ ಆಗಿಬಿಟ್ಟ. ನಂತರ ಇನ್ನೂ ಎರಡು ಅವಧಿಗೆ ಅವನು ಮಂತ್ರಿಯಾಗಿ ಕೆಲಸ ಮಾಡಿದ.

ಹೀಗಾಗಿ ನಮ್ಮಿಬ್ಬರ ರಾಜಕೀಯ ಪ್ರವೇಶವೂ ಬಹಳ ಅನಿರೀಕ್ಷಿತವಾಗಿತ್ತು. ಆದರೆ ನಾವು ಸಾಂಪ್ರದಾಯಿಕ ರಾಜಕಾರಣವನ್ನು ಎಂದೂ ಮಾಡಲಿಲ್ಲ. ಅದರ ಬದಲಿಗೆ ನಮ್ಮ ತಂದೆಯವರು ಹಾಕಿಕೊಟ್ಟ ಮಾರ್ಗದಲ್ಲೇ ಸಾಗಿ, ಅವರು ನೀಡಿದ ಸಲಹೆಗಳನ್ನು ಪಾಲಿಸುತ್ತಾ, ಅವರ ದೂರದೃಷ್ಟಿಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲೇ ಕೆಲಸ ಮಾಡಿದೆವು. ನಮ್ಮ ರಾಜಕಾರಣದ ಉದ್ದೇಶ ಸಮಾಜ ಸೇವೆಯಾಗಿತ್ತು. ಜನರ ಹಿತದ ಮುಂದೆ ಬೇರೆಲ್ಲವೂ ನಮಗೆ ಗೌಣವಾಗಿದ್ದವು.

ನನ್ನ ತಂದೆಯವರ ಕಾಲದ ರಾಜಕಾರಣದ ವಿಶೇಷವೆಂದರೆ, ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ನಾಯಕರ ನಡುವೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ವೈಯಕ್ತಿಕ ಮಟ್ಟದಲ್ಲಿ ಯಾರಿಗೂ ಯಾರ ಬಗ್ಗೆಯೂ ದ್ವೇಷವಿರುತ್ತಿರಲಿಲ್ಲ. ಇವತ್ತಿನ ಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಇವತ್ತು ರಾಜಕೀಯ ರಂಗ ಎಷ್ಟು ದ್ವೇಷಪೂರಿತವಾಗಿದೆ ಅಂದರೆ, ಇಲ್ಲಿ ಸೇಡು ತೀರಿಸಿಕೊಳ್ಳಲು ಒಬ್ಬರ ಮೇಲೊಬ್ಬರು ಹಲ್ಲೆ ನಡೆಸುತ್ತಾರೆ. ರಾಜಕಾರಣಿಗಳ ಹೆಂಡತಿ-ಮಕ್ಕಳ ಮೇಲೂ ದಾಳಿ ಮಾಡುತ್ತಾರೆ. ರಕ್ತ ಹರಿಯುತ್ತದೆ. ಕೊಲೆಗಳು ನಡೆಯುತ್ತವೆ. ಚುನಾವಣೆ ನಡೆಯುವ ಒಂದೆರಡು ತಿಂಗಳ ಕಾಲ ಇಂತಹುದೇ ಘಟನೆಗಳು ವರದಿಯಾಗುತ್ತಿರುತ್ತವೆ. ರಾಜಕಾರಣ ಈ ಮಟ್ಟಕ್ಕೆ ಏಕೆ ಅಧಃಪತನಗೊಂಡಿದೆ ಎಂದು ನಾನು ಯೋಚಿಸುತ್ತಾ ಕುಳಿತುಕೊಳ್ಳುತ್ತೇನೆ.

ನನ್ನ ತಂದೆಯವರು ಅಟಲ್ ಬಿಹಾರಿ ವಾಜಪೇಯಿ ಮಹಾರಾಷ್ಟ್ರಕ್ಕೆ ಚುನಾವಣಾ ಪ್ರಚಾರಕ್ಕೆಂದು ಬಂದಾಗ ಅವರಿಗೆ ಕಾರಿನ ವ್ಯವಸ್ಥೆ ಮಾಡಿಸಿದ್ದರ ಬಗ್ಗೆ ಹಿಂದೆ ಒಂದು ಅಂಕಣದಲ್ಲಿ ಹೇಳಿದ್ದೆ! ನನ್ನ ತಂದೆ ಕಾಂಗ್ರೆಸ್ ನಾಯಕರು, ಅಟಲ್‌ಜೀ ಜನಸಂಘದವರು. ಇನ್ನೊಂದು ಘಟನೆ ಈಗ ನೆನಪಾಗುತ್ತಿದೆ. ಯವತ್ಮಾಲ್ ಜಿಲ್ಲಾ ಪರಿಷತ್ ಚುನಾವಣೆಗೆ ಗೋವಿಂದರಾವ್ ಬುಚ್ಕೆ ಸ್ಪರ್ಧಿಸಿದ್ದರು. ಅವರೊಮ್ಮೆ ಹಳ್ಳಿಗಳಲ್ಲಿ ಚುನಾವಣಾ ಪ್ರಚಾರಕ್ಕೆಂದು ಓಡಾಡುತ್ತಿದ್ದರು. ಒಂದು ಕಡೆ ಅವರ ಕಾರು ಕೆಟ್ಟು ನಿಂತುಬಿಟ್ಟಿತ್ತು. ಆ ಸಮಯಕ್ಕೆ ಸರಿಯಾಗಿ ನನ್ನ ತಂದೆಯವರೂ ಅಲ್ಲೇ ಕಾರಿನಲ್ಲಿ ಹಾದು ಹೋಗುತ್ತಿದ್ದರು. ಅವರು ಗೋವಿಂದರಾವ್‌ರನ್ನು ಕರೆದು ಕಾರಿನಲ್ಲಿ ಕುಳ್ಳಿರಿಸಿಕೊಂಡು ಚುನಾವಣಾ ಪ್ರಚಾರದ ರ್ಯಾಲಿಯ ಸ್ಥಳದವರೆಗೂ ಬಿಟ್ಟು ಬಂದಿದ್ದರು. ಇಂದು ಎದುರಾಳಿ ರಾಜಕೀಯ ಪಕ್ಷದ ನಾಯಕರಿಗೆ ಹೀಗೆ ಯಾರಾದರೂ ಸಹಾಯ ಮಾಡುವುದನ್ನು ಊಹಿಸಿಕೊಳ್ಳಲು ಸಾಧ್ಯವೇ?

ತಂದೆಯವರು ಕಲಿಸಿಕೊಟ್ಟ ಈ ಸಹಕಾರ, ಪರಸ್ಪರರನ್ನು ಗೌರವಿಸುವ ವಿಧಾನ ಹಾಗೂ ಔದಾರ್ಯದ ರಾಜಕಾರಣವನ್ನು ನಾನು ಮತ್ತು ನನ್ನ ತಮ್ಮ ಇಂದಿಗೂ ಪಾಲಿಸುತ್ತಿದ್ದೇವೆ. ನಾವಿಬ್ಬರೂ ಕಾಂಗ್ರೆಸ್ ಪಕ್ಷದಲ್ಲಿದ್ದರೂ, ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಜತೆಗೆ ಸೌಹಾರ್ದಯುತ ಸಂಬಂಧ ಹೊಂದಿದ್ದೇವೆ. ಸಂಸತ್ತಿನಲ್ಲಿ ಒಮ್ಮೊಮ್ಮೆ ನಾನು ವಿರೋಧ ಪಕ್ಷಗಳ ಸಂಸದರ ಜತೆಗೆ ಬಹಳ ತೀಕ್ಷ್ಣವಾದ ಚರ್ಚೆಯಲ್ಲಿ ತೊಡಗುತ್ತಿದ್ದೆ. ಆದರೆ, ನಂತರ ಪಾರ್ಲಿಮೆಂಟ್‌ನ ಸೆಂಟ್ರಲ್ ಹಾಲ್‌ನಲ್ಲಿ ಅವರ ಜತೆಗೇ ಕುಳಿತು ಟೀ ಕುಡಿಯುತ್ತಿದ್ದೆ. ''ನೀನೇನನ್ನು ನಂಬುತ್ತೀಯೋ ಅದನ್ನು ಬಲವಾಗಿ ಪ್ರತಿಪಾದಿಸು. ಆದರೆ ಬೇರೆಯವರ ಅಭಿಪ್ರಾಯಕ್ಕೂ ಗೌರವ ನೀಡು. ಯಾವುದೇ ವಿಷಯಕ್ಕೆ ಬೇರೆ ಬೇರೆ ಆಯಾಮಗಳು ಇರುತ್ತವೆ. ಒಂದು ವಿಚಾರದಲ್ಲಿ ಹಲವು ಅಭಿಪ್ರಾಯಗಳು ಮೇಳೈಸಿದಾಗ ಮಾತ್ರ ಅದು ಸುಂದರ ಸಂಗತಿಯಾಗಿ ರೂಪುಗೊಳ್ಳುತ್ತದೆ. ಹೀಗಾಗಿ ಹೊಸ ಹೊಸ ಐಡಿಯಾಗಳನ್ನು ಕೇಳಿಸಿಕೋ. ಯಾವಾಗಲೂ ಬೇರೆಯವರ ಮಾತನ್ನು ಕಿವಿಗೊಟ್ಟು ಆಲಿಸು'' ಎಂದು ತಂದೆಯವರು ಹೇಳುತ್ತಿದ್ದರು. ನಾನದನ್ನು ಪಾಲಿಸುತ್ತೇನೆ.

ತಂದೆಯವರೇ ಇದನ್ನು ಇವತ್ತು ಹೇಳಿದ್ದರೆ ಯಾರಾದರೂ ಕೇಳುತ್ತಾರಾ? ಅಥವಾ ನಾನು ಹೇಳಿದರೆ ಯಾರಾದರೂ ಕೇಳಿಸಿಕೊಳ್ಳುತ್ತಾರಾ? ಇವತ್ತಿನ ರಾಜಕೀಯ ಪರಿಸ್ಥಿತಿ ಹೇಗಿದೆ ಅಂದರೆ, ಭಿನ್ನವಾದ ಅಭಿಪ್ರಾಯವನ್ನು ಯಾರಾದರೂ ಹೇಳಿದರೆ ಅವರಿಗೆ ದೇಶದ್ರೋಹಿಯ ಪಟ್ಟ ಕಟ್ಟಿಬಿಡುತ್ತಾರೆ.

ಮಹಾರಾಷ್ಟ್ರದ ವಿಧಾನಸಭೆ ಚುನಾವಣೆಯ ವೇಳೆ ನನ್ನ ತಂದೆಯವರು ಅಟಲ್ ಬಿಹಾರಿ ವಾಜಪೇಯಿ ಬಗ್ಗೆ ಹೇಳುತ್ತಿದ್ದ ಒಂದು ದಂತಕತೆಯನ್ನು ನೆನಪಿಸಿಕೊಂಡಿದ್ದೆ. ಸಂಸತ್ತಿನಲ್ಲಿ ನಡೆಯುವ ಚರ್ಚೆಗಳಲ್ಲಿ ವಾಜಪೇಯಿಯವರು ಜವಾಹರಲಾಲ್ ನೆಹರು ಅವರನ್ನು ವಾಚಾಮಗೋಚರವಾಗಿ ಟೀಕಿಸುತ್ತಿದ್ದರು. ಆದರೂ ಕಲಾಪದ ಬಳಿಕ ಸೆಂಟ್ರಲ್ ಹಾಲ್‌ನಲ್ಲಿ ಸಿಕ್ಕಾಗ ನೆಹರೂ ಅವರು, ''ಬಹಳ ಚೆನ್ನಾಗಿ ಮಾತನಾಡಿದಿರಿ!'' ಎಂದು ಅಟಲ್‌ಜೀಗೆ ಅಭಿನಂದನೆ ಹೇಳುತ್ತಿದ್ದರಂತೆ. ಅದಕ್ಕೆ ಪ್ರತಿಯಾಗಿ ವಾಜಪೇಯಿ ಕೂಡ ನೆಹರುರನ್ನು ತುಂಬಾ ಗೌರವಿಸುತ್ತಿದ್ದರು. ಅವರೇ ನನ್ನ ಬಳಿ ಒಂದು ಕತೆ ಹೇಳಿದ್ದರು. 1977ರಲ್ಲಿ ವಾಜಪೇಯಿ ವಿದೇಶಾಂಗ ಸಚಿವರಾಗಿದ್ದರು. ಆಗ ಸೌತ್ ಬ್ಲಾಕ್‌ನಲ್ಲಿ ನೆಹರು ಫೋಟೋ ಇಲ್ಲದಿರುವುದು ಅವರ ಗಮನಕ್ಕೆ ಬಂತು. ಫೋಟೋ ಏನಾಯಿತು ಎಂದು ಅಧಿಕಾರಿಗಳ ಬಳಿ ವಿಚಾರಿಸಿದರು. ಮುಜುಗರಕ್ಕೆ ಒಳಗಾದ ಅಧಿಕಾರಿಗಳು ಅದೇ ದಿನ ನೆಹರು ಫೋಟೋ ಅಳವಡಿಸಿದ್ದರು.

ಪರಸ್ಪರರನ್ನು ಗೌರವಿಸುವ ಇಂಥ ವಾತಾವರಣವೇ ಇಂದು ಕಣ್ಮರೆಯಾಗಿದೆ. ಚುನಾವಣಾ ಪ್ರಚಾರದ ವೇಳೆ ನಡೆದ ಹಿಂಸಾಚಾರಗಳನ್ನು ನೋಡಿ ನನಗೆ ಆಘಾತವಾಗಿತ್ತು. ಮಹಾರಾಷ್ಟ್ರ ಎಂದೂ ಈ ರೀತಿ ಇರಲಿಲ್ಲ!

ಆದರೇನು ಮಾಡುವುದು, ನಾವು ಹೊಸ ಯುಗದಲ್ಲಿದ್ದೇವೆ. ಹಳೆಯದನ್ನು ಹಿಂದಿಕ್ಕಿ ಕಾಲವೇ ಹೊಸತರ ಹಿಂದೆ ಓಡುತ್ತಿದೆ. ಈ ಕಾಲದ ರಾಜಕಾರಣಿಗಳಿಗೆ ನನ್ನದು ಒಂದೇ ಮನವಿ. ಕೇವಲ ಗೆಲುವನ್ನು ಮಾತ್ರ ನೋಡಬೇಡಿ. ಎಲ್ಲರನ್ನೂ ಗೌರವಿಸಿ. ಒಳ್ಳೆಯ ನಡವಳಿಕೆ ಬಹಳ ಮುಖ್ಯ. ರಾಜಕೀಯ ಪಕ್ಷಗಳು ಸಂಕುಚಿತ ಮನೋಭಾವವನ್ನು ಬಿಟ್ಟು ಬೆಳೆಯಬೇಕು. ಗೌರವದ ಮಾತು ಬಂದಾಗ ನನ್ನ ತಂದೆಯವರ ಕಾಲದ ಇನ್ನೂ ಒಂದು ಘಟನೆ ನೆನಪಾಗುತ್ತದೆ. ಯವತ್ಮಾಲ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುತ್ತಿತ್ತು. ಜಾಂಬುವಂತರಾವ್ ಧೋತೆ ಎದುರು ನನ್ನ ತಂದೆ ಸೋತಿದ್ದರು. ಅದು ಧೋತೆಯವರಿಗೆ ಚೊಚ್ಚಲ ಗೆಲುವಾಗಿತ್ತು. ಅವರ ವಿಜಯೋತ್ಸವದ ಮೆರವಣಿಗೆ ಗಾಂಧಿ ಚೌಕಕ್ಕೆ ಬಂದಾಗ ತಂದೆಯವರು ಸ್ವತಃ ಅಲ್ಲಿಗೆ ಹೋಗಿ, ಧೋತೆಗೆ ಮಾಲಾರ್ಪಣೆ ಮಾಡಿ, ಅಭಿನಂದನೆ ಸಲ್ಲಿಸಿದ್ದರು. ಮಹಾರಾಷ್ಟ್ರ ಮತ್ತು ದೇಶದ ಪ್ರಗತಿಗೆ ಇಂಥ ಉದಾರ ಮನೋಭಾವದ ರಾಜಕಾರಣದ ಅಗತ್ಯವಿದೆ. ನಾನು ಹಳೆಯ ದಿನಗಳನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿದ್ದೇನೆ.

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕ್ಯಾಚ್

- **ರಾಘವೇಂದ್ರ ಬರಗೂರು, ಬೆಂಗಳೂರು**
  ಭಟ್ರೇ, ತುಂಗಭದ್ರಾ ಅಣೆಕಟ್ಟಿನ ತೂತನ್ನಾದರೂ ಮುಚ್ಚಬಹುದು, ಆದರೆ..?
- **ಯತ್ನಾಳ್ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ!**

- **ಸಂಕೇತ ನಾಡಕರ್ಣಿ, ಮೈಸೂರು**
  ಭಟ್ರೇ, ಇವಿಎಂ ವಿರುದ್ಧ 'ಭಾರತ್ ಜೋಡೋ' ರೀತಿ ಕಾಂಗ್ರೆಸ್ ಹೋರಾಟ ಮಾಡುವುದಂತೆ?
- **ಹಾಗಾದ್ರೆ ಆ ಹೋರಾಟವನ್ನು ತಾನು ಗೆದ್ದ ಜಾರ್ಖಂಡ್‌ನಿಂದ ಆರಂಭಿಸುವುದಾ?!**

- **ಕೃಷ್ಣೇಗೌಡ ಕೆ.ವಿ., ಮಂಡ್ಯ**
  ಭಟ್ರೇ, ಮುಸ್ಲಿಮರಿಗೆ ಮತದಾನದ ಹಕ್ಕು ಬೇಡ ಎಂದು ಸ್ವಾಮೀಜಿಯೊಬ್ಬರು ಹೇಳಿದ್ದಾರಲ್ಲ?
- **ಆಗ 'ಮುಸ್ಲಿಂ ವೋಟ್ ಬ್ಯಾಂಕ್' ಅನ್ನು ಏನು ಮಾಡೋದು?!**

- **ಅಲಮೇಲು, ಮೇಲುಕೋಟೆ**
  ಭಟ್ರೇ, ಈ ಬಾರಿ ವಿದ್ಯಾಮಂತ್ರಿಗಳು ಸಂವಿಧಾನ ಪ್ರತಿಜ್ಞಾವಿಧಿ ಓದಿದ್ದು ಯಾಕೆ ಸುದ್ದಿಯಾಗಲಿಲ್ಲ?
- **ಅವರು ಒಳಬಾಯಿಯಲ್ಲಿ ಓದಿದ್ದು ಯಾರಿಗೂ ಕೇಳಿಸಲಿಲ್ಲವಂತೆ!**

- **ಮನಗೂಳಿ ಭೀಮು, ಬೆಂಗಳೂರು**
  ಭಟ್ರೇ, ದೊಡ್ಡಗೌಡರು ಎಲೆಕ್ಷನ್‌ಗೆ ನಿಲ್ಲುತ್ತೇನೆ ಅಂದ್ರೆ ಅವರ ಎದುರಿನ ಸಮರ್ಥ ಎದುರಾಳಿ ಕಾಂಗ್ರೆಸ್‌ನಲ್ಲಿ ಯಾರಿದ್ದಾರೆ?
- **ಶಾಮನೂರು ಶಿವಶಂಕರಪ್ಪ!**

- **ಅಪ್ಪು ಪಾಟೀಲ, ಕೆರೂರು**
  ತೆನೆ ಹೊರಲು ಸಿದ್ಧರಾಗಿದ್ದ ಜೋಡಿಗೆ ಜನ ಮಣೆ ಹಾಕಲ್ಲಿಲ್ಲವೇಕೆ, ಭಟ್ರೇ?
- **ಇನ್ನೂ ತೆನೆ ಹೊರುತ್ತಲೇ ಇರಿ ಅಂತ ಹೇಳಿದ್ದಾರೆ!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
  ಮಸ್ಕತ್‌ಗೆ ಹೋಗುತ್ತಿರುವ ಭಟ್ಟರಿಂದ ವಾಪಸ್ ಬರುವಾಗ ಅವರ ಮಾಜಿ ಅಭಿಮಾನಿನಿಯರು ಕನಿಷ್ಠ ಏನನ್ನು ನಿರೀಕ್ಷಿಸಬಹುದು?
- **'ಚಿನ್ನದ' ಬಿಸ್ಕತ್!**

- **ರಾಘುರಾಯ, ಮೈಸೂರು**
  ಭಟ್ರೇ, ವಿಶ್ವವಾಣಿ ಭಟ್ರು ಪ್ರಧಾನಿ ನರೇಂದ್ರ ಮೋದಿಯ ಕಟ್ಟಾ ವಿರೋಧಿಯಂತೆ ಕಂಡುಬರುತ್ತಾರಲ್ಲ?
- **ಮೋದಿ ಪಶ್ಚಿಮದ ರಾಷ್ಟ್ರಗಳಿಗೆ ಹೋದ ವೇಳೆ ಭಟ್ರು ಪೂರ್ವದ ರಾಷ್ಟ್ರಕ್ಕೆ ಹೋದರೆಂದು ಈ ನಿರ್ಧಾರಕ್ಕೆ ಬರಬಾರದಿತ್ತು ಭೇ!**

- **ರಮೇಶ ಬಂಕಾಪುರ, ಬಂಕಾಪುರ**
  ಭಟ್ರೇ, ಕೆಲವರು ಕೊಬ್ಬರಿ ಎಣ್ಣೆ ಒಳ್ಳೆಯದು ಅಂತಾರೆ, ಇನ್ನು ಕೆಲವರು ಸೂರ್ಯಕಾಂತಿ ಒಳ್ಳೆಯದು ಅಂತಾರೆ, ನಿಮ್ಮ ಪ್ರಕಾರ ಯಾವುದು ಒಳ್ಳೆಯದು?
- **ಬರೀ 'ಎಣ್ಣೆ'!**

ಬಂಡೀಪುರದ ಆನೆ ಮತ್ತು ಲಾರೆನ್ಸನ ಹಾವು

ಕಾಡುದಾರಿ

ಹರೀಶ್ ಕೇರ
vveditoped@gmail.com

ಒಂದು ಸಲ ಬಂಡೀಪುರದ ಮೂಲಕ ಊಟಿಗೆ ಹೊರಟಿದ್ದೆ. ಬೆಳಗಿನ ಜಾವ, ಒಂದೆರಡು ನವಿಲುಗಳೂ ಕಾಡುಕೋಣಗಳೂ ಯಥೇಚ್ಛ ಜಿಂಕೆಗಳೂ ದಾರಿ ಬದಿಯಲ್ಲಿ ದರ್ಶನ ನೀಡಿದವು. ಮುಂದೆ ಒಂದು ತಿರುವಿನಲ್ಲಿ ತಿರುಗಿದಾಗ, ಎಡಬದಿಯಲ್ಲಿ ಒಂಟಿ ಆನೆ ನಿಂತದ್ದು ಕಾಣಿಸಿತು. ಮುಂದಿದ್ದ ಕಾರಿನ ಚಾಲಕ ನಿಧಾನ ಮಾಡಿದ. ನಾನೂ ನಿಧಾನಿಸಿದೆ. ಇದ್ದಕ್ಕಿದ್ದಂತೆ ಆನೆ ರಸ್ತೆ ಕಡೆಗೆ ಬಂದುಬಿಟ್ಟಿತು. ಮುಂದಿನ ಕಾರಿನವನು ಕೂಡಲೇ ವೇಗ ಹೆಚ್ಚಿಸಿ ಅಲ್ಲಿಂದ ಪರಾರಿಯಾಗಿಬಿಟ್ಟ. ಆನೆ ನನ್ನ ಕಾರಿನ ಮುಂದೆ ಹತ್ತಡಿ ದೂರದಲ್ಲಿ ಬಂದು ನಿಂತುಬಿಟ್ಟಿತು. ಮುಂದೆ ಹೋಗುವಂತಿಲ್ಲ, ಹಿಂದೆ ಇನ್ನೆರಡು ಕಾರಿನವರು ಬಂದು ನಿಂತಿದ್ದಾರೆ, ಹಿಂದಕ್ಕೂ ಚಲಿಸುವಂತಿಲ್ಲ. ಹಾರನ್ ಮಾಡುವಂತಿಲ್ಲ (ಕಾನೂನಿನ ಪ್ರಕಾರವೂ ಸಲ್ಲದು, ಆನೆಗೂ ಅದು ಕಿರಿಕಿರಿ). ಎದೆ ಢವಢವ ಎನ್ನತೊಡಗಿತು.

ಹೀಗೇ ಕೆಲವು ನಿಮಿಷ ಸರಿದವು. ಆನೆ ಹಿಂದಕ್ಕೂ ಹೋಗುತ್ತಿಲ್ಲ, ಮುಂದಕ್ಕೂ ಹೋಗುತ್ತಿಲ್ಲ. ಕಾರಿನೊಳಗಿದ್ದವರ ಕೈಕಾಲುಗಳು ಆಗಲೇ ಬೆವರಿ ತಣ್ಣಗಾಗಿದ್ದವು. ಅಷ್ಟರಲ್ಲಿ ಆನೆಯ ಎದುರುಗಡೆಯಿಂದಲೂ ಕೆಲವು ಕಾರುಗಳು ಸ್ವಲ್ಪ ದೂರದಲ್ಲಿ ಬಂದು ನಿಂತವು. ಆ ಕಡೆ ಮೊದಲಿಗನಾಗಿ ನಿಂತವನದೂ ನನ್ನದೇ ಪರಿಸ್ಥಿತಿ ಇದ್ದಿರಬಹುದು. ಯಾಕೆಂದರೆ ಆನೆ ರೋಷಕ್ಕೆ ತುತ್ತಾದರೆ ಮೊದಲ ಬಲಿ ನಾವೇ ತಾನೆ. ಅದು ಒಮ್ಮೆ ಜೋರಾಗಿ ಬಾಲ ಬೀಸಿದರೂ ಸಾಕು, ಕಾರಿಗೆ ಡೆಂಟ್ ಬೀಳುತ್ತದೆ. ಇನ್ನು ಆ ಬೃಹತ್ ಹೆಜ್ಜೆಗಳನ್ನು ನಮ್ಮ ಮೇಲೆ ಊರಿದರೆ, ಆಮೇಲೆ ನಮ್ಮ ಅವಶೇಷಗಳನ್ನು ರಸ್ತೆಯಿಂದ ಕೆರೆದು ಕೆರೆದೇ ತೆಗೆಯಬೇಕಷ್ಟೆ. ಇದನ್ನೆಲ್ಲ ಚಿತ್ರವತ್ತಾಗಿ ಕಲ್ಪಿಸಿಕೊಳ್ಳುತ್ತ ಮತ್ತೆ ಕೈಕಾಲು, ಬೆನ್ನುಹುರಿ ನಡುಗತೊಡಗಿದವು.

ಅಷ್ಟರಲ್ಲಿ ಯಾರೋ ದೂರದ ಕಾರಿನಿಂದ 'ಹೋಯ್' ಎಂದರು. ಇನ್ಯಾರೋ ವಿಶಲ್ ಹಾಕಿದರು. ಜೋರುಜೋರಾಗಿ ಆನೆಯನ್ನು ತೋರಿಸಿ ಮಾತನಾಡತೊಡಗಿದರು. ಅವರಿಗೇನು, ಸುರಕ್ಷಿತ ದೂರದಲ್ಲಿ ಇದ್ದರಷ್ಟೆ. ಆನೆಗೆ ಕಿರಿಕಿರಿಯಾಯಿತು. ನಮ್ಮ ಹೃದಯಗಳು ಬಾಯಿಗೇ ಬಂದುಬಿಟ್ಟವು. ಆನೆ ತಿರುಗಿ ನನ್ನ ಕಾರಿನ ಕಡೆಗೇ ಮುಖ ಮಾಡಿತು. ಅದರ ಉದ್ದ ದಂತಗಳು ಇರಿಯುವಂತೆ ನಮ್ಮ ಕಡೆಗೇ ನೋಡಿದವು. ಇನ್ನೇನು ಅದು ನಾಲ್ಕು ಹೆಜ್ಜೆ ಹಾಕಿ ಸೊಂಡಿಲು ಚಾಚಿದರೆ ನಾವು ಸಿಕ್ಕಿಬಿಡುತ್ತೇವೆ. ಆ ಸೊಂಡಿಲು ಯಮಪಾಶದಂತೆಯೇ ಕಾಣಿಸತೊಡಗಿತು. ನಮ್ಮ ಅದೃಷ್ಟ, ಆನೆ ನಮ್ಮನ್ನು ಕ್ಷುಲ್ಲಕವಾಗಿ ನೋಡಿ ನಿಧಾನವಾಗಿ ರಸ್ತೆಯ ಇನ್ನೊಂದು ಬದಿಗೆ ಸರಿದು ಹೊರಟುಹೋಯಿತು. ಹೊರಟಿದ್ದ ನಮ್ಮ ಜೀವ ಮರಳಿ ಬಂತು. ನನಗೆ ಶಿಕ್ಷಿಸುವ ಅಧಿಕಾರ ಇದ್ದಿದ್ದರೆ, ಅಂದು ಅಲ್ಲಿ ಗಲಾಟೆ ಮಾಡಿದವರಿಗೆ ಖಂಡಿತವಾಗಿಯೂ ಮರಣದಂಡನೆ ವಿಧಿಸುತ್ತಿದ್ದೆ ಎಂಬುದು ಖಾತ್ರಿ.

ವನ್ಯಜೀವಿಗಳು, ಇತರ ಪ್ರಾಣಿಗಳ ಜತೆಗೆ ಹೇಗೆ ನಡೆದುಕೊಳ್ಳಬೇಕು ಎಂಬುದೇ ನಮಗೆ ಗೊತ್ತಿಲ್ಲ. ಮನುಷ್ಯನಿಗೆ ಇರುವಂತೆಯೇ ಅವುಗಳಿಗೂ ಘನತೆ ಇದೆ ಎಂಬ ಸೂಕ್ಷ್ಮ ಹೆಚ್ಚಿನವರಿಗೆ ಇಲ್ಲ. ಹೀಗಾಗಿಯೇ ಇಂಥ ಸನ್ನಿವೇಶಗಳಲ್ಲಿ ನಾವು ಮೈಮೇಲೆ ಅಪಾಯ ಎಳೆದುಕೊಳ್ಳುತ್ತೇವೆ. ಕಾಡಿನಲ್ಲಿ, ಕಾಡುಪ್ರಾಣಿಗಳ ಸಮ್ಮುಖದಲ್ಲಿ ಮೌನವಾಗಿರಬೇಕು, ಹಾರನ್ ಹಾಕಕೂಡದು, ಮಾತನಾಡದಿದ್ದರೆ ಒಳ್ಳೆಯದು, ಸಡನ್ ಮೂವ್‌ಮೆಂಟ್‌ಗಳು ಇರಬಾರದು, ಅವುಗಳ ದಾರಿಗೆ ಅಡ್ಡ ನಿಲ್ಲಕೂಡದು, ಕಾಡಿನಲ್ಲಿ ಢಾಳಾದ ಬಣ್ಣದ ಬಟ್ಟೆ ಧರಿಸುವಂತಿಲ್ಲ, ಹತ್ತಿರ ಹೋಗಬಾರದು, ಅವುಗಳಿಗೆ ಆಹಾರ ಕೊಡಕೂಡದು, ಅಭಯಾರಣ್ಯದಲ್ಲಿ ವಾಹನ ಇಳಿಯುವಂತಿಲ್ಲ- ಇಂಥದನ್ನೆಲ್ಲ ಸಣ್ಣ ಪ್ರಾಯದಿಂದಲೇ ಮಕ್ಕಳಿಗೆ ಗೊತ್ತು ಮಾಡಿಸಿರುವುದಿಲ್ಲ. ಇಂದು ಕಾಡಿನ ಸಫಾರಿಗೆ ಭೇಟಿ ಕೊಡುವವರಲ್ಲಿ ನೂರಕ್ಕೆ ತೊಂಬತ್ತು ಭಾಗ ವನ್ಯ-ಅಶಿಕ್ಷಿತರು ಹಾಗೂ ಮೂರ್ಖರು. ಗಾರ್ಡುಗಳು ಎಷ್ಟು ತಿಳಿಸಿಹೇಳಿದರೂ ಕೂಗಾಡುವುದು, ಕಿರಿಚಾಡುವುದು ಮಾಡಿ ಆ ಪ್ರಾಣಿಗಳ ನೆಮ್ಮದಿ ಕೆಡಿಸುತ್ತಾರೆ. ಮೌನವಾಗಿ ಅವುಗಳನ್ನು ವೀಕ್ಷಿಸುವುದರಲ್ಲಿ ಆನಂದವಿದೆ ಎಂಬುದು ಇವರಿಗೆ ಅರ್ಥವಾಗದು.

ಹೀಗೆ ಮನುಷ್ಯ ವನ್ಯಜೀವಿಗಳಿಗೆ ತೊಂದರೆ ಕೊಡದೇ ಇರುವುದನ್ನು ಕಲಿಯುವವರೆಗೂ ಆತನನ್ನೇ ಕಾಡುಪ್ರಾಣಿಗಳಿಂದ ದೂರ ಇಡುವುದು ಒಳ್ಳೆಯದು. ಹೀಗಾಗಿಯೇ, ಬಂಡಿಪುರ, ನಾಗರಹೊಳೆ ಹುಲಿಧಾಮದ ಮೂಲಕ ಹಾದುಹೋಗುವ ರಸ್ತೆಯಲ್ಲಿ ರಾತ್ರಿ ಪ್ರಯಾಣಕ್ಕೆ ಅವಕಾಶ ಕಲ್ಪಿಸಕೂಡದು ಎನ್ನುವುದು. ಇದು ಮನುಷ್ಯನಿಗೂ ಮೃಗಗಳಿಗೂ ಏಕಕಾಲಕ್ಕೆ ಒಳ್ಳೆಯದು. ಆದರೆ ರಾಜಕೀಯವು ಮನುಷ್ಯನಿಂದ ಮಾಡಬಾರದ್ದನ್ನು ಮಾಡಿಸುತ್ತದೆ. ಇತ್ತೀಚೆಗೆ ವಯನಾಡಿನಲ್ಲಿ ಪ್ರಚಾರದ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕ ಗಾಂಧಿ ''ಬಂಡೀಪುರ ಹುಲಿ ವನ್ಯಧಾಮದಲ್ಲಿ ಕರ್ನಾಟಕ ಹಾಗೂ ಕೇರಳ ನಡುವೆ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಈಗಿರುವ ವಾಹನಗಳ ರಾತ್ರಿ ಸಂಚಾರ ನಿಷೇಧ ತೆರವು ಮಾಡುವಂತೆ ಕರ್ನಾಟಕ ಸರಕಾರಕ್ಕೆ ಸೂಚಿಸುತ್ತೇನೆ'' ಎಂದು ಭರವಸೆ ನೀಡಿ ಚಪ್ಪಾಳೆ ಗಿಟ್ಟಿಸಿದರು. ಇದರಿಂದ ಕೇರಳದ ವಯನಾಡು ಭಾಗದವರಿಗೆ ಕರ್ನಾಟಕಕ್ಕೆ ರಾತ್ರಿ ಸಂಚಾರಕ್ಕೆ ತೊಂದರೆಯಾಗುತ್ತದಂತೆ. ಇದಕ್ಕೆ ಪರಿಹಾರ ಕೊಡಿಸುತ್ತಾರಂತೆ. ಇದನ್ನು ಕರ್ನಾಟಕದ ಆಡಳಿತಗಾರರೂ ಗಂಭೀರವಾಗಿ ತೆಗೆದುಕೊಂಡು ರಾತ್ರಿ ಸಂಚಾರ ಮುಕ್ತಗೊಳಿಸಿದರೆ ಗತಿಯೇನು?

ಇಲ್ಲಿ ರಾತ್ರಿ ಸಂಚಾರ ಮುಕ್ತಗೊಳಿಸುವುದು ಎಂದರೆ ವನ್ಯಜೀವಿಗಳಿಗೆ ಮರಣಶಾಸನ ಬರೆದಂತೆಯೇ ಸರಿ. ಈ ರಾಷ್ಟ್ರೀಯ ಹೆದ್ದಾರಿ 766, ಕರ್ನಾಟಕದ ಕೊಳ್ಳೇಗಾಲದಿಂದ ಕೇರಳದ ಕೋಝಿಕ್ಕೋಡ್‌ಗೆ ಸಂಪರ್ಕ ಒದಗಿಸುತ್ತದೆ. ಬಂಡೀಪುರದ ಸುಮಾರು 21 ಕಿಲೋಮೀಟರ್ ದಟ್ಟ ಕಾಡಿನಲ್ಲಿ ಇದು ಹಾದುಹೋಗುತ್ತದೆ. ಜತೆಗೆ ವಯನಾಡ್ ವನ್ಯಜೀವಿ ಅಭಯಾರಣ್ಯದಲ್ಲೂ. ರಾತ್ರಿ ವಾಹನ ಸಂಚಾರವಿದ್ದಾಗ ಇಲ್ಲಿ ವಾಹನಕ್ಕೆ ಸಿಕ್ಕಿ ಸತ್ತ ಚಿರತೆಗಳು, ಜಿಂಕೆಗಳು, ಹಾವುಗಳು ಮತ್ತಿತರ ಸಣ್ಣ ಪ್ರಾಣಿಗಳಿಗೆ ಲೆಕ್ಕವೇ ಇಲ್ಲ. ಕೊನೆಗೂ ಕರ್ನಾಟಕದ ಬಂಡೀಪುರ ಹಾಗೂ ನಾಗರಹೊಳೆ ಭಾಗದ ಐದು ರಸ್ತೆಗಳಲ್ಲಿ 2009ರಲ್ಲಿ ರಾತ್ರಿ ವಾಹನ ಸಂಚಾರ ನಿಷೇಧಿಸಲಾಯಿತು. ಬಂಡೀಪುರದಲ್ಲಿ ರಾತ್ರಿ 9ರಿಂದ ಬೆಳಗ್ಗೆ 6, ನಾಗರಹೊಳೆಯಲ್ಲಿ ಸಂಜೆ 6ರಿಂದ ಬೆಳಗಿನ 6ರವರೆಗೆ ಈ ಸಂಚಾರ ನಿಷೇಧವಿದೆ. 2010ರಲ್ಲಿ ಕರ್ನಾಟಕ ಹೈಕೋರ್ಟ್ ಈ ಆದೇಶವನ್ನು ಎತ್ತಿ ಹಿಡಿದಿತ್ತು. ಅತ್ತ ಕೇರಳದವರು ಇದನ್ನು ತೆಗೆಸಿಹಾಕಲು ಯತ್ನಿಸುತ್ತಲೇ ಇದ್ದಾರೆ. ಕನಿಷ್ಠ ಪಕ್ಷ, ರಾತ್ರಿಯಾದರೂ ಈ ಜೀವಿಗಳಿಗೆ ವಾಹನಗಳ ಓಡಾಟ, ಜನಗಳ ಗದ್ದಲವಿಲ್ಲದ ನೆಮ್ಮದಿಯ ಸಮಯವನ್ನು ಕಲ್ಪಿಸಿಕೊಡಬೇಕು ಎಂಬುದನ್ನು ಇವರಿಗೆ ಮನದಟ್ಟು ಮಾಡಿಕೊಡುವವರಾದರೂ ಯಾರು?

ಇದನ್ನೆಲ್ಲ ನೋಡುವಾಗ, ಇಂಗ್ಲಿಷ್‌ನ ಖ್ಯಾತ ಸಾಹಿತಿ ಡಿ.ಎಚ್ ಲಾರೆನ್ಸ್ ಬರೆದ ಪದ್ಯವೊಂದು ನೆನಪಾಗುತ್ತದೆ. 'ಸ್ನೇಕ್' ಎಂಬುದು ಪದ್ಯದ ಹೆಸರು. ಮನುಷ್ಯ ಹಾಗೂ ಹಾವೊಂದರ ಮುಖಾಮುಖಿಯ ಈ ಪದ್ಯ, ಮನುಷ್ಯ ಹಾಗೂ ಮೃಗದ ಮುಖಾಮುಖಿಯ ನಡುವೆ ಎದ್ದು ನಿಲ್ಲುವ ಸೂಕ್ಷ್ಮಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಕವನದ ನಿರೂಪಕ ಕುಡಿಯುವ ನೀರು ತರಲೆಂದು ಸಣ್ಣ ಕೊಳವೊಂದರ ಬಳಿ ಹೋಗುತ್ತಾನೆ: 'A snake came to my water-trough On a hot, hot day, and I in pyjamas for the heat, To drink there' ಎಂದು ಪದ್ಯ ಆರಂಭವಾಗುತ್ತದೆ. ಹಳದಿ-ಕಂದು ಬಣ್ಣದ ಮಿಶ್ರಣದ ತನ್ನ ಮೈಯನ್ನು ಮೃದುವಾಗಿ ಜಾರಿಸುತ್ತ ಈ ಹಾವು ಕೊಳದ ಮಣ್ಣಿನ ಗೋಡೆಯ ಸಣ್ಣ ಬಿಲದಿಂದ ಹೊರಗೆ ಬಂದು, ಇಳಿದು ನೀರು ಕುಡಿಯಲೆಂದು ಮೂತಿ ಚಾಚುತ್ತದೆ. ಕೊಳದಿಂದ ನೀರು ತುಂಬಿಸಿಕೊಳ್ಳಲೆಂದು ಕೊಡಪಾನ ಹಿಡಿದು ಹೆಜ್ಜೆ ಹಾಕುತ್ತಿದ್ದ ನಿರೂಪಕ ಹಾವನ್ನು ನೋಡಿ ಹಾಗೇ ಥಟ್ಟನೆ ನಿಂತುಬಿಡುತ್ತಾನೆ. ಹಾವು ನೀರು ಕುಡಿಯುತ್ತಿರುವುದನ್ನು ನೋಡುತ್ತಾನೆ. ಅವನ ಮನಸ್ಸಿನಲ್ಲಿ ಮೊದಲು ಹಾದು ಹೋಗುವ ಭಾವ- 'ನನಗಿಂತ ಮೊದಲು ಇದು ಬಂದಿದೆ, ನಾನು ಎರಡನೆಯವನು, ನಾನೀಗ ನನ್ನ ಸರದಿಗೆ ಕಾಯಬೇಕು' ಎನ್ನುವುದು.

ಹಾವು ನೀರು ಕುಡಿಯುವುದರ ನಡುವೆ ಒಮ್ಮೆ ತಲೆ ಎತ್ತಿ ಮನುಷ್ಯನತ್ತ ನೋಡಿ ಸೀಳುನಾಲಗೆಯನ್ನು ಒಮ್ಮೆ ಹೊರಚಾಚಿ, ಮತ್ತೆ ನೀರಿನತ್ತ ತಲೆ ಚಾಚುತ್ತದೆ. ನಿರೂಪಕನ ಶಿಕ್ಷಿತ ಬುದ್ಧಿ ಆತನಿಗೆ 'ಇದು ವಿಷದ ಹಾವು, ಇದನ್ನು ಕೊಲ್ಲು' ಎಂದು ಎಚ್ಚರಿಸುತ್ತದೆ. 'ನೀನು ಗಂಡಸಾಗಿದ್ದರೆ ಒಂದು ಕೋಲು ತೆಗೆದುಕೊಂಡು ಅದನ್ನು ಹೊಡೆದುಹಾಕು' ಎಂದು ಆತನೊಳಗಿನ 'ಮೃಗ' ಎಚ್ಚರಿಸುತ್ತದೆ. ಆದರೆ 'ಉರಿವ ಭೂಮಿಯ ಗರ್ಭದಿಂದ' ಎದ್ದು ತನ್ನ ಕೊಳದ ಅತಿಥಿಯಾಗಿ ಬಂದಿರುವ ಆ ಹಾವನ್ನು ನೋಡುತ್ತಾ ನಿಂತಿರುವ ಆತನಿಗೆ, ಅದನ್ನು ಹೊಡೆದುಹಾಕಲು ಮನಸ್ಸಿಲ್ಲ. ಆದರೆ ತನ್ನ ಈ ನಡೆ ಹೇಡಿತನವೋ, ಔದಾರ್ಯವೋ, ಮಾನವೀಯತೆಯೋ ಎಂಬುದೂ ಅವನಿಗೆ ಗೊತ್ತಾಗುತ್ತಿಲ್ಲ.

ನಿರೂಪಕ ಒಳಗೇ ಅಂಜಿದ್ದಾನೆ. ಆದರೆ ನೆಲದ ನಿಗೂಢ ಗರ್ಭದಿಂದ ಬಂದಿರುವ ಈ ಅತಿಥಿಗೆ ಆತಿಥ್ಯ ನೀಡುವ ಯೋಚನೆ ಕೂಡ ಅವನಲ್ಲಿದೆ. ಒಂದು ಹಂತದಲ್ಲಿ ಹಾವು ನೀರು ಕುಡಿದು ಸಂತೃಪ್ತಗೊಂಡು ಮತ್ತೊಮ್ಮೆ ತಲೆಯೆತ್ತಿ ಸೀಳುನಾಲಗೆ ಚಾಚಿ, ತಲೆ ತಿರುಗಿಸಿ ತಾನು ಬಂದ ಬಿಲದೆಡೆಗೇ ಮರಳಿ ಹೋಗಲು ಅಣಿಯಾಗುತ್ತದೆ. ಬಿಲದಲ್ಲಿ ತಲೆತೂರಿಸಿ ಅರ್ಧಭಾಗ ಹೋಗುತ್ತಿದ್ದಂತೆಯೇ ಆತನಲ್ಲಿ ಭಯ, ಆತಂಕ, ಸಿಟ್ಟು, ಪ್ರತಿಭಟನೆ ಎಲ್ಲವೂ ಎಚ್ಚೆತ್ತುಕೊಳ್ಳುತ್ತವೆ. ಅಲ್ಲೇ ಬಿದ್ದಿದ್ದ ಕೋಲೊಂದನ್ನು ಎತ್ತಿಕೊಂಡು ಅದರೆಡೆಗೆ ಬೀಸಿ ಎಸೆಯುತ್ತಾನೆ. ಹಾವು ಬಿಲದೊಳಗೆ ಮಿಂಚಿನಂತೆ ಮಾಯವಾಗುತ್ತದೆ.

ಹಾವಿನ ಬಾಲಕ್ಕೆ ಈ ಕೋಲು ತಾಗಿರಬಹುದು, ಇಲ್ಲದಿರಬಹುದು. ನಿರೂಪಕನಿಗೂ ಗೊತ್ತಿಲ್ಲ. ಆದರೆ ಆ ಕ್ಷಣದಿಂದ ನಿರೂಪಕನನ್ನು ಪಶ್ಚಾತ್ತಾಪವೊಂದು ಆವರಿಸುತ್ತದೆ. ತನ್ನ ಕೃತ್ಯ ಎಷ್ಟು ಅಸಹ್ಯದ್ದು, ಸಣ್ಣತನದ್ದು ಎಂದು ನಾಚಿಕೆಯೆನಿಸುತ್ತದೆ. 'ಮನುಷ್ಯ ಶಿಕ್ಷಣ'ದಿಂದ ತಾನು ರೂಢಿಸಿಕೊಂಡ ಕೆಲವು ಕ್ಷುಲ್ಲಕ ಗುಣಗಳನ್ನು ಮೀರಿ ನಿಲ್ಲದುದಕ್ಕಾಗಿ ತನ್ನ ಬಗ್ಗೆಯೇ ಆತನಿಗೆ ಅಸಹ್ಯವೆನಿಸುತ್ತದೆ. 'ಕಿರೀಟವಿಲ್ಲದ, ಪದಚ್ಯುತ ರಾಜ'ನಂತಿದ್ದ ಆ ಹಾವನ್ನು ತಾನು ನಡೆಸಿಕೊಂಡ ಬಗೆಯನ್ನು ನೆನೆದು ಆತ ಕೊರಗುತ್ತಾನೆ. ಜೀವನದಲ್ಲಿ ಕೆಲವೊಮ್ಮೆ ಮಾತ್ರ ಬರಬಹುದಾದ, ರಾಜನ ಜತೆಗಿನ ಮುಖಾಮುಖಿಯನ್ನು ಸರಿಯಾಗಿ ನಡೆಸಲಾಗದಿದ್ದಕ್ಕಾಗಿ ವಿಷಾದಿಸುತ್ತಾನೆ.

ಲಾರೆನ್ಸನ ಈ ಕವನಕ್ಕೆ ಇನ್ನೂ ಬೇರೆ ತಾತ್ವಿಕ ಅರ್ಥಗಳೂ ಇವೆ. ಆದರೆ ಸದ್ಯ ನಮಗೆ ಈ ಆಯಾಮ ಸಾಕು. ನಾವು ಇಲ್ಲಿ ಎರಡನೆಯವರಾಗಿ ಬಂದವರು. ವನ್ಯಜೀವಿಗಳು ನಮಗಿಂತ ಮೊದಲೇ ಇದ್ದವು. ಅರಣ್ಯಗಳು ಮೊದಲೇ ಇದ್ದವು, ನಾವು ನಗರಗಳನ್ನೂ ಹೆದ್ದಾರಿಗಳನ್ನೂ ಕಟ್ಟಿದೆವು. ಹೀಗಾಗಿ ವನ್ಯಜೀವಿಗಳು ಇಲ್ಲಿನ ಸಹಜ ಹಕ್ಕುದಾರರು, ನಾವು ಎರಡನೇ ದರ್ಜೆಯ ಪ್ರಜೆಗಳು ಎಂಬುದು ನಮ್ಮ ಅರಿವಿನಲ್ಲಿದ್ದರೆ ಸಾಕು, ಉಳಿದ ಘನತೆ ಸಭ್ಯತೆಗಳು ನಮ್ಮ ನಡತೆಗೆ ತಾನೇತಾನಾಗಿ ದಕ್ಕುತ್ತವೆ.

ತನ್ನಿಮಿತ್ತ

ಶ್ರೀನಿವಾಸ ರಾಘವೇಂದ್ರ, ಮೈಸೂರು

ಸ್ಥಿತಪ್ರಜ್ಞತೆಯ ಸಾಕಾರಮೂರ್ತಿ

ಸನಾತನ ಹಿಂದೂ ಧರ್ಮದಲ್ಲಿ ಸಮಾಜಜೀವಿ ಮನುಷ್ಯನಿಗೆ ಬರುವ ನಾಲ್ಕು ಅವಸ್ಥೆಗಳೆಂದರೆ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ಇವನ್ನು ಆಶ್ರಮಗಳೆನ್ನುತ್ತಾರೆ. ಉಪನಯನ ಸಂಸ್ಕಾರ ಪಡೆದು ಗುರುಗಳ ಬಳಿ ಅಧ್ಯಯನದಲ್ಲಿ ತೊಡಗಿಕೊಳ್ಳುವುದು ಬ್ರಹ್ಮಚರ್ಯ. ಅಧ್ಯಯನದ ಅಂತಿಮ ಹಂತದಲ್ಲಿ (ಅಂದರೆ ಇಂದಿನ ಗ್ರಾಜುಯೇಷನ್) ಗುರುಕುಲ ಜೀವನದಿಂದ ಹೊರಬಂದು ಯೋಗ್ಯಕನ್ಯೆಯನ್ನು ವಿವಾಹವಾಗಿ ಸಂಸಾರ ನಿರ್ವಹಿಸುವುದು ಗೃಹಸ್ಥ ಧರ್ಮ. ಇದು ಅಸಹನೀಯ ಎನಿಸಿದಾಗ ಪುತ್ರ, ಮಿತ್ರ, ಕಳತ್ರ (ಹೆಂಡತಿ)ರನ್ನು ತೊರೆದು ಕಾಡಿಗೆ ಹೋಗಿ ಅಲ್ಲಿನ ಆಹಾರವನ್ನೇ ಅವಲಂಬಿಸಿ ಏಕಾಂತದ ಭಗವದ್ಧ್ಯಾನದಲ್ಲಿ ತೊಡಗುವುದು ವಾನಪ್ರಸ್ಥ ಜೀವನ. ಕಡೆಗೆ ಅದರಲ್ಲೂ ಬೇಸರಿಕೆ ಬಂದು 'ತಾನಲ್ಲ ತನ್ನದಲ್ಲ ತರವಲ್ಲ' ಎಂಬ ಭಾವನೆಯಿಂದ ಎಲ್ಲವನ್ನೂ ತ್ಯಜಿಸಿ ಭಗವಂತನ ಧ್ಯಾನ ದಲ್ಲೇ ಏಕಮನಸ್ಕನಾಗಿ ತೊಡಗುವುದೇ ಸನ್ಯಾಸ. ಹುಟ್ಟಿದ ಮನುಷ್ಯ ಅಬ್ಬಬ್ಬಾ ಎಂದರೆ ಒಂದು ಅಥವಾ ಎರಡು ಆಶ್ರಮ ದಲ್ಲಿರಬಹುದು,



ಅಷ್ಟೇ! ಎಲ್ಲಾ ನಾಲ್ಕೂ ಆಶ್ರಮಗಳನ್ನು ಗಟ್ಟಿಯಾಗಿ ಹಿಡಿದು ಸಾರ್ಥಕ ಜೀವನ ಸಾಧನೆ ಮಾಡುವವರು ಅತಿವಿರಳ! ಅಂಥವರಲ್ಲಿ ಒಬ್ಬರಾಗಿದ್ದರು ಕರ್ನಾಟಕದ ರಾಯಚೂರು ಜಿಲ್ಲೆಯ ಗಡಚಿಂತಿ ರಾಮಾಚಾರ್ಯರು.

ಗಡಚಿಂತಿ ರಾಮಾಚಾರ್ಯರು ಜನಿಸಿದ್ದು 1930ರ ದಶಕದಲ್ಲಿ. ತಂದೆ ನರಸಿಂಹಾಚಾರ್ಯರು, ತಾಯಿ ಗಿರಿಜಾಬಾಯಿಯವರು. ಆ ಕಾಲದಲ್ಲಿ ಇಂಟರ್‌ಮೀಡಿಯೆಟ್‌ವರೆಗೆ ಓದಿದ ರಾಮಾಚಾರ್ಯರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕೆಲಕಾಲ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದೂ ಇದೆ. ಅದು ಹೈದರಾಬಾದ್‌ನ ನಿಜಾಮನ ಕಾಲ. ಮುಂದೆ ಇವರಿಗೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಸಿಕ್ಕಿತು. ರಾಮಾಚಾರ್ಯರ ದೇಹದಾರ್ಢ್ಯವೂ ಹಾಗೇ ಇತ್ತು ಎನ್ನಿ- ಆರಡಿ ಎತ್ತರ, ಜತೆಗೆ ಹೊಂದಿಕೆಯಾಗುವ ಕಟ್ಟುಮಸ್ತು ಶರೀರ. ಒಟ್ಟಿನಲ್ಲಿ, ಕಳ್ಳರಿಗೆ, ಸಮಾಜಘಾತುಕರಿಗೆ ಸಿಂಹಸ್ವಪ್ನ ಎನಿಸುವಂಥ ಚರ್ಯೆ! ಹೈದರಾಬಾದ್ (ಹಿಂದಿನ ಭಾಗ್ಯನಗರ), ಗುಲ್ಬರ್ಗ, ರಾಯಚೂರು ಪ್ರಾಂತ್ಯಗಳಲ್ಲಿ ಕೆಲಸದಲ್ಲಿ ತೊಡಗಿ, 'ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ' ಮಾಡುತ್ತಾ ಖಡಕ್ ಪೊಲೀಸ್ ಅಧಿಕಾರಿ ಎನಿಸಿಕೊಂಡಿದ್ದರು! ಒಮ್ಮೆ, ರಾಮಾಚಾರ್ಯರಿಂದ ಬಂಧನಕ್ಕೊಳಗಾಗಬೇಕಾಗಿ ಬಂದ ಕೊಲೆಗಡುಕನೊಬ್ಬ ಇವರಿಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡುಬಿಟ್ಟ. ಇದು ಆಚಾರ್ಯರ ವೃತ್ತಿಜೀವನದ ಮೇಲೆ ಬಹಳ ಪರಿಣಾಮ ಬೀರಿತು. ''ನನ್ನಿಂದಾಗಿ ಒಬ್ಬ ಜೀವ ಕಳೆದುಕೊಳ್ಳಬೇಕಾಗಿ ಬಂತಲ್ಲಾ...'' ಎಂದು ಪರಿತಪಿಸಿ ವೃತ್ತಿಗೆ ರಾಜೀನಾಮೆ ನೀಡಿ ಹೊರಬಂದರು! ಹೆಂಡತಿ-ಮಕ್ಕಳನ್ನು ತೊರೆದು ಹಿಮಾಲಯದತ್ತ ಮುಖಮಾಡಿದರು. ಒಂದು ದಶಕಕ್ಕೂ ಹೆಚ್ಚು ಕಾಲ ಹಿಮಾಲಯದ ಒಡನಾಟ, ಮಾನಸ ಸರೋವರ ಯಾತ್ರೆಯ ಸಾಂಗತ್ಯ ಒದಗಿತು.

ಹೀಗೆ ಉತ್ತರ ಭಾರತದಲ್ಲಿ ಸಂಚರಿಸುತ್ತಿದ್ದಾಗ ಇವರಿಗೆ ಉಡುಪಿಯ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರ ಸಂಪರ್ಕ ಒದಗಿತು. ಹಿಂದಿನ ವೃತ್ತಿಜೀವನದಲ್ಲಿ ಅಮರಿಕೊಂಡ 'ತಪ್ತಿತಸ್ಥ ಪ್ರಜ್ಞೆ'ಯಿಂದ ನೊಂದಿದ್ದ ಆಚಾರ್ಯರು, ಅಧ್ಯಾತ್ಮ ವಿದ್ಯೆಯನ್ನು ಪಡೆಯುವ ಹಂಬಲದಲ್ಲಿ ಶ್ರೀಗಳಿಗೆ ಶರಣಾದರು. ರಾಮಾಚಾರ್ಯರನ್ನು ಪರೀಕ್ಷಿಸಿದ ಶ್ರೀಗಳು ಅವರ ನಿಸ್ಪೃಹತೆ, ಭಕ್ತಿ, ಅಧ್ಯಾತ್ಮದ ಹಂಬಲ ಕಂಡು, ತಾವು ವಿದ್ಯಾರ್ಥಿಗಳಿಗೆ ಪಾಠ ಹೇಳುವ ವೇಳೆ ಇವರಿಗೂ ಪಾಠಕ್ಕೆ ಕೂರುವುದಕ್ಕೆ ಅವಕಾಶ ಮಾಡಿಕೊಟ್ಟರು. ಮಹಾತ್ಮ ಗಾಂಧೀಜಿಯಂತೆ ಇವರದ್ದೂ ಮೊಣಕಾಲಿನವರೆಗಿನ ಪಂಚೆ, ಒಂದು ಹೊದೆಯುವ ವಸ್ತ್ರ. ಇಷ್ಟೇ ವೇಷಭೂಷಣ! ಶ್ರೀಗಳವರ ಪರಿಚರ್ಯೆ ಮಾಡುತ್ತಾ ಅವರನ್ನು ನೆರಳಿನಂತೆ ಹಿಂಬಾಲಿಸಿದ ರಾಮಾಚಾರ್ಯರಿಗೆ ಶ್ರೀ ಮಧ್ವಶಾಸ್ತ್ರದ ಉದ್ಗ್ರಂಥಗಳ ಸರ್ವಮೂಲ ಪರಿಚಯವಾಯಿತು.

ಹಿತಮಿತ ಆಹಾರ ಪ್ರವೃತ್ತಿ, ಏಕಾಂಗಿತನ ಕೆನೆಗಟ್ಟಿದ್ದ ಆಚಾರ್ಯರ ಹಿಂದಿ ಮತ್ತು ಉರ್ದು ಭಾಷಾ ಪ್ರೌಢಿಮೆ ಶ್ರೀಗಳನ್ನು ಆಕರ್ಷಿಸಿತ್ತು. 15 ವರ್ಷಗಳ ಕಾಲ ಶ್ರೀಗಳ ಬಳಿ ಅಧ್ಯಯನ ನಡೆಯಿತು. ರಾಮಾಚಾರ್ಯರ ವಿರಕ್ತ ಜೀವನವನ್ನು ಗಮನಿಸಿದ್ದ ಶ್ರೀಗಳು ಮುಂದೊಂದು ದಿನ ಅವರಿಗೆ 'ಪ್ರಣವ ಮಂತ್ರ'ವನ್ನು ಉಪದೇಶಿಸಿ, 'ಶ್ರೀ ವಿದ್ಯಾವಲ್ಲಭ ತೀರ್ಥ'ರೆಂದು ನಾಮಕರಣ ಮಾಡಿ ಸನ್ಯಾಸಾಶ್ರಮ ಕೊಟ್ಟರು. ಶ್ರೀ ಮಧ್ವಾಚಾರ್ಯರ ತತ್ತ್ವಗಳನ್ನು ಉತ್ತರ ಭಾರತದಲ್ಲಿ ಪ್ರಸಾರ ಮಾಡುವಂತೆ ಆಜ್ಞಾಪಿಸಿದರು. ಶ್ರೀಗಳ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದ ಶ್ರೀ ವಿದ್ಯಾವಲ್ಲಭ ತೀರ್ಥರು, ಉತ್ತರ ಪ್ರದೇಶದ ಗಂಗಾ-ಯಮುನಾ-ಸರಸ್ವತಿ ನದಿಗಳ ಸಂಗಮ ಪ್ರದೇಶವಾದ, ಪುರಾಣ ಪ್ರಸಿದ್ಧ ಪ್ರಯಾಗ ಕ್ಷೇತ್ರದಲ್ಲಿ ನೆಲೆನಿಂತರು. ಕುಂಭಮೇಳ ಸಮಯದಲ್ಲಿ ಇವರು ಮಾಡುತ್ತಿದ್ದ ಭಗವದ್ಗೀತಾ ಪ್ರವಚನವು ಅಲ್ಲಿಯ ಜನರನ್ನು ಬಹಳವಾಗಿ ಆಕರ್ಷಿಸಿತು. ಸರಕಾರವು ಇವರಿಗಾಗಿ ಮಾಘಮೇಳ, ಕುಂಭಮೇಳದ ವೇಳೆಯಲ್ಲಿ ನದಿದಡದಲ್ಲಿ ಒಂದು ಡೇರೆಯನ್ನು ಕೊಡುತ್ತಿತ್ತು. ಅಲ್ಲಿ ನಿರಂತರ ಪಾಠ-ಪ್ರವಚನಗಳಲ್ಲಿ ತೊಡಗಿಸಿಕೊಂಡಿದ್ದರ ಫಲವಾಗಿ ಸಾಕಷ್ಟು ಜನರೂ ಇವರ ಶಿಷ್ಯರಾದರು. ಅದು ಸಮಾಜಸೇವೆಗೆ ಮುನ್ನುಡಿ ಬರೆದು, ಪ್ರಯಾಗದ ದಾರಾಗಂಜ್ ಪ್ರದೇಶದಲ್ಲಿ ಭವ್ಯವಾದ 'ಶ್ರೀ ಮಧ್ವಭವನ' ನಿರ್ಮಾಣವಾಯಿತು. ಗಂಗಾಸ್ನಾನ, ತ್ರಿವೇಣಿ ದಾನಕ್ಕೆಂದು ಪ್ರಯಾಗಕ್ಕೆ ಹೋಗುವ ಕರ್ನಾಟಕದ ಯಾತ್ರಾರ್ಥಿಗಳಿಗೆ ತಂಗಲು ಈ ಭವನವು ಅನುಕೂಲಕರವಾಗಿದೆ.

ಶ್ರೀ ವಿದ್ಯಾವಲ್ಲಭ ತೀರ್ಥರ ದಿವ್ಯಸಾಂಗತ್ಯದ ಕ್ಷಣವೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು. 1989ರಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಯರ ಮಠದಲ್ಲಿ ಶ್ರೀಗಳು ಚಾತುರ್ಮಾಸ್ಯ ವ್ರತ ಕೈಗೊಂಡರು. ಶ್ರೀಗಳು 'ಶ್ರೀ ಭಗವದ್ಗೀತಾ' ಪ್ರವಚನವನ್ನು ಮಾಡುತ್ತಿದ್ದರು. ಮಧ್ಯಾಹ್ನ 1.30ರ ವೇಳೆಗೆ ಭಿಕ್ಷೆ ಸ್ವೀಕರಿಸುತ್ತಿದ್ದ ಶ್ರೀ ವಿದ್ಯಾವಲ್ಲಭರು ತರುವಾಯ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದುದು ವಾಡಿಕೆ. ಆ ವೇಳೆಯಲ್ಲಿ ನಾನು ಅವರನ್ನು ಭೇಟಿಯಾಗುತ್ತಿದ್ದೆ. ಅವರಿಗೆ ಲೋಕವಾರ್ತೆಯನ್ನು ತಿಳಿಸುವ ಸಲುವಾಗಿ ಪ್ರತಿನಿತ್ಯವೂ 'ಪ್ರಜಾವಾಣಿ' ಪತ್ರಿಕೆಯನ್ನು ಅವರ ಮುಂದೆ ಹಿಡಿದು ಶೀರ್ಷಿಕೆಗಳನ್ನು ಮಾತ್ರ ಓದುತ್ತಿದ್ದೆ. ಶ್ರೀಗಳಿಗೆ ಇಷ್ಟವಾದ ಶೀರ್ಷಿಕೆಗೆ ಸಂಬಂಧಿಸಿದ ಸಮಾಚಾರವನ್ನು ವಿಶದವಾಗಿ ಓದಿಹೇಳುತ್ತಿದ್ದೆ. ಒಮ್ಮೆ, ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಮಠದ ಬಯಲು ಬಾವಿಯ ದಡದಲ್ಲಿ ಕುಳಿತ, ಚಿತ್ತಸ್ಥಿಮಿತ ಕಳೆದುಕೊಂಡ ತಾಯಿಯೊಬ್ಬಳು ತನ್ನ ಇಬ್ಬರು ಮಕ್ಕಳನ್ನು ನೀರಿಗೆ ತಳ್ಳಿ ಕೊಂದ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಹೆಣ್ಣುಮಗಳು ಯಾರ ಹೆಂಡತಿ ಎಂಬ ವಿವರವೂ ಅದರಲ್ಲಿತ್ತು. ಎಂದಿನಂತೆ ನಾನು ಸುದ್ದಿಶೀರ್ಷಿಕೆಯನ್ನಷ್ಟೇ ಓದಿ ಹೇಳಿದಾಗ, ಆ ಸುದ್ದಿಯನ್ನು ವಿಶದವಾಗಿ ಓದುವಂತೆ ಶ್ರೀಗಳು ನನಗೆ ಹೇಳಿದರು. ಓದಿದ್ದನ್ನು ಕೇಳಿಸಿಕೊಂಡ ನಂತರ ಅವರ ಮುಖದಲ್ಲಿ ಯಾವ ವಿಕಾರತೆಯೂ ನನಗೆ ಕಾಣಲಿಲ್ಲ, ಅಲ್ಲಿ ಸ್ಥಿತಪ್ರಜ್ಞತೆ ಕೆನೆಗಟ್ಟಿತ್ತು. ಆದರೆ ನನಗೋ ತಡೆಯಲಾಗದ ಕುತೂಹಲ, ಶ್ರೀಗಳನ್ನು ಕೇಳಿಯೇಬಿಟ್ಟೆ! ಆಕೆ ಯಾರೆಂದು ಶ್ರೀಗಳು ಹೇಳಿದಾಗ ನನಗೆ ಬರಸಿಡಿಲು ಬಡಿದಂತಾಗಿತ್ತು! ಕಾರಣ, ಹಾಗೆ ಮಕ್ಕಳನ್ನು ಬಾವಿಗೆ ತಳ್ಳಿ ಕೊಂದ ಆ ತಾಯಿ ಬೇರಾರೂ ಆಗಿರದೆ ಶ್ರೀಗಳವರ ಪೂರ್ವಾಶ್ರಮದ ಪುತ್ರಿಯಾಗಿದ್ದರು! ಆದರೆ ಶ್ರೀ ವಿದ್ಯಾವಲ್ಲಭ ತೀರ್ಥರು ಈ ಪ್ರಸಂಗವನ್ನು ಕೇಳಿ ತಿಳಿದು ಕಿಂಚಿತ್ತೂ ವಿಚಲಿತರಾಗಿರಲಿಲ್ಲ. ಈ ಪ್ರಸಂಗವನ್ನು ನೆನಪಿಸಿಕೊಂಡಾಗಲೆಲ್ಲಾ ನನಗೆ ಮೈ 'ಜುಂ' ಎನ್ನುತ್ತದೆ. ಅಂದು ಸಾಯಂಕಾಲ ಶ್ರೀಗಳು ಎಂದಿನಂತೆ ಪ್ರವಚನ ಮಾಡಿದರು. ಇದು ನಾನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿದ ಶ್ರೀಗಳವರ ವೈರಾಗ್ಯಭಾವ.

• • •

ತಮ್ಮ ಜೀವನವನ್ನು ಸನ್ಯಾಸದಲ್ಲಿ ಸಮಾಪನೆ ಮಾಡಿಕೊಂಡ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದರು 2001ರ ವರ್ಷದ ಕಾರ್ತಿಕ ಮಾಸದ ಕೃಷ್ಣಪಕ್ಷ ಏಕಾದಶಿಯಂದು (ಇದಕ್ಕೆ ಉತ್ಪತ್ತಿ ಏಕಾದಶಿ ಅಥವಾ ಉತ್ಪನ್ನ ಏಕಾದಶಿ ಎಂದೂ ಕರೆಯುವುದುಂಟು) ಇಹಲೋಕ ತ್ಯಜಿಸಿದರು. ಇಂದು (ನ.28) ಅವರ 24ನೆಯ ಆರಾಧನೆ. ಅವರ ಬಹುಸಂಖ್ಯಾತ ಶಿಷ್ಯರು ಈ ಬಾರಿ ಹೊಸಪೇಟೆಯ ಶ್ರೀ ಉತ್ತರಾದಿ ಮಠದಲ್ಲಿ, ಶ್ರೀ ಸತ್ಯಾತ್ಮತೀರ್ಥ ಶ್ರೀಪಾದರ ಸಮ್ಮುಖದಲ್ಲಿ ಈ ಆರಾಧನೆಯನ್ನು ನೆರವೇರಿಸುತ್ತಿರುವುದು ಹೆಮ್ಮೆಯ ಸಂಗತಿ. ಅದು ಭಕ್ತಗಣದಲ್ಲಿ ಕೃತಾರ್ಥಭಾವ ಮೂಡಿಸುವ ಘಟ್ಟವೂ ಹೌದು.

(ಲೇಖಕರು ಹವ್ಯಾಸಿ ಬರಹಗಾರರು)

ಓದಲೇಬೇಕಾದ ಪುಸ್ತಕ- 'ಸಂವಿಧಾನ ಬದಲಾಯಿಸಿದ್ದು ಯಾರು?'

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಈ ಪುಸ್ತಕವನ್ನು ಸುಮ್ಮನೆ ಕೈಗೆತ್ತಿಕೊಂಡರೂ ಸಾಕು, ಮುಗಿಯುವವರೆಗೆ ಕೆಳಗಿಡಲು ಮನಸಾಗದು! ಪ್ರತಿಭಾವಂತರನ್ನು ತುಳಿಯುವುದರಿಂದ ದೇಶಕ್ಕೆ ಅದೆಷ್ಟು ನಷ್ಟವಾಗುತ್ತದೆ ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುವ ಕಲೆ ಕೃತಿಕಾರ ವಿಕಾಸ್ ಕುಮಾರ್‌ರಿಗೆ ಸಿದ್ಧಿಸಿದೆ.

ಚುನಾವಣೆ ಬರುತ್ತಿದ್ದಂತೆ ವಿಪಕ್ಷಗಳನ್ನು ಹಣಿಯಲು ಕಾಂಗ್ರೆಸ್ ಏನು ಬೇಕಾದರೂ ಮಾಡುತ್ತದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಈ ಬಗ್ಗೆ ಪ್ರಧಾನಿ ಮೋದಿ ಹಲವು ಬಾರಿ ಹೇಳಿದ್ದಾರೆ, ಜೋಗೇಂದ್ರನಾಥ ಮಂಡಲ್ ಬಗ್ಗೆ ಉಲ್ಲೇಖಿಸಿದ್ದಾರೆ. 1934ರಲ್ಲಿಯೇ ಕಾನೂನು ಪಂಡಿತರಾಗಿ ಹೆಸರಾಗಿದ್ದ ಇವರು ಸ್ವಾತಂತ್ರ್ಯಾನಂತರದ ಘಟನೆಗಳಲ್ಲಿ ವಹಿಸಿದ ಪಾತ್ರ ಮಹತ್ತರವಾದುದು.

ಪಾಕಿಸ್ತಾನಕ್ಕೆ ಆಡಳಿತಾತ್ಮಕ ರೂಪುರೇಷೆ ಬರಲು ಕಾರಣರಾಗಿದ್ದ ಜೋಗೇಂದ್ರನಾಥ್, ಸುಭಾಸ್‌ಚಂದ್ರ ಬೋಸರ ನಾಯಕತ್ವಕ್ಕೆ ಮಾರುಹೋಗಿದ್ದರು. ಬಂಗಾಳದ ವಿಭಜನೆಯನ್ನು ವಿರೋಧಿಸಿದ್ದ ಇವರು, ಕಾಂಗ್ರೆಸ್‌ನಿಂದ ಬೋಸರ ಉಚ್ಚಾಟನೆಯಾದಾಗ ಮನನೊಂದು ಮುಸ್ಲಿಂ ಲೀಗ್‌ನೊಂದಿಗೆ ತಮ್ಮ ರಾಜಕೀಯ ಜೀವನವನ್ನು ಬೆಸೆದುಕೊಂಡರು. ಇಲ್ಲಿಂದ ಇವರ ನಿರ್ಧಾರಗಳೆಲ್ಲ ಅಸಮಂಜಸವಾಗುತ್ತಾ ಹೋದವು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಹಂಗಾಮಿ ಸರಕಾರ ರಚನೆಯಾದಾಗ, ಕಿಂಗ್ ಜಾರ್ಜ್ ಮೂಲಕ ಅಧಿಕಾರ ಸ್ವೀಕರಿಸಿ ಕಾನೂನು ಸಲಹಾ ಸಮಿತಿಯ ಮುಖ್ಯಸ್ಥರಾಗಿದ್ದ ಜೋಗೇಂದ್ರರು, ಬಾಂಬೆಯ ಚುನಾವಣೆಯಲ್ಲಿ ಅಂಬೇಡ್ಕರರು ಕಾಂಗ್ರೆಸ್‌ನಿಂದ ಕಠಿಣ ಪರಿಸ್ಥಿತಿ ಎದುರಿಸಿದಾಗ ಅವರಿಗೆ ನೆರವಾದರು. ಸಂವಿಧಾನದ ರಚನೆಯ ವೇಳೆ ಅಂಬೇಡ್ಕರರು ಇವರೊಂದಿಗೆ ಪ್ರಮುಖ ವಿಚಾರಗಳನ್ನು ಚರ್ಚಿಸಿ ನಿರ್ಧರಿಸಿದ್ದರ ಬಗ್ಗೆ ಉಲ್ಲೇಖವಿದೆ. ದೇಶ ವಿಭಜನೆಯಾಗಿ ಪಾಕಿಸ್ತಾನವು ಅಸ್ತಿತ್ವಕ್ಕೆ ಬರುವಾಗ ನಡೆದ ಉದ್ಘಾಟನಾ ಸಭೆಯ ಅಧ್ಯಕ್ಷತೆಯನ್ನು ಜೋಗೇಂದ್ರರೇ ವಹಿಸಲೆಂದು ಜಿನ್ನಾ ಹಠ ಹಿಡಿದಿದ್ದರಂತೆ! ಸ್ವತಂತ್ರಗೊಂಡ ಪಾಕ್‌ನ ಜಿನ್ನಾ ಸರಕಾರದಲ್ಲಿ ಮೊಟ್ಟಮೊದಲ ಕಾನೂನು ಮತ್ತು ಕಾರ್ಮಿಕ ಸಚಿವರಾಗಿ ಮಹತ್ವದ ಪಾತ್ರ ವಹಿಸಿದ ಜೋಗೇಂದ್ರರು, ಕಾಲಾನಂತರದಲ್ಲಿ ದಲಿತರ ಮೇಲಿನ ಅತ್ಯಾಚಾರ, ಹಲ್ಲೆ, ಹಿಂದೂಗಳ ಕಗ್ಗೊಲೆಗಳನ್ನು ಬಹಿರಂಗವಾಗಿ ವಿರೋಧಿಸಿದ್ದರಿಂದ, ಲಿಯಾಖತ್ ಖಾನ್‌ನಿಂದ ದೇಶ ತೊರೆಯುವಂತೆ ಬೆದರಿಕೆ ಬಂತು, ಹತ್ಯೆಯ ಯತ್ನವೂ ಆಯಿತು. ಹೀಗಾಗಿ ಪಾಕಿಸ್ತಾನವನ್ನು ತೊರೆದು ಕೋಲ್ಕತಾ ಸಮೀಪದ ಬೋಂಗಾವ್ ಗ್ರಾಮದಲ್ಲಿ ಅಪರಿಚಿತರಂತೆ ಬದುಕುತ್ತ, 1968ರಲ್ಲಿ ತೀರಿಕೊಂಡರು.

''ಈ ದೇಶವು ದಲಿತರನ್ನು ಸರಿಯಾಗಿ ನಡೆಸಿಕೊಂಡಿಲ್ಲ'' ಎನ್ನುತ್ತ ಧರ್ಮ, ಜಾತಿಯಾಧಾರಿತ ರಾಜಕಾರಣ ಮಾಡುತ್ತ ಮತಬೇಟೆಗಿಳಿಯುವ ಕಾಂಗ್ರೆಸ್‌ಗೆ ಮಾರುತ್ತರವಾಗಿ ಮೋದಿಯವರು, ''ಕಾಂಗ್ರೆಸ್‌ನವರು ಮತ್ತು ಪಾಕಿಸ್ತಾನದವರು ಹಿಂದೂಗಳನ್ನು, ದಲಿತರನ್ನು ಹೇಗೆ ನಡೆಸಿಕೊಂಡಿದ್ದಾರೆ ಹಾಗೂ ನಾವು ಅಂಬೇಡ್ಕರ್‌ರನ್ನು ಹೇಗೆ ನಡೆಸಿಕೊಂಡಿದ್ದೇವೆ, ಅವರಿಗೆ ಸಲ್ಲಬೇಕಾದ ಸ್ಥಾನಮಾನವನ್ನು ಹೇಗೆ ಸಮರ್ಪಿಸಿದ್ದೇವೆ ಎಂಬುದನ್ನು ಪ್ರತಿ ಭಾರತೀಯರೂ ಇತಿಹಾಸದ ಸತ್ಯಪುಟಗಳನ್ನು ಓದುವ ಮೂಲಕ ತಿಳಿಯುತ್ತಾರೆ'' ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅಂಬೇಡ್ಕರರ ವಿಷಯದಲ್ಲಿ ನೆಹರು ಬಗೆದ ದ್ರೋಹವನ್ನು ದೇಶದ ಹಿಂದುಳಿದ, ದಲಿತ ನಾಯಕರಾರೂ ಮರೆಯಲಾಗದು. ಅಂಬೇಡ್ಕರ್ 2 ಅವಧಿಗೆ ಬಾಂಬೆ ಸ್ಟೇಟ್ ಪ್ರತಿನಿಧಿಯಾಗಿ ರಾಜ್ಯಸಭಾ ಸದಸ್ಯರಾಗಿದ್ದರು, 2ನೇ ಅವಧಿ ಪೂರ್ಣಗೊಳ್ಳುವ ಮುನ್ನವೇ ನಿಧನರಾದರು. ಶ್ರೇಷ್ಠ ಸಂಸದೀಯ ಪಟುವಾಗಿದ್ದ ಅಂಬೇಡ್ಕರ್, ಸ್ವಾತಂತ್ರ್ಯ ನಂತರದ ಕಾಂಗ್ರೆಸ್ ಸರಕಾರದಲ್ಲಿ ಕಾನೂನು ಮಂತ್ರಿಯಾಗಿದ್ದರು. ಸಂವಿಧಾನ ರಚನೆಯಲ್ಲಿ ಅಪಾರ ಶ್ರಮ ವಹಿಸಿ, ದಲಿತರು-ದಮನಿತರ ಹಕ್ಕುಗಳಿಗಾಗಿ ದುಡಿದ ಅವರು 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲುಣ್ಣಬೇಕಾಯಿತು. ಈ ಚುನಾವಣೆಯಲ್ಲಿ ಅಂಬೇಡ್ಕರ್ ಮುಂಬೈ ನಾರ್ತ್ ಸೆಂಟ್ರಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಇವರ ವಿರುದ್ಧ ದಲಿತನಾಯಕ ಎಂದು ಗುರುತಿಸಿ ಕೊಂಡಿದ್ದ ನಾರಾಯಣ ಸದೋಬ ಕಜ್ರೋಲ್ಕರ್ ಕಾಂಗ್ರೆಸ್‌ನಿಂದ ಕಣಕ್ಕಿಳಿದು ಅಂಬೇಡ್ಕರರನ್ನು ಸೋಲಿಸಿದರು. ಅಚ್ಚರಿಯೆಂದರೆ, ಇವರು ಹಲವು ವರ್ಷಗಳವರೆಗೆ ಅಂಬೇಡ್ಕರರ ಆಪ್ತಸಹಾಯಕರಾಗಿದ್ದವರು. ಚುನಾವಣೆಯಲ್ಲಿ ಸೋತರೂ ಅಂಬೇಡ್ಕರರನ್ನು ರಾಜ್ಯಸಭಾ ಸದಸ್ಯರಾಗಿ ಆಯ್ಕೆಮಾಡಲಾಯಿತು. ಅವರು 1956ರಲ್ಲಿ ದಿವಂಗತರಾದ ಮರುವರ್ಷವೇ ಸಾರ್ವತ್ರಿಕ ಚುನಾವಣೆ ನಡೆಯಿತು. ಅಂಬೇಡ್ಕರರನ್ನು ರಾಜಕೀಯವಾಗಿ ಮೂಲೆಗುಂಪಾಗಿಸಿದ್ದಕ್ಕೆ ಋಣಸಂದಾಯವೆಂಬಂತೆ, ಅಧಿಕಾರಕ್ಕೆ ಬಂದ ಇಂದಿರಾ ಸರಕಾರ ಕಜ್ರೋಲ್ಕರ್‌ರಿಗೆ 1970ರಲ್ಲಿ 'ಪದ್ಮಭೂಷಣ' ಪ್ರಶಸ್ತಿ ನೀಡಿತು! ಚುನಾವಣಾ ಸೋಲು ಅಂಬೇಡ್ಕರರಿಗೆ ನೋವು ತಂದಿತ್ತು, ಏಕೆಂದರೆ ಮಹಾರಾಷ್ಟ್ರ ಅವರ ಕರ್ಮಭೂಮಿಯಾಗಿತ್ತು. ಹೀಗಾಗಿ ಅಂಬೇಡ್ಕರ್ ಸುದ್ದಿ ಸಂಸ್ಥೆಯೊಂದರ ಜತೆ ಮಾತನಾಡುತ್ತಾ, ''ಬಾಂಬೆಯ ಜನರ ಅಗಾಧ ಬೆಂಬಲವನ್ನು ಇಷ್ಟು ಕೆಟ್ಟದಾಗಿ ಹೇಗೆ ನಿರಾಕರಿಸಲಾಯಿತು? ಇದು ಚುನಾವಣಾ ಆಯುಕ್ತರು ತನಿಖೆ ನಡೆಸಬೇಕಾದ ವಿಷಯವಾಗಿದೆ'' ಎನ್ನುವ ಮೂಲಕ ಮತ ಎಣಿಕೆಯ ವಿಷಯದಲ್ಲಿ ಆಗಿರಬಹುದಾದ ಅಕ್ರಮದ ಬಗ್ಗೆ ಸಂಶಯದ ದನಿಯೆತ್ತಿದ್ದರು. ಚುನಾವಣಾ ಫಲಿತಾಂಶವನ್ನು ಅಸಿಂಧು ಎಂದು ಘೋಷಿಸುವಂತೆ ಕೋರಿ ಅಂಬೇಡ್ಕರರು ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ಸಲ್ಲಿಸಿದ್ದರು. ''74,333 ಮತಪತ್ರಗಳನ್ನು ತಿರಸ್ಕರಿಸಲಾಗಿದೆ ಮತ್ತು ಎಣಿಕೆ ಮಾಡಲಾಗಿಲ್ಲ'' ಎಂದು ಅವರು ಅದರಲ್ಲಿ ಉಲ್ಲೇಖಿಸಿದ್ದರು. ಆದರೆ ಈ ದೂರಿನ ಬಗ್ಗೆ ಚುನಾವಣಾ ಆಯೋಗ ಕೈಗೊಂಡ ಕ್ರಮವೇನು ಎಂಬುದು ಬಹಿರಂಗವಾಗಲಿಲ್ಲ.



ಈ ಹಿನ್ನಡೆಯ ನಂತರ ಅಂಬೇಡ್ಕರರು 1954ರಲ್ಲಿ ಮಹಾರಾಷ್ಟ್ರದ ಭಂಡಾರಾ ಕ್ಷೇತ್ರದಿಂದ ಉಪಚುನಾವಣೆಯಲ್ಲಿ ಸ್ಪರ್ಧಿಸಿದರೂ, ಕಾಂಗ್ರೆಸ್‌ನವರಿಂದ ಸೋತರು. ಈ ಘಟ್ಟದಲ್ಲಿ ಅಂಬೇಡ್ಕರರು ನೆಹರುರ ವಿದೇಶಾಂಗ ನೀತಿಯನ್ನು ಟೀಕಿಸಿದರು. ಅಂಬೇಡ್ಕರರನ್ನು ಮುಖ್ಯ ವಾಹಿನಿ ರಾಜಕೀಯದಿಂದ ದೂರವಿಟ್ಟು ಅವರ ಪ್ರಭಾವವನ್ನು ಕುಗ್ಗಿಸಲು ನೆಹರು ಯತ್ನಿಸಿದ್ದು ಹೌದು. ಅಂಬೇಡ್ಕರ್-ನೆಹರು ನಡುವಿನ ಮುಖಾಮುಖಿಯು, ಸಿದ್ಧಾಂತಗಳ ಮತ್ತು ಆಕಾಂಕ್ಷೆಗಳ ವೈರುದ್ಧ್ಯವನ್ನು ತೋರಿಸಿತು. ಸ್ವಾತಂತ್ರ್ಯಾನಂತರದ ನೆಹರು ನೇತೃತ್ವದ ಮಧ್ಯಂತರ ಸರಕಾರದಲ್ಲಿ ಅಂಬೇಡ್ಕರ್ ಕಾನೂನು ಸಚಿವ ರಾಗಿದ್ದು ಹೌದಾದರೂ ಅವರ ಅಧಿಕಾರಾವಧಿ ಅಲ್ಪಕಾಲಿಕವಾಗಿತ್ತು. ಹಿಂದೂಗಳಿಗೆ ತಾರತಮ್ಯವೆಸಗುವಂತಿದ್ದ 'ಹಿಂದೂ ಕೋಡ್ ಬಿಲ್' ವಿಷಯದಲ್ಲಿನ ನೆಹರು ನೀತಿಯನ್ನು ಕಟುವಾಗಿ ವಿರೋಧಿಸಿದ ಅಂಬೇಡ್ಕರ್ 1951ರ ಸೆಪ್ಟೆಂಬರ್ 27ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಯಿತ್ತರು. ಅವರ ಮತ್ತು ನೆಹರು ನಡುವಿನ ಭಿನ್ನಾಭಿಪ್ರಾಯಕ್ಕೆ ಇದು ಸಾಕ್ಷಿ. ನೆಹರು ಸಂಪುಟದಿಂದ ಶ್ಯಾಮಪ್ರಸಾದ್ ಮುಖರ್ಜಿಯವರ ನಿರ್ಗಮನ ಮತ್ತು ಭಾರತೀಯ ಜನಸಂಘದ ಸ್ಥಾಪನೆ ದೇಶದ ರಾಜಕೀಯದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾದವು. ಚುನಾವಣೆಯಲ್ಲಿ ಅಂಬೇಡ್ಕರರ ಸ್ಪರ್ಧೆಯನ್ನು ಬೆಂಬಲಿಸಿದವರಲ್ಲಿ ಶ್ಯಾಮಪ್ರಸಾದ್ ಮುಖರ್ಜಿ ಅವರಿದ್ದುದು ನೆಹರು ಕೋಪಕ್ಕೆ ಕಾರಣವಾಗಿತ್ತಂತೆ! ಸ್ವತಂತ್ರ ಭಾರತದ ಮೊದಲ ಸರಕಾರದಲ್ಲಿ ಕೈಗಾರಿಕಾ ಮಂತ್ರಿಯಾಗಿದ್ದ ಮುಖರ್ಜಿಯವರು, ನೆಹರು ಮತ್ತು ಲಿಯಾಖತ್ ಖಾನ್ ನಡುವೆ ನಡೆದ ಒಪ್ಪಂದವನ್ನು ಕಟುವಾಗಿ ವಿರೋಧಿಸಿ, ರಾಜೀನಾಮೆಯಿತ್ತು ನೆಹರು ಸಂಪುಟದಿಂದ ಹೊರಬಂದಿದ್ದರು. 'ಒಂದು ದೇಶ, ಎರಡು ಸಂವಿಧಾನ'ದಂಥ ಮಾರಕ ಕಾನೂನನ್ನು (ಕಲಂ 370) ವಿರೋಧಿಸಿ ಮುಖರ್ಜಿಯವರು ನೆಹರು ವಿರೋಧದ ನಡುವೆಯೂ ಕಾಶ್ಮೀರವನ್ನು ಪ್ರವೇಶಿಸಿದಾಗ, ಶ್ರೀನಗರದ ಪೊಲೀಸರು ಅವರನ್ನು ಬಂಧಿಸಿ ಪ್ರಶಸ್ತವಲ್ಲದ ಗುಡಿಸಲಿನಲ್ಲಿ ಇರಿಸಿದರು. ಜ್ವರದ ಕಾರಣ ನೀಡಿ, ಮುಖರ್ಜಿಯವರ ದೇಹಪ್ರಕೃತಿಗೆ ವಿರುದ್ಧವಾಗಿದ್ದ ಸೆಫ್ರೋಮೈಸಿನ್ ಎಂಬ ಔಷಧವನ್ನು ಚುಚ್ಚುಮದ್ದಿನ ರೂಪದಲ್ಲಿ ನೀಡಲಾಯಿತು. ಇದಾಗಿ 3 ದಿನಗಳ ನಂತರ ಮುಖರ್ಜಿಯವರ ಶವ ದೊರಕಿತು ಎಂದು ದಾಖಲಿಸಲಾಗಿದೆ.

ಹೀಗೆ ಅಂದಿನ ನೆಹರುರಿಂದ ಮೊದಲ್ಗೊಂಡು ಇಂದಿನವರವರೆಗೆ ಕಾಂಗ್ರೆಸ್ಸಿಗರನೇಕರು ತಮ್ಮ ವಿರೋಧಿಗಳನ್ನು ಯಾವ ವಿಧಾನದಲ್ಲಾದರೂ ಸೋಲಿಸುವ ದಾರಿ ಹುಡುಕುತ್ತ, ಈ ದೇಶದ ಜನರಲ್ಲಿ ಜಾತಿ-ಧರ್ಮದ ಒಡಕಿನ ಬೀಜ ಬಿತ್ತುತ್ತ ರಾಜಕೀಯ ಮಾಡುತ್ತಲೇ ಬಂದಿದ್ದಾರೆ. ಇದೂ ಸೇರಿದಂತೆ, ಪ್ರತ್ಯೇಕ ಕಾಶ್ಮೀರವನ್ನು ಅಂಬೇಡ್ಕರರು ವಿರೋಧಿಸಿದ್ದು, ಸಂವಿಧಾನದ ಮೂಲ ಪ್ರಸ್ತಾವನೆಯನ್ನೇ ಕಾಂಗ್ರೆಸ್ ಬದಲಿಸಿದ್ದು, ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದು ಇತ್ಯಾದಿಗಳನ್ನು ಕೃತಿಕಾರರು ಈ ಪುಸ್ತಕದಲ್ಲಿ ಮನಮುಟ್ಟುವಂತೆ ತೆರೆದಿಟ್ಟಿದ್ದಾರೆ.

ಸ್ವತಂತ್ರ ಭಾರತದ ಇಂದಿನ ನವತರುಣರು ವಾಸ್ತವಿಕತೆಯನ್ನು, ಜಾಗತಿಕ ವಿದ್ಯಮಾನಗಳನ್ನು ಸರಿಯಾಗಿ ಅರಿತು ದೇಶದ ಭವಿಷ್ಯತ್ತನ್ನು ನಿರ್ಧರಿಸಬಲ್ಲಷ್ಟು ಜಾಣ್ಮೆ ಹೊಂದಿದ್ದಾರೆ. ಇಂದಿನ ಜಾಗೃತ ಸಮಾಜವು ಕೂಡ, ರಾಜಕಾರಣಿಗಳ ಬಲವಂತದ ಮಾಘಸ್ನಾನವನ್ನು ತುಂಬಾ ವರ್ಷಗಳ ಕಾಲ ಸಹಿಸಿಕೊಳ್ಳುವುದಿಲ್ಲ. ಇದಕ್ಕೆ ಕಾಲಘಟ್ಟವೇ ಉತ್ತರಿಸಬಲ್ಲದು!

'ಸಂವಿಧಾನದ ಬದಲಾವಣೆ' ಎಂಬ ಮಾತು ಭಾರತದಲ್ಲಿ ಆಗಿಂದಾಗ್ಗೆ ಸದ್ದುಮಾಡುತ್ತಲೇ ಇರುತ್ತದೆ. ಕಳೆದ ಲೋಕಸಭಾ ಚುನಾವಣೆಯಲ್ಲಂತೂ ಈ ವಿಚಾರ ಸಾಕಷ್ಟು ಚರ್ಚೆಗೆ ಬಂದಿತ್ತು ಮತ್ತು ಅದನ್ನೂ ಕಾಂಗ್ರೆಸ್ ಪ್ರಧಾನ ಅಜೆಂಡಾ ಆಗಿ ಚುನಾವಣಾ ಪ್ರಚಾರದಲ್ಲಿ ಬಳಸಿಕೊಂಡಿತ್ತು. ಸಂವಿಧಾನ ಬದಲಾವಣೆ ವಿಷಯದಲ್ಲಿ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಬಿಜೆಪಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಬಿಟ್ಟಿವೆ. ಆದರೆ ಕಾಂಗ್ರೆಸ್‌ನ ಅಧಿಕಾರಾವಧಿಯಲ್ಲಿ 75 ಬಾರಿ ಸಂವಿಧಾನದ ತಿದ್ದುಪಡಿಯಾಗಿದೆ. ಅಟಲ್ ಬಿಹಾರಿ ವಾಜಪೇಯಿ ಅವರ ಅವಧಿಯಲ್ಲಿ 14 ಬಾರಿ, ಈಗಿನ ಪ್ರಧಾನಿ ಮೋದಿಯವರ ಅವಧಿಯಲ್ಲಿ 8 ಬಾರಿ ತಿದ್ದುಪಡಿ ಮಾಡಲಾಗಿದೆ. ಆದರೆ ಎಲ್ಲಿಯೂ ಸಂವಿಧಾನದ ಆಶಯಕ್ಕೆ ಧಕ್ಕೆ ತರುವಂಥ ತಿದ್ದುಪಡಿಯಾಗಿಲ್ಲ. ಹಾಗಾದರೆ ಸಂವಿಧಾನವನ್ನು ನಿಜವಾಗಿಯೂ ತಿದ್ದುಪಡಿ ಮಾಡಿದ್ದು ಯಾರು? ಅಂಬೇಡ್ಕರರ ಮೂಲ ಆಶಯ ಏನಾಗಿತ್ತು? ಕಾಂಗ್ರೆಸ್ ಹಾಗೂ ಎಡಪಕ್ಷಗಳು ಈ ವಿಚಾರದಲ್ಲಿ ಹೆಣೆದ ರಾಜಕೀಯ ಸಂಕಥನಗಳೇನು? ಎಂಬೆಲ್ಲದರ ಕುರಿತಾದ ಸಮಗ್ರ ಚಿತ್ರಣವನ್ನು 'ಸಂವಿಧಾನ ಬದಲಾಯಿಸಿದ್ದು ಯಾರು?' ಎಂಬ ಈ ಕೃತಿಯಲ್ಲಿ ವಿಕಾಸ್ ಕುಮಾರ್ ಅರ್ಥವತ್ತಾಗಿ ನೀಡಿದ್ದಾರೆ. ವಾಸ್ತವವನ್ನು ಅರಿಯಬಯಸುವವರು ಇದನ್ನೊಮ್ಮೆ ಓದಲೇಬೇಕು. ಈ ಪುಸ್ತಕವನ್ನು ಓದಿದಾಗ ನನಗೆ ಅನಿಸಿದ್ದಿಷ್ಟು. ನಿಮಗೂ ಇನ್ನಷ್ಟು ಹೊಳಹುಗಳು ಸಿಗಬಹುದು, ವಾಸ್ತವತೆಯ ಅರಿವು ಮೂಡಬಹುದು...

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

ದೆಹಲಿಯಲ್ಲಿ ಮಿತಿಮೀರಿದ ವಾಯುಮಾಲಿನ್ಯ : ಸುದ್ದಿ

ದೇಶದ ಇದ್ದಬದ್ದ ಪುಢಾರಿಗಳೆಲ್ಲಾ ದೆಹಲಿಯಲ್ಲೇ ಝೂಂಡಾ ಊರಿದ್ರೆ ಇನ್ನೇನಾಗುತ್ತೆ...?!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 339

ಸಮಾಚಾರ ಸಣ್ಣದಲ್ಲ

'ಕಾಂಗ್ರೆಸ್ ಭವಿಷ್ಯವಿಲ್ಲ, ಶಾಸಕರು ಬಿಜೆಪಿ ಸೇರಿ'

ಮುಂಬೈ: ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭವಿಷ್ಯವಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್‌ನ 16 ಸದಸ್ಯರೂ ಬಿಜೆಪಿಗೆ ಸೇರುವುದು ಒಳಿತು ಎಂದು ಬಿಜೆಪಿ ನಾಯಕ ಆಶಿಶ್ ದೇಶ್‌ಮುಖ್ ಬುಧವಾರ ಸಲಹೆ ನೀಡಿದ್ದಾರೆ. ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಭಾರೀ ಸಂಖ್ಯೆಯಲ್ಲಿ ಗೆದ್ದಿದೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪತನ ಕಂಡಿದೆ. ಕೈ ಪಕ್ಷದ ಅವನತಿ ಎಲ್ಲೆಡೆ ನಡೆಯುತ್ತಿದೆ. ರಾಜ್ಯದಲ್ಲಂತೂ ಆ ಪಕ್ಷಕ್ಕೆ ಭವಿಷ್ಯವಿಲ್ಲ. 288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಕಾಂಗ್ರೆಸ್ ಬಲ ಕೇವಲ ಶೇ.5.55ರಷ್ಟಿದೆ. ಇದು 1962ರಿಂದ ವಿಧಾನಸಭೆಯಲ್ಲಿ ಕಾಂಗ್ರೆಸ್ ಹೊಂದಿದ ಅತಿಕಡಿಮೆ ಪ್ರಾತಿನಿಧ್ಯವಾಗಿದೆ ಎಂದು ನಾಗಪುರ ಜಿಲ್ಲೆಯ ಸಾವ್ನರ್ ಕ್ಷೇತ್ರದಿಂದ ಗೆದ್ದಿರುವ ದೇಶಮುಖ್ ಹೇಳಿದ್ದಾರೆ.

ನೈಸರ್ಗಿಕ ಕೃಷಿ ಕೇಂದ್ರದ 2,481 ಕೋಟಿ ರು.

ದೆಹಲಿ: ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಸರಕಾರ 'ನ್ಯಾಷನಲ್ ಮಿಷನ್ ಆನ್ ನ್ಯಾಚುರಲ್ ಫಾರ್ಮಿಂಗ್' (ನೈಸರ್ಗಿಕ ಕೃಷಿಗಾಗಿ ರಾಷ್ಟ್ರೀಯ ಯೋಜನೆ) ಪ್ರಾರಂಭಿಸಿದೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 2,481 ಕೋಟಿ ರು. ಮೊತ್ತದ ಈ ಯೋಜನೆಗೆ ಒಪ್ಪಿಗೆಯನ್ನು ನೀಡಲಾಗಿದೆ. ಆ ಮೂಲಕ ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮೋದಿ ಸರಕಾರ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಈ ಯೋಜನೆಯ ವೆಚ್ಚದಲ್ಲಿ 1,584 ಕೋಟಿ ರು. ಕೇಂದ್ರದ ಪಾಲಾಗಿದ್ದರೆ, ಉಳಿದ 897 ಕೋಟಿ ರು. ರಾಜ್ಯ ಸರಕಾರಗಳು ನೀಡಬೇಕಿದೆ. ಒಂದು ಕೋಟಿ ರೈತರನ್ನು ತಲುಪಲಿರುವ ಈ ಯೋಜನೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ 2025-26ರವರೆಗೂ ಜಾರಿಯಲ್ಲಿರಲಿದೆ. 2 ವರ್ಷಗಳಲ್ಲಿ ಈ ಉಪಕ್ರಮ ಗ್ರಾಮ ಪಂಚಾಯತಿಗಳ 15 ಸಾವಿರ ಕ್ಲಸ್ಟರ್‌ಗಳಲ್ಲಿ ಜಾರಿಗೆ ಬರಲಿದೆ. 7.50 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ನೈಸರ್ಗಿಕ ಕೃಷಿ ಮಾಡುವ ಗುರಿಯನ್ನು ಹೊಂದಿದೆ.

'ಇಸ್ಕಾನ್' ನಿಷೇಧಕ್ಕೆ ಹೈಕೋರ್ಟ್‌ಗೆ ಅರ್ಜಿ

ಢಾಕಾ: ಚಿನ್ಮಯ್ ಕೃಷ್ಣದಾಸ್ ಬಂಧನ ಖಂಡಿಸಿ ಬಾಂಗ್ಲಾದೇಶದಲ್ಲಿ ಹಿಂದೂಗಳು ದೊಡ್ಡಮಟ್ಟದ ಪ್ರತಿಭಟನೆ ನಡೆಸುತ್ತಿದ್ದಾರೆ. ಇದೇ ವೇಳೆ, ಇಸ್ಕಾನ್ ಸಂಸ್ಥೆಯನ್ನು ನಿಷೇಧಿಸಲು ಬಾಂಗ್ಲಾ ಸರಕಾರಕ್ಕೆ ನಿರ್ದೇಶನ ನೀಡುವಂತೆ ಡಾಕಾ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ. 'ಇಸ್ಕಾನ್' ಧಾರ್ಮಿಕ ಮೂಲಭೂತವಾದಿ ಸಂಘಟನೆಯಾಗಿದೆ. ಅದರ ಚಿಂತನೆ, ಚಟುವಟಿಕೆಗಳು ಬಾಂಗ್ಲಾದೇಶಕ್ಕೆ ಅಪಾಯಕಾರಿ ಯಾಗಿವೆ. ಹಾಗಾಗಿ ಇಸ್ಕಾನ್ ಸಂಸ್ಥೆಯನ್ನು ನಿಷೇಧಿಸಿ ಆದೇಶ ಹೊರಡಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಕೆಯಾಗಿದೆ.

ಫಲಿತಾಂಶ ಪ್ರಕಟವಾಗಿ 4 ದಿನ-ರಚನೆಯಾಗದ ಹೊಸ ಸರಕಾರ | ಪ್ರಧಾನಿ ನರೇಂದ್ರ ಮೋದಿ, ಶಾ ನಿರ್ಧಾರವೇ ಅಂತಿಮ: ಶಿಂದೆ | ದೇವೇಂದ್ರ ಫಡ್ನವಿಸ್ ಅವರೇ ಬಿಜೆಪಿ, ಆರ್‌ಎಸ್‌ಎಸ್ ಆಯ್ಕೆ? | ಮುಖ್ಯಮಂತ್ರಿಯಾಗಿ ಫಡ್ನವಿಸ್: ಅಜಿತ್ ಪವಾರ್ ಸಮ್ಮತಿ | ಮತ್ತೆ ಶಿಂದೆಯೇ ಸಿಎಂ ಆಗಲಿ: ಶಿವಸೇನೆ ವಾದ

'ಮಹಾ' ಮುಖ್ಯಮಂತ್ರಿ ಆಯ್ಕೆ ಮೋದಿ ನಿರ್ಧಾರಕ್ಕೆ

ಮುಂಬೈ: ಮಹಾರಾಷ್ಟ್ರ ನೂತನ ಮುಖ್ಯಮಂತ್ರಿ ಆಯ್ಕೆ, ಬಿಜೆಪಿಯ ವರಿಷ್ಠ, ಪ್ರಧಾನಿ ನರೇಂದ್ರ ಮೋದಿ ಅವರ ನಿರ್ಧಾರದ ಮೇಲೆ ನಿಂತಿದೆ.

ಮಹಾರಾಷ್ಟ್ರ ನೂತನ ಮುಖ್ಯಮಂತ್ರಿ ಆಯ್ಕೆ ಇನ್ನೂ ಅಂತಿಮಗೊಂಡಿಲ್ಲ. ಕಾರಣ, ಬಿಜೆಪಿ-ಶಿವಸೇನೆ ನಡುವೆ ಸಿಎಂ ಸ್ಥಾನಕ್ಕಾಗಿ ಜಟಾಪಟಿ. ಸಿಎಂ ಆಯ್ಕೆ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲಾಗಿಲ್ಲ. ಹಾಗಾಗಿ, ಚುನಾವಣೆ ಫಲಿತಾಂಶ ಪ್ರಕಟವಾಗಿ 4 ದಿನ ಕಳೆದರೂ ನೂತನ ಸರಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ವಿಳಂಬವಾಗುತ್ತಿದೆ.

ಇದೆಲ್ಲದರ ಮಧ್ಯೆಯೇ ಬುಧವಾರ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ ಶಿವಸೇನೆ ಮುಖ್ಯಸ್ಥ, ಉಸ್ತುವಾರಿ ಮುಖ್ಯಮಂತ್ರಿ ಏಕನಾಥ್ ಶಿಂದೆ, ಬಿಜೆಪಿ ವರಿಷ್ಠರಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿರ್ಧಾರಕ್ಕೆ ತಲೆಬಾಗುತ್ತೇವೆ. ಅವರಿಬ್ಬರೂ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ನಾನು ಜನಪ್ರಿಯತೆಗಾಗಿ ಯಾವ ಕೆಲಸವನ್ನೂ ಮಾಡಲಿಲ್ಲ. ಜನರಿಗಾಗಿ ನಮ್ಮ ಸರಕಾರ ಮಾಡಿದ ಕೆಲಸವೇ ನಮಗೆ ಜನಪ್ರಿಯತೆ ತಂದುಕೊಟ್ಟಿತು. ನಾನು ಮತ್ತು ಉಪ ಮುಖ್ಯಮಂತ್ರಿಗಳು ದಿನದ 24 ಗಂಟೆ ಕೆಲಸ ಮಾಡಿದ್ದೇವೆ. ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ನಿರ್ಧಾರವನ್ನು ನಾವು ಪ್ರಧಾನಿ ನರೇಂದ್ರ ಮೋದಿಯವರಿಗೆ ಬಿಟ್ಟಿದ್ದೇವೆ. ಅವರು ಯಾವ ನಿರ್ಧಾರ ತೆಗೆದುಕೊಂಡರೂ ನಾವು ಅದಕ್ಕೆ ಬದ್ಧರಿದ್ದೇವೆ ಎಂದು ಹೇಳಿದ್ದಾರೆ.

ಏಕನಾಥ್ ಶಿಂದೆ ಅಸಮಾಧಾನಗೊಂಡಿದ್ದಾರೆ ಎಂಬ ಸುದ್ದಿಗಳೆಲ್ಲಾ ತಪ್ಪು. ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ನಮ್ಮಲ್ಲಿ ಯಾರೂ ಸಿಟ್ಟು ಮಾಡಿಕೊಂಡಿಲ್ಲ, ವಿವಾದಕ್ಕೂ ಹೋಗುವುದಿಲ್ಲ. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರ ನಿರ್ಧಾರಕ್ಕೆ ನಮ್ಮ ಸಮ್ಮತಿ ಇದೆ ಎಂದರು. ಬಿಜೆಪಿ ಯಾರನ್ನೇ ಮುಖ್ಯಮಂತ್ರಿ ಮಾಡಿದರೂ ನಾವು ಒಪ್ಪುತ್ತೇವೆ. ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ನಮ್ಮ ಕಡೆ ಯಿಂದ ಯಾವುದೇ ಅಭ್ಯಂತರ ಇಲ್ಲ. ಸಿಎಂ ಹುದ್ದೆ ವಿಚಾರದಲ್ಲಿ ಮಹಾಯುತಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದರು. ತಮ್ಮ ನೇತೃತ್ವದ ಸರಕಾರದ ಎರಡೂವರೆ ವರ್ಷಗಳ ರಿಪೋರ್ಟ್ ಕಾರ್ಡ್ ಮಂಡಿಸಿದರು. ರಾಜ್ಯದ ಅಭಿವೃದ್ಧಿ ಹಾದಿಯಲ್ಲಿ ಮಹಾವಿಕಾಸ್ ಅಘಾಡಿ ಸ್ಪೀಡ್ ಬ್ರೇಕರ್ ಆಗಿತ್ತು. ಅದನ್ನು ಮತದಾರರು ಈಗ ದೂರ ಸರಿಸಿದ್ದಾರೆ ಎಂದರು.

ನಾನೆಂದೂ ಸಿಎಂ ಆಗುವ ಕನಸು ಕಂಡಿರಲಿಲ್ಲ. ಎರಡೂವರೆ ವರ್ಷಗಳಲ್ಲಿ ಸಾಮಾನ್ಯನಂತಿದ್ದು ಜನರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ಆ ಬಗ್ಗೆ ತೃಪ್ತಿಯಿದೆ ಎಂದೂ ಮಾತು ಕೊನೆಗೊಳಿಸಿದರು.

ಪ್ರಧಾನಿ ಮೋದಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದೆ. ಸರಕಾರ ರಚನೆಯಲ್ಲಿ ನನ್ನಿಂದ ಏನಾದರೂ ತೊಂದರೆಯಾದರೆ, ನಾನು ರಾಜೀನಾಮೆ ನೀಡಲು ಸಿದ್ಧನಿದ್ದೇನೆ ಎಂದು ಹೇಳಿದೆ. ನನ್ನಿಂದ ನಿಮ್ಮ ಮನಸ್ಸಿಗೆ ನೋವು ಉಂಟಾಗುವುದಿಲ್ಲ. ನೀವು ಕೈಗೊಳ್ಳುವ ಪ್ರತಿ ನಿರ್ಧಾರವೂ ನನಗೆ ಸ್ವೀಕಾರಾರ್ಹ. ನೀವು ಮಹಾಯುತಿ ಕುಟುಂಬದ ಮುಖ್ಯಸ್ಥ. ಕಳೆದ ಎರಡೂವರೆ ವರ್ಷಗಳಲ್ಲಿ ನಾನು ಮಾಡಿದ ಕೆಲಸ ಜನರಲ್ಲಿ ನನ್ನ ಪ್ರೀತಿಯ ಬಂಧು ಎಂಬ ಇಮೇಜ್ ಮೂಡಿಸಿದೆ. ನನಗೆ ಅಷ್ಟು ಸಾಕು ಎಂದು ಹೇಳಿದೆ.

-ಏಕನಾಥ್ ಶಿಂದೆ ಉಸ್ತುವಾರಿ ಸಿಎಂ

ಫಡ್ನವಿಸ್ ಸಿಎಂ ಆಗಲಿ

ಈ ಬಾರಿ ದೇವೇಂದ್ರ ಫಡ್ನವಿಸ್ ಮಹಾಯುತಿ ಸರಕಾರ ಮುನ್ನಡೆಸಲಿ. ಮಹಾರಾಷ್ಟ್ರ ಜನರೂ ಇದನ್ನೇ ಬಯಸಿದ್ದಾರೆ. ಏಕನಾಥ್ ಶಿಂದೆ ಉಪ ಮುಖ್ಯಮಂತ್ರಿಯಾಗಲಿ, ಇಲ್ಲವೇ ಕೇಂದ್ರದಲ್ಲಿ ಸಚಿವರಾಗಲಿ. ಬಿಜೆಪಿ 132 ಸ್ಥಾನ ಗೆದ್ದಿದೆ. ಹಾಗಾಗಿ ಫಡ್ನವಿಸ್ ಅವರಿಗೇ ಅವಕಾಶ ಕೊಡಬೇಕು ಎಂಬುದು ನನ್ನ ಅಭಿಪ್ರಾಯ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ ಪಕ್ಷದ ಅಧ್ಯಕ್ಷರೂ ಆದ ಕೇಂದ್ರ ಸಚಿವ ರಾಮದಾಸ್ ಅಠಾವಳೆ ಹೇಳಿದ್ದಾರೆ.

ಶಿಂದೆ ಸಿಎಂ ಆಗದಿದ್ದರೆ ಬಿಎಂಸಿಯಲ್ಲಿ ಸೋಲು?

ಶಿಂದೆ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಜೆಪಿ ಕೊಡದೇ ಇದ್ದರೆ ಅದರಿಂದ ಶಿವಸೇನೆ ಕಾರ್ಯಕರ್ತರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ. ಈಗಿನ ಚುನಾವಣೆಯಲ್ಲಿ ಅತ್ಯಧಿಕ ಸ್ಥಾನ ಗೆಲ್ಲಲು ಬಿಜೆಪಿ ಶಿಂದೆ ಅವರನ್ನು ಬಳಸಿಕೊಂಡು ನಂತರ ಪಕ್ಕಕ್ಕೆ ದೂಡಿದೆ ಎಂಬ ದೂಷಣೆ ಕೇಳಬೇಕಾಗುತ್ತದೆ ಎಂದು ಶಿವಸೇನೆಯ ಮತ್ತೊಬ್ಬ ನಾಯಕ ಎಚ್ಚರಿಕೆಯ ಮಾತನಾಡಿದ್ದಾರೆ.

ಬಿಜೆಪಿ ಶಿಂದೆ ಅವರ ಪರ ನಿಲ್ಲದೇ ಇದ್ದರೆ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಬಣಕ್ಕೆ ಮರಳಿ ಶಕ್ತಿ ಪಡೆಯುವ ಅವಕಾಶ ನೀಡಿದಂತಾಗುತ್ತದೆ. ಮುಂಬೈನಲ್ಲಿನ 20 ಸ್ಥಾನಗಳಲ್ಲಿ ಉದ್ಧವ್ ನೇತೃತ್ವದ ಶಿವಸೇನೆ 10 ಸ್ಥಾನ ಗೆದ್ದಿದೆ. ಮುಂಬರುವ ಬೃಹನ್ ಮುಂಬೈ ಕಾರ್ಪೊರೇಷನ್(ಬಿಎಂಸಿ) ಚುನಾವಣೆಯಲ್ಲಿ 'ಶಿಂದೆ ಉದ್ಧವ್ ನೇತೃತ್ವದ ಮಹಾವಿಕಾಸ್ ಅಘಾಡಿ ಸರಕಾರ ಉರುಳಿಸಿದರು. ಅಲ್ಲದೇ, ಪಕ್ಷ ವಿಭಜಿಸಿ ಬಿಲ್ಲು-ಬಾಣ ಚಿಹ್ನೆ ಕಿತ್ತುಕೊಂಡರು ಎಂಬ ಆರೋಪ ಹೊರಿಸಿ ಉದ್ಧವ್ ಬಣದ ಶಿವಸೇನೆ ಬಿಎಂಸಿ ಚುನಾವಣೆಯಲ್ಲಿ ಮೇಲುಗೈ ಸಾಧಿಸುವ ಅಪಾಯವಿದೆ. ಉದ್ಧವ್ ಠಾಕ್ರೆ ಅವರ ರಾಜಕೀಯ ಕೊನೆಗೊಳಿಸುವ ಬಿಜೆಪಿ ಯೋಜನೆ ಅಪೂರ್ಣವಾಗುತ್ತದೆ, ಆದ್ದರಿಂದ, ಸಿಎಂ ಹುದ್ದೆ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮುನ್ನ ಬಿಜೆಪಿ ವರಿಷ್ಠರು ದೂರಗಾಮಿ ಚಿಂತನೆ ನಡೆಸಬೇಕಿದೆ ಎಂದು ಶಿವಸೇನೆ ನಾಯಕ ಹೇಳಿದ್ದಾರೆ.

ಶಾಸಕರು ಕ್ಷೇತ್ರಕ್ಕೆ ಮರಳಲಿ ಶಿವ ಸೇನೆ ಸೂಚನೆ

ಚುನಾವಣಾ ಫಲಿತಾಂಶ ಪ್ರಕಟವಾದ ದಿನದಿಂದಲೂ ಮುಂಬೈನ ಐಷಾರಾಮಿ ಹೋಟೆಲ್ ತಾಜ್ ಲ್ಯಾಂಡ್ಸ್ ಎಂಡ್‌ನಲ್ಲಿ ಉಳಿದುಕೊಂಡಿರುವ ಶಿವಸೇನೆ ಶಾಸಕರು, ತಮ್ಮ ಕ್ಷೇತ್ರಗಳಿಗೆ ತಕ್ಷಣ ಹಿಂತಿರುಗಬೇಕು ಎಂದು ಪಕ್ಷ ಸೂಚಿಸಿದೆ. ಮತದಾರರನ್ನು ಭೇಟಿ ಮಾಡಿ, ಮಹಾಯುತಿ ಮೈತ್ರಿಕೂಟ ಬೆಂಬಲಿಸಿದ್ದಕ್ಕಾಗಿ ಧನ್ಯವಾದ ತಿಳಿಸಿ ಎಂದೂ ಸೂಚಿಸಲಾಗಿದೆ. ಅಲ್ಲದೇ, ಪಕ್ಷದ ಕಾರ್ಯಕರ್ತರು ಮುಂಬೈಗೆ ಸದ್ಯಕ್ಕೆ ಬರಬಾರದು ಎಂದೂ ಜಾಲತಾಣ ಮೂಲಕ ಮನವಿ ಮಾಡಲಾಗಿದೆ.

ಚರ್ಚಿಸಿ ಸಿಎಂ ಆಯ್ಕೆ: ಬಿಜೆಪಿ

ಮುಂಬೈ: ಶಿವಸೇನೆ, ಎನ್‌ಸಿಪಿ ನಾಯಕರ ಜತೆ ಚರ್ಚೆ ನಡೆಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಮುಖ್ಯಮಂತ್ರಿ ಆಯ್ಕೆ ನಿರ್ಧಾರ ಕೈಗೊಳ್ಳಲಾಗುವುದು, ಆ ಬಳಿಕವೇ ಮಹಾಯುತಿ 2.0 ಸರಕಾರ ರಚಿಸಲಾಗುವುದು. ಮಹಾಯುತಿ 3 ಪಕ್ಷಗಳ ಮೈತ್ರಿಕೂಟ. ಮೂರೂ ಪಕ್ಷಗಳವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡ ನಂತರವೇ ಮಹಾರಾಷ್ಟ್ರದಲ್ಲಿ ನೂತನ ಸರಕಾರ ರಚನೆ ಮತ್ತು ಸಿಎಂ ಆಯ್ಕೆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು. ಫಲಿತಾಂಶ ಪ್ರಕಟವಾಗಿ ಕೇವಲ 4 ದಿನಗಳಷ್ಟೇ ಆಗಿವೆ. ವಿಳಂಬವೇನೂ ಆಗಿಲ್ಲ ಎಂದು ಬಿಜೆಪಿ ನಾಯಕ ಅಶೋಕ್ ಚವಾಣ್ ಬುಧವಾರ ಹೇಳಿದ್ದಾರೆ.

ಇಂದು ಹೇಮಂತ್ ಪ್ರಮಾಣ

ರಾಂಚಿ: 81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯಲ್ಲಿ ಈಗ 'ಇಂಡಿಯ' ಒಕ್ಕೂಟ ಸರಕಾರ ರಚನೆಗೆ ಸಜ್ಜಾಗಿದೆ. ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ) 34, ಕಾಂಗ್ರೆಸ್ 16, ಆರ್‌ಜೆಡಿ 4, ಸಿಪಿಐ-ಎಂಎಲ್ 2 ಕ್ಷೇತ್ರಗಳಲ್ಲಿ ಗೆದ್ದಿವೆ. ಶಾಸಕಾಂಗ ಪಕ್ಷದ ನಾಯಕರಾಗಿ ನಿರೀಕ್ಷಿಸಿದಂತೆಯೇ ಜೆಎಂಎಂ ನಾಯಕ ಹೇಮಂತ್ ಸೊರೇನ್ ಆಯ್ಕೆಯಾಗಿದ್ದು, ಗುರುವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಜೆಎಂಎಂ ಮುಖಂಡ ಹೇಮಂತ್ ಸೊರೇನ್ ನಾಲ್ಕನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ. ಸೊರೇನ್ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್, ಎಡಪಕ್ಷಗಳ ಮುಖಂಡರು ಭಾಗಿಯಾಗುವ ಸಾಧ್ಯತೆ ಇದೆ. 21 ಕ್ಷೇತ್ರ ಗೆದ್ದಿರುವ ಬಿಜೆಪಿ, ಮಿತ್ರಪಕ್ಷವಾದ ಎಜೆಎಸ್‌ಯು-1, ಲೋಕ ಜನಶಕ್ತಿ ಪಾರ್ಟಿ(ರಾಮ್‌ವಿಲಾಸ್)-1, ಜೆಡಿಯು-1 ಒಳಗೊಂಡ ಎನ್‌ಡಿಎ ಮೈತ್ರಿಕೂಟ ಅಧಿಕೃತ ಪ್ರತಿಪಕ್ಷ ಸ್ಥಾನಕ್ಕೆ ತೃಪ್ತಿಪಟ್ಟಿದೆ.

ಶಿಂದೆಯೇ ಮತ್ತೊಮ್ಮೆ ಸಿಎಂ: ಕದಂ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರೇ ಮಹಾರಾಷ್ಟ್ರಕ್ಕೆ ನೂತನ ಮುಖ್ಯಮಂತ್ರಿಯನ್ನು ನಿರ್ಧಾರ ಮಾಡಲಿ ಎಂದು ಏಕನಾಥ ಶಿಂದೆ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದರೂ, ಏಕನಾಥ ಶಿಂದೆ ಅವರನ್ನೇ ಮತ್ತೆ ಮುಖ್ಯಮಂತ್ರಿಯಾಗಿ ಮಾಡಬೇಕು ಎಂಬ ಪ್ರಯತ್ನಗಳು ಶಿವಸೇನೆ ಕಡೆಯಿಂದ ನಡೆದಿವೆ. ಪಕ್ಷದ ನಾಯಕರು ಶಿಂದೆ ಪರವಾಗಿಯೇ ದನಿ ಎತ್ತಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಹೋರಾಟ ನಡೆದಿದ್ದು, ಮಹಾಯುತಿ ಕೇವಲ 17 ಸ್ಥಾನ ಗೆದ್ದಿತ್ತು. ಕಾಂಗ್ರೆಸ್, ಶಿವಸೇನೆ (ಉದ್ಧವ್ ಬಣ), ಎನ್‌ಸಿಪಿ(ಶರದ್ ಬಣ) ಒಳಗೊಂಡ ಮಹಾ ವಿಕಾಸ್ ಅಘಾಡಿ 31 ಲೋಕಸಭಾ ಕ್ಷೇತ್ರಗಳಲ್ಲಿ ಗೆದ್ದಿದ್ದರು. ಆದರೆ, ಈಗಿನ ವಿಧಾನಸಭಾ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟ ಪ್ರಚಂಡ ಗೆಲುವು ಸಾಧಿಸಿದೆ. ಬಿಜೆಪಿ ಸ್ಪರ್ಧೆ ಮಾಡಿದ 150 ಕ್ಷೇತ್ರಗಳಲ್ಲಿ 132 ಸ್ಥಾನಗಳನ್ನು ಗೆದ್ದಿದೆ. ಶಿವಸೇನೆ 79 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 57 ಸ್ಥಾನ ಗೆದ್ದಿದೆ. ಎನ್‌ಸಿಪಿ 41 ಸ್ಥಾನ ಗೆದ್ದಿದೆ. ಈ ಪ್ರಚಂಡ ಗೆಲುವಿನಲ್ಲಿ ಏಕನಾಥ್ ಶಿಂದೆ ಕೊಡುಗೆ ಇರುವುದನ್ನು ಬಿಜೆಪಿ ನಿರಾಕರಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಬಾರಿಯೂ ಮುಖ್ಯಮಂತ್ರಿಯಾಗಲು ಏಕನಾಥ್ ಶಿಂದೆ ಅವರಿಗೇ ಅವಕಾಶ ನೀಡಬೇಕು ಎಂದು ಶಿವಸೇನೆ ನಾಯಕ ರಾಮದಾಸ್ ಕದಂ ಪ್ರತಿಪಾದಿಸಿದ್ದಾರೆ.

ಗಲಭೆಕೋರರಿಂದಲೇ ನಷ್ಟ ವಸೂಲಿ

ಲಖನೌ: ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ಮಸೀದಿ ಸರ್ವೆ ವಿರೋಧಿಸಿ ಗಲಭೆ ನಡೆಸಿ ಸಾರ್ವಜನಿಕ ಆಸ್ತಿಗಳಿಗೆ ಹಾನಿ ಮಾಡಿದವರಿಂದಲೇ ನಷ್ಟ ಪರಿಹಾರ ವಸೂಲಿ ಮಾಡಲು ಉತ್ತರ ಪ್ರದೇಶ ಸರಕಾರ ಮುಂದಾಗಿದೆ. ಕಲ್ಲು ತೂರಾಟ ನಡೆಸಿ ಆಸ್ತಿಗಳಿಗೆ ಹಾನಿ ಮಾಡಿದವರ ಫೋಟೊಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲಾಗುವುದು ಎಂದು ಸಂಭಾಲ್‌ನ ಸರಕಾರಿ ಅಧಿಕಾರಿ ಬುಧವಾರ ತಿಳಿಸಿದ್ದಾರೆ. ಅಲ್ಲದೇ ಗಲಭೆಕೋರರ ಸೆರೆಗೆ ನೆರವಾಗುವವರಿಗೆ, ಮಾಹಿತಿ ನೀಡಿದವರಿಗೆ ಬಹುಮಾನ ನೀಡಲಾಗುವುದು ಎಂದೂ ತಿಳಿಸಿದ್ದಾರೆ.

ನ್ಯಾಯಾಲಯ ಆದೇಶದಂತೆ ನಗರದ ಕೋಟ್ ಗರ್ವಿ ಪ್ರದೇಶದ ಶಾಹಿ ಜಾಮಾ ಮಸೀದಿ ಸರ್ವೇಗೆ ಅಧಿಕಾರಿಗಳು ಭಾನುವಾರ ತೆರಳಿದ್ದಾಗ ಮುಸ್ಲಿಂ ಸಮುದಾಯದಿಂದ ವಿರೋಧ ವ್ಯಕ್ತವಾಗಿತ್ತು. ಸ್ಥಳೀಯರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಅಧಿಕಾರಿಗಳು ಮತ್ತು ಪೊಲೀಸರ ಮೇಲೆ ಕಲ್ಲು ತೂರಿದ್ದರು. ವಾಹನಗಳಿಗೆ ಬೆಂಕಿ ಹಚ್ಚಿದ್ದರು. ಪೊಲೀಸರೂ ಮೊದಲು ಲಾಠಿ ಪ್ರಹಾರ ನಡೆಸಿ ಗಲಭೆ ಹತೋಟಿಗೆ ಬಾರದೇ ಇದ್ದುದರಿಂದ ಗೋಲಿಬಾರ್ ಮಾಡಿದ್ದರು. ಗಲಭೆಯಲ್ಲಿ ಐವರು ಸಾವಿಗೀಡಾಗಿದ್ದರು. 20 ಪೊಲೀಸರು ಸೇರಿದಂತೆ ಹಲವಾರು ಜನ ಗಾಯಗೊಂಡಿದ್ದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.

Telephone No: 9448994705
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ-2)/2024-25/19382 ದಿನಾಂಕ: 20.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿಗೆ ಅವಶ್ಯವಾದ ಈ ಕೆಳಕಂಡ ಲೈನ್ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ.	ಸಾಮಾಗ್ರಿಗಳ ವಿವರ	ಟೆಂಡರ್ ವಿಚಾರಣೆ ಸಂಖ್ಯೆ/ದಿನಾಂಕ
1	ಸೇಫ್ಟಿ ಶೂಸ್ (Safety Shoes)	ಸಿ2-5993/20-11-2024
2	200Amps ಸಿಂಗಲ್ ಬ್ರೇಕ್ ಜಿ.ಓ.ಎಸ್	ಸಿ2-5994/20-11-2024
3	ಡಿ.ಪಿ.ಟಿ.ಸಿ ಸೆಟ್ (25/63/100ಕೆವಿಎ DTCs)	ಸಿ2-5995/20-11-2024
4	ಜಿ.ಐ ವೈರ್ (ನಂ.8 ಎಸ್.ಡಬ್ಲ್ಯೂ.ಜಿ)	ಸಿ2-5997/20-11-2024
5	ಪರಿವರ್ತಕ ಟೆಸ್ಟ್ ಬೆಂಚ್ (ಮಳವಳ್ಳಿ ವಿಭಾಗಕ್ಕೆ)	ಸಿ2-5998/20-11-2024

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 28-11-2024ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91-8046010000, +91-8068948777 ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

DIPR/DDMYS-859/KSMCA-587/2024-25
ಸಹಿ/- ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-192/22-23/2135/2024-25 ದಿನಾಂಕ: 27.11.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎ.ಸಿ. ಶ್ರೀನಿವಾಸ ಮತ್ತು ಶ್ರೀಮತಿ ಶಶಿಕಲಾ ಕೆ #90, ಚೊಕ್ಕನಹಳ್ಳಿ, ಜಕ್ಕೂರು ಅಂಚೆ, ಯಲಹಂಕ ಹೋಬಳಿ, ಬೆಂಗಳೂರು-560064.	ಯಲಹಂಕ	ಯಲಹಂಕ	ತಿರುಮೇನಹಳ್ಳಿ	29/1 29/2 30& 31	ಒಟ್ಟು 5ಎ-07ಗುಂ [0ಎ-03ಗುಂ ಖರಾಬು ಹೊರತುಪಡಿಸಿ]	ಕೈಗಾರಿಕೆ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ಕೈಗಾರಿಕೆ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿರುವುದರಿಂದ, ಸಾರ್ವಜನಿಕರಿಗೆ ಉತ್ತಮ ಬೆಲೆಯಲ್ಲಿ ವಾಣಿಜ್ಯ ಮಳಿಗೆಗಳು, ದಿನನಿತ್ಯ ಉಪಯೋಗದ ವಸ್ತುಗಳು ಹತ್ತಿರದಲ್ಲಿ ಲಭ್ಯವಾಗುತ್ತವೆ. ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ, ಸ್ಥಳೀಯರಿಗೆ ಉದ್ಯೋಗಾವಕಾಶಗಳು ದೊರಕುತ್ತದೆ, ಪ್ರಶ್ನಿತ ಜಮೀನುಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುವಾಗ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಪ್ರಶ್ನಿತ ಜಮೀನುಗಳು ನಗರ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ, ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

14 ತಿಂಗಳ ಇಸ್ರೇಲ್ ಯುದ್ಧಕ್ಕೆ ತುಸು ವಿರಾಮ | ಷರತ್ತು ಪಾಲನೆಯತ್ತ ನಿಗಾ ಅಮೆರಿಕ ಸೇನೆ ಹೊಣೆ

ಇಸ್ರೇಲ್-ಹೆಜ್ಬೊಲ್ಲಾ 2 ತಿಂಗಳ ಕದನ ವಿರಾಮ ಜಾರಿ

ಜೆರುಸಲೇಂ: ಇಸ್ರೇಲ್ ಸೇನಾಪಡೆ ಮತ್ತು ಲೆಬನಾನ್ ಉಗ್ರ ಸಂಘಟನೆ 'ಹೆಜ್ಬೊಲ್ಲಾ' ನಡುವೆ ಬುಧವಾರ ಮುಂಜಾನೆ ಕದನ ವಿರಾಮ ಘೋಷಣೆಯಾಗಿದೆ. ಆರಂಭದಲ್ಲಿ 2 ತಿಂಗಳ ಅವಧಿಗೆ ಕದನ ವಿರಾಮ ಘೋಷಿಸಲಾಗಿದೆ.

ಇಸ್ರೇಲ್ ಮತ್ತು ಗಾಜಾಸ್ಟ್ರಿಪ್‌ನ ಉಗ್ರ ಸಂಘಟನೆ ಹಮಾಸ್ ನಡುವೆ 14 ತಿಂಗಳ ಹಿಂದೆ ಆರಂಭಗೊಂಡ ಸಂಘರ್ಷದಲ್ಲಿ ಆ ನಂತರದ ದಿನಗಳಲ್ಲಿ ಲೆಬನಾನ್‌ನ ಹೆಜ್ಬೊಲ್ಲಾ ಉಗ್ರ ಸಂಘಟನೆ ಮಧ್ಯೆ ಪ್ರವೇಶಿಸಿತ್ತು. ಬಳಿಕ ಇಸ್ರೇಲ್ ಸೇನೆಯ ಗಮನ ಲೆಬನಾನ್ ಕಡೆ ತಿರುಗಿತು. ಹೆಜ್ಬೊಲ್ಲಾ ಮತ್ತು ಇಸ್ರೇಲ್ ಸೇನೆ ನಡುವಿನ ಸಂಘರ್ಷವನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಈಗಿನ ಕದನ ವಿರಾಮದಲ್ಲಿನ ಷರತ್ತುಗಳ ಪಾಲನೆ ಎರಡೂ ಕಡೆಗಳಿಂದ ನಿರ್ವಹಣೆ ಆಗುವಂತೆ ನೋಡಿಕೊಳ್ಳುವುದು ಅಮೆರಿಕ ಸೇನೆಯ ಹೊಣೆಯಾಗಿದೆ.

ಒಪ್ಪಂದ: ದಕ್ಷಿಣ ಲೆಬನಾನ್‌ನಲ್ಲಿ ಹೆಜ್ಬೊಲ್ಲಾ ಉಗ್ರ ಸಂಘಟನೆ ತನ್ನ ಸಶಸ್ತ್ರ ಪಡೆಗಳನ್ನು ನಿಶಸ್ತ್ರಗೊಳಿಸಬೇಕು. ಇನ್ನೊಂದೆಡೆ ಇಸ್ರೇಲ್ ಸೇನಾಪಡೆಗಳು ತಮ್ಮ ದೇಶದ ಗಡಿಗೆ ಹಿಂತಿರುಗಬೇಕು. ಅಮೆರಿಕ ನೇತೃತ್ವದ ಅಂತಾರಾ

ಷ್ಟ್ರೀಯ ಸಮಿತಿ ಮೇಲ್ವಿಚಾರಣೆ ವಹಿಸಬೇಕು ಎಂಬುದೇ ಕದನ ವಿರಾಮದ ಒಪ್ಪಂದವಾಗಿದೆ. ಒಂದೊಮ್ಮೆ ಹೆಜ್ಬೊಲ್ಲಾ ಉಗ್ರ ಸಂಘಟನೆ ಕದನ ವಿರಾಮ ಒಪ್ಪಂದ ಮುರಿದರೆ ಮರಳಿ ದಾಳಿ ಆರಂಭಿಸುವುದಾಗಿ ಇಸ್ರೇಲ್ ಎಚ್ಚರಿಕೆ ನೀಡಿದೆ. ಲೆಬನಾನ್‌ನ ಬೈರೂತ್‌ನಲ್ಲಿ ಇಸ್ರೇಲ್ ಅತ್ಯಂತ ತೀವ್ರತರವಾದ ವೈಮಾನಿಕ ದಾಳಿಯನ್ನು ಮಂಗಳವಾರ ನಡೆಸಿದ್ದರಿಂದ 42 ಜನರು ಮೃತಪಟ್ಟರು. ಆ ಬಳಿಕ ಕದನ ವಿರಾಮಕ್ಕೆ ಹೆಜ್ಬೊಲ್ಲಾ ಒಪ್ಪಿತು. ಕದನ ವಿರಾಮ ಬುಧವಾರ ನಸುಕಿನ 4 ಗಂಟೆಗೆ ಆರಂಭಗೊಂಡಿತು. ಅಮೆರಿಕ-ಫ್ರಾನ್ಸ್ ಮಧ್ಯಸ್ಥಿಕೆಯ ಕದನ ವಿರಾಮ ಒಪ್ಪಂದವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಡಿಸಿದ ನಂತರ ಇಸ್ರೇಲ್ ರಕ್ಷಣಾ ಸಚಿವ ಸಂಪುಟ ಅನುಮೋದಿಸಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ. ಅಮೆರಿಕ ಅಧ್ಯಕ್ಷ ಜೋ ಬೈಡನ್, ವಾಷಿಂಗ್ಟನ್‌ನಲ್ಲಿ ಮಾತನಾಡಿ, ಇಸ್ರೇಲ್-ಹೆಜ್ಬೊಲ್ಲಾ ನಡುವಿನ ಕದನ ವಿರಾಮ ನಿಜಕ್ಕೂ ಒಂದು ಶುಭ ಸುದ್ದಿ ಎಂದಿದ್ದಾರೆ.

ಹಮಾಸ್ ವಿರುದ್ಧ ದಾಳಿ ನಿಲ್ಲದು

ಆದರೆ, ಈಗಿನ ಕದನ ವಿರಾಮ ಒಪ್ಪಂದ ಗಾಜಾದಲ್ಲಿನ ಹಮಾಸ್ ಉಗ್ರರ ವಿರುದ್ಧದ ಯುದ್ಧಕ್ಕೆ ಸಂಬಂಧಪಟ್ಟಿಲ್ಲ ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ. ಇನ್ನೂ ಹಲವು ಇಸ್ರೇಲ್ ಪ್ರಜೆಗಳನ್ನು ಹಮಾಸ್ ಒತ್ತೆಯಾಳಾಗಿ ಹಿಡಿದಿಟ್ಟುಕೊಂಡಿರುವುದರಿಂದ ಹಮಾಸ್ ವಿರುದ್ಧದ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಇಸ್ರೇಲ್ ಸೇನೆ ಸ್ಪಷ್ಟಪಡಿಸಿದೆ.

14 ತಿಂಗಳಲ್ಲಿ 46,217 ಜೀವಹರಣ!

14 ತಿಂಗಳ ಇಸ್ರೇಲ್-ಹಮಾಸ್ ಸಂಘರ್ಷದಲ್ಲಿ ಒಟ್ಟು 46,217 ಮಂದಿ ಜೀವ ಕಳೆದುಕೊಂಡಿದ್ದರೆ, 1,19,860 ಜನರು ಗಾಯಗೊಂಡಿದ್ದಾರೆ. 2023ರ ಅಕ್ಟೋಬರ್ 7ರ ನಸುಕಿನಲ್ಲಿ ಗಾಜಾ ಮೂಲದ ಹಮಾಸ್ ಉಗ್ರ ಸಂಘಟನೆ ಇಸ್ರೇಲ್‌ನ ದಕ್ಷಿಣ ಬಾಗದಲ್ಲಿ ನಡೆದಿದ್ದ ಸಂಗೀತ ರಸಮಂಜರಿ ಕಾರ್ಯಕ್ರಮದ ಮೇಲೆ ಹಠಾತ್ ದಾಳಿ ನಡೆಸಿದ್ದರಿಂದ ವಿದೇಶಿ ಸಂಗೀತ ಪ್ರೇಮಿಗಳೂ, ಇಸ್ರೇಲ್ ಪ್ರಜೆಗಳೂ ಸೇರಿದಂತೆ 1139 ಮಂದಿ ಹತರಾದರು. ನಂತರ ಇಸ್ರೇಲ್ ಹಮಾಸ್ ವಿರುದ್ಧ ಆರಂಭಿಸಿದ ಯುದ್ಧದಲ್ಲಿ ಈವರೆಗೆ(14 ತಿಂಗಳು) ಗಾಜ್ಜಾದಲ್ಲಿ 44,282 ಮಂದಿ, ಇಸ್ರೇಲ್ ವಶದಲ್ಲಿರುವ ವೆಸ್ಟ್ ಬ್ಯಾಂಕ್ ಪ್ರದೇಶದಲ್ಲಿ 796 ಜನರು ಸಾವಿಗೀಡಾಗಿದ್ದಾರೆ. ಈವರೆಗಿನ ಸಂಘರ್ಷದಲ್ಲಿ ಇಸ್ರೇಲ್ ಕಡೆ ಯೋಧರೂ ಸೇರಿದಂತೆ 8730 ಜನರು ಗಾಯಗೊಂಡಿದ್ದರೆ, ಗಾಜಾದಲ್ಲಿ 1,04,880 ಮಂದಿ ಗಾಯಾಳುಗಳಾಗಿ ದ್ದಾರೆ. ಇಸ್ರೇಲ್ ಆಕ್ರಮಿತ ವೆಸ್ಟ್ ಬ್ಯಾಂಕ್‌ನಲ್ಲಿ 6250 ಮಂದಿ ಗಾಯಗೊಂಡಿದ್ದಾರೆ ಎಂದು ಅಲ್‌ಜಝೀರಾ ವರದಿ ಮಾಡಿದೆ.

ಕೆನಡಾ, ಮೆಕ್ಸಿಕೋ, ಚೀನಾಗೆ ಟ್ರಂಪ್ ಶಾಕ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷರಾಗಿ ಜ.20ರಂದು ಅಧಿಕಾರ ಸ್ವೀಕರಿಸಲಿರುವ ಡೊನಾಲ್ಡ್ ಟ್ರಂಪ್, ಅದಾಗಲೇ ಪರೋಕ್ಷ ಆಡಳಿತ ಆರಂಭಿಸಿದ್ದಾರೆ. ತಮ್ಮ ಸರಕಾರದಲ್ಲಿ ಸಚಿವರಾಗಿ ಭಾಗಿಯಾಗುವವರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೇ, ವಿದೇಶಾಂಗ ವ್ಯವಹಾರಗಳ ಕುರಿತೂ ತಾವು ಕೈಗೊಳ್ಳಲಿರುವ ನಿರ್ಧಾರಗಳನ್ನೂ ಈಗಲೇ ಪ್ರಕಟಿಸಲಾರಂಭಿಸಿದ್ದಾರೆ. ಮುಖ್ಯವಾಗಿ ಚೀನಾ, ಮೆಕ್ಸಿಕೋ ಮತ್ತು ಕೆನಡಾಗೆ ಭಾವಿ ಅಧ್ಯಕ್ಷ ಟ್ರಂಪ್ ಶಾಕ್ ನೀಡಿದ್ದಾರೆ. ಜ.20ರಂದು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಮೆಕ್ಸಿಕೋ, ಕೆನಡಾದಿಂದ ಆಮದಾಗುವ ಉತ್ಪನ್ನಗಳ ಮೇಲೆ ಶೇ.25ರಷ್ಟು ತೆರಿಗೆ ವಿಧಿಸುವ ಕಡತಕ್ಕೆ ಸಹಿ ಹಾಕುವುದಾಗಿ ಟ್ರಂಪ್ ಪ್ರಕಟಿಸಿದ್ದಾರೆ. ನಿಷೇಧಿತ ಮಾದಕದ್ರವ್ಯ ಸರಬರಾಜು, ವಲಸೆಗೆ ವಿರುದ್ಧವಾಗಿ ಈ ನಿರ್ಧಾರ ತೆಗೆದುಕೊಳ್ಳುವುದಾಗಿ ಟ್ರಂಪ್ ಹೇಳಿದ್ದಾರೆ. ಅಲ್ಲದೇ ಚೀನಾ ಉತ್ಪನ್ನಗಳ ಮೇಲೆ ಹೆಚ್ಚುವರಿಯಾಗಿ ಶೇ.10 ಸುಂಕ ವಿಧಿಸುವುದಾಗಿಯೂ ಘೋಷಿಸಿದ್ದಾರೆ. ಅಮೆರಿಕ ವಿಶ್ವದ ದೊಡ್ಡ ಆಮದುದಾರ ದೇಶ. ಅಮೆರಿಕಕ್ಕೆ ಆಮದಾಗುವ ವಸ್ತುಗಳ ಪೈಕಿ ಕೆನಡಾ, ಚೀನಾ, ಮೆಕ್ಸಿಕೋ ಪಾಲು ಶೇ.40ರಷ್ಟಿದೆ.

ಟ್ರಂಪ್ ಘೋಷಣೆ ನಂತರ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಕರೆ ಮಾಡಿ 10 ನಿಮಿಷ ಮಾತನಾಡಿದ್ದಾರೆ. ವ್ಯಾಪಾರ ಮತ್ತು ಗಡಿ ಭದ್ರತೆ ಬಗ್ಗೆ ಚರ್ಚಿಸಿದ್ದಾರೆ. ಅಮೆರಿಕ-ಮೆಕ್ಸಿಕೋ ಗಡಿಗೆ ಹೋಲಿಸಿದರೆ ಕೆನಡಾ ಗಡಿ ದಾಟುವ ವಲಸಿಗರ ಸಂಖ್ಯೆ ಸಣ್ಣದು ಎಂದು ಟ್ರುಡೋ ಹೇಳಿರುವುದಾಗಿ ವರದಿಯಾಗಿದೆ.



ಐವರಲ್ಲಿ ಒಬ್ಬರದ್ದು ಬಾಲ್ಯ ವಿವಾಹ: ಸಚಿವೆ ಕಳವಳ

ದೆಹಲಿ: ದೇಶದಲ್ಲಿ ಎಷ್ಟೇ ಕಾನೂನು ಕ್ರಮಗಳನ್ನು ಕೈಗೊಂಡರೂ ಬಾಲ್ಯವಿವಾಹಗಳು ಜರುಗುತ್ತಲೇ ಇವೆ. ದೇಶದಲ್ಲಿನ ಪ್ರತಿ ಐವರು ಹೆಣ್ಣುಮಕ್ಕಳಲ್ಲಿ ಒಬ್ಬರದ್ದು ಬಾಲ್ಯವಿವಾಹವಾಗಿರುತ್ತದೆ ಎಂದು ಕೇಂದ್ರ ಮಹಿಳಾ -ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾ ದೇವಿ ಕಳವಳ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ 'ಬಾಲ್ಯ ವಿವಾಹ ಮುಕ್ತ ಭಾರತ ಅಭಿಯಾನ'ಕ್ಕೆ ಬುಧವಾರ ಚಾಲನೆ ನೀಡಿದ ಸಚಿವೆ, ಕಳೆದೊಂದು ವರ್ಷದಲ್ಲೇ 2 ಲಕ್ಷ ಬಾಲ್ಯ ವಿವಾಹಗಳನ್ನು ತಡೆದು ನಿಲ್ಲಿಸಲಾಗಿದೆ. ಅದೆಷ್ಟೇ ಜಾಗೃತಿ ಮೂಡಿಸಿದರೂ ದೇಶದಲ್ಲಿ ಬಾಲ್ಯ ವಿವಾಹ ಮುಂದುವರಿ ಯುತ್ತಲೇ ಇದೆ. ದೇಶದ ಪ್ರತಿ ಐವರು ಹೆಣ್ಣು ಮಕ್ಕಳಲ್ಲಿ ಒಬ್ಬಳದ್ದು ಬಾಲ್ಯ ವಿವಾಹವಾಗುತ್ತಿದೆ. 18 ವರ್ಷವಾಗುವುದಕ್ಕೂ ಮುನ್ನವೇ ಪೋಷಕರು ಪುತ್ರಿಯ ವಿವಾಹ ಜರುಗಿಸಿಬಿಡುತ್ತಿದ್ದಾರೆ. ಇದು ಕಾನೂನು ಬಾಹಿರ ಕ್ರಮ. ಇಂತಹ ಕ್ರಮವನ್ನು ಪೂರ್ಣ ನಿಲ್ಲುವಂತೆ ಮಾಡಬೇಕಿದೆ ಎಂದರು. ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ರಾಜಸ್ಥಾನ, ತ್ರಿಪುರಾ, ಅಸ್ಸಾಂ, ಆಂಧ್ರಪ್ರದೇಶ ರಾಜ್ಯಗಳಲ್ಲಿಯೇ ಬಾಲ್ಯ ವಿವಾಹ ಜರುಗುತ್ತಿವೆ. ದೇಶದೆಲ್ಲೆಡೆಯ ಒಟ್ಟು 300 ಜಿಲ್ಲೆಗಳಲ್ಲಿ ಇದೊಂದು ಪಿಡುಗಿನಂತಾಗಿದೆ. ಕಾಯಿದೆ ಜಾರಿಯ ಜತೆಜತೆಗೇ ಜನಜಾಗೃತಿಯೂ ಅಗತ್ಯವಾಗಿದೆ. ಸಾರ್ವಜನಿಕರೂ ಈ ಅಭಿಯಾನದಲ್ಲಿ ಕೈಜೋಡಿಸಬೇಕಿದೆ ಎಂದು ಸಚಿವೆ ಅನ್ನಪೂರ್ಣಾ ದೇವಿ ಮನವಿ ಮಾಡಿದರು.

ರಾಹುಲ್ ದ್ವಿಪೌರತ್ವ ವಿವಾದ; ಗೃಹ ಸಚಿವಾಲಯಕ್ಕೆ ಸೂಚನೆ

ಲಖನೌ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬ್ರಿಟನ್ ಪೌರತ್ವ ಹೊಂದಿರುವುದರಿಂದ ಅವರ ಭಾರತೀಯ ಪೌರತ್ವ ರದ್ದುಗೊಳಿಸಲು ಆದೇಶಿಸುವಂತೆ ಕೋರಿ ಕರ್ನಾಟಕದ ಬಿಜೆಪಿ ಕಾರ್ಯಕರ್ತ ಎಸ್.ವಿಘ್ನೇಶ್ ಶಿಶಿರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ವಿಚಾರಣೆ ನಡೆಸುತ್ತಿರುವ ಅಲಹಾಬಾದ್ ಹೈಕೋರ್ಟ್, ಈ ಅರ್ಜಿ ಸಂಬಂಧ ಡಿ.19ರೊಳಗೆ ನಿರ್ಧಾರ ಕೈಗೊಳ್ಳುವಂತೆ ಕೇಂದ್ರ ಸರಕಾರಕ್ಕೆ ಸೂಚನೆ ನೀಡಿದೆ.

ನ್ಯಾ.ಎ.ಆರ್.ಮಸೂದಿ ಮತ್ತು ನ್ಯಾ.ಸುಭಾಷ್ ವಿದ್ಯಾರ್ಥಿ ಅವರನ್ನೊಳಗೊಂಡ ಹೈಕೋರ್ಟ್‌ನ ಲಖನೌ ವಿಭಾಗೀಯ ಪೀಠ, ಈಗಿನ ಅರ್ಜಿಯ ಮೇಲೆ ತೆಗೆದುಕೊಂಡ ಕ್ರಮದ ವಿವರಗಳನ್ನು ತಿಳಿಸುವಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ನೋಟಿಸ್ ನೀಡಿದೆ. ಈ ಸಂಬಂಧ ಗೃಹ ಸಚಿವಾಲಯದಿಂದ 3 ವಾರಗಳಲ್ಲಿ ಮಾಹಿತಿ ಪಡೆದು ಮುಂದಿನ ವಿಚಾರಣೆ ದಿನ ಸಲ್ಲಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ಬಿ.ಪಾಂಡೆ ಅವರಿಗೆ ನ್ಯಾಯಾಲಯ ಸೂಚಿಸಿದೆ. ರಾಹುಲ್ ಗಾಂಧಿ ಭಾರತ-ಬ್ರಿಟನ್ ಎರಡೂ ದೇಶಗಳ ಪೌರತ್ವ ಹೊಂದಿದ್ದಾರೆ. ದ್ವಿಪೌರತ್ವಕ್ಕೆ ಭಾರತದ ಕಾನೂನಿನಲ್ಲಿ ಅವಕಾಶವಿಲ್ಲ. ಹಾಗಾಗಿ ರಾಹುಲ್ ಅವರ ಭಾರತೀಯ ಪೌರತ್ವ ರದ್ದುಪಡಿಸಬೇಕು. ಹಾಗೂ ಪ್ರಕರಣವನ್ನು ಸಿಬಿಐ ತನಿಖೆಗೆ ಒತ್ತಾಯಿಸಬೇಕು ಎಂದೂ ವಿಘ್ನೇಶ್ ಶಿಶಿರ್ ಅರ್ಜಿಯಲ್ಲಿ ಕೋರಿದ್ದಾರೆ.

ಇದೇ ವಿಚಾರವಾಗಿ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ದೆಹಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ಪೌರತ್ವ ಪ್ರಕರಣದ ಸಿಬಿಐ ತನಿಖೆ ಈಗಾಗಲೇ ಆರಂಭಗೊಂಡಿದೆ ದೆಹಲಿ ಹೈಕೋರ್ಟ್‌ಗೆ ತಿಳಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಎಚ್‌ಎಸ್‌ಬಿಸಿ ಬ್ಯಾಂಕ್‌ಗೆ ಬಾಂಬ್ ಬೆದರಿಕೆ

ಬೆಂಗಳೂರು: ಎಚ್‌ಎಸ್‌ಬಿಸಿ ಬ್ಯಾಂಕ್‌ನ ಎಂ.ಜಿ. ರಸ್ತೆ ಶಾಖೆಗೆ ಬಾಂಬ್ ಇರಿಸಲಾಗಿದೆ ಎಂದು ಬೆದರಿಸುವ ಇ-ಮೇಲ್‌ವೊಂದನ್ನು ಬ್ಯಾಂಕ್‌ಗೆ ಕಳುಹಿಸಲಾಗಿದೆ. ಇದರ ಬೆನ್ನಲ್ಲೇ ಕಚೇರಿಯ ಎಲ್ಲಾ ಸಿಬ್ಬಂದಿ ಹಾಗು ಗ್ರಾಹಕರನ್ನು ಹೊರ ಕಳುಹಿಸಲಾಯಿತು. ಹಲಸೂರು ಠಾಣೆಯ ಪೊಲೀಸರು ಶೀಘ್ರದಲ್ಲೇ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ಅದು ಹುಸಿ ಬಾಂಬ್ ಬೆದರಿಕೆ ಎಂಬುದು ಗೊತ್ತಾಗಿದೆ. ಬ್ಯಾಂಕ್ ಕಚೇರಿಯ ಒಳಗೆ ಮತ್ತು ಆವರಣದಲ್ಲಿ ಯಾವುದೇ ಸ್ಫೋಟಕ ವಸ್ತು ಪತ್ತೆ ಆಗಿಲ್ಲ. ಪೊಲೀಸರು ನೀಡಿದ ಮಾಹಿತಿ ಪ್ರಕಾರ, ಬುಧವಾರ ಮಧ್ಯಾಹ್ನ 2 ಗಂಟೆಗೆ ಬಾಂಬ್ ಇದೆ ಎಂದು ಬೆದರಿಸಿದ ಇ-ಮೇಲ್ ಬಂದಿದೆ. ಕೂಡಲೇ ಸಿಬ್ಬಂದಿ ವರ್ಗದವರೆಲ್ಲರೂ ಗಾಬರಿಯಿಂದ ಹೊರಕ್ಕೆ ಓಡಿದರು. ಕೆಲ ವಾರಗಳ ಹಿಂದೆ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯ ಆವರಣದಲ್ಲಿ ಬಾಂಬ್ ಇಡಲಾಗಿದೆ ಎನ್ನುವ ಇ-ಮೇಲ್ ಸಂದೇಶವೊಂದು ಬಂದಿತ್ತು. ಆದರೆ ಅದನ್ನು ಪರಿಶೀಲಿಸಿದಾಗ ಯಾವ ಬಾಂಬ್ ಪತ್ತೆಯಾಗಿರಲಿಲ್ಲ. ತಮಿಳುನಾಡು ಬಿಜೆಪಿ ನಾಯಕರೊಬ್ಬರ ಹೆಸರು ಬಳಸಿ ದುಷ್ಕರ್ಮಿಗಳು ಬೆಂಗಳೂರಿನ ಬಿಐಟಿ, ಬಿಎಂಎಸ್ ಮತ್ತು ಎಂಎಸ್ ರಾಮಯ್ಯ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಬಾಂಬ್ ಇರಿಸಲಾಗಿದೆ ಎಂದು ಇ-ಮೇಲ್ ಕಳುಹಿಸಲಾಗಿತ್ತು. ಆದರೆ ಅದೂ ಕೂಡಾ ಹುಸಿ ಬೆದರಿಕೆ ಎಂದು ಸಾಬೀತಾಗಿತ್ತು. ಆ ಪ್ರಕರಣದಲ್ಲಿ ಪಶ್ಚಿಮ ಬಂಗಾಳದ ದಾರ್ಜಿಲಿಂಗ್ ಮೂಲದ ದೀಪಾಂಜನ್ ಮಿತ್ರ ಎನ್ನುವ ವ್ಯಕ್ತಿಯನ್ನು ಪೊಲೀಸರು ಸೆರೆ ಹಿಡಿದಿದ್ದರು. ಅಕ್ಟೋಬರ್‌ನ ಮೊದಲ ವಾರದಲ್ಲಿ ಈತ ಹುಸಿ ಬೆದರಿಕೆಯ ಇಮೇಲ್‌ಗಳನ್ನು ಕಳುಹಿಸಿದ್ದ.

ಭೋವಿ ನಿಗಮ ಅಕ್ರಮ: ಸರಕಾರಕ್ಕೆ ಹೈ ಚಾಟಿ

ಬೆಂಗಳೂರು: ಭೋವಿ ನಿಗಮದ ಅಕ್ರಮ ಪ್ರಕರಣದಲ್ಲಿ ಸಿಸಿಬಿ ಡಿವೈಎಸ್ಪಿ ಕನಕಲಕ್ಷ್ಮಿ ಕಿರುಕುಳ ನೀಡುತ್ತಿದ್ದಾರೆ ಎಂದು ಡೆತ್‌ನೋಟ್ ಬರೆದಿಟ್ಟು ವಕೀಲೆ, ಉದ್ಯಮಿ ಜೀವಾ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದಲ್ಲಿ ಇಲ್ಲಿಯವರೆಗೆ ಯಾಕೆ ಆರೋಪಿಯನ್ನು ಬಂಧಿಸಿಲ್ಲ ಎಂದು ಸರಕಾರಕ್ಕೆ ಹೈಕೋರ್ಟ್ ಚಾಟಿ ಬೀಸಿದೆ. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಬೆಂಗಳೂರು ವಕೀಲರ ಸಂಘ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಸರಕಾರ ಹಾಗೂ ಪೊಲೀಸ್ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡಿತು. ಮೃತರು 13 ಪುಟಗಳ ಡೆತ್‌ನೋಟ್ ಬರೆದಿದ್ದಾರೆ. ಆದರೆ ಇಲ್ಲಿಯವರೆಗೆ ಆರೋಪಿಯನ್ನು ವಿಚಾರಣೆ ಮಾಡಿಲ್ಲ, ಬಂಧಿಸಿಲ್ಲ. ಡಿವೈಎಸ್ಪಿ ಎಂಬ ಕಾರಣಕ್ಕೆ ವಿಚಾರಣೆ ಮಾಡುತ್ತಿಲ್ಲವೇ ಎಂದೂ ಪ್ರಶ್ನಿಸಿದೆ. ರಾಜ್ಯ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದರೆ ಈ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸುತ್ತೇನೆ ಎಂದು ಹೇಳಿ ಗರಂ ಆಗಿದೆ. ಇದಕ್ಕೆ ಉತ್ತರಿಸಿದ ಸರಕಾರದ ಪರ ವಕೀಲ ಜಗದೀಶ್, ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧನ ಮಾಡಲಾಗಲಿಲ್ಲ, ಹಾಗಾಗಿ ಪ್ರಕರಣವನ್ನು ಸಿಸಿಬಿಗೆ ನೀಡಲಾಗಿದೆ ಎಂದು ಉತ್ತರಿಸಿದರು. ಡಿವೈಎಸ್ಪಿ ಕನಕಲಕ್ಷ್ಮಿ ಪರ ವಾದ ಮಂಡಿಸಿದ ವಕೀಲರು, ನಮ್ಮ ಕಕ್ಷಿದಾರರು ಯಾವುದೇ ಕಿರುಕುಳ ನೀಡಿಲ್ಲ. ತನಿಖೆ ನಡೆದು ಸತ್ಯಾಸತ್ಯತೆ ಬರಲಿ. ಕನಕಲಕ್ಷ್ಮಿ ಲಾಟರಿ ಹಗರಣದಲ್ಲಿದ್ದರು ಎಂದು ಇವರು ಆರೋಪ ಮಾಡುವುದು ಸರಿಯಲ್ಲ ಎಂದು ವಾದಿಸಿದರು. ವಾದ-ಪ್ರತಿವಾದ ಆಲಿಸಿದ ಕೋರ್ಟ್ ಆದೇಶವನ್ನು ನ. 29ಕ್ಕೆ ಕಾಯ್ದಿರಿಸಿದೆ.

ಏನಿದು ಪ್ರಕರಣ?: ಭೋವಿ ನಿಗಮ ಅಕ್ರಮ ಸಂಬಂಧ ಜೀವಾರನ್ನು ಸಿಐಡಿ ವಿಚಾರಣೆಗೆ ಒಳಪಡಿಸಿತ್ತು. ಆದರೆ ಕಿರುಕುಳದ ಆರೋಪ ಮಾಡಿ ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ಭೋವಿ ನಿಗಮದಲ್ಲಿ ಒಟ್ಟು 34 ಕೋಟಿ ರು. ಅಕ್ರಮ ಹಣ ವರ್ಗಾವಣೆಯಾಗಿದೆ. ಇದರಲ್ಲಿ ಜೀವಾ ಮಾಲೀಕತ್ವದ ಸಂಸ್ಥೆ ಅನ್ನಿಕಾ ಎಂಟರ್ ಪ್ರೈಸಸ್‌ಗೆ 7.16 ಕೋಟಿ ರೂ., ಅವರ ಸಹೋದರಿ ಹೆಸರಲ್ಲಿರುವ ಹರ್ನಿತಾ ಕ್ರಿಯೇಷನ್ಸ್‌ಗೆ 3.79 ಕೋಟಿ ರು. ವರ್ಗಾವಣೆ ಆಗಿತ್ತು. ಇನ್ನುಳಿದ ಹಣ ಮಾಜಿ ಎಂ.ಡಿ.ಗಳ ಆಪ್ತರ ಪಾಲುದಾರಿಕೆಯ ಸಂಸ್ಥೆಗಳಿಗೆ ವರ್ಗವಾಗಿತ್ತು. ಈ ಪ್ರಕರಣದ ಬಗ್ಗೆ ಆಂತರಿಕ ತನಿಖೆ ನಡೆಸಲು ಗೃಹ ಇಲಾಖೆ ಮುಂದಾಗಿದೆ.

ಗ್ರಾಮ ಆಡಳಿತಾಧಿಕಾರಿ ತಾತ್ಕಾಲಿಕ ಪಟ್ಟಿ ಪ್ರಕಟ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿ ಹುದ್ದೆಗೆ ಅ.27ರಂದು ನಡೆದಿದ್ದ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬುಧವಾರ ಪ್ರಕಟಿಸಿದೆ. ಫಲಿತಾಂಶದ ಜತೆಗೆ ಅಂತಿಮ ಕೀ ಉತ್ತರಗಳನ್ನೂ ಪ್ರಕಟಿಸಲಾಗಿದ್ದು, ತಾತ್ಕಾಲಿಕ ಅಂಕಪಟ್ಟಿಗೆ ಆಕ್ಷೇಪಣೆಗಳು ಇದ್ದರೆ ನವೆಂಬರ್ 28ರಂದು ಸಂಜೆ 4 ಗಂಟೆಯ ಒಳಗೆ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಮೂಲಕ ಸಲ್ಲಿಸಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಬಿಎಸ್.ಸಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳು ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ನವೆಂಬರ್ 28ರ ವರೆಗೆ ದಿನಾಂಕ ವಿಸ್ತರಿಸಲಾಗಿದೆ. ನವೆಂಬರ್ 29 ರೊಳಗೆ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

ಬಿಎಂಸಿಆರ್‌ಐ: ಆಯ್ದ ಶಸ್ತ್ರಚಿಕಿತ್ಸೆ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಬಿಎಂಸಿಆರ್‌ಐ) ಆಯ್ದ ಶಸ್ತ್ರಚಿಕಿತ್ಸೆಗಳನ್ನು ಮುಂದಿನ ಐದು ದಿನ ಮುಂದೂಡಿದೆ. 200ಕ್ಕೂ ಹೆಚ್ಚು ಹಾಸಿಗೆಯುಳ್ಳ ಬಿಎಂಸಿಆರ್‌ಐನಲ್ಲಿ ಪ್ರತಿದಿನ 20ರಿಂದ 30 ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ. ಆದರೆ ಕಳೆದ ಕಳೆದ ನಾಲ್ಕು ದಿನಗಳ ಹಿಂದೆ ವಿದ್ಯುತ್ ವೋಲ್ಟೇಜ್ ಏರಿಳಿತದಿಂದಾಗಿ ಆಸ್ಪತ್ರೆಯ ಕೇಂದ್ರಿಕೃತ ಹವಾ ನಿಯಂತ್ರಣಗಳ (ಎ.ಸಿ) ಉಪಕರಣಗಳಿಗೆ ಹಾನಿಯುಂಟಾಗಿದೆ. ಇದರಿಂದ ಆಸ್ಪತ್ರೆಯಲ್ಲಿನ ಎ.ಸಿ ಬಂದ್ ಆಗಿದೆ. ಹೀಗಾಗಿ ಅದು ದುರಸ್ತಿ ಆಗುವವರೆಗೆ ತುರ್ತು ಶಸ್ತ್ರಚಿಕಿತ್ಸೆ ಮಾತ್ರ ಮಾಡಿ, ಆಯ್ದ ಶಸ್ತ್ರ ಚಿಕಿತ್ಸೆಗಳನ್ನು ಮುಂದೂಡಲಾಗಿದೆ.

ದುಬಾರಿ ದುನಿಯಾ: ಅಡುಗೆ ಎಣ್ಣೆ, ಅಕ್ಕಿ, ತೊಗರಿಬೇಳೆ ಸೇರಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ

ಈರುಳ್ಳಿ ಬೆಲೆ ಮತ್ತೆ ಏರಿಕೆ

ಬೆಂಗಳೂರು: ದಿನದಿಂದ ದಿನಕ್ಕೆ ಜನ ಸಾಮಾನ್ಯರ ಜೀವನ ದುಬಾರಿಯಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗುತ್ತಿದ್ದು, ಬಡವರು, ಮಧ್ಯಮ ವರ್ಗದವರು ಜೀವನ ನಡೆಸುವುದು ಕಷ್ಟವಾಗಿ ಹೋಗಿದೆ. ಈಗಾಗಲೇ ಅಡುಗೆ ಎಣ್ಣೆ ಲೀ.ಗೆ 150, ಅಕ್ಕಿ 70 ರು, ತೊಗರಿಬೇಳೆ ರು.180 ಹೀಗೆ ಹೆಚ್ಚಿನ ವಸ್ತುಗಳ ಬೆಲೆಯು 100ರ ಗಡಿ ದಾಟಿದ್ದು, ಈಗ ಈರುಳ್ಳಿ ಬೆಲೆ ಕೂಡಾ ರು.100 ಗಡಿಗೆ ಬರುವ ಸಾಧ್ಯತೆ ಇದೆ. ಕಳೆದ ಮೂರು ತಿಂಗಳಿಂದ ಈರುಳ್ಳಿ ಬೆಲೆ ಏರಿಕೆಯಾಗುತ್ತಾ ಗ್ರಾಹಕರ ಕಣ್ಣಲ್ಲಿ ನೀರು ತರಿಸುತ್ತಿದೆ. ಸದ್ಯ ರಾಜ್ಯದಲ್ಲಿ ಮಳೆ ನಿಂತಿದೆ, ಆದರೆ ಈರುಳ್ಳಿ ಬೆಲೆ ಏರಿಕೆ ಮಾತ್ರ ನಿಂತಿಲ್ಲ. ಆದರೂ ಕಳೆದ ತಿಂಗಳು ಸುರಿದಂತಹ ಅಕಾಲಿಕ ಮಳೆಗೆ ಈರುಳ್ಳಿ ಬೆಳೆ ಶೇ. 60 ನೀರುಪಾಲಾಗಿದ್ದು, ಮಳೆಯಿಂದ ರಕ್ಷಿಸಿದ ಈರುಳ್ಳಿ ಇರಿಸಿದಲ್ಲೇ ಕೊಳೆತು ಹೋಗುತ್ತಿದೆ. ಹೀಗಾಗಿ ಈರುಳ್ಳಿ ದಾಸ್ತಾನು ಖಾಲಿಯಾಗಿ ದರ ಮತ್ತೆ ಏರಿಕೆಯಾಗಿದೆ.

ಹಳೇ ಈರುಳ್ಳಿ 5 ಸಾವಿರ, ಕರ್ನಾಟಕ ಈರುಳ್ಳಿ 55 ಸಾವಿರ ಹೀಗೆ ಒಟ್ಟು 60 ಸಾವಿರ ಚೀಲಗಳಷ್ಟು ಪೂರೈಕೆಯಾಗುತ್ತದೆ. ಹಳೇ ಈರುಳ್ಳಿ ದಪ್ಪ ಸಗಟು ಕೆಜಿಗೆ 40-50 ಇದ್ದದ್ದು, 65-75 ರೂ. ಗೆ ಏರಿಕೆಯಾಗಿದೆ. ಇನ್ನೂ ಕರ್ನಾಟಕದ ಹೊಸ ಈರುಳ್ಳಿ ದಪ್ಪ 30-40 ರು. ಇದ್ದ ಬೆಲೆ ಈಗ 50-65 ರು. ಆಗಿದೆ. ಗೋಲ್ಟಾ ಗೊಲ್ಟಿ 15-25 ಇದ್ದ ದರ 30-45 ರು.ಗೆ ಜಿಗಿದಿದೆ. ಈ ಹಿನ್ನೆಲೆಯಲ್ಲಿ ಚಿಲ್ಲರೆ ದರ ಏರಿಕೆಯಾಗಿದೆ. ಕೈಗಾಡಿ, ಆಟೋಗಳಲ್ಲಿ ಮತ್ತು ಬೀದಿ ವ್ಯಾಪಾರಿಗಳು ಉತ್ತಮ ದಪ್ಪ ಹೊಸ ಈರುಳ್ಳಿ ಕೆ.ಜಿಗೆ 65-70 ಮಧ್ಯಮ 55-60 ರು. ಸಣ್ಣ 40-45 ರು. ಗೆ ಮಾರಾಟ ಮಾಡುತ್ತಿದ್ದಾರೆ ಮಾಲ್‌ಗಳಲ್ಲಿ ಹಾಗೂ ಆನ್‌ಲೈನಲ್ಲಿ ಗುಣಮಟ್ಟದ ಪ್ರಕಾರ 60-80 ರು. ಇದೆ.

ಕರ್ನಾಟಕದಲ್ಲಿ ಈರುಳ್ಳಿ ಕೊಯ್ಲು ಮುಕ್ತಾಯ ಹಂತಕ್ಕೆ ಬಂದಿದೆ. ಗದಗ, ಬಾಗಲಕೋಟದಿಂದ ಸ್ವಲ್ಪ ಮಟ್ಟಿಗೆ ಬರುತ್ತಿದೆ, ಆದರೆ ಇಲ್ಲಿ ಈರುಳ್ಳಿ ಬೆಲೆ ಮುಗಿಯುತ್ತಿದ್ದಂತೆ ಮಾಹಾರಾಷ್ಟ್ರ ಈರುಳ್ಳಿ ಬೆಲೆ ಮತ್ತಷ್ಟು ಬೇಡಿಕೆ ಹೆಚ್ಚಲಿದೆ, ಹೀಗಾಗಿ ಮುಂದಿನ ದಿನಗಳಲ್ಲಿ ಕೆ.ಜಿ.ಗೆ ರು.100 ರ ಗಡಿದಾಟುವ ಸಾಧ್ಯತೆಗಳಿವೆ ಎನ್ನುತ್ತಾರೆ ಸಗಟು ಈರುಳ್ಳಿ ವ್ಯಾಪಾರಿಗಳು.

> ಸದ್ಯ ಈರುಳ್ಳಿ ಪೂರೈಕೆ ಕಡಿಮೆಯಾಗಿದ್ದರಿಂದ ಬೆಲೆ ಏರಿಕೆಯಾಗಿದೆ. ಡಿಸೆಂಬರ್‌ಗೆ ಮಹಾರಾಷ್ಟ್ರ, ಗುಜರಾತ್‌ನ ಹೊಸ ಈರುಳ್ಳಿ ಪ್ರಾರಂಭವಾಗುತ್ತದೆ ಈ ಹಿನ್ನೆಲೆಯಲ್ಲಿ ಬೆಲೆ ಇಳಿಕೆಯಾಗಲಿದೆ ಎನ್ನುತ್ತಾರೆ ಎಪಿಎಂಸಿ ಸಗಟು ಈರುಳ್ಳಿ ವರ್ತಕರಾದ ರವಿಶಂಕರ.ಬಿ.

> ರಾಜ್ಯದ ಹೊಸ ಈರುಳ್ಳಿಯಾಗಿದ್ದು, ಕೂಡಲೇ ಬಳಸಬೇಕಾಗುತ್ತದೆ ಬಹಳ ದಿನ ಇಟ್ಟರೆ ಕೆಳಭಾಗ ಕೊಳತು ಹೋಗುತ್ತದೆ. ಬೆಲೆಯೇನು ಕಡಿಮೆ ಇಲ್ಲ, ಕೆ.ಜಿ.ಗೆ ರು. 65-75 ಆದರೂ ಖರೀದಿಸಬೇಕಾಗಿದೆ. ಜನಸಾಮಾನ್ಯರು ಇದನ್ನೇ ಉಪಯೋಗ ಮಾಡದೆ ಬೇರೆ ದಾರಿ ಇಲ್ಲ ಎನ್ನುತ್ತಾರೆ ಗ್ರಾಹಕರು.

ಈರುಳ್ಳಿ ಬೆಲೆ ಏರಿಕೆಗೆ ಕಾರಣವೇನು?: ಕಳೆದ ಮೂರು ತಿಂಗಳಿನಿಂದ ಈರುಳ್ಳಿಯ ಬೆಲೆ ಏರಿಕೆಯಾಗುತ್ತಲೇ ಇದೆ. ಮಳೆ ಇಲ್ಲದಿದ್ದರೂ ಬೆಲೆ ರು.70ರ ಗಡಿ ದಾಟಿದೆ. ಕಳೆದ ತಿಂಗಳು ಸುರಿದ ಭಾರಿ ಮಳೆಯ ಪರಿಣಾಮವಾಗಿ ನಿರೀಕ್ಷೆಯಷ್ಟು ಈರುಳ್ಳಿ ಮಾರುಕಟ್ಟೆಗೆ ಬಂದಿಲ್ಲ. ಬಂದಂತಹ ಅಲ್ಪಸ್ವಲ್ಪ ಈರುಳ್ಳಿಯ ಗುಣಮಟ್ಟವೂ ಚೆನ್ನಾಗಿಲ್ಲ, ಹೀಗಾಗಿ ಸದ್ಯ ಈರುಳ್ಳಿಯನ್ನು ಮಹಾರಾಷ್ಟದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ, ಮಹಾರಾಷ್ಟ್ರದಿಂದಲೂ ನಿರೀಕ್ಷಿತ ಪ್ರಮಾಣದಲ್ಲಿ ಈರುಳ್ಳಿ ಪೂರೈಕೆಯಾಗುತ್ತಿಲ್ಲ. ಇದು ಬೆಲೆ ಏರಿಕೆಗೆ ಮುಖ್ಯ ಕಾರಣವಾಗಿದೆ.

ಹೆಚ್ಚಿದ ಈರುಳ್ಳಿ ಬೇಡಿಕೆ: ಒಂದೆಡೆ ಪೂರೈಕೆ ಕಡಿಮೆಯಾಗಿದ್ದರೆ, ಮತ್ತೊಂದೆಡೆ ಬೇಡಿಕೆಯೂ ಗಣನೀಯವಾಗಿ ಹೆಚ್ಚಿದೆ. ಪರಿಣಾಮವಾಗಿ ಬೆಲೆ ಏರಿಕೆಯಾಗುತ್ತಿದೆ. ಈರುಳ್ಳಿಯ ಬೆಲೆ ಮತ್ತಷ್ಟು ದುಬಾರಿಯಾಗುವ ಸಾಧ್ಯತೆ ಇದೆ ಎಂದು ಬೆಂಗಳೂರು ಎ.ಪಿ.ಎಂ.ಸಿ ಈರುಳ್ಳಿ ವ್ಯಾಪಾರಿ ದಾನಣ್ಣ ಬಿರಾದಾರ್ ಹೇಳುತ್ತಾರೆ. ಬೆಂಗಳೂರಿಗೆ ಬೇಕಾಗುವಷ್ಟು ಈರುಳ್ಳಿ ಮಹಾರಾಷ್ಟ್ರದಿಂದ ಪೂರೈಕೆ ಆಗದ ಪರಿಣಾಮ 100 ರು. ಗೆ ಜಿಗಿಯುವ ಸಂಭಾವಿದೆ ಎನ್ನುತ್ತಾರೆ ಬೆಂಗಳೂರು ಎಪಿಎಂಸಿ ಬಿ.ಎಲ್.ಎಸ್ ಈರುಳ್ಳಿ ಮಂಡಿ ವ್ಯಾಪಾರಿ ಎನ್ ಎಸ್ ಮಣಿ.

ಮೊದಲ ಬಾರಿಗೆ ವಲಯವಾರು ಬಜೆಟ್ ಮಂಡನೆಗೆ ಲೆಕ್ಕಾಚಾರ

ಜನಪ್ರತಿನಿಧಿಯಿಲ್ಲದೆ ಬಜೆಟ್ ಮಂಡಿಸಲು ಪಾಲಿಕೆ ಸಿದ್ಧತೆ

ಬೆಂಗಳೂರು: ಸತತ ಐದನೇ ಬಾರಿಗೆ ಬಿಬಿಎಂಪಿಯು ಜನಪ್ರತಿನಿಧಿಗಳಿಲ್ಲದೆ ಬಜೆಟ್ ಮಂಡಿಸಲು ಸಿದ್ಧತೆ ನಡೆಸಿದ್ದು, ಈ ಬಾರಿ ಎಂಟು ವಲಯಗಳಲಿಗೆ ಪ್ರತ್ಯೇಕ ಬಜೆಟ್ ಮಂಡಿಸಲಿದೆ ಎಂದು ನಿರೀಕ್ಷಿಸಲಾಗಿದೆ.



2025-26ನೇ ಸಾಲಿನ ಪಾಲಿಕೆ ಬಜೆಟ್ ಮಂಡನೆಗೆ ಲೆಕ್ಕಾಚಾರ ನಡೆಯುತ್ತಿದ್ದು, ಈ ಬಾರಿ ಹೊಸ ಪ್ರಯೋಗ ನಡೆಸಲು ಪಾಲಿಕೆ ತಯಾರಿ ನಡೆಸಿದೆ. ಎಂಟು ವಲಯಗಳಿಗೆ ವಲಯವಾರು ಬಜೆಟ್ ಮಂಡನೆಗೆ ಹಣಕಾಸು ವಿಭಾಗದಿಂದ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಬ್ರ್ಯಾಂಡ್ ಬೆಂಗಳೂರಿನ ಪರಿಕಲ್ಪನೆಯೂ ಸೇರಿರುವುದರಿಂದ ಬಜೆಟ್ ಗಾತ್ರ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಬಿಬಿಎಂಪಿಯ ಚುನಾವಣೆ ನಡೆದು ಬರೋಬ್ಬರಿ ಐದು ವರ್ಷ ಕಳೆಯುತ್ತಾ ಬಂದಿದ್ದು, ಜನಪ್ರನಿಧಿಗಳಿಲ್ಲದೇ ಸತತ ಐದನೇ ಬಾರಿಗೆ ಬಜೆಟ್ ಮಂಡಿಸುವುದಕ್ಕೆ ಪಾಲಿಕೆ ಸಜ್ಜಾಗಿದೆ. ಇದೇ ಮೊದಲ ಬಾರಿಗೆ ವಲಯವಾರು ಬಜೆಟ್ ಮಂಡಿಸುವುದಕ್ಕೆ ಹಣಕಾಸು ವಿಭಾಗದಿಂದ ಬಿಬಿಎಂಪಿಯ ಆಯುಕ್ತರಿಗೆ ಪ್ರಸ್ತಾವನೆ ಬಂದಿದ್ದು, ಇಷ್ಟು ವರ್ಷ ಇಡೀ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಗಮನ ದಲ್ಲಿಟ್ಟುಕೊಂಡು ಬಜೆಟ್ ಮಂಡಿಸುತ್ತಿದ್ದ ಪಾಲಿಕೆ ಇದೀಗ ಮೊದಲ ಬಾರಿಗೆ ವಲಯವಾರು ಬಜೆಟ್ ಮಂಡನೆಗೆ ಲೆಕ್ಕಾಚಾರ ಹಾಕಿದೆ.

> ಪಾಲಿಕೆ ವ್ಯಾಪ್ತಿಯ ಎಂಟು ವಲಯಗಳಲ್ಲಿ ತಮ್ಮ ವಲಯದ ನಿರ್ವಹಣೆ ಕಾಮಗಾರಿ, ಕಚೇರಿ ವೆಚ್ಚ ಹಾಗೂ ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳ ವರದಿ ಸಿದ್ಧಪಡಿಸಿ ಕೊಡುವಂತೆ ಪಾಲಿಕೆ ಸೂಚಿಸಿದೆ. ಈ ವರದಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಿಗೆ ನೀಡುವಂತೆ ಸೂಚನೆ ನೀಡಲಾಗಿದ್ದು, ಯಾವ ವಲಯಕ್ಕೆ ಎಷ್ಟು ಹಣ ಬೇಕು, ಎಷ್ಟು ಅಭಿವೃದ್ಧಿ ಕೆಲಸವಾಗುತ್ತಿದೆ ಎನ್ನುವ ಕುರಿತು ಪರಿಶೀಲನೆ ನಡೆಸಿ ಬಜೆಟ್ ಮಂಡಿಸಲು ಸಿದ್ಧತೆ ನಡೆಸಲಾಗುತ್ತಿದೆ.
>
> **ತುಷಾರ್ ಗಿರಿನಾಥ್,** ಮುಖ್ಯ ಆಯುಕ್ತ

15 ಸಾವಿರ ಕೋಟಿ ಬಜೆಟ್ ಮಂಡನೆಗೆ ಸಿದ್ಧತೆ

ಬಿಬಿಎಂಪಿ 2025-26ನೇ ಸಾಲಿನ ಬಜೆಟ್ 15,000 ಕೋಟಿ ರು. ತಲುಪುವ ಸಾಧ್ಯತೆಯಿದ್ದು, ಮೊದಲ ಬಾರಿಗೆ ಹಿರಿಯ ಅಧಿಕಾರಿಗಳು ಈ ವಲಯವಾರು ಬಜೆಟ್‌ನ್ನು ಮಂಡಿಸಲು ಚಿಂತನೆ ನಡೆದಿದೆ. ಕಳೆದ ವರ್ಷ 2024-25ನೇ ಸಾಲಿನಲ್ಲಿ 12,369 ಕೋಟಿ ರು. ಬಜೆಟ್‌ನ್ನು ಬಿಬಿಎಂಪಿ ಮಂಡಿಸಿತ್ತು. ಬಜೆಟ್ ಗಾತ್ರ 13,114 ಕೋಟಿ ರು.ಗೆ ಹೆಚ್ಚಿಸಲಾಗಿದ್ದು, ಅನುಮೋದನೆ ನೀಡಿದಾಗ ಹೆಚ್ಚುವರಿ 745 ಕೋಟಿ ರು. ನೀಡಲಾಗುವುದು ಎಂದು ರಾಜ್ಯ ಸರಕಾರ ಭರವಸೆ ನೀಡಿದ್ದು, ಬಜೆಟ್ ಗಾತ್ರವು ಸಾಮಾನ್ಯವಾಗಿ ವರ್ಷದಿಂದ ವರ್ಷಕ್ಕೆ ಶೇ.5ರಿಂದ 8ರವರೆಗೆ ಹೆಚ್ಚಾಗುತ್ತದೆ. ಪಾಲಿಕೆಯು ವಲಯವಾರು ಬಜೆಟ್ ಯೋಜನೆ ರೂಪಿಸಿರುವುದರಿಂದ ಈ ವರ್ಷ ಇದು ಸ್ವಲ್ಪ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಇ-ಖಾತಾ ಸಮಸ್ಯೆ ಸಕಾಲ ವ್ಯಾಪ್ತಿಗೆ ತರಲು ಕಾಸಿಯಾ ಒತ್ತಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹಲವಾರು ಸಮಸ್ಯೆಗಳಿಂದ ಸಂಕಷ್ಟಕ್ಕೀಡಾಗಿದ್ದು ಮುಖ್ಯಮಂತ್ರಿಗಳು ಸಮಸ್ಯೆಗಳ ಬಗ್ಗೆ ಗಮನಹರಿಸಿ ಪರಿಹಾರ ನೀಡಲು ಎಂದು ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಬೇಕು ಎಂದು ಕಾಸಿಯಾ ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ರಾಜ್ಯ ಸರಕಾರ ಆಸ್ತಿ ನೋಂದಣಿಗೆ ಇ-ಖಾತಾ ಕಡ್ಡಾಯಗೊಳಿಸಿದೆ ಹಾಗೂ ಡಿಜಿಟಲ್ ಇಂಟೆಗ್ರೇಶನ್ ಖಾತಾ ನಿಯಮ ಪಾಲನೆಯನ್ನೂ ಕಡ್ಡಾಯಗೊಳಿಸಿದೆ. ಈ ಮೊದಲು ಪಹಣಿ ಹಾಗೂ ಪಂಚಾಯತಿ, ಮುನಿಸಿಪಾಲಿಟಿ, ನಗರ ಪಾಲಿಕೆಯಿಂದ ನೀಡಲಾಗುತ್ತಿದ್ದ ನಮೂನೆ-2 ಹಾಗೂ ಇತರ ಖಾತಾಗಳಿಂದ ನಡೆಯುತ್ತಿದ್ದ ಸ್ಥಿರಾಸ್ತಿ ಖರೀದಿ, ಬ್ಯಾಂಕ್ ಸಾಲ, ಇತ್ಯಾದಿ ವಹಿವಾಟುಗಳು ಈಗ ಇ-ಖಾತಾ ಕಡ್ಡಾಯದಿಂದ ಸ್ಥಗಿತವಾಗಿವೆ ಎಂದರು.

ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಬಿ-ಖಾತಾ, ಮತ್ತು ಕಂದಾಯ ನಿವೇಶನಗಳಿಗೆ ಇ-ಖಾತಾ ಇರುವುದಿಲ್ಲ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶೇ.90ಕ್ಕೂ ಮೀರಿ ಆಸ್ತಿಗಳಿಗೆ ನಿಯಮಗಳನ್ವಯ ಇ-ಖಾತಾ ನೀಡುತ್ತಿಲ್ಲ ಹಾಗೂ ಈಗಿನ ಕಾನೂನಿನ ಅನ್ವಯ ನೀಡಲು ಆಗುವುದಿಲ್ಲ. ಪೂರ್ವಸಿದ್ಧತೆ ಇಲ್ಲದೆ ಅನುಷ್ಠಾನಗೊಳಿಸಿರುವ ಇಂತಹ ನಿಯಮದಿಂದಾಗಿ ರಾಜ್ಯದಲ್ಲಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ತೀವ್ರ ಸಂಕಷ್ಟಕ್ಕೀಡಾಗಿವೆ. ಜನಸಾಮಾನ್ಯರು ಕೂಡ ತೀವ್ರ ಕಷ್ಟಕ್ಕೊಳಗಾಗಿದ್ದಾರೆ. ತಂತ್ರಾಶದಲ್ಲಿನ ದೋಷದಿಂದಾಗಿ ಇ-ಖಾತಾದಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಅನಗತ್ಯ ವಿಳಂಬವಾಗುತ್ತಿದೆ ಎಂದರು.

ದೋಷಪೂರಿತ ತಂತ್ರಾಂಶವನ್ನು ಸರಿಪಡಿಸಲು ಹಾಗೂ ಇ-ಖಾತಾ ತಂತ್ರಾಂಶವನ್ನು ಕಾಲಕಾಲಕ್ಕೆ ಅಪ್ಡೇಟ್ ಮಾಡುವ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ಮತ್ತು ರಾಜ್ಯದ ಬೊಕ್ಕಸಕ್ಕೆ ಗಣನೀಯ ಕೊಡುಗೆ ನೀಡುತ್ತಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಸಮಸ್ಯೆಯನ್ನು ಪರಿಹರಿಸಲು ಇ-ಖಾತಾ ಸಮಸ್ಯೆಯನ್ನು ಸಕಾಲ ಯೋಜನೆಯಡಿ ತರಬೇಕು ಹಾಗೂ ಅಲ್ಲಿಯವರೆಗೆ ನೋಂದಣಿ ಪ್ರಕ್ರಿಯೆಯನ್ನು ನಿರ್ಬಂಧಿಸದೆ ಈ ಹಿಂದೆ ಅನುಸರಿಸುತ್ತಿದ್ದ ಪದ್ಧತಿಯಂತೆ ಲಭ್ಯವಿರುವ ಖಾತಾ ಮತ್ತು ದಾಖಲೆಗಳ ಆಧಾರದ ಮೇಲೆ ನೋಂದಣಿ ಪ್ರಕ್ರಿಯೆಯನ್ನು ನಿರ್ವಹಿಸಬೇಕು ಎಂದೂ ಒತ್ತಾಯಿಸಿದರು.

> ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕಡಿಮೆ ಅನುಸರಣೆಯೊಂದಿಗೆ ಪ್ರತ್ಯೇಕ ಕಾರ್ಮಿಕ ನೀತಿಯನ್ನು ಮತ್ತು ಕನಿಷ್ಠ ವೇತನ ನೀತಿಯನ್ನು ರೂಪಿಸಬೇಕು. ಬ್ಯಾಂಕ್ ಸಾಲಗಳಿಗೆ ಮೇಲಾಧಾರದ ಮೇಲಿನ ಆಸ್ತಿಗಳ ಹೈಪೋಥಿಕೇಶನ್ ಮತ್ತು ಅಡಮಾನಗಳಿಗೆ ಮುದ್ರಾಂಕ ಶುಲ್ಕವನ್ನು ಶೇ.0.5ಕ್ಕೆ ಹೆಚ್ಚಿಸಲಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಂಬಂಧಿಸಿದ ನವೀಕರಣ ಕಾರ್ಯವಿಧಾನವನ್ನು ಒಳಗೊಂಡ ಕಾರ್ಯವಿಧಾನವನ್ನು ಉದ್ಯಮ ಸ್ನೇಹಿಯಾಗಿ ಸರಳೀಕರಣಗೊಳಿಸಬೇಕು.
>
> **-ಎಂ.ಜಿ. ರಾಜಗೋಪಾಲ್,** ಕಾಸಿಯಾ ಅಧ್ಯಕ್ಷ

ಕಾಸಿಯಾ ಉಪಾಧ್ಯಕ್ಷ ಬಿ. ಆರ್. ಗಣೇಶ್ ರಾವ್, ಗೌರವ ಪ್ರಧಾನ ಕಾರ್ಯದರ್ಶಿ ಎನ್. ಸುರೇಶ್ ಸಾಗರ್, ಜಂಟಿ ಕಾರ್ಯದರ್ಶಿ ಜೆ.ಎಸ್.ಬಾಬು ಮತ್ತು ಖಜಾಂಚಿ ಎಚ್. ಮಂಜುನಾಥ್ ಇದ್ದರು.

ಜಲಮಂಡಳಿಯಿಂದ ಕಾವೇರಿ ನೀರು ಸಂಪರ್ಕ ಅಭಿಯಾನ

ಬೆಂಗಳೂರು: ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಸಂಪರ್ಕಕ್ಕೆ ಮಧ್ಯವರ್ತಿಗಳ ಹಸ್ತಕ್ಷೇಪವನ್ನು ತಡೆಗಟ್ಟಿ, ವ್ಯವಸ್ಥೆ ಸರಳೀಕರಣಗೊಳಿಸಿ ಜನರ ಮನೆ ಬಾಗಿಲಿಗೆ ತೆರಳಿ ಕಾವೇರಿ ಕುಡಿಯುವ ನೀರಿನ ಸಂಪರ್ಕ ನೀಡುವಂತೆ ಡಿಸಿಎಂ ಡಿಕೆ ಶಿವಕುಮಾರ್ ನಿರ್ದೇಶನ ನೀಡಿದ ಹಿನ್ನೆಲೆ ಕಾವೇರಿ ನೀರು ಸಂಪರ್ಕ ಅಭಿಯಾನವನ್ನು ಜಲಮಂಡಳಿ ಪ್ರಾರಂಭಿಸಲಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಬಿಎಂಪಿಯ 110 ಹಳ್ಳಿಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವ ಯೋಜನೆಯಾದ ಕಾವೇರಿ 5 ಹಂತವನ್ನು ಅ.16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಲೋಕಾರ್ಪಣೆಗೊಳಿಸಿದ್ದರು. ಈ ಯೋಜನೆಯ ಅನುಷ್ಠಾನದಿಂದ ನಗರಕ್ಕೆ 775 ಎಂ.ಎಲ್.ಡಿಯಷ್ಟು ಹೆಚ್ಚುವರಿ ನೀರು ಲಭ್ಯವಾಗುತ್ತಿದೆ. ಕಾವೇರಿ ಕುಡಿಯುವ ನೀರಿನ ಹೊಸ ಸಂಪರ್ಕಗಳನ್ನು ಪಡೆಯಲು ಈಗಾಗಲೇ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಆದರೆ ಕೆಲವು ಕಡೆಗಳಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪದ ಬಗ್ಗೆ ದೂರುಗಳು ಕೇಳಿಬಂದಿವೆ. ಅಲ್ಲದೇ, ಆನ್‌ಲೈನ್ ಅರ್ಜಿ ಸಲ್ಲಿಕೆಯ ಬಗ್ಗೆ ಹಲವು ಗೊಂದಲಗಳ ಬಗ್ಗೆ ಗ್ರಾಹಕರು ಗಮನ ಸೆಳೆದಿದ್ದರು.

> ನಿಮ್ಮ ವ್ಯಾಪ್ತಿಯಲ್ಲಿ ನಡೆಯಲಿರುವ ಸಂಪರ್ಕ ಅಭಿಯಾನದಲ್ಲಿ ಪಾಲ್ಗೊಳ್ಳುವ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಯಾವುದೇ ಮಧ್ಯವರ್ತಿಗಳ ಸಹಾಯವಿಲ್ಲದೆ ಜನರು ಸಂಪರ್ಕ ಪಡೆದುಕೊಳ್ಳಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು ಹಾಗೂ ಸಂಪರ್ಕ ಅಭಿಯಾನಗಳಲ್ಲಿ ಆಫ್‌ಲೈನ್ ಮೂಲಕವೂ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
>
> **-ಡಾ.ವಿ.ರಾಮ್ ಪ್ರಸಾತ್ ಮನೋಹರ್,** ಜಲಮಂಡಳಿ ಅಧ್ಯಕ್ಷ

ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿ ಹೊಸದಾಗಿ ಕುಡಿಯುವ ನೀರಿನ ಸಂಪರ್ಕ ಪಡೆಯುವ ವ್ಯವಸ್ಥೆಯನ್ನು ಸರಳೀಕರಣಗೊಳಿಸಿ, ಮಧ್ಯವರ್ತಿಗಳ ಹಸ್ತಕ್ಷೇಪವನ್ನು ತಪ್ಪಿಸುವ ನಿಟ್ಟಿನಲ್ಲಿ ಜನರ ಮನೆ ಬಾಗಿಲಿಗೆ ತೆರಳಿ ಕಾವೇರಿ ಕುಡಿಯುವ ನೀರಿನ ಸಂಪರ್ಕ ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನಿರ್ದೇಶನ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಮಂತ್ರಾಲಯ ರಾಘವೇಂದ್ರ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಬುಧವಾರ ಶ್ರೀಸುಜಯೀಂದ್ರ ಆರೋಗ್ಯಶಾಲೆಯಲ್ಲಿ ಮಂತ್ರಾಲಯದ ಸುತ್ತಮುತ್ತಲಿನ ಗ್ರಾಮಸ್ಥರು ಮತ್ತು ನಿವಾಸಿಗಳಿಗೆ ಅನುಕೂಲವಾಗುವಂತೆ ಉಚಿತ ನೇತ್ರ ಶಿಬಿರವನ್ನು ನಡೆಸಲಾಯಿತು.

ಪಾರ್ಕ್‌ಗಳಲ್ಲಿ ಸಾಕು ನಾಯಿ ತಂದು ಗಲೀಜು ಮಾಡುವ ಮಾಲೀಕರಿಗೆ ದಂಡ

ಬೆಂಗಳೂರು: ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಉದ್ಯಾನವನಗಳ ಸ್ವಚ್ಛತೆ ಕಾಯ್ದುಕೊಳ್ಳುವ ಕುರಿತಂತೆ ಹಲವು ಮಾರ್ಗಸೂಚಿ ರಚಿಸಿರುವ ಹೈಕೋರ್ಟ್, ಉದ್ಯಾನವನಗಳಲ್ಲಿ ನಾಯಿಗಳ ಮಲ ವಿಸರ್ಜನೆಗೆ ಕಾರಣವಾಗುವವರಿಗೆ ಹೆಚ್ಚಿನ ದಂಡ ವಿಧಿಸುವಂತೆ ಸೂಚನೆ ನೀಡಿದೆ.

ನಗರದ ಉದ್ಯಾನವನಗಳಲ್ಲಿ ಸಾಕುನಾಯಿಗಳಿಂದ ಆಗುತ್ತಿರುವ ಮಲ ವಿಸರ್ಜನೆಗೆ ಕಡಿವಾಣ ಹಾಕುವಂತೆ ಸರ್ಕಾರಕ್ಕೆ ಸೂಚನೆ ನೀಡಬೇಕೆಂದು ಕೋರಿ ಮೆಸರ್ಸ್ ಕಂಪ್ಯಾಷನ್ ಅನ್ಲಿಮಿಟೆಡ್ ಪ್ಲಸ್ ಆ್ಯಕ್ಷನ್ (ಕೂಪ) ಎಂಬ ಸರಕಾರೇತರ ಸಂಸ್ಥೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ ಅವರ ವಿಭಾಗೀಯ ಪೀಠ, ಹಲವು ಮಾರ್ಗಸೂಚಿ ರಚಿಸಿ, ಅರ್ಜಿ ಇತ್ಯರ್ಥಪಡಿಸಿದೆ.

ವಿಚಾರಣೆ ಸಂದರ್ಭದಲ್ಲಿ ಅರ್ಜಿ ಹಿಂಪಡೆಯುವುದಾಗಿ ಅರ್ಜಿದಾರರು ತಿಳಿಸಿದ್ದಾರೆ. ಆದರೆ, ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಉತ್ತೇಜನ ನೀಡುವ ಸಂದರ್ಭದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡಬಾರದು ಎಂದಿರುವ ನ್ಯಾಯಪೀಠ, ವೈಯಕ್ತಿಕ ಹಿತಾಸಕ್ತಿ ಒಳಗೊಳ್ಳುವಿಕೆಯು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪುರಸ್ಕರಿಸಲು ನಿರಾಕರಿಸಲು ಕಾರಣವಾಗಿರುತ್ತದೆ. ಆದರೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಅರ್ಜಿದಾರರು ಹಿಂಪಡೆಯಲು ಮುಂದಾದರೂ, ಅಂತಹ ಅರ್ಜಿ ಇತ್ಯರ್ಥಪಡಿಸುವ ಸಂದರ್ಭದಲ್ಲಿ ಅರ್ಜಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಪರಿಗಣಿಸಬೇಕಾಗುತ್ತದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ನ್ಯಾಯಾಲಯದ ಗಮನಕ್ಕೆ ಬಂದ ಬಳಿಕ ಅದು ನ್ಯಾಯಾಲಯದ ವ್ಯಾಪ್ತಿ ಸೇರಿದ್ದಾಗಿದ್ದು, ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕಾಗುತ್ತದೆ. ಅರ್ಜಿದಾರರು ಹಿಂಪಡೆಯಲು ಮುಂದಾದ ಸಂದರ್ಭದಲ್ಲಿ ಅದರ ಸಾಧಕ-ಬಾಧಕ ಪರಿಶೀಲಿಸದೆ ಅರ್ಜಿ ಹಿಂಪಡೆಯಲು ಸುಲಭವಾಗಿ ಅವಕಾಶ ನೀಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಪೀಠವು ತನ್ನ ಆದೇಶದಲ್ಲಿ ತಿಳಿಸಿದೆ.

ಹೈಕೋರ್ಟ್ ಮಾರ್ಗಸೂಚಿಗಳು

- ಸ್ವಚ್ಛತೆ ಕಾಯ್ದುಕೊಳ್ಳುವುದು ಸೇರಿದಂತೆ ಇತರೆ ನಿಯಮಗಳ ಉಲ್ಲಂಘನೆ ಮಾಡುವವರಿಗಿಂತಲೂ ವಿಧಿಸುವ ದಂಡಕ್ಕಿಂತಲೂ, ನಾಯಿಯ ಮಲ ವಿಸರ್ಜನೆ ಕಾರಣವಾಗುವ ಅವುಗಳ ಮಾಲೀಕರಿಗೆ ವಿಧಿಸುವ ದಂಡ ಹೆಚ್ಚಿನ ಪ್ರಮಾಣದ್ದಾಗಿರಬೇಕು.
- ಬಿಬಿಎಂಪಿ ಅಧಿಕಾರಿಗಳು ಕರ್ನಾಟಕ ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಮುಕ್ತ ಸ್ಥಳಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಕಾಯಿದೆ 1985 ಅನ್ನು ಅಕ್ಷರಶಃ ಜಾರಿ ಮಾಡಬೇಕು.
- ಉದ್ಯಾನವನಗಳು ಸೇರಿದಂತೆ ಬಿಬಿಎಂಪಿ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016ರನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಈ ನಿಯಮಗಳ ತಿದ್ದುಪಡಿಗೆ ಪಾಲಿಕೆ ಕ್ರಮ ವಹಿಸಬೇಕು.
- ಉದ್ಯಾನವನಗಳಲ್ಲಿ ಸ್ವಚ್ಛತೆ ಕಾಪಾಡುವುದು ಮತ್ತು ನಿರ್ವಹಣೆಗಾಗಿ ಸರ್ಕಾರ ಸೇರಿದಂತೆ ಸಂಬಂಧಪಟ್ಟ ಪ್ರಾಧಿಕಾರಗಳು ಅಗತ್ಯ ಬಜೆಟ್ ಮೀಸಲಿಡಬೇಕು.
- ಉದ್ಯಾನವನಗಳ ಕುರಿತ ಜಾಗರೂಕತೆ ಕಾಯ್ದುಕೊಳ್ಳುವುದಕ್ಕಾಗಿ ರಾಜ್ಯ ಸರಕಾರ, ತೋಟಗಾರಿಕೆ ಇಲಾಖೆ ಮತ್ತು ಬಿಬಿಎಂಪಿ ಶಾಶ್ವತವಾದ ಕಾರ್ಯವಿಧಾನ ರೂಪಿಸಿ ಅಭಿವೃದ್ಧಿ ಪಡಿಸಬೇಕು.
- ಉದ್ಯಾನವನ ಪ್ರದೇಶ ಮತ್ತು ಅದರ ಆವರಣದಲ್ಲಿ ಉಗುಳುವುದು, ಕಸ ಎಸೆಯುವುದು, ಸಾಕುಪ್ರಾಣಿಗಳ ಮಲ ವಿಸರ್ಜನೆಗೆ ಅವಕಾಶ ಮಾಡುವವರನ್ನು ನಿಯಂತ್ರಿಸಿ ಸ್ವಚ್ಛತೆ ಕಾಯ್ದುಕೊಳ್ಳುವುದು ಮತ್ತು ಅದನ್ನು ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವ ಕಾರ್ಯ ತೋಟಗಾರಿಕೆ ಇಲಾಖೆ ಮತ್ತು ಬಿಬಿಎಂಪಿ ಅಧಿಕಾರಿಗಳ ಜವಾಬ್ದಾರಿಯಾಗಿದೆ.
- ಉದ್ಯಾನವನಗಳ ಸಂರಕ್ಷಣೆಗಾಗಿ ಮೇಲ್ವಿಚಾರಣೆ ಮಾಡವುದಕ್ಕಾಗಿ ತಂಡಗಳನ್ನು ನಿಯೋಜಿಸುವ ಸಂಬಂಧ ಸೂಕ್ತ ನಿಯಮ ಅಳವಡಿಸುವುದು ಮತ್ತು ತಪ್ಪಿತಸ್ಥರಿಗೆ ದಂಡ ವಿಧಿಸುವ ಸಲುವಾಗಿ ಬಿಬಿಎಂಪಿ ನಿಯಮಗಳಿಗೆ ಅಗತ್ಯ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ.

ಅರ್ಜಿದಾರರು, ಸರಕಾರೇತರ ಸಂಸ್ಥೆಯಾಗಿದ್ದು ಸಾರ್ವಜನಿಕ ಉದ್ಯಾನವನಗಳಲ್ಲಿ ಬೇಜವಾಬ್ದಾರಿಯುತವಾಗಿ ಸಾಕುಪ್ರಾಣಿಗಳ ಪ್ರವೇಶಕ್ಕೆ ಅವಕಾಶ ನೀಡಿರುವುದರಿಂದ ಸ್ವಚ್ಛತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನಗರದ ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ತೋಟಗಾರಿಕೆ ಇಲಾಖೆ ಮತ್ತು ಬಿಬಿಎಂಪಿ ಅಧಿಕಾರಿಗಳು ಉದ್ಯಾನಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ವಿಫಲರಾಗಿದ್ದಾರೆ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ. ಅಲ್ಲದೆ, ಬಿಬಿಎಂಪಿ ವ್ಯಾಪ್ತಿಯಲ್ಲಿನ ಉದ್ಯಾನವನಗಳಲ್ಲಿ ಸಾಕಪ್ರಾಣಿಗಳ ವಿಸರ್ಜನೆ ಮಾಡುವ, ಸ್ವಚ್ಛಗೊಳಿಸುವ ಪ್ರಕ್ರಿಯೆಯಲ್ಲಿ ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ, ಈ ಸಂಬಂಧ ಸಾರ್ವಜನಿಕರಿಂದ 1,288 ದೂರುಗಳು ದಾಖಲಾಗಿವೆ ಎಂಬುದಾಗಿಯೂ ಅರ್ಜಿಯಲ್ಲಿ ವಿವರಿಸಲಾಗಿದೆ.

ಸಾರ್ವಜನಿಕ ಉದ್ಯಾನವನಗಳಿಗೆ ಸಾಕುನಾಯಿಗಳನ್ನು ಕರೆತರುವ ಪೋಷಕರು ಅದು ವಿಸರ್ಜನೆ ಮಾಡುವ ತ್ಯಾಜ್ಯದ ವಿಲೇವಾರಿಗೆ ಕೈ ಚೀಲಗಳನ್ನು ತೆಗೆದುಕೊಂಡು ಬರಬೇಕು ಎಂದು ಜಾಗೃತಿ ಮೂಡಿಸಬೇಕಾದ ಅಗತ್ಯವಿದ್ದು, ನಾಯಿಗಳ ವಿಕೃತ ನಡೆಯಿಂದ ಉದ್ಯಾನಕ್ಕೆ ಭೇಟಿ ನೀಡುವವರಿಗೆ ರಕ್ಷಣೆ ನೀಡಬೇಕಾಗಿದೆಯಲ್ಲದೆ, ಸಾರ್ವಜನಿಕ ಉದ್ಯಾನವನಗಳಲ್ಲಿ ಎಲ್ಲ ರೀತಿಯ ಸ್ವಚ್ಛತೆ ಕಾಯ್ದುಕೊಳ್ಳುವುದು ಕಡ್ಡಾಯವಾಗಿರಬೇಕಿದೆ ಎಂದು ಪೀಠವು ತನ್ನ ಆದೇಶದಲ್ಲಿ ತಿಳಿಸಿದೆ.

ವಿಷಾದ ವ್ಯಕ್ತಪಡಿಸಿದ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಸ್ವಾಮೀಜಿ

ಬೆಂಗಳೂರು: ಮುಸ್ಲಿಮರು ಈ ದೇಶದ ಪ್ರಜೆಗಳಾಗಿದ್ದು, ಮತದಾನದ ಹಕ್ಕಿದೆ. ಬಾಯಿ ತಪ್ಪಿದ ನನ್ನ ಹೇಳಿಕೆಯಿಂದ ನೋವಾಗಿದ್ದರೆ ವಿಷಾದಿಸುತ್ತೇನೆ ಎಂದಿರುವ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರ ಸ್ವಾಮೀಜಿ, ಈ ಪ್ರಕರಣವನ್ನು ಬೆಳೆಸದೆ ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ಮನವಿ ಮಾಡಿದ್ದಾರೆ.

ಹಿಂದಿನ ಆಡಳಿತಾತಾರೂಢ ಪಕ್ಷಗಳು ವಕ್ ಮಂಡಳಿಗೆ ವಿಶೇಷ ಸವಲತ್ತು ಹಾಗೂ ವಿಶೇಷ ಕಾನೂನಿನಡಿ ವ್ಯವಸ್ಥೆ ಮಾಡಿಕೊಟ್ಟಿರುವ ಬಗ್ಗೆ ಸಂಸತ್ತಿನಲ್ಲಿಯೂ ಚರ್ಚೆ ನಡೆಯುತ್ತಿದೆ. ಈ ವಿಚಾರಕ್ಕೆ ಸಂಬಂದಿಸಿದಂತೆ ಸಮಿತಿ ಕೂಡ ರಚನೆಯಾಗಿದೆ. ಅದರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಒಕ್ಕಲಿಗರು ಧರ್ಮ ಸಹಿಷ್ಣುಗಳು, ಎಲ್ಲ ಧರ್ಮದವರನ್ನು ಇಲ್ಲಿಯವರೆಗೆ ಸಮಾನವಾಗಿ ಕಂಡಿದ್ದೇವೆ. ಮಠವು ಮುಸ್ಲಿಂ ಜನಾಂಗದವರೊಂದಿಗೆ ಸಂಪರ್ಕವಿಟ್ಟುಕೊಂಡಿದೆ. ಹಾಗಾಗಿ ಅವರ ಬಗ್ಗೆ ಯಾವುದೇ ಅಸಹಿಷ್ಣುತೆ ಇರುವುದಿಲ್ಲ ಎಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನೂರಾರು ವರ್ಷದಿಂದ ಉಳುಮೆ ಮಾಡಿಕೊಂಡು ಜೀವನ ನಡೆಸುತ್ತಿದ್ದ ರೈತಾಪಿ ವರ್ಗದವರನ್ನು ಒಕ್ಕಲೆಬ್ಬಿಸುವ ಯಾವುದೇ ಸಂಸ್ಥೆಯ ನಡೆಯನ್ನೂ ಒಪ್ಪಲಾಗದು. ವಕ್ ಮಂಡಳಿ ಅವರು ಹೊಂದಿರುವ ಜಮೀನುಗಳಿಗೆ ಯಾವ ರೀತಿ ಅವರಿಗೆ ಬಂದಿವೆ ಎಂಬುದರ ನಿಖರವಾದ ಮಾಹಿತಿ ಸರಕಾರಕ್ಕೆ ನೀಡಿ ಆ ಜಮೀನು ಉಳಿಸಿಕೊಳ್ಳಲು ನಮ್ಮ ಅಭ್ಯಂತವಿಲ್ಲ. ಆದರೆ ತಲೆತಲಾಂತರದಿಂದ ಕೃಷಿ ಮಾಡುತ್ತಿರುವ ರೈತರನ್ನು ಮಂಡಳಿಯ ಹೆಸರನ್ನು ಹೇಳಿ ಜಾಗ ಖಾಲಿ ಮಾಡಿಸುವಂತಿಲ್ಲ ಎಂದಿದ್ದಾರೆ.

> ಎಲ್ಲಾ ಸ್ವಾಮೀಜಿಗಳು ರಾಜಕಾರಣದಿಂದ ದೂರ ಇರಬೇಕು. ವಿವಾದಾತ್ಮಕ ಹೇಳಿಕೆ ಕೊಟ್ಟು ದೇಶದಲ್ಲಿ ಅಶಾಂತಿ ಮೂಡಿಸುವ ಪ್ರಯತ್ನ ಮಾಡಬಾರದು. ಮತದಾನ ಎಂಬುದು ಸಂವಿಧಾನದ ಮೂಲಕ ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಬಂದಿರುವ ಹಕ್ಕು.
>
> **ಡಿ.ಕೆ.ಶಿವಕುಮಾರ್,** ಡಿಸಿಎಂ

> ಸಂವಿಧಾನದ ಆಶಯಗಳು, ಸಂವಿಧಾನದಲ್ಲಿ ಪ್ರತಿಯೊಂದು ಸಮುದಾಯಗಳಿಗೆ, ಧರ್ಮಗಳಿಗೆ ಕೊಟ್ಟಿರುವ ಹಕ್ಕು ಮತ್ತು ಅವಕಾಶ ಅವರು ಸರಿಯಾಗಿ ನೋಡಿಕೊಂಡಿಲ್ಲ. ಅವುಗಳ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದಕ್ಕೆ ವ್ಯತಿರಿಕ್ತವಾಗಿ ನಾವು ಮಾತನಾಡುವುದು ಸರಿಯಲ್ಲ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಯಾರೂ ಮಾತನಾಡಬಾರದು
>
> **ಡಾ.ಜಿ.ಪರಮೇಶ್ವರ್,** ಗೃಹ ಸಚಿವ

ಭಾರತೀಯ ಕಿಸಾನ್ ಸಂಘ ಫ್ರೀಡಂಪಾರ್ಕ್‌ನಲ್ಲಿ ನಡೆಸಿದ್ದ ಸಮಾವೇಶದಲ್ಲಿ ಮುಸಲ್ಮಾನರಿಗೆ ಮತದಾನದ ಹಕ್ಕು ರದ್ದು ಮಾಡಬೇಕೆಂಬ ಹೇಳಿಕೆ ನೀಡಿರುವುದು ವಿವಾದಕ್ಕೆ ಕಾರಣವಾದ ಬೆನ್ನಲ್ಲೆ ಆಕ್ಷೇಪವೆತ್ತಿದ್ದಕ್ಕೆ ಸ್ವಾಮೀಜಿ ಈ ಸ್ಪಷ್ಟನೆ ನೀಡಿದಾರೆ.

ಜಪಾನಿನ ಸಾಂಸ್ಕೃತಿಕ ತಾಣಗಳಿಗೆ ವಿಶ್ವವಾಣಿ ನಿಯೋಗ ಭೇಟಿ

ಬುಲೆಟ್ ಟ್ರೈನ್ ಫ್ಲಾಟ್‌ಫಾಮ್‌ನಲ್ಲಿ ವಿಶ್ವೇಶ್ವರ ಭಟ್ಟರು

ಜಪಾನಿನ ಟೋಕಿಯೋದ ಪ್ರಿನ್ಸ್ ಹೋಟೆಲ್ ಮುಂಭಾಗದಲ್ಲಿ ವಿಶ್ವವಾಣಿ ನಿಯೋಗ.

ಟೋಕಿಯೋದ ಅತಿ ಎತ್ತರದ ಕಟ್ಟಡ ಸ್ಕೈ ಟವರ್

ವಿಶ್ವವಾಣಿ ನಿಯೋಗಕ್ಕೆ ಜಪಾನಿನ ಸ್ಥಳೀಯ ಮಾರ್ಗದರ್ಶಿಯಾಗಿದ್ದ ನಾಯು ಮತ್ತು ಮೀನಲ್

ಬುಲೆಟ್ ಟ್ರೈನ್ ಫ್ಲಾಟ್‌ಫಾಮ್‌ನಲ್ಲಿ ಆರಗ ಜ್ಞಾನೇಂದ್ರ

ಟೋಕಿಯೋದ ಮೌಂಟ್ ಫುಜಿಯಲ್ಲಿ ವಿಶ್ವವಾಣಿ ನಿಯೋಗ

ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ ಹಾಗೂ ಶ್ರೀ ಶಾಂತವೀರ ಮಹಾ ಸ್ವಾಮೀಜಿಗಳೊಂದಿಗೆ ವಿಶ್ವವಾಣಿ ತಂಡ.

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ವಿಶ್ವವಾಣಿಯ ನಿಯೋಗವು ಒಂದು ವಾರದ ಅವಧಿಯಲ್ಲಿ ಜಪಾನಿನ ಐತಿಹಾಸಿಕ ಸಾಂಸ್ಕೃತಿಕ ಧಾರ್ಮಿಕ ಮತ್ತು ನಿಸರ್ಗ ಸೌಂದರ್ಯದ ಪ್ರವಾಸಿ ತಾಣಗಳಿಗೆ ಪ್ರತ್ಯಕ್ಷ ಭೇಟಿ ನೀಡಿ , ಜಪಾನಿನ ಅಂತರಂಗವನ್ನು ಅರಿತುಕೊಳ್ಳುವ ಪ್ರಯತ್ನ ನಡೆಸಿತು. ಇದರ ಚಿತ್ರ ಮಾಹಿತಿಯ ವಿಶೇಷ ಸಂಚಿಕೆ ಇಲ್ಲಿದೆ.

ಆಕ್ಟೀವ್ ವಾಲ್ಕೆನೋ (ಸಕ್ರಿಯ ಜ್ವಾಲಾಮುಖಿ) ವೀಕ್ಷಿಸಲು ಕೇಬಲ್ ಕಾರಿನಲ್ಲಿ ಪ್ರಯಾಣಿಸಿದ ನಿಯೋಗ

ಜ್ವಾಲಾಮುಖಿಯನ್ನು ನಿಬ್ಬೆರಗಾಗಿ ನೋಡುತ್ತಿರುವ ಪ್ರವಾಸಿಗರು

ಭಾರತಕ್ಕೆ ಮರಳುವ ಮೊದಲು ಟೋಕಿಯೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮುಂಭಾಗ ಕನ್ನಡ ಬಾವುಟ ಹಾರಿಸಿದ ವಿಶ್ವವಾಣಿ ನಿಯೋಗ.

ಕಿರಣ್ ಅವರೊಂದಿಗೆ ವಿಶ್ವೇಶ್ವರ ಭಟ್ಟರು

ಜೀವಂತ ಜ್ವಾಲಾಮುಖಿ

ಹಿರಿಯ ನ್ಯಾಯವಾದಿ ಚಂದ್ರಮೌಳಿ ಜತೆ ವಿಶ್ವೇಶ್ವರ ಭಟ್ಟರು

ಟೋಕಿಯೊದಲ್ಲಿನ ಇಂಪೀರಿಯಲ್ ಅರಮನೆಯ ಹೊರಗೆ ಕುಸುನೋಕಿ ಮಸಾಶಿಗೆಯ ಪ್ರತಿಮೆ ಮುಂದೆ ವಿಶ್ವವಾಣಿ ತಂಡ

ಫೋಟೋ ಕ್ಲಿಕ್ಕಿಸುತ್ತಿರುವ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರು

ವಿಶ್ವವಾಣಿ ಆರಾಮ

@vishwavaninews

ಬೆಂಗಳೂರು
ಗುರುವಾರ
28 | 11 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ವರ್ತಮಾನದ ಅರಿವಿರಲಿ

ಬಹುತೇಕ ಸಂದರ್ಭಗಳಲ್ಲಿ ಪ್ರಸಕ್ತ ಗಳಿಗೆಯ ಅರಿವನ್ನು ಕಳೆದುಕೊಂಡು ಬಿಡುತ್ತೇವೆ. ಮನಸ್ಸಿನ ಏಕಾಗ್ರತೆಯನ್ನು ಚಂಚಲಗೊಳಿಸಿಕೊಳ್ಳುತ್ತೇವೆ. ಭ್ರಮೆಯಲ್ಲಿ ತೇಲುತ್ತೇವೆ. ನಮ್ಮದೇ ಕೆಲವು ದೌರ್ಬಲತೆಗಳಿಂದ ಹೊರಬರಲಾಗದೇ ವರ್ತಮಾನ ಜೊತೆಗಿನ ಸಂಪರ್ಕವನ್ನು ಕಳೆದುಕೊಂಡು ಬಿಡುತ್ತವೆ. ನಮ್ಮ ಅವಿವೇಕದ ನಡೆಯಿಂದಾಗಿ, ನಮ್ಮದೇ ದೌರ್ಬಲ್ಯತೆಯಿಂದಾಗಿ ದುಃಖವನ್ನು, ಸಂಕಟ ಆಪತ್ತುಗಳನ್ನು ಬರಮಾಡಿಕೊಳ್ಳುತ್ತೇವೆ. ಬದುಕಿನಲ್ಲಿ ಅತ್ಯುತ್ತಮವಾದನ್ನು ಪಡೆಯಬೇಕೆಂದರೆ ನಾವು ಪ್ರತಿ ಕ್ಷಣ, ಪ್ರತಿ ಘಂಟೆಯೂ ತುಂಬ ಎಚ್ಚರದಿಂದ ಇರಬೇಕು. ಕ್ಷಣಕಾಲದ ನಮ್ಮ ಮೈಮರೆಯುವಿಕೆ, ವರ್ತಮಾನದಲ್ಲಿ ಎಲ್ಲವನ್ನೂ ನೀಡದೇ ಹೋದರೆ ನಮ್ಮ ಬದುಕನ್ನು ಸಂಪೂರ್ಣ ಸರ್ವನಾಶ ಮಾಡಿಬಿಡಬಲ್ಲದು.

ಕೊಳದಲ್ಲಿ ವಾಸಿಸುತ್ತಿದ್ದ ಆಮೆಯ ಜೊತೆ ಆಗಾಗ ಕೊಳಕ್ಕೆ ಭೇಟಿ ನೀಡುತ್ತಿದ್ದ ಹೆಬ್ಬಾತುಗಳು ಸ್ನೇಹಿತರಾಗಿದ್ದವು. ಬರಗಾಲದಿಂದ ಕೊಳವು ಬತ್ತಿ ಹೋದಾಗ ನೀರಿರುವ ದೂರದ ಕೆರೆಗೆ ಹೋಗಲು ನಿರ್ಧರಿಸಿದವು. ಒಂದು ಕೋಲಿನ ಎರಡು ಬದಿಗಳನ್ನು ಹೆಬ್ಬಾತು ಹಿಡಿದುಕೊಂಡು ಹಾರುವುದು; ಮಧ್ಯೆ, ಆಮೆ ಕೋಲನ್ನು ಬಾಯಿಂದ ಕಚ್ಚಿ ಹಿಡಿಯವುದು ಸೂಕ್ತ ಎಂಬ ತೀರ್ಮಾನ ಕೈಗೊಂಡು ಅದರಂತೆ ಪ್ರಯಾಣ ಬೆಳಸಿದವು. ಹೆಬ್ಬಾತುಗಳು ಯಾವುದೇ ಕಾರಣಕ್ಕೆ ಆಮೆಗೆ 'ನೀನು ಮಾತನಾಡಕೂಡದು' ಎಂದು ಎಚ್ಚರಿಸಿದ್ದರೂ, ಬಹು ದೂರದ ಪಯಣದ ಸಮಯದಲ್ಲಿ ಆಮೆ ತನ್ನ ಇರುವಿಕೆಯ ಸ್ಥಿತಿಯನ್ನು ಮರೆತು ಮಾತನಾಡಲು ಮುಂದಾಯಿತು. ನಿಯಂತ್ರಣ ತಪ್ಪಿ ಭೂಮಿಗೆ ಅಪ್ಪಳಿಸಿತ್ತು. ಕ್ಷಣಕಾಲದ ತನ್ನ ಮೈ ಮರೆಯುವಿಕೆಯಿಂದ ತನ್ನ ಪ್ರಾಣಕ್ಕೆ ಸಂಚಕಾರವನ್ನು ತಾನೆ ತಂದುಕೊಂಡಿತ್ತು.

ಪ್ರತಿ ಕ್ಷಣವೂ ನಾವು ಸಾಧ್ಯವಾದಷ್ಟು ವರ್ತಮಾನದಲ್ಲಿ ಬದುಕುವುದನ್ನು ರೂಢಿಸಿಕೊಳ್ಳಬೇಕು. ಮೈಮರೆವಿನಿಂದಾಗಿ ದಿನನಿತ್ಯವೂ ನೂರೆಂಟು ಅವಘಡಗಳು, ಅಪಘಾತಗಳು, ಸಂಭವಿಸುತ್ತಲೇ ಇರುವುದು ನಮ್ಮೆಲ್ಲರ ಅನುಭವವಾಗಿದೆ. ಮನಸ್ಸಿನ ಚಂಚಲತೆಯನ್ನು ನಿಯಂತ್ರಿಸುವುದು ನಮ್ಮ ಆದ್ಯತೆಯಾಗಬೇಕು. ಮನಸ್ಸನ್ನು ಸಾಧ್ಯವಾದಷ್ಟು ಚಿಂತೆ, ಅನಗತ್ಯ ಭಯ, ತವಕ, ತಲ್ಲಣಗಳಿಂದ ಮುಕ್ತವಾಗಿಸಿಕೊಳ್ಳುವುದರಿಂದ, ಭಾವನೆ ಮತ್ತು ಆಲೋಚನೆಗಳನ್ನು ಪರಿಶುದ್ಧಗೊಳಿಸಿಕೊಳ್ಳುವುದರಿಂದ ವರ್ತಮಾನದ ಜೊತೆಗೆ ನಮ್ಮ ಮನಸ್ಸನ್ನು ಸಮೀಕರಿಸಿಕೊಳ್ಳಲು ಸಾಧ್ಯವಾಗುತ್ತದೆ. ಸದಾ ಜಾಗ್ರತವಾದ ಮನಸ್ಥಿತಿಯಿಂದ ಬದುಕನ್ನು ಹಲವು ಸಂಕಟಗಳಿಂದ ಸುಲಭವಾಗಿ ಪಾರುಮಾಡಬಹುದಾಗಿದೆ.

• ಮಹಾದೇವ ಬಸರಕೋಡ

ಕಾಲ ಬದಲಾಗಿದೆಯೇ?

ಇಂದಿನ ತಲೆಮಾರಿನ ಮಕ್ಕಳು ತುಂಬಾ ಚುರುಕಾಗಿದ್ದು, ಎಲ್ಲವನ್ನೂ ಕ್ಷಣಾರ್ಧದಲ್ಲಿ ಕಲಿತು, ತಮ್ಮ ಜಾಣ್ಮೆ ಪ್ರದರ್ಶಿಸ ಬಲ್ಲವರಾಗಿದ್ದಾರೆ. ಇವರ ವೇಗ, ಚುರುಕುತನ, ಚಾಲಾಕಿತನ ಎಲ್ಲವೂ ಬೆರಗು ಹುಟ್ಟಿಸುತ್ತದೆ. ಕೆಲವೊಮ್ಮೆ ಈ ಪ್ರಪಂಚ ಇವರಿಗೆ ಸಾಲುವುದಿಲ್ಲ ಅನಿಸುತ್ತದೆ. ಹಾಗೆ ಇವರ ಅಚಾತುರ್ಯ ಕಾರ್ಯಗಳಿಂದಾಗಿ ನೊಂದಿರುವ ನಮ್ಮ ಹಿರಿಕರು ಹಿಂದಿನ ಕಾಲದಲ್ಲಿನ ವೃತ್ತಿ ಹಾಗೂ ಪ್ರವೃತ್ತಿಯು ಇಂದಿನ ತಲೆಮಾರಿನವರಲ್ಲಿ ಮರೆಯಾಗುತ್ತಿದೆಯೇನೊ? ಎಂಬ ಆತಂಕದಿಂದಲೇ ಆಗಾಗ ಕಾಲ ಬದಲಾಗುತ್ತಿದೆಯೆಂದು ಗೊಣಗುತ್ತಿರುತ್ತಾರೆ.

ಬಾಲ್ಯದಲ್ಲಿ ನಾವು ಆಡಿದ ಆಟಗಳು, ಓದಿದ ಪಾಠಗಳು, ಮಾಡಿದ ಕಾರ್ಯಗಳು, ಸಂಪ್ರದಾಯಗಳು ಈಗಿಲ್ಲ ಎಂಬ ಕೊರಗು ಅವರದಾಗಿದೆ. ಆದರೆ ಯಾವುದೇ ಜೀವ ಚೈತನ್ಯವು ಬೆಳೆದಂತೆ ಬೆಳೆದಂತೆ ಹೇಗೆ ಬದಲಾವಣೆಯಾಗುತ್ತದೆಯೋ ಹಾಗೆ ಕಾಲವೂ ಕೂಡ ಬದಲಾಗುತ್ತಿರುತ್ತದೆ. ಕಾಲಾಯೇನ ತಸ್ಮೈ ನಮಃ ಎಂಬಂತೆ ಕಾಲಕ್ಕನುಸಾರವಾಗಿ ಇಂದಿನ ಜೀವನ ಶೈಲಿಯೂ ಕೂಡ ಬದಲಾವಣೆಯಾಗುತ್ತಿರುವುದು ಸಹಜವಾಗಿದೆ. ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬಿದ್ದರೆ ಇಂದಿನ ವೇಗದ ಬದುಕಿಗೆ ಹೊಂದಿಕೊಳ್ಳಲು ಸಾಧ್ಯವಾಗುವುದಿಲ್ಲ ನಿಜ. ಆದರೆ ವೇಗವಾಗಿ ಸಾಗುವ ಪಥದಲ್ಲಿ ನಿಧಾನವಾಗಿ ಸಾಗಿದರೆ, ಹಿಂದಿನವರು ಬಂದು ನಮ್ಮನ್ನು ಗುದ್ದಿಕೊಂಡು ಹೋಗುತ್ತಾರೆ. ಹಾಗೆ ನಿಧಾನವಾಗಿ ಸಾಗುವ ಪಥದಲ್ಲಿ ವೇಗವಾಗಿ ಸಾಗಿದರೆ ನೀವು ಯಾರನ್ನೋ ಗುದ್ದಿಕೊಂಡು ಹೋಗುವ ಅಪಾಯವಿದೆ ಎಂಬ ವಿವೇಕದೊಂದಿಗೆ ಇಂದಿನ ತಲೆಮಾರಿನವರು ಎಚ್ಚರಿಕೆಯ ನಡೆಯನ್ನು ಇಡಬೇಕಾಗಿದೆ.

ನಮ್ಮ ಕಾಲದಲ್ಲಿ ಹೀಗಿದ್ದಿಲ್ಲ ಈಗ ಕಾಲ ಬದಲಾಗಿದೆ ಎನ್ನುವ ಅವರ ಈ ಮನಸ್ಥಿತಿ ಬದಲಾಗಬೇಕಿದ್ದರೆ ಇಂದಿನ ತಲೆಮಾರಿನವರು ಹಿರಿಯರ ಅನುಭವದ ಮಾತುಗಳಿಗೆ ಕಿವಿಯಾಗಬೇಕು. ವೇಗದ ಬದುಕಿನಲ್ಲಿ ಜೀವಕ್ಕೆ ಎರವಾಗಬಲ್ಲ ಹವ್ಯಾಸ, ಪ್ರವೃತ್ತಿಗಳಿಂದ ದೂರವಿದ್ದು ಸುರಕ್ಷಿತವಾಗಿ ನಮ್ಮದಿಯ ನಾಳೆಗಳನ್ನು ಕಂಡರೆ ನಮ್ಮ ಹಿರಿಯರಿಗೆ ಜೀವನೋತ್ಸಾಹ ತುಂಬಬಹುದಲ್ಲವೇ?

• ರವಿ ಕಂಗಳ. ಕೊಂಕಣಕೊಪ್ಪ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಮುಂಬಯಿಯ ಕಲಾವಿದ ಜಯ ಸಾಲ್ಯಾನ್

• ಪ್ರೊ.ಜಿ.ಎನ್.ಉಪಾಧ್ಯ



ಮುಂಬೈನ ಹೊಸ ತಲೆಮಾರಿನ ಪ್ರತಿಭಾವಂತ ಸೃಜನಶೀಲ ಕಲಾವಿದರಲ್ಲಿ, ಕನ್ನಡಿಗೆ ಜಯ ಸಾಲ್ಯಾನ್ ಅವರದು ಎದ್ದು ಕಾಣುವ ಹೆಸರು. ಇತ್ತೀಚಿಗೆ ದುಬೈಯಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರ ಕಲಾ ಪ್ರದರ್ಶನಕ್ಕೆ ಆಯ್ಕೆಯಾದ ಭಾರತದ ಚಿತ್ರಕಾರರಲ್ಲಿ ಅವರೂ ಒಬ್ಬರು ಎಂಬುದು ಹೆಮ್ಮೆಯ ಸಂಗತಿ. ಪ್ರಾಚೀನ ಹಾಗೂ ಆಧುನಿಕ ಕಲಾ ಪ್ರಕಾರಗಳ ಅನುಸಂಧಾನ, ಪ್ರಯೋಗಶೀಲತೆಯು ಅವರ ಅನನ್ಯತೆ.

ಸೂಕ್ಷ್ಮ ಮನಸ್ಸು ಲೇಖನಿಯನ್ನು ಹಿಡಿದರೆ ಸಾಹಿತ್ಯವಾಗುತ್ತದೆ, ಉಳಿಯನ್ನು ಹಿಡಿದರೆ ಶಿಲ್ಪವಾಗುತ್ತದೆ, ಕುಂಚವನ್ನು ಹಿಡಿದರೆ ಕಲೆಯಾಗುತ್ತದೆ .ಪಾವಂಜೆ ಗುರುರಾವ್, ಕೆ.ಕೆ.ಹೆಬ್ಬಾರ್, ವಾಸುದೇವ ಕಾಮತ್, ದೇವದಾಸ ಶೆಟ್ಟಿ, ದಿವಾಕರ್‌ಶೆಟ್ಟಿ, ಎನ್.ಸಿ. ದೇಸಾಯಿ, ಜಯವಂತ ಮುನ್ನೊಳ್ಳಿ, ಚಿತ್ರಮಿತ್ರ, ಅನು ಪಾವಂಜೆ, ರೇಖಾರಾವ್, ಪಂಜು ಗಂಗೊಳ್ಳಿ ಮೊದಲಾದವರು ಮುಂಬಯಿಯಲ್ಲಿ ನೆಲೆಸಿದ ಕನ್ನಡಿಗ ಕಲಾವಿದರು. ಇಲ್ಲಿನ ನಮ್ಮ ಹೊಸ ತಲೆಮಾರು ಚಿತ್ರ ಕಲಾಕ್ಷೇತ್ರದಲ್ಲಿ ಅಷ್ಟಾಗಿ ತೊಡಗಿಸಿಕೊಂಡಿಲ್ಲ. ಇದಕ್ಕೆ ಅಪವಾದ ಎಂಬಂತೆ ಕಲಾಕ್ಷೇತ್ರದಲ್ಲಿ ಇಂದು ಮುಂಬಯಿಯಲ್ಲಿ ಜಯ ಸಾಲ್ಯಾನ್ ಅವರು ಮಿಂಚುತ್ತಿರುವುದು ಸಂತೋಷದ ಸಂಗತಿ.

> ಮುಂಬಯಿಯಲ್ಲಿ ನೆಲೆಸಿರುವ ಜಯ ಸಾಲ್ಯಾನ್ ಅವರದು ಬಹುಮುಖ ಪ್ರತಿಭೆ. ರೇಖಾ ಚಿತ್ರ, ವ್ಯಂಗ್ಯ ಚಿತ್ರ, ಭಿತ್ತಿ ಚಿತ್ರ ಮೊದಲಾದ ಚಿತ್ರ ಪ್ರಕಾರಗಳಲ್ಲಿ ಅವರು ಸೈ ಎನಿಸಿಕೊಂಡಿದ್ದಾರೆ.

ಜಯ ಸಾಲ್ಯಾನ್ ಕಲಾವಿದರಾಗಿ, ಕಲಾ ಶಿಕ್ಷಕರಾಗಿ, ಮಾರ್ಗದರ್ಶಕರಾಗಿ ಸಾಕಷ್ಟು ಹೆಸರು ಮಾಡಿದ್ದಾರೆ. ಅವರು ಮುಂಬಯಿಯಲ್ಲಿ ಅರಳಿದ ಪ್ರತಿಭೆ. ಕಷ್ಟನಷ್ಟಗಳ ನಡುವೆ ಏಕಲವ್ಯನಂತೆ ಕಲಾಕ್ಷೇತ್ರದಲ್ಲಿ ಮೇಲೇರಿದವರು ಜಯ ಸಾಲ್ಯಾನ್. ಜಯ ಅವರದು ಬಹುಮುಖ ಪ್ರತಿಭೆ. ರೇಖಾ ಚಿತ್ರ, ವ್ಯಂಗ್ಯ ಚಿತ್ರ, ಭಿತ್ತಿ ಚಿತ್ರ ಮೊದಲಾದ ಚಿತ್ರ ಪ್ರಕಾರಗಳಲ್ಲಿ – ಅವರು ಸೈ ಎನಿಸಿಕೊಂಡಿದ್ದಾರೆ.

ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಿಂದ ಪದವಿ ಪಡೆದ ಅವರು ದೇಶದ ಬೇರೆ ಬೇರೆ ಕಲಾ ಮಹಾವಿದ್ಯಾಲಯಗಳ ಅತಿಥಿ ಉಪನ್ಯಾಸಕರಾಗಿ ನೂರಾರು ಶಿಬಿರಗಳನ್ನು, ಕಮ್ಮಟಗಳನ್ನು ನಡೆಸಿಕೊಟ್ಟಿದ್ದಾರೆ. ಐ.ಟಿ.ಎಂ. ವಿಶ್ವವಿದ್ಯಾಲಯ ಅನಿಮೇಷನ್ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ ಸಾಲ್ಯಾನ್ ಅವರು ಪ್ರಸ್ತುತ ಎಂ. ಕೆ. ನಾಯಕ್ ವಿದ್ಯಾಲಯದಲ್ಲಿ ಚಿತ್ರ ಕಲಾ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ.

ಸಾಹಿತ್ಯದಲ್ಲೂ ಪರಿಶ್ರಮ

ಅವರಿಗೆ ಕನ್ನಡ, ತುಳು ಸಾಹಿತ್ಯ ಸಂಸ್ಕೃತಿಗಳ ಬಗೆಗೆ ವಿಶೇಷವಾದ ಅಭಿಮಾನ. ಇತ್ತೀಚೆಗಷ್ಟೇ ಮುಂಬಯಿ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಅವರು ಕಲಾ ವಿಷಯದ ಕುರಿತು ಡಾಕ್ಟರೇಟ್ ಪದವಿ ಗಳಿಸಿಕೊಳ್ಳಬೇಕೆಂಬ ಹಂಬಲ ಹೊತ್ತು ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ಅವರ ಚಿತ್ರಗಳು ದೆಹಲಿ, ಜೈಪುರ, ನಾಗಪುರ, ಗುಜರಾತ್, ಹೈದರಾಬಾದ್, ಬೀದರ್ ಮೊದಲಾದ ಕಡೆ ಪ್ರದರ್ಶನ ಕಂಡು ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿವೆ.

ಸಾಂಪ್ರದಾಯಿಕ ಕಲಾಪರಂಪರೆಯನ್ನು ಚೆನ್ನಾಗಿ ಬಲ್ಲ ಸಾಲಿಯಾನ್ ಆಧುನಿಕ ತಂತ್ರಜ್ಞಾನವನ್ನು ಕಲೆಯಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಅವರು ಹೊಸ ತಲೆಮಾರಿಗೆ ತಿಳಿಹೇಳುತ್ತಾ ಬಂದಿದ್ದಾರೆ. ಚಿತ್ರ ಕಲಾಕ್ಷೇತ್ರದಲ್ಲಿ ಆಸಕ್ತಿ ಇರುವವರಿಗೆ ಆಧುನಿಕ ವಿದ್ಯುನ್ಮಾನ ತಂತ್ರಾಂಶಗಳ ಮೂಲಕ ಪಠ್ಯಕ್ರಮವನ್ನು ತಯಾರಿಸಿ, ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. 'ಕ್ಯಾಮ್ಲಿನ್ ಇಂಡಿಯಾ ಲಿಮಿಟೆಡ್' ಸಂಸ್ಥೆಯು, ಜಯ ಸಾಲ್ಮಾನ್ ಅವರ ಪಠ್ಯವಸ್ತುವನ್ನು ಕಲಾಕ್ಷೇತ್ರದ ವಿವಿಧ ಪರೀಕ್ಷೆಗೆ ಆಯ್ಕೆ ಮಾಡಿದೆ.

ಆನ್‌ಲೈನ್‌ನಲ್ಲಿ ಚಿತ್ರಕಲೆ

ಚಿತ್ರಕಲೆಯನ್ನು ಆನ್‌ಲೈನ್ ಮೂಲಕ ರೂಢಿಸಿಕೊಳ್ಳಲು, ಅಧ್ಯಯನ ಮಾಡಲು ಅವರು ತಮ್ಮ ದೇ ಆದ ವೆಬ್‌ಸೈಟ್ ಸಿದ್ಧಪಡಿಸಿ, ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಜಯ ಅವರು ಸರಳಜೀವಿ. ಪ್ರೀತಿ, ಸೌಜನ್ಯಕ್ಕೆ ಹೆಸರಾದವರು. ಅವರದ್ದು ತುಸು ಸಂಕೋಚ ಪ್ರವೃತ್ತಿ. 'ಮಾತು ಕಮ್ಮಿ ಕೆಲಸ ಜಾಸ್ತಿ' ಎನ್ನುವ ಗುಂಪಿಗೆ ಸೇರಿದವರು. ಸಾಲಿಯಾನ್ ಅವರ ತುಟಿಗಳ ಮೇಲೆ ತುಸು ನಗು, ಸೌಜನ್ಯ ರೂಪ ಅವರದು.

ಜಯ ಅವರು ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಪ್ರಸಿದ್ಧ ವ್ಯಕ್ತಿಗಳ, ಸಾಧಕರ ಕ್ಯಾರಿಕೇಚರ್ ಮಾಲಿಕೆ ರಚಿಸಿ ಅಂತರ್ಜಾಲಕ್ಕೆ (ಇಂಟರ್ನೆಟ್) ಜೋಡಿಸಿದ್ದಾರೆ. ಕರ್ನಾಟಕ ಮೂಲದ ಕಲಾವಿದ ವಾಸುದೇವ ಕಾಮತ್ ಕುರಿತು ಎಂ.ಎ. ಪದವಿಗಾಗಿ ಶೋಧ ಸಂಪ್ರಬಂಧ ರಚಿಸಿದ್ದಾರೆ. ಸಣ್ಣ ವಯಸ್ಸಿನಲ್ಲೇ ಪ್ರಬುದ್ಧ ಕಲಾವಿದರಾಗಿ ಹೊರಹೊಮ್ಮಿದ ಜಯ ಸಾಲ್ಯಾನ್, ಈ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡುವುದರಲ್ಲಿ ಸಂದೇಹವಿಲ್ಲ.

ಕಿರಿಯ ಪೋರನ ಹಿರಿಯ ಸವಾಲು!

• ಅಜಯ್ ಅಂಚೆಪಾಳ್ಯ

ಸಿಂಗಪುರದಲ್ಲಿ ನಡೆಯುತ್ತಿರುವ ವಿಶ್ವ ಚದುರಂಗ ಸ್ಪರ್ಧೆಯಲ್ಲಿ ಚೆನ್ನೈನ ಗುಕೇಶ್ ದೊಮ್ಮರಾಜು ಅವರು ಸ್ಪರ್ಧಿಸುತ್ತಿರುವುದರಿಂದಾಗಿ, ನಮ್ಮ ದೇಶದಲ್ಲಿ ಈ ಆಟದ ಕುರಿತು ಮತ್ತೊಮ್ಮೆ ಹೆಚ್ಚಿನ ಕುತೂಹಲ ಮೂಡಿದೆ. ಅವರು ಚೀನಾದ ಡಿಂಗ್ ಲಿರೆನ್ ಅವರನ್ನು ಎದುರಿಸಿದ್ದು, ಮೊದಲ ಪಂದ್ಯದಲ್ಲಿ ಸೋತು, ಎರಡನೆಯ ಪಂದ್ಯವನ್ನು ಡ್ರಾ ಮಾಡಿಕೊಂಡಿದ್ದು, ಮೂರನೇ ಪಂದ್ಯದಲ್ಲಿ ಗೆದ್ದಿದ್ದಾರೆ. ಚೀನಾದ ಡಿಂಗ್ ಲಿರೆನ್ ಅವರು ಈಗ ಹಾಲಿ ಚಾಂಪಿಯನ್.

ನಮ್ಮ ದೇಶದ ವಿಶ್ವನಾಥ ಆನಂದ್ ಅವರು 2007–13 ತನಕ ವಿಶ್ವ ಚದುರಂಗ ಚಾಂಪಿಯನ್ ಆಗಿದ್ದರು. ನಂತರ, 2013–23ರ ತನಕ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ವಿಶ್ವ ಚಾಂಪಿಯನ್ ಆಗಿದ್ದರು. ಇಬ್ಬರೂ ಹತ್ತು ವರ್ಷ ಆ ಸ್ಥಾನದಲ್ಲಿದ್ದರು. ಚೀನಾದ ಡಿಂಗ್ ಲಿರೆನ್ ಅವರನ್ನು ಗುಕೇಶ್ ದೊಮ್ಮರಾಜು ಸೋಲಿಸಿದರೆ, ಹೊಸದೊಂದು ದಾಖಲೆಯನ್ನೇ ಬರೆದಂತಾಗುತ್ತದೆ. ಏಕೆಂದರೆ, ಗುಕೇಶ್ ಅವರಿಗೆ ಈಗ ಕೇವಲ 18 ವರ್ಷ! ಕ್ಷಿಪ್ರಗತಿಯ ಆಟದಲ್ಲಿ ಪರಿಣತರಾಗಿರುವ ಗುಕೇಶ್ ದೊಮ್ಮರಾಜು, ಸಾಂಪ್ರದಾಯಿಕ ಪಂದ್ಯಗಳಲ್ಲೂ ಗೆದ್ದಿದ್ದಾರೆ. ಮೊದಲ ಪಂದ್ಯವನ್ನು ಕೊನೆಯ ಕ್ಷಣದಲ್ಲಿ ಸಮಯದ ಅಭಾವದಿಂದಾಗಿ ಸೋತಿರುವ ಗುಕೇಶ್, ನಿನ್ನೆ ನಡೆದ ಮೂರನೇ ಪಂದ್ಯದಲ್ಲಿ ಗೆಲುವು ದಾಖಲಿಸಿ, ಡಿಂಗ್ ಲಿರೆನ್ ಅವರನ್ನು ಮಣಿಸುವ ಸವಾಲನ್ನು ಜೀವಂತವಾಗಿಟ್ಟಿದ್ದಾರೆ. 14 ಪಂದ್ಯಗಳ ಈ ಸರಣಿಯಲ್ಲಿ ಯಾರು ಮೊದಲು 7.5 ಅಂಕ ಗಳಿಸುತ್ತಾರೋ ಅವರು ಗೆದ್ದಂತೆ.

ಪದಬಂಧ



ಎಡದಿಂದ ಬಲಕ್ಕೆ

1. ಕಾರ್ಖಾನೆಯಲ್ಲಿ ಕಂಡ ಗುಮಾಸ್ತ (4)
4. ಮದುಮಕ್ಕಳ ಹಣೆಯಲ್ಲಿ ಕಾಣುವ ಒಂದು ಆಭರಣ (3)
6. ಗಡಿಬಿಡಿಯಿಂದ ಉಂಟಾದ ಗೊಂದಲ (4)
8. ಕೊಂಚ ಎನ್ನುವ ಪದ (3)
9. ಮಲಗುವುದರಿಂದ ನೋವು ಶಮನವಾದೀತು (3)
11. ದೂರವನ್ನಳೆಯುವ ಒಂದು ಪ್ರಮಾಣವಿದು (3)
13. ಸೂರ್ಯನಿಗೆ ಮತ್ತೊಂದು ಹೆಸರು (4)
15. ಜೇನನ್ನು ಹೀರುವ ಭ್ರಮರ (4)
17. ಮನವಿಟ್ಟು ನೀಡಿದ ಲಕ್ಷ್ಯ (3)
19. ಮನಸ್ಸಿನ ತೀವ್ರವಾದ ಆಸೆ (3)
21. ಗೆದ್ದವರಿಗೆ ಸಿಕ್ಕುವ ಬಿಲ್ಲೆ (3)
23. ಮೋಡಿ ಮಾಡಿದ ಯಕ್ಷಿಣಿಗಾರ (4)
25. ಅಸ್ತವ್ಯಸ್ತವಾಗಿ ಬಂದಿರುವ ಕೊಳಲು (3)
26. ನವರತ್ನಗಳಲ್ಲಿ ಒಂದು ಮರಹತ್ತಿದೆ (4)

ಮೇಲಿನಿಂದಕೆಳಕ್ಕೆ

2. ಸದ್ದು ಮಾಡುತ್ತಾ ಬಂದಿರುವ ಆನೆ (3)
3. ನಗುವಾಗ ಕಾಣಿಸಿತು ಒಡವೆ (2)
4. ಹುಡುಗತನದಿಂದ ಕೂಡಿದ್ದು (3)
5. ಇದು ದಟ್ಟವಾದುದು (3)
7. ಏಲಂ ಅಥವಾ ಹರಾಜು (3)
8. ಉಭಯಸಂಕಟವನ್ನು ಹೀಗೆ ಹೇಳಬಹುದು (3)
10. ಶಬ್ದಾಲಂಕಾರವೊಂದರಂತೆ ಕಾಣುವ ಜೋಡಿ (3)
11. ಗಾಣದಿಂದ ಎಣ್ಣೆ ತೆಗೆಯುವವನು (3)
12. ನಿಗ್ರಹಕ್ಕೆ ಮತ್ತೊಂದು ಹೆಸರು (3)
14. ಮುಸಲ್ಮಾನ ದೊರೆ (3)
16. ಬಟ್ಟೆ ಒಗೆದು ಶುಚಿಮಾಡಿ ಕೊಡುವ ಅಗಸ (3)
18. ಅಂತಸ್ತು ಮಡಿಯ ಮಧ್ಯೆ ಇದೆ (3)
19. ಬಳ್ಳಿ ಹಬ್ಬಲು ಬೇಕಾದ ಹಪ್ಪರ (3)
20. ಇನ್ನೊಂದು ಕಡಿವಾಣ (3)
22. ಹತ್ತು ವರ್ಷಗಳ ಅವಧಿ (3)
24. ತಿರುಗಿ ಬಿದ್ದ ಪುತ್ರ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
2. ಚಮೂರ
5. ಇಂದುವಾರ
6. ಜಾಹೀರಾತು
7. ಸಂಗಮ 10. ನತಿಪು
11. ಮರಳುಗಾಡು
12. ಕೊರತೆ 14. ಕವನ
18. ಉದಾಸೀನ
19. ಸುಧಾಕರ 20. ನಸುಕು

ಎಡದಿಂದ ಬಲಕ್ಕೆ
1. ಮದುಮಗ 2. ಚರಟ
3. ರಜಾಯಿ 4. ಶರಾವತಿ
8. ಮಮತೆ 9. ಕೇಳುಗ
10. ನಡುಕ 13. ರಹದಾರಿ
15. ವರಕವಿ 16. ಆನನ
17. ಉಸುಕು

• ಸಿ. ರವಿಶಂಕರ ಶಾಸ್ತ್ರಿ ದಂಬೆ

ಮನೋ ನಿಯಂತ್ರಣ

ಅರ್ಜುನನು ಮನಸ್ಸನ್ನು ಗಾಳಿಗೆ ಹೋಲಿಸುತ್ತಾನೆ. ಮತ್ತು ಅದರ ಸಮತೋಲನವನ್ನು ಅದನ್ನು ಹೇಗೆ ನಿಯಂತ್ರಿಸಬೇಕೆಂದು ತಿಳಿಯಬಯಸು ತ್ತಾನೆ. ಇದು ಖಂಡಿತವಾಗಿಯೂ ಕಷ್ಟ ಆದರೆ ವೈರಾಗ್ಯವನ್ನು ಅಭ್ಯಾಸ ಮಾಡುವದರಿಂದ ಇದನ್ನೂ ಸಾಧಿಸಬಹುದೆಂದು ಕೃಷ್ಣ ಹೇಳುತ್ತಾನೆ.

ಇಂದ್ರಿಯಗಳು ತರುವಂತಹವುಗಳನ್ನು ಸುರಕ್ಷಿತ ಹಾಗೂ ಅಸುರಕ್ಷಿತ ಎಂದು ನಿರ್ಣಯಿಸುವಷ್ಟು ಮನಸ್ಸು ವಿಕಾಸಹೊಂದಿದೆ ಹಾಗೂ ಹಾಗೆ ಮಾಡುವಾಗ ಅದು ನಮ್ಮ ನೆನಪಿನ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತದೆ. ಈ ಶಕ್ತಿಯು ನಮ್ಮ ವಿಕಸನ ಪ್ರಕ್ರಿಯೆಯಲ್ಲಿ ನಾವು ಉಳಿಸಿಕೊಂಡು ಅಭಿವೃದ್ಧಿಹೊಂದಲು ತುಂಬಾ ಸಹಾಯಮಾಡಿದೆ.

ಮನಸ್ಸಿನ ಇದೇ ಸಾಮರ್ಥ್ಯವನ್ನು ನಮ್ಮ

ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಆಂತರಿಕ ಪರೀಕ್ಷೆಯಲ್ಲಿಯೂ ಉಪಯೋಗಿಸಬಹುದು. ಇದನ್ನು ಅರಿವು ಎಂದು ಕರೆಯುತ್ತಾರೆ. ಈ ನಿರ್ಣಯದ ಗುಣಮಟ್ಟವನ್ನು ಸುಧಾರಿಸಿಕೊಳ್ಳಲು ನಾವು ನಮ್ಮದೆ ವಿಚಾರ ಮತ್ತು ಅನಿಸಿಕೆಗಳನ್ನು ನಮ್ಮ ಮನಸ್ಸಿಗೆ ಪುನಃ ಒದಗಿಸಿಕೊಳ್ಳಬಹುದು ವಿದ್ಯುತ್ ವಿನ್ಯಾಸವನ್ನು ಸ್ಥಿರಗೊಳಿಸಲು ಹಾಗೂ ಯಾಂತ್ರಿಕ ಕಲಿಕೆಯನ್ನು ಅಭಿವೃದ್ಧಿಗೊಳಿಸಲು ಅಂತಹ ಪುನಃ ಪೂರೈಕೆ ವ್ಯವಸ್ಥೆಯನ್ನು ಬಳಸಲಾಗುತ್ತದೆ. ಸತತ ಅಭ್ಯಾಸದಿಂದ ಈ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಕೃಷ್ಣ ತಿಳಿಸುತ್ತಾನೆ. ಯಾಕೆಂದರೆ ಅದು ಸಹಜವಾಗಿ ಬರುವಂತಹದಲ್ಲ. ನರವಿಜ್ಞಾನ ಭಾಷೆಯಲ್ಲಿ ಹೇಳುವದಾದರೆ ಅದು ಹೊಸ ನರಮಂಡಲ ಜಾಲವನ್ನು ರಚಿಸಿಕೊಳ್ಳುವಂತಿದೆ.

ವೈರಾಗ್ಯವನ್ನು ಅದರ ವಿರುದ್ಧವಾಗಿರುವ 'ರಾಗ'ವನ್ನು ಅರ್ಥ ಮಾಡಿಕೊಳ್ಳುವದರಿಂದ ಸುಲಭವಾಗಿ ತಿಳಿಯಬಹುದು. 'ರಾಗ' ಎಂದರೆ ಈ ಭೌತಿಕ ಜಗತ್ತಿನಲ್ಲಿ ದೈಹಿಕ ಸೌಂದರ್ಯ, ವೃತ್ತಿ , ಸಂಪತ್ತುಗಳಂತಹ ಸುಖವನ್ನು ಬೆನ್ನತ್ತುವದಾಗಿದೆ. ದ್ವಂದ್ವತ್ವದ ನಿಯಮದ ಪ್ರಕಾರ ಪ್ರತಿ 'ರಾಗ' ವೂ ವೈರಾಗ್ಯದಲ್ಲಿ ಕೊನೆಗೊಳ್ಳುತ್ತದೆ. ಆದರೆ ನಾವು ನಮ್ಮ ಗಮನವನ್ನು ಯಾವಾಗಲೂ 'ರಾಗ'ದ ಕಡೆಗೆ ಹರಿಸಿ ವೈರಾಗ್ಯವನ್ನು ಕಡೆಗಣಿಸುತ್ತೇವೆ.

ಕೆಲವು ವಿರಕ್ತ ಪಂಥಗಳು ವೈರಾಗ್ಯದ ತುತ್ತತುದಿಯಾದ 'ಮರಣ'ದ ಬಗ್ಗೆ ಪ್ರತಿಪಾದಿಸುತ್ತವೆ. ಇದನ್ನು 'ಮೆಮೆಂಟೊಮೋರಿ' ಅಂದರೆ 'ಸತತ ಮರಣಸಂದರ್ಶಕ' ಎಂದು ಕರೆಯುತ್ತಾರೆ. ಇದರಲ್ಲಿ ಅವರು ಮರಣವನ್ನು ಸೂಚಿಸುವ ಒಂದು ಸಂಕೇತವನ್ನು ಪ್ರಮುಖ ಸ್ಥಳಗಳಾದ ತಮ್ಮ ಮನೆ ಅಥವಾ ಕಾರ್ಯಕ್ಷೇತ್ರಗಳಲ್ಲಿ ಇಟ್ಟುಕೊಂಡಿರುತ್ತಾರೆ. ಇದರಿಂದ ಅವರು ಸತತವಾಗಿ ಅದನ್ನು ನೆನಪಿಸಿಕೊಳ್ಳಬಹುದು. ಇದನ್ನು ಭಾರತೀಯ ತತ್ವಶಾಸ್ತ್ರ ಸ್ಮಶಾನ ವೈರಾಗ್ಯಎಂದು ಹೇಳುತ್ತದೆ.

ಕೃಷ್ಣನ ಪ್ರಕಾರ ಒಮ್ಮೆ ನೀವು ವೈರಾಗ್ಯವನ್ನು ಅಭ್ಯಾಸ ಮಾಡಿದರೆ ಅದು ನಿಮ್ಮ ಮನಸ್ಸನ್ನು ಕೇಂದ್ರಸ್ಥಾನದಲ್ಲಿ ಸ್ಥಿರಗೊಳಿಸುತ್ತದೆ. 2020ರ ಲಾಕ್ ಡೌನ್ ಅವಧಿಗಳು ನಮಗೆ ವೈರಾಗ್ಯದ ಕ್ಷಣಗಳ ಚಿತ್ರವನ್ನು ನೀಡಿವೆ. ಹೀಗೆ ಸೃಷ್ಟಿಸಲ್ಪಟ್ಟ ವೈರಾಗ್ಯದ ಒಂದು ಸಣ್ಣ ತುಣುಕು ಶಾಂತಿ ಮತ್ತು ಸಂತೋಷಕ್ಕಾಗಿ ನಮ್ಮ ನಮಸ್ಸಿನ ಸಮತೋಲನ ವನ್ನು ತಲುಪುವಲ್ಲಿ ಸಹಾಯಮಾಡುತ್ತದೆ.

ಕಲಾಸೇವೆಯ ಪ್ರವೃತ್ತಿ

• ಪ್ರೊ. ವಿ. ಎಸ್. ನಾಯಕ ಬಳಕೂರು

ಕಂಸ ವಧೆಯ ಕಂಸ, ಕಪಿ ಸೇನೆಯ ಮುಖ್ಯಸ್ಥ ಜಾಂಬವ, ಕೌಸಲ್ಯ ತನಯ ಶ್ರೀರಾಮಚಂದ್ರ, ತ್ಯಾಗಮಯಿ ದಾನ ಶೂರ ಕರ್ಣ, ರಾಜಾ ಉಗ್ರ ಸೇನನ ಜಲ ಕ್ರೀಡೆಯ ವೈಭವದ ದೃಶ್ಯ, ವಿರಾಟ ನಗರಿಯಲ್ಲಿ ಕೀಚಕನ ಪಾತ್ರ, ಇಚ್ಛಾಮರಣಿ ಭೀಷ್ಮಾಚಾರ್ಯ, ಅಜ್ಞಾಪಾಲಕ ಭರತ, ಹತ್ತಿನಾವತಿಯ ದೊರೆ ಕೌರವ, ದಕ್ಷ ಯಜ್ಞದ ದಕ್ಷ, ರಾಮನ ಬಂಟ ಹನುಮಂತ, ಭೀಮಸೇನ ವೀರ ಕುವರ ಘಟೋತ್ಕಜ, ಪಾಂಡು ತನಯ ವೀರ ಅರ್ಜುನ

ಹೆಜ್ಜೆ, ಗೆಜ್ಜೆಯ ಕುಣಿತ, ಅತ್ಯಾಕರ್ಷಕ ಭಾವ ಬಂಗಿ, ಅರ್ಥಪೂರ್ಣ ಸಂಭಾಷಣೆ, ರಂಗ ಗಾಂಭೀರ್ಯ, ಲಯಬದ್ಧ ಕುಣಿತ, ಎಲ್ಲರನ್ನು ಸೆಳೆಯುವ ಮಾತುಗಾರಿಕೆ – ಹೀಗೆ ತಮ್ಮ ಯಕ್ಷಗಾನ ಸೇವೆಯ ಮೂಲಕ ಎಲ್ಲರ ಮನಸ್ಸನ್ನು ಸೆಳೆದವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ಡಾ. ಎಂ.ಆರ್.ನಾಯಕ. ಇವರು ವೃತ್ತಿಯಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿದ್ದು, ನಿವೃತ್ತರಾಗಿ ಕಲಾ ಸೇವೆಯನ್ನು ಮುಂದುವರಿಸುತ್ತಿದ್ದಾರೆ.

ಎಂ.ಆರ್. ನಾಯಕ ರವರಿಗೆ ಬಾಲ್ಯದಿಂದಲೂ ಯಕ್ಷಗಾನದ ಬಗ್ಗೆ ಅಪಾರ ಒಲವು. ಅವರ ಊರಲ್ಲಿ ಸುಮಾರು 50 ವರ್ಷಗಳಿಂದ ಯಕ್ಷಗಾನ ಸಂಭ್ರಮ ನಡೆಯುತ್ತಿತ್ತು. ಯಕ್ಷಗಾನದ ಪ್ರಸಿದ್ಧ ಕಲಾವಿದರಾದ ಹೊಸದೋಟ ಮಂಜುನಾಥ ಭಾಗವತರು ಅವರ ಊರಿಗೆ ಬಂದು ಪ್ರತಿ ವರ್ಷ ಒಂದು ತಿಂಗಳುಗಳ ಕಾಲ ಯಕ್ಷಗಾನದ ತರಬೇತಿಯನ್ನು ಕೊಡುತ್ತಿದ್ದರು. ಅವರೇ ಇವರಿಗೆ ಪ್ರಾರಂಭಿಕ ಗುರು.ನಂತರದ ದಿನಗಳಲ್ಲಿ ಹೊನ್ನಾವರದ ಎಸ್.ಡಿ.ಎಂ ಕಾಲೇಜಿನಲ್ಲಿ ಪ್ರಾಧ್ಯಾಪಕರಾದ ಮೇಲೆ ಅಲ್ಲಿ ಹಲವು ಯಕ್ಷಗಾನ ಕಲಾವಿದರ ಪರಿಚಯ, ಒಡನಾಟ, ಸಾಂಗತ್ಯ ದೊರಕಿ, ಯಕ್ಷಗಾನದಲ್ಲಿ ಇನ್ನೂ ಆಸಕ್ತಿ ಹೆಚ್ಚಾಗಲು ಕಾರಣವಾಯಿತು. ನಂತರದ ದಿನಗಳಲ್ಲಿ ಉಮೇಶ್ ಭಟ್ ಬಾಡ ಅವರ ಬಳಿಯಲ್ಲಿ ಎರಡು ವರ್ಷ ಯಕ್ಷಗಾನ ತರಬೇತಿಯನ್ನು ಪಡೆದರು. ಕಲಾವಿದ ಕೃಷ್ಣ ಭಂಡಾರಿ ಅವರನ್ನು ತಮ್ಮ ಕಾಲೇಜಿಗೆ ಕರೆಸಿ ಸುಮಾರು 10 ವರ್ಷಗಳ ಕಾಲ ಅಲ್ಲಿನ ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿಯನ್ನು ನೀಡಿದ್ದು ಅಲ್ಲಿ ತಮಗೂ ಹೆಚ್ಚಿನ ತರಬೇತಿ ಪಡೆಯಲು ಸಹಾಯಕವಾಯಿತು. ಹೆಚ್ಚಿನ ಯಕ್ಷಗಾನ ಕಲಾವಿದರು ಅವರಿಂದಲೇ ಕಲಿತ ವಿದ್ಯಾರ್ಥಿಗಳು ಇದ್ದದ್ದು ಅನುಕೂಲವಾಯಿತು. ಹೀಗೆ ಸುಮಾರು 41ವರ್ಷಗಳಿಂದ ಯಕ್ಷಗಾನದ ಸೇವೆಯನ್ನು ಮುಂದುವರಿಸಿಕೊಂಡು ಬಂದಿರುವುದು ವಿಶೇಷ.

ಸಾಮಾನ್ಯವಾಗಿ ಇವರು ಯಕ್ಷಗಾನದ ಪ್ರಸಂಗದಲ್ಲಿ ಬರುವ ನಾಯಕ ಮತ್ತು ಪ್ರತಿ ನಾಯಕನ ಪಾತ್ರಗಳನ್ನು ಮಾಡಿದ್ದಾರೆ. ಇವರ ಕಲಾ ಸೇವೆಗೆ ಹಲವಾರು ಸಂಘ ಸಂಸ್ಥೆಗಳು ಗೌರವಿಸಿರುವುದು ವಿಶೇಷ.

ಕಷ್ಟಪಡುವ ಮಕ್ಕಳ ಬಗ್ಗೆ ಹೆಚ್ಚು ಪ್ರೀತಿ ತೋರುವ ಹೆತ್ತವರು

ಒಮ್ಮೆ ದೃತರಾಷ್ಟನ ಹತ್ತಿರ ವೇದವ್ಯಾಸರು ಬಂದು, 'ನೋಡು ದೃತರಾಷ್ಟ್ರ ನಿನ್ನ ಮಕ್ಕಳಾದ ದುರ್ಯೋಧನ ದುಶ್ಯಾಸನ, ಹಾಗೂ ನಿನ್ನ ಭಾವಮೈದುನ ಶಕುನಿ, ಇವರು ಪಾಂಡು ಮಕ್ಕಳಿಗೆ ತುಂಬಾ ತೊಂದರೆ ಕೊಡುತ್ತಿದ್ದಾರೆ. ನೀನು ಅವರಿಗೆ ಸ್ವಲ್ಪ ಬುದ್ಧಿ ಹೇಳಬಾರದೆ?' ಎಂದು ಕೇಳಿದರು. ಇದರಿಂದ ದೃತರಾಷ್ಟ್ರನಿಗೆ ಬೇಜಾರಾಯಿತು. 'ನೀವು ಯಾವಾಗಲೂ ನನ್ನ ಮಕ್ಕಳಿಗೆ ಬುದ್ಧಿ ಹೇಳುವಂತೆ ಹೇಳುತ್ತೀರಿ. ನೀವು ಪಾಂಡು ಮಕ್ಕಳ ಮೇಲೆ ಹೆಚ್ಚು ವಾತ್ಸಲ್ಯ ಪ್ರೀತಿ ತೋರಿಸುತ್ತೀರಿ. ಯಾಕೆ ನನ್ನ ಮಕ್ಕಳು ನಿಮಗೆ ಮೊಮ್ಮಕ್ಕಳಲ್ಲವೇ? ಪಾಂಡು ಮಕ್ಕಳು ಮಾತ್ರ ಮೊಮ್ಮಕ್ಕಳಾ?' ಎಂದು ಕೇಳಿದ.

ಇದನ್ನು ಕೇಳಿದ ವ್ಯಾಸರು ಒಂದು ಕಥೆ ಹೇಳುತ್ತಾರೆ. ಒಮ್ಮೆ ದೇವಲೋಕದಲ್ಲಿ ಕಾಮಧೇನು ಅಳುತ್ತಿದ್ದಳು. ಅಲ್ಲಿಗೆ ಬಂದ ಇಂದ್ರದೇವ 'ಯಾಕೆ ಅಳುತ್ತಾ ಇದ್ದಿ? ನಮ್ಮಿಂದ ಏನಾದರೂ ತಪ್ಪಾಯ್ತೆ ಅಥವಾ ಯಾರಾದರೂ ನಿನ್ನ ಮನಸ್ಸಿಗೆ ನೋವಾಗುವಂತೆ ಮಾತನಾಡಿದರಾ?' ಎಂದ. ಕಾಮಧೇನು 'ಅಲ್ಲಿ ನೋಡ' ಎಂದು ಭೂಮಿ ಕಡೆ ತೋರಿಸಿದಳು. ಅದೊಂದು ಹಳ್ಳಿ. ಅಲ್ಲಿ ಒಬ್ಬ ಬಡ ರೈತನ ಗದ್ದೆ ಇತ್ತು. ರೈತನು ಅವನ ಹತ್ತಿರವಿದ್ದ ಎರಡು ಎತ್ತುಗಳನ್ನು ನೊಗಕ್ಕೆ ಕಟ್ಟಿ ಗದ್ದೆಯಲ್ಲಿ ಕೆಲಸ ಮಾಡಿಸುತ್ತಿದ್ದ.

ಅವು ಮುಂದೆ ಹೋಗದಿದ್ದರೆ ಬಾರುಕೋಲಿನಿಂದ ಅವುಗಳಿಗೆ ಹೊಡೆಯುತ್ತಿದ್ದ. ಆ ಎತ್ತುಗಳು ಸರಿಯಾಗಿ ಹೊಟ್ಟೆಗೆ ಇಲ್ಲದೆ ಚರ್ಮ ಮೂಳೆ ಮಾತ್ರ ಕಾಣುತ್ತಿತ್ತು. ಅವುಗಳಿಗೆ ನೊಗ ಎಳೆಯಲು ಆಗುತ್ತಿರಲಿಲ್ಲ. ಹೀಗಾಗಿ ಅವುಗಳ ಕಣ್ಣಲ್ಲಿ ನೀರು ಬರುತ್ತಿತ್ತು. ಎತ್ತುಗಳನ್ನು ತೋರಿಸಿದ ಕಾಮಧೇನು 'ದೇವರಾಜ ನನ್ನ ಮಕ್ಕಳು ಹೇಗೆ ಅಳುತ್ತಿವೆ. ಅವುಗಳ ಕಷ್ಟ ನನ್ನಿಂದ ನೋಡಲಾಗುತ್ತಿಲ್ಲ. ಏನಾದರೂ ಮಾಡಿ ಅವುಗಳ ಕಷ್ಟವನ್ನು ಪರಿಹರಿಸು' ಎಂದು ಕೇಳಿಕೊಂಡಳು.

ಅದಕ್ಕೆ ಇಂದ್ರನು 'ಏನಮ್ಮ ಕಾಮಧೇನು, ನಿನಗೆ ಇವೇ ಎರಡು ಮಕ್ಕಳಾ? ಎತ್ತು, ಹಸುಗಳು ಸೇರಿ ಕೋಟಿ ಕೋಟಿ ಮಕ್ಕಳಿದ್ದಾರೆ. ಅವುಗಳನ್ನೆಲ್ಲಾ ಬಿಟ್ಟು ಈ ಎರಡು ಮಕ್ಕಳ ಮೇಲೆ ಮಾತ್ರ ಅಷ್ಟೊಂದು ಪ್ರೀತಿ ಯಾಕೆ?' ಎಂದು ಕೇಳಿದ. ಆಗ ಕಾಮಧೇನು ಹೇಳಿದಳು. 'ಇಂದ್ರ, ನೀನು ಹೇಳಿದಂತೆ ನನಗೆ ಎತ್ತು, ಹಸುಗಳು ಸೇರಿ ಕೋಟಿ ಕೋಟಿ ಮಕ್ಕಳು ಇದ್ದಾರೆ ನಿಜ. ಅವುಗಳೆಲ್ಲ ಸುಖವಾಗಿ ಇದ್ದಾವೆ. ಆದರೆ ಈ ಎರಡು ಮಕ್ಕಳು ಮಾತ್ರ ಹೊಟ್ಟೆಗಿಲ್ಲದೆ, ಅವನ ಗದ್ದೆಯನ್ನು ಉತ್ತಬೇಕು. ಅಲ್ಲದೆ ಮಳೆ ಬರದೆ ಭೂಮಿಯೆಲ್ಲ ಒಣಗಿ ಬಿರುಕು ಬಿಟ್ಟಿದೆ.

ಕಲ್ಲಿನಂತೆ ಗಟ್ಟಿಯಾಗಿರುವ ಭೂಮಿಯನ್ನು ನೇಗಿಲಿನಿಂದ ಎಳೆಯಲು ಹೊಟ್ಟೆಗೂ ಹಾಕದೆ ನಿತ್ರಾಣವಾಗಿರುವ ಅವುಗಳಿಂದ ಕೆಲಸ ಮಾಡಿಸುತ್ತಾನೆ, ಕೆಲಸ ಮಾಡಲು ಆಗದೆ ರೈತನ ಕೈಯಲ್ಲಿ ಹೊಡೆಸಿಕೊಳ್ಳುತ್ತಾ ನಿತ್ಯವೂ ಕಣ್ಣೀರು ಹಾಕುತ್ತವೆ. ಇದನ್ನು ನನ್ನಿಂದ ನೋಡಲಾಗುವುದಿಲ್ಲ, ಹಾಗಾಗಿ ಹೇಳಿದೆ' ಎಂದಳು. ಕನಿಕರಗೊಂಡ ಇಂದ್ರನು 'ಕಾಮಧೇನು, ನಿನ್ನ ಮಕ್ಕಳ ಮೇಲಿರುವ ಕರುಳಿನ ಪ್ರೀತಿ ನನಗೆ ಅರ್ಥವಾಯಿತು' ಎನ್ನುತ್ತಾ, ಬಡ ರೈತನ ಗದ್ದೆ ಸೇರಿದಂತೆ ಸುತ್ತಮುತ್ತ ಮಳೆ ಸುರಿಸಿದನು. ಇದರಿಂದ ಭೂಮಿಯೆಲ್ಲಾ ಒದ್ದೆಯಾಗಿ ಮಣ್ಣು ಮೃದುವಾಯಿತು. ಎತ್ತುಗಳು ಸರಾಗವಾಗಿ ನೇಗಿಲನ್ನು ಎಳೆದವು. ಇದು ಕಾಮಧೇನುವಿಗಿರುವ ಪುತ್ರ ವಾತ್ಸಲ್ಯ ಎಂದು ತಿಳಿಸಿದರು.

ಹೀಗೆ ಕತೆ ಹೇಳಿ ಮುಗಿಸಿದ ವ್ಯಾಸರು, 'ನೋಡು ದೃತರಾಷ್ಟ್ರ, ನಿಮ್ಮೆಲ್ಲರ ಬಗ್ಗೆ ನನಗೆ ಸಮಾನ ಪ್ರೀತಿ ಇದೆ. ಆದರೆ ಯಾವ ಮಕ್ಕಳು ಹೆಚ್ಚು ಕಷ್ಟಪಡುತ್ತಿರುತ್ತಾರೋ, ಅವರ ಬಗ್ಗೆ ಹೆತ್ತ ತಂದೆ ತಾಯಿಗೆ ಕನಿಕರ ಪ್ರೀತಿ ಜಾಸ್ತಿ ಇರುತ್ತದೆ. ಅದು ಸಹಜವೂ ಕೂಡ. ಆದುದರಿಂದ ನಿನ್ನ ಮಕ್ಕಳು ಪಾಂಡು ಮಕ್ಕಳಿಗೆ ತೊಂದರೆ ಕೊಡದಂತೆ ತಿದ್ದಿ ಬುದ್ಧಿ ಹೇಳು. ತಂದೆ ಇಲ್ಲದ ಅವರನ್ನು ನಿನ್ನ ಮಕ್ಕಳಂತೆಯೇ ಪಾಲಿಸಬೇಕು. ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಎಂದು ತಾರತಮ್ಯ ತೋರಬೇಡ. ಭಗವಂತ ಮೆಚ್ಚುವುದಿಲ್ಲ' ಎಂದು ಬುದ್ಧಿವಾದ ಹೇಳಿದರು.

ನಮ್ಮ ಮನೆಗಳಲ್ಲೂ ಕೂಡ ತಂದೆ ತಾಯಿಗಳು ಹೆಚ್ಚು ಕಷ್ಟ ಪಡುವ ಮಕ್ಕಳಿಗೆ ಹೆಚ್ಚು ಪ್ರೀತಿ ತೋರಿಸುತ್ತಾರೆ ಆದರೆ ಅವರಿಗೆ ಎಲ್ಲರ ಬಗ್ಗೆ ಸಮಾನ ಪ್ರೀತಿ ಇರುತ್ತದೆ. ಇದನ್ನು ತಿಳಿದಾಗ ನಮಗೆ ಕುಟುಂಬದಲ್ಲಿ ಒಡಹುಟ್ಟಿದವರ ಬಗ್ಗೆ ಅಸಮಾಧಾನ ಇರುವುದಿಲ್ಲ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಸಮಾಚಾರ ಸಣ್ಣದಲ್ಲ

ಸಂದೇಶ ಪ್ರಕಟಿಸಿದ ಫಾಫ್ ಡು ಪ್ಲೆಸಿಸ್

ನವದೆಹಲಿ: ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಸೇರ್ಪಡೆಯಾದ ಎರಡು ದಿನಗಳ ಬಳಿಕ ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಫಾಫ್ ಡು ಪ್ಲೆಸಿಸ್ ಮಾಜಿ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ತಮ್ಮ ಅಭಿಮಾನಿಗಳಿಗೆ ಭಾವನಾತ್ಮಕ ಸಂದೇಶ ವನ್ನು ಬರೆದಿದ್ದಾರೆ. ತಮಗೆ ಆರ್‌ಸಿಬಿ ತಂಡದಲ್ಲಿ ಬೆಂಬಲ ನೀಡಿದ್ದ ಸಹ ಆಟಗಾರರು, ಟೀಮ್ ಮ್ಯಾನೇಜ್‌ಮೆಂಟ್ ಹಾಗೂ ಪ್ರಾಮಾಣಿಕ ಅಭಿಮಾನಿಗಳಿಗೆ ಧನ್ಯವಾದ ಗಳನ್ನು ಅರ್ಪಿಸಿದ್ದಾರೆ. ನವೆಂಬರ್ 24 ಮತ್ತು 25ರಂದು ಸೌದಿ ಅರೇಬಿಯಾದ ಜೆಡ್ಡಾ ನಗರದಲ್ಲಿ ನಡೆದಿದ್ದ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಮೆಗಾ ಹರಾಜಿನಲ್ಲಿ ಆರ್‌ಟಿಎಂ ಮೂಲಕ ಫಾಫ್ ಡು ಪ್ಲೆಸಿಸ್ ಅವರನ್ನು ಉಳಿಸಿಕೊಳ್ಳುವಲ್ಲಿ ಬೆಂಗಳೂರು ಫ್ರಾಂಚೈಸಿ ನಿರಾಕರಿಸಿತ್ತು. ಈ ಹಿನ್ನೆಲೆಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ 40ರ ಪ್ರಾಯದ ಆಟಗಾರನನ್ನು ಖರೀದಿಸಿತ್ತು. ಫಾಫ್ ಡು ಪ್ಲೆಸಿಸ್ ಅವರು 2022ರ ಮೆಗಾ ಹರಾಜಿನ ಮೂಲಕ ಬೆಂಗಳೂರು ತಂಡಕ್ಕೆ ಬಂದಿದ್ದರು. ಮೂರು ಆವೃತ್ತಿಗಳಲ್ಲಿ ಆರ್‌ಸಿಬಿಯನ್ನು ಮುನ್ನಡೆಸಿದ್ದರು. 2024ರ ಟೂರ್ನಿಯಲ್ಲಿ ಬೆಂಗಳೂರು ತಂಡ ಪ್ಲೇಆಫ್‌ಗೆ ಲಗ್ಗೆ ಇಟ್ಟಿತ್ತು ಹಾಗೂ ಆ ಆವೃತ್ತಿಯಲ್ಲಿ ಅವರು 438 ರನ್‌ಗಳನ್ನು ಕಲೆ ಹಾಕಿದ್ದರು. 2023ರ ಟೂರ್ನಿಯಲ್ಲಿ ಅವರು ಆರ್‌ಸಿಬಿ ಪರ 700ಕ್ಕೂ ಅಧಿಕ ರನ್‌ಗಳನ್ನು ಗಳಿಸಿದ್ದರು. ಫಾಫ್ ಡು ಪ್ಲೆಸಿಸ್ ಸ್ಥಾನಕ್ಕೆ ಇದೀಗ ಇಂಗ್ಲೆಂಡ್ ತಂಡದ ಫಿಲ್ ಸಾಲ್ಟ್ ಬಂದಿದ್ದು, ವಿರಾಟ್ ಕೊಹ್ಲಿ ಜೊತೆ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ.

ಮೊದಲ ಪಂದ್ಯಕ್ಕೆ ಪಾಂಡ್ಯ ಅಲಭ್ಯ

ಮುಂಬಯಿ: ಮುಂದಿನ ವರ್ಷ ನಡೆಯುವ 18ನೇ ಆವೃತ್ತಿಯ ಐಪಿಎಲ್ ಟೂರ್ನಿಗೆ ಈಗಾಗಲೇ

ಆಟಗಾರರ ಮೆಗಾ ಹರಾಜು ಮುಕ್ತಾಯ ಕಂಡಿದೆ. ಎಲ್ಲ ಫ್ರಾಂಚೈಸಿಗಳು ಸ್ಟಾರ್ ಆಟಗಾರರನ್ನು ಖರೀದಿ ಮಾಡಿ ಬಲಿಷ್ಠ ತಂಡವನ್ನು ಕಟ್ಟಿದೆ. ಆದರೆ ಮುಂಬೈ ಇಂಡಿಯನ್ಸ್ ತಂಡದ ನಾಯಕನಾಗಿರುವ ಹಾರ್ದಿಕ್ ಪಾಂಡ್ಯಗೆ ಮುಂದಿನ ಆವೃತ್ತಿಯ ಮೊದಲ ಪಂದ್ಯ ಆಡಲು ಸಾಧ್ಯವಿಲ್ಲ, ಇದಕ್ಕೆ ಕಾರಣ ಅವರು ಕಳೆದ ಆವೃತ್ತಿಯಲ್ಲಿ ಮಾಡಿದ ಒಂದು ಎಡವಟ್ಟು. ಕಳೆದ ಆವೃತ್ತಿಯ ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಕಣಕ್ಕಿಳಿದಿದ್ದ ಮುಂಬೈ ತಂಡ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ, ಹೀಗಾಗಿ ನಾಯಕ ಹಾರ್ದಿಕ್ ಪಾಂಡ್ಯಗೆ 30 ಲಕ್ಷ ರೂ. ದಂಡ ಹಾಗೂ ಒಂದು ಪಂದ್ಯದ ನಿಷೇಧ ಹೇರಲಾಗಿತ್ತು. ಇದು ಮುಂಬೈ ಆಡಿದ ಅಂತಿಮ ಲೀಗ್ ಪಂದ್ಯವಾಗಿತ್ತು, ಹೀಗಾಗಿ ಪಾಂಡ್ಯ ನಿಷೇಧದ ಶಿಕ್ಷೆ ಈ ಬಾರಿಯ ಐಪಿಎಲ್‌ನಲ್ಲಿ ಮುಂದುವರೆಯಲಿದೆ.

ಡೋಪಿಂಗ್ ಪರೀಕ್ಷೆ ನೀತಿ ಸಂಹಿತೆ ಉಲ್ಲಂಘನೆ-ಅಖಿಲ ಭಾರತ ಕಿಸಾನ್ ನಾಯಕರಾಗಿರುವ ಕ್ರೀಡಾಳು

ಕುಸ್ತಿಪಟು ಬಜರಂಗ್ ಪೂನಿಯಾಗೆ ನಾಲ್ಕು ವರ್ಷಗಳ ನಿಷೇಧ ಹೇರಿಕೆ



ನವದೆಹಲಿ: ಮಾರ್ಚ್ 10ರಂದು ರಾಷ್ಟ್ರೀಯ ತಂಡದ ಆಯ್ಕೆ ಟ್ರಯಲ್ಸ್‌ನ ಸಮಯದಲ್ಲಿ ಡೋಪಿಂಗ್ ಪರೀಕ್ಷೆ ನೀತಿ ಸಂಹಿತೆ ಉಲ್ಲಂಘಿಸಿದ ಕಾರಣಕ್ಕೆ ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ನಾಲ್ಕು ವರ್ಷಗಳ ಕಾಲ ನಿಷೇಧ ಹೇರಲಾಗಿದೆ. ಹರಿಯಾಣದ ಸೋನೆಪತ್‌ನಲ್ಲಿ ಡೋಪಿಂಗ್ ಪರೀಕ್ಷೆಗೆ ಮೂತ್ರ ಮಾದರಿ ಸಲ್ಲಿಸಲು ನಿರಾಕರಿಸಿದ ಕಾರಣಕ್ಕೆ ರಾಷ್ಟ್ರೀಯ ಉದ್ದೀಪನ ಮದ್ದು ವಿರೋಧಿ ಸಂಸ್ಥೆ (ನಾಡಾ) ನಾಲ್ಕು ವರ್ಷಗಳ ಕಾಲ ಪೂನಿಯಾರನ್ನು ಅಮಾನತುಗೊಳಿಸಿದೆ.

ಅಮಾನತಿನ ಕಾರಣಕ್ಕಾಗಿ ಇನ್ನು ಮುಂದೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕುಸ್ತಿಯಲ್ಲಿ ಪಾಲ್ಗೊಳ್ಳುವಂತಿಲ್ಲ. ಇದೇ ವರ್ಷ ಏಪ್ರಿಲ್ 23ರಂದು ಅವರನ್ನು ನಾಡಾ ತಾತ್ಕಾಲಿಕವಾಗಿ ಅಮಾನತು ಮಾಡಿತ್ತು. ಸಂಯುಕ್ತ ವಿಶ್ವ ಕುಸ್ತಿ ಸಂಸ್ಥೆಯೂ (ಯುಡಬ್ಲ್ಯುಡಬ್ಲ್ಯು) ಅದನ್ನು ಅಂಗೀಕರಿಸಿ ಆದೇಶ ಹೊರಡಿಸಿತ್ತು. ಆದರೆ ಬಜರಂಗ್ ಪೂನಿಯಾ ತಾತ್ಕಾಲಿಕ ಅಮಾನತಿಗೆ ವಿರೋಧ ವ್ಯಕ್ತಪಡಿಸಿದ್ದರು. ಈ ಕ್ರಮ ಪ್ರಶ್ನಿಸಿ ಮೇ 31ರಂದು ಅವರು ನಾಡಾಗೆ ಅರ್ಜಿ ಸಲ್ಲಿಸಿದ್ದರು, ಬಳಿಕ ನಾಡಾದ ಶಿಸ್ತು ವಿರೋಧಿ ಡೋಪಿಂಗ್ ಸಮಿತಿಯ (ಎಡಿಡಿಪಿ) ಆರೋಪಕ್ಕೆ ಸಂಬಂಧಿಸಿ ಔಪಚಾರಿಕ ನೋಟಿಸ್ ನೀಡುವ ತನಕ ಅಮಾನತು ತಾತ್ಕಾಲಿಕವಾಗಿ ತೆಗೆದುಹಾಕಿತು. ಜೂನ್ 23ರಂದು ನಾಡಾಗೆ, ಎಡಿಡಿಪಿ ಔಪಚಾರಿಕವಾಗಿ ಆರೋಪಗಳನ್ನು ಸಲ್ಲಿಸಿತ್ತು.

ಅಂತಿಮ ವಿಚಾರಣೆಯ ಬಳಿಕ ನಿರ್ಧಾರ: ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ನಾಯಕತ್ವ ವಹಿಸಿಕೊಂಡಿದ್ದ ಬಜರಂಗ್ ಪೂನಿಯಾ ಜುಲೈ 11ರಂದು ಆರೋಪಗಳ ವಿರುದ್ಧ ಸವಾಲು ಹಾಕಿದ್ದರು. ಆದರೆ ಸೆಪ್ಟೆಂಬರ್ 20 ಮತ್ತು ಅಕ್ಟೋಬರ್ 4ರಂದು ಅಂತಿಮ ವಿಚಾರಣೆ ನಡೆಸಿದ್ದ ನಾಡಾ, ಇದೀಗ ನಾಲ್ಕು ವರ್ಷಗಳ ಕಾಲ ಕುಸ್ತಿಯಿಂದ ಅಮಾನತು ಮಾಡಿ ನಿರ್ಧಾರ ಕೈಗೊಂಡಿದೆ. ಆರ್ಟಿಕಲ್ 10.3.1ರ ಅಡಿಯಲ್ಲಿನ ನಿರ್ಬಂಧಗಳಿಗೆ ಬಜರಂಗ್ ಪೂನಿಯಾರವರೇ ಹೊಣೆಗಾರ ಎಂದು ತೀರ್ಮಾನಿಸಿದ ಎಡಿಡಿಪಿ, ಈ ಅಮಾನತು ಪ್ರಕ್ರಿಯೆ ಏಪ್ರಿಲ್ 23ರಿಂದಲೇ ಅನ್ವಯವಾಗುತ್ತಿದೆ ಎಂದು ತಿಳಿಸಿದೆ.

‘ತಾನು ಕೇಳಿದ್ದ ಪ್ರಶ್ನೆಗಳಿಗೆ ನಾಡಾ ಬಳಿ ಉತ್ತರ ಇಲ್ಲ. ಕ್ರೀಡಾಪಟುಗಳಿಗೆ ಕಿರುಕುಳ ನೀಡುವುದು ನಾಡಾದ ಉದ್ದೇಶವಾಗಿದೆ. ಅವರ ವಿರುದ್ಧ ಮಾತನಾಡಿದವರನ್ನು ಗುರಿಯಾಗಿಸಿ ಇಂತಹ ಕೆಲಸಕ್ಕೆ ಮುಂದಾಗುತ್ತಾರೆ. ಅವಧಿ ಮೀರಿದ ಕಿಟ್ ಕೊಟ್ಟಿದ್ದರ ಬಗ್ಗೆ ಏಕೆ ಮೌನ ವಹಿಸಿದೆ? ಮುಂದಿನ ಪಂದ್ಯಕ್ಕೆ ಕೇವಲ 20 ನಿಮಿಷಗಳಿದ್ದ ಅವಧಿಯಲ್ಲಿ ಮಾದರಿ ಸಂಗ್ರಹಿಸಲು ಒತ್ತಡ ಹಾಕಿದ್ದು ಏಕೆ? ಇದ್ಯಾವುದಕ್ಕೂ ಉತ್ತರಿಸುತ್ತಿಲ್ಲ, ಆದರೂ ತನ್ನನ್ನು ತಾನು ಸಮರ್ಥನೆ ಮಾಡಿಕೊಳ್ಳುತ್ತಿದೆ’ ತಾನು ಕಾಂಗ್ರೆಸ್‌ನಲ್ಲಿರುವ ಕಾರಣ ಈ ಶಿಕ್ಷೆ ದೊರಕಿರಬಹುದು, ಒಂದು ವೇಳೆ ಬಿಜೆಪಿಯಲ್ಲಿದ್ದರೆ ಈ ಮುಜುಗರದಿಂದ ತಪ್ಪಿಸಿಕೊಳ್ಳುವ ಅವಕಾಶವನ್ನು ಪಡೆಯುತ್ತಿದ್ದೆನೇನೋ’ ಎಂದು ಪೂನಿಯಾ ಪ್ರತಿಕ್ರಿಯಿಸಿದ್ದಾರೆ.

‘ಅವಧಿ ಮೀರಿದ ಕಿಟ್‌ಗಳಿಗೆ ಸಂಬಂಧಿಸಿ ನಾಡಾದಿಂದ ಸ್ಪಷ್ಟನೆ ಪಡೆದ ನಂತರ ಮಾದರಿ ನೀಡಲು ತಾನು ಯಾವಾಗಲೂ ಸಿದ್ಧನಿದ್ದೇನೆ ಎಂದು ಬಜರಂಗ್ ಹೇಳಿದ್ದರು. ಆದಾಗ್ಯೂ, ಬಜರಂಗ್ ಸಹಕರಿಸಲು ನಿರಾಕರಿಸಿದ್ದು ಉದ್ದೇಶಪೂರ್ವಕವಾಗಿದೆ, ಡೋಪಿಂಗ್ ವಿರೋಧಿ ನಿಯಮಗಳು, 2021ರ ಆರ್ಟಿಕಲ್ 20.1 ಮತ್ತು 20.2ರಲ್ಲಿ ವಿವರಿಸಿದಂತೆ ಅವರು ತಮ್ಮ ಜವಾಬ್ದಾರಿಗಳ ಬಗ್ಗೆ ಸ್ಪಷ್ಟ ನಿರ್ಲಕ್ಷ್ಯವನ್ನು ತೋರಿಸಿದ್ದಾರೆ’ ಎಂದು ನಾಡಾ ತನ್ನ ಈ ನಿರ್ಧಾರದ ಕುರಿತಾದ ನಿಲುವನ್ನು ಪ್ರತಿಪಾದಿಸಿದೆ.

ನಾಡಾ ವಿರುದ್ಧ ಪೂನಿಯಾ ಹೇಳಿಕೆ

ಭಾರತೀಯ ಕುಸ್ತಿ ಫೆಡರೇಶನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಕಾರಣಕ್ಕೆ ಡೋಪಿಂಗ್ ನಿಯಂತ್ರಣಕ್ಕೆ ಸಂಬಂಧಿಸಿ ತನಗೆ ಅನ್ಯಾಯವಾಗಿದೆ ಎಂದು ಬಜರಂಗ್ ಪೂನಿಯಾ ನಿರಂತರವಾಗಿ ಹೇಳಿಕೊಂಡಿದ್ದರು. ತಾನು ಮಾದರಿ ನೀಡಲು ಎಂದಿಗೂ ನಿರಾಕರಿಸಲಿಲ್ಲ ಎಂದಿದ್ದರು. ಆದರೆ, 2023ರ ಡಿಸೆಂಬರ್‌ನಲ್ಲಿ ತಮ್ಮ ಮಾದರಿಗಳಿಗೆ ಕಳುಹಿಸಲಾದ ಅವಧಿ ಮೀರಿದ ಪರೀಕ್ಷಾ ಕಿಟ್‌ಗಳ ಬಳಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದೆಯಲ್ಲದೆ, ಈ ಬಗ್ಗೆ ನಾಡಾದಿಂದ ಸ್ಪಷ್ಟೀಕರಣ ಕೋರಿದ್ದೆ ಎಂದು ಈ ಹಿಂದೆ ಪೂನಿಯಾ ಹೇಳಿದ್ದರು.

ಪರ್ತ್ ಟೆಸ್ಟ್ ವೀಕ್ಷಕ ವಿವರಣೆ ವೇಳೆ ವಿವಾದಾತ್ಮಕ ಹೇಳಿಕೆ | ಸಾಧನೆ ಬಗ್ಗೆ ನನಗೆ ಮತ್ತು ತಂಡಕ್ಕೆ ಗೊತ್ತು

ಮಧ್ಯಮ ವೇಗಿ ಎಂದಿದ್ದ ಮಾಂಜ್ರೇಕರ್: ವಿನಯ್ ತಿರುಗೇಟು

ಬೆಂಗಳೂರು: ಪರ್ತ್ ಟೆಸ್ಟ್ ಪಂದ್ಯದ ವೇಳೆ ವೀಕ್ಷಣೆ ನೀಡುತ್ತಿದ್ದ ಮಾಜಿ ಕ್ರಿಕೆಟಿಗ ಸಂಜಯ್ ಮಾಂಜ್ರೇಕರ್ ಟೀಮ್ ಇಂಡಿಯಾದ ಮಾಜಿ ವೇಗಿ, ಕರ್ನಾಟಕದ ಆರ್. ವಿನಯ್ ಕುಮಾರ್ ಬಗ್ಗೆ ವಿವಾದಾತ್ಮಕ ಹೇಳಿಕೆಯೊಂದನ್ನು ನೀಡಿದ್ದರು. ಇದೀಗ ವಿನಯ್ ಕುಮಾರ್ ಮಾಂಜ್ರೇಕರ್‌ಗೆ ತಕ್ಕ ತಿರುಗೇಟು ನೀಡಿದ್ದಾರೆ. ‘ನಾನು ಭಾರತ ತಂಡವನ್ನು ಮೂರು ಮಾದರಿಯಲ್ಲಿ ಪ್ರತಿನಿಧಿಸಿದ ಆಟಗಾರ. ನನ್ನ ಸಾಧನೆ ಬಗ್ಗೆ ನನಗೆ ಮತ್ತು ತಂಡಕ್ಕೆ ತಿಳಿದಿದೆ. ಭಾರತ ತಂಡವನ್ನು ಪ್ರತಿನಿಧಿಸಿದ ಬಗ್ಗೆ ಬಹಳ ಹೆಮ್ಮೆ ಇದೆ. ಬಹಳ ಕಷ್ಟಪಟ್ಟು ಕ್ರಿಕೆಟಿಗನಾಗಿ ಬೆಳೆದಿದ್ದೇನೆ’ ಎಂದು ಹೇಳುವ ಮೂಲಕ ಮಾಂಜ್ರೇಕರ್‌ಗೆ ತಿರುಗೇಟು ಕೊಟ್ಟಿದ್ದಾರೆ.

ಮಾಂಜ್ರೇಕರ್ ಅವರು ಕಾಮೆಂಟ್ರಿ ವೇಳೆ ರಣಜಿ ಪಂದ್ಯಗಳಲ್ಲಿ ಪಿಚ್ ಮೇಲೆ ಹೆಚ್ಚು ಹುಲ್ಲು ಇರಲಿದ್ದು, ಗಂಟೆಗೆ 120 ಕಿ.ಮೀ. ವೇಗದಲ್ಲಿ ಬೌಲ್ ಮಾಡುವ ವಿನಯ್ ಕುಮಾರ್‌ರಂತಹ ಬೌಲರ್‌ಗಳೂ ಅತೀ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ’ ಎಂದಿದ್ದರು, ಇದು ವಿನಯ್ ಕುಮಾರ್ ಸಿಟ್ಟಿಗೆ ಕಾರಣವಾಗಿತ್ತು.

ದಾವಣಗೆರೆ ಎಕ್ಸ್‌ಪ್ರೆಸ್ ಎಂದೇ ಪ್ರಸಿದ್ಧವಾಗಿರುವ ವಿನಯ್ ಕುಮಾರ್ ಭಾರತ ತಂಡದ ಪರ ಟೆಸ್ಟ್,

ಏಕದಿನ ಮತ್ತು ಟಿ20 ಹೀಗೆ ಮೂರೂ ಮಾದರಿಯ ಕ್ರಿಕೆಟ್ ಆಡಿದ್ದು, ತಮ್ಮ ಸ್ವಿಂಗ್ ಬೌಲಿಂಗ್‌ಗೆ ಹೆಚ್ಚು ಹೆಸರುವಾಸಿ ಆಗಿದ್ದರು. ಟೀಮ್ ಇಂಡಿಯಾ ಪರ ಏಕೈಕ ಟೆಸ್ಟ್, 31 ಏಕದಿನ ಕ್ರಿಕೆಟ್ ಮತ್ತು 9 ಅಂತಾರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ ಕೀರ್ತಿ ಅವರದ್ದಾಗಿದ್ದು, ಎಲ್ಲಾ ಮಾದರಿ ಕ್ರಿಕೆಟ್‌ನಿಂದ ಒಟ್ಟು 49 ಅಂತಾರಾಷ್ಟ್ರೀಯ ವಿಕೆಟ್ ಪಡೆದಿದ್ದಾರೆ.

2011ರಲ್ಲಿ ದಿಲ್ಲಿಯಲ್ಲಿ ನಡೆದ ಪ್ರವಾಸಿ ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ತಮ್ಮ ಶ್ರೇಷ್ಠ ಬೌಲಿಂಗ್ ಪ್ರದರ್ಶನ ನೀಡಿದ್ದ ವಿನಯ್ 30 ರನ್ ನೀಡಿ, 4 ವಿಕೆಟ್‌ಗಳನ್ನು ಪಡೆದು ಮಿಂಚಿದ್ದರು. 2013-14 ಮತ್ತು 2014-15ರ ಸಾಲಿನಲ್ಲಿ ಕರ್ನಾಟಕ ತಂಡದ ನಾಯಕನಾಗಿ ರಣಜಿ ಟ್ರೋಫಿ ಟೂರ್ನಿಯಲ್ಲಿ ರಾಜ್ಯಕ್ಕೆ ಬ್ಯಾಕ್ ಟು ಬ್ಯಾಕ್ ಪ್ರಶಸ್ತಿ ಮುಡಿಗೇರಿಸಿಕೊಟ್ಟಿದ್ದ ಹಿರಿಮೆ ಅವರದ್ದಾಗಿದೆ.

ಐಸಿಸಿ ರ‍್ಯಾಂಕಿಂಗ್ ಪಟ್ಟಿ ಪ್ರಕಟ-ಭಾರತೀಯ ಕ್ರಿಕೆಟರ್‌ಗಳಿಗೆ ಮತ್ತೆ ಮೇಲುಗೈ

ಬುಮ್ರಾ ನಂ.1 ಟೆಸ್ಟ್ ಬೌಲರ್, ಜೈಸ್ವಾಲ್ ನಂ.2 ಬ್ಯಾಟರ್

ದುಬೈ: ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಒಟ್ಟು 8 ವಿಕೆಟ್ ಕಿತ್ತು ಅಮೋಘ ಬೌಲಿಂಗ್ ಪ್ರದರ್ಶನ ತೋರಿದ್ದ ಭಾರತೀಯ ವೇಗಿ ಜಸ್‌ಪ್ರೀತ್ ಬುಮ್ರಾ(883) ನೂತನ ಟೆಸ್ಟ್ ಬೌಲಿಂಗ್ ಶ್ರೇಯಾಂಕದಲ್ಲಿ ನಂ.1 ಸ್ಥಾನಕ್ಕೇರಿದ್ದಾರೆ. ಇದೇ ಪಂದ್ಯದಲ್ಲಿ ಶತಕ ಬಾರಿಸಿ ಮಿಂಚಿದ್ದ ಯಶಸ್ವಿ ಜೈಸ್ವಾಲ್ 825 ರೇಟಿಂಗ್ ಅಂಕದೊಂದಿಗೆ ಬ್ಯಾಟರ್‌ಗಳ ಪೈಕಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಬಾಂಗ್ಲಾದೇಶ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಶ್ರೇಷ್ಠ ಬೌಲಿಂಗ್ ಪ್ರದರ್ಶನ ತೋರಿದ್ದ ವೇಳೆ ಜಸ್‌ಪ್ರೀತ್ ಬುಮ್ರಾ ಅಗ್ರಸ್ಥಾನಕ್ಕೇರಿದ್ದರು. ಇದಾದ ಬಳಿಕ ನ್ಯೂಜಿಲ್ಯಾಂಡ್ ವಿರುದ್ಧದ ಸರಣಿಯಲ್ಲಿ ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ವಿಫಲವಾದ ಕಾರಣ ಅಗ್ರಸ್ಥಾನದಿಂದ ಕೆಳಗಿಳಿದು ಮೂರನೇ ಸ್ಥಾನ ಪಡೆದಿದ್ದರು. ಇದೀಗ ಮತ್ತೆ ಅಗ್ರಸ್ಥಾನಕ್ಕೆ ಮರಳುವಲ್ಲಿ ಬುಮ್ರಾ ಯಶಸ್ವಿಯಾಗಿದ್ದಾರೆ. ಈ ಹಾದಿಯಲ್ಲಿ ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ(872) ಮತ್ತು ಆಸ್ಟೇಲಿಯಾದ ಜೋಶ್ ಹ್ಯಾಜಲ್‌ವುಡ್(860) ಅವರನ್ನು ಹಿಂದಿಕ್ಕಿದ್ದಾರೆ. ಉಭಯ ಆಟಗಾರರು ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿದ್ದಾರೆ. ಆರ್.ಅಶ್ವಿನ್ ಒಂದು ಸ್ಥಾನದ ಭಡ್ತಿಯೊಂದಿಗೆ 4ನೇ ಸ್ಥಾನಕ್ಕೇರಿದ್ದಾರೆ.

ಜೈಸ್ವಾಲ್ ಮಾತ್ರವಲ್ಲದೆ ಪರ್ತ್‌ನಲ್ಲಿ ಶತಕ ಬಾರಿಸಿ ಮಿಂಚಿದ್ದ ವಿರಾಟ್ ಕೊಹ್ಲಿ ಕೂಡ ಭಾರೀ ಜಿಗಿತ ಕಂಡಿದ್ದಾರೆ. 9 ಸ್ಥಾನಗಳ ಪ್ರಗತಿ ಕಂಡಿರುವ ಕೊಹ್ಲಿ 689 ರೇಟಿಂಗ್ ಅಂಕದೊಂದಿಗೆ 13ನೇ ಸ್ಥಾನವನ್ನು ಪಡೆದಿದ್ದಾರೆ. ರಿಷಭ್ ಪಂತ್ 6ನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ಹಿಂದಿನಂತೆ ಇಂಗ್ಲೆಂಡ್‌ನ ಜೋ ರೂಟ್(903) ತಮ್ಮ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಹೆಬ್ಬೆರಳಿನ ಗಾಯದಿಂದ ಮೊದಲ ಪಂದ್ಯ ಆಡದ ಶುಭಮನ್ ಗಿಲ್ ಒಂದು ಸ್ಥಾನ ಕೆಳಗಿಳಿದು 17ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಭಾರತೀಯರಾದ ರವೀಂದ್ರ ಜಡೇಜಾ(423) ಮತ್ತು ಆರ್.ಅಶ್ವಿನ್(290) ಈ ಹಿಂದಿನಂತೆ ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿ ಮುಂದುವರಿದಿದ್ದಾರೆ. ಇದೇ ವೇಳೆ ಅಕ್ಷರ್ ಪಟೇಲ್(239) ಒಂದು ಸ್ಥಾನದ ಜಿಗಿತದೊಂದಿಗೆ 7ನೇ ಸ್ಥಾನ ಪಡೆದಿದ್ದಾರೆ.

ಟಾಪ್-5 ಬೌಲರ್ಸ್

1. ಜಸ್‌ಪ್ರೀತ್ ಬುಮ್ರಾ-883(ಭಾರತ)
2. ಕಗಿಸೊ ರಬಾಡ-872(ದಕ್ಷಿಣ ಆಫ್ರಿಕಾ)
3. ಜೋಶ್ ಹ್ಯಾಜಲ್‌ವುಡ್-860(ಆಸ್ಟ್ರೇಲಿಯಾ)
4. ಆರ್.ಅಶ್ವಿನ್-807(ಭಾರತ)
5. ಪ್ರಭಾತ್ ಜಯಸೂರ್ಯ-801(ಶ್ರೀಲಂಕಾ)

ಟಾಪ್-5 ಬ್ಯಾಟರ್ಸ್

1. ಜೋ ರೂಟ್-903(ಇಂಗ್ಲೆಂಡ್)
2. ಯಶಸ್ವಿ ಜೈಸ್ವಾಲ್-825(ಭಾರತ)
3. ಕೇನ್ ವಿಲಿಯಮ್ಸನ್-804(ನ್ಯೂಜಿಲ್ಯಾಂಡ್)
4. ಹ್ಯಾರಿ ಬ್ರೂಕ್-778(ಇಂಗ್ಲೆಂಡ್)
5. ಡೇರಿಯಲ್ ಮಿಚೆಲ್-743(ನ್ಯೂಜಿಲ್ಯಾಂಡ್)

ಉರ್ವಿಲ್ ಸ್ಫೋಟಕ ಶತಕ

ಇಂದೋರ್: ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸುವ ಮೂಲಕ ಗುಜರಾತ್‌ನ ಉರ್ವಿಲ್ ಪಟೇಲ್ ಭಾರತೀಯ ಟಿ20 ಕ್ರಿಕೆಟ್‌ನಲ್ಲಿ ದಾಖಲೆಯೊಂದನ್ನು ಬರೆದಿದ್ದಾರೆ. ಅತಿ ವೇಗವಾಗಿ ಶತಕ ಸಿಡಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಗೆ ಅವರು ಪಾತ್ರರಾಗಿದ್ದಾರೆ.

ಇಂದೋರ್‌ನ ಎಮರಾಲ್ಡ್ ಹೈಟ್ಸ್ ಇಂಟರ್‌ನ್ಯಾಷನಲ್ ಸ್ಕೂಲ್ ಗ್ರೌಂಡ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಉರ್ವಿಲ್ ಪಟೇಲ್ ಕೇವಲ 28 ಎಸೆತಗಳಲ್ಲಿ ಶತಕ ಸಿಡಿಸಿ ಮಿಂಚಿದರು. ಇದುವರೆಗೆ ಅತಿ ವೇಗವಾಗಿ ಟಿ20 ಶತಕ ಬಾರಿಸಿದ ಭಾರತೀಯ ದಾಖಲೆ ರಿಷಭ್ ಪಂತ್ ಹೆಸರಿನಲ್ಲಿತ್ತು. 2018ರಲ್ಲಿ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಹಿಮಾಚಲ ಪ್ರದೇಶ ವಿರುದ್ಧದ ಪಂದ್ಯದಲ್ಲಿ ದೆಹಲಿ ಪರ ಕಣಕ್ಕಿಳಿದ್ದ ಪಂತ್ 32 ಎಸೆತಗಳಲ್ಲಿ ಶತಕ ಸಿಡಿಸಿದ್ದು, ಇದೀಗ ಆ ದಾಖಲೆ ಪತನಗೊಂಡಿದೆ.

ವಿಟಾಕೀಸ್

ಕನ್ನಡದಲ್ಲೂ ಪಣಿ

ಜೋಜು ಜಾರ್ಜ್ ನಟಿಸಿ, ನಿರ್ದೇಶಿಸಿರುವ ಪಣಿ ಚಿತ್ರವು ಕನ್ನಡಕ್ಕೆ ಡಬ್ ಆಗಿದ್ದು ಈ ವಾರ ತೆರೆಗೆ ಬರಲಿದೆ. ಹೊಂಬಾಳೆ ಫಿಲಂಸ್ ಕರ್ನಾಟಕದಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡುತ್ತಿದೆ.

ಕಳೆದ 30 ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ಹಲವು ಚಿತ್ರಗಳಲ್ಲಿ ನಟಿಸಿದ್ದೇನೆ. ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಈ ಚಿತ್ರವು ಕಳೆದ ತಿಂಗಳು ಮಲೆಯಾಳಂನಲ್ಲಿ ಬಿಡುಗಡೆಯಾಗಿದೆ. ಇದೀಗ ಕನ್ನಡಕ್ಕೆ ಡಬ್ಬಿಂಗ ಆಗಿ ಈ ವಾರ ಕರ್ನಾಟಕದಲ್ಲಿ ಬಿಡುಗಡೆಯಾಗುತ್ತಿದೆ. ಹೊಂಬಾಳೆ ಫಿಲಂ ಸಂಸ್ಥೆಯು ಕನ್ನಡ ಅವತರಣಿಕೆಯನ್ನು ಬಿಡುಗಡೆ ಮಾಡುತ್ತಿದೆ. ಇದೊಂದು ಮಾಸ್ ಮತ್ತು ಕಮರ್ಷಿಯಲ್ ಚಿತ್ರ. ಕೇರಳದಲ್ಲಿ ಬಿಡುಗಡೆಯಾಗಿ ಯಶಸ್ವಿಯಾಗಿದೆ. ಸೇಡಿನ ಕಥೆಯಾದ್ದರಿಂದ, ಎಲ್ಲಾ ಕಡೆ ಸಲ್ಲುತ್ತದೆ ಎಂಬ ನಂಬಿಕೆ ಇದೆ. ಕನ್ನಡದಲ್ಲೂ ಪ್ರೇಕ್ಷಕರು ಚೆನ್ನಾಗಿ ಸ್ವೀಕರಿಸುತ್ತಾರೆ ಎಂಬ ನಂಬಿಕೆ ಇದೆ. ಇದೊಂದು ಕಾಲ್ಪನಿಕ ಕಥೆಯಾಗಿದ್ದರು ಎರಡು ವರ್ಷಗಳ ಕಾಲ ಚರ್ಚೆ ನಡೆಸಿ ಚಿತ್ರಕಥೆ ಮಾಡಿದ್ದೇವೆ. ಈ ಚಿತ್ರದಲ್ಲಿ ಸಾಕಷ್ಟು ಹೊಸಬರಿದ್ದಾರೆ. ಇದೊಂದು ಸರಳ ಕಥೆಯಾಗಿದ್ದು, ಅದನ್ನು ನೈಜವಾಗಿ ತೋರಿಸುವ ಪ್ರಯತ್ನ ಮಾಡಲಾಗಿದೆ ಎಂದು ಜೋಜು ಜಾರ್ಜ್ ಹೇಳಿದರು.

ಈ ಹಿಂದೆ ಹುಡುಗ್ರು, ಕಿಚ್ಚು ಹೀಗೆ ಹಲವು ಚಿತ್ರಗಳಲ್ಲಿ ನಟಿಸಿದ್ದೆ. ಈಗ ಬಹಳ ದಿನಗಳ ನಂತರ ಬೆಂಗಳೂರಿಗೆ ಬಂದಿದ್ದೇನೆ. ನಾನು ಜೋಜು ಜಾರ್ಜ್ ಅವರ ಅಭಿಮಾನಿ. ಅವರ ಜತೆಗೆ ನಟಿಸಬಹುದು ಎಂದು ಊಹಿಸಿರಲಿಲ್ಲ. ಈ ಚಿತ್ರದಲ್ಲಿ ನಟಿಸಿರುವುದು ಖುಷಿಕೊಟ್ಟಿದೆ ಎಂದು ಅಭಿನಯ ಹೇಳಿದರು. ಸಾಗರ್ ಸೂರ್ಯ, ಜುನೈಯ್, ಬಾಬ್ಬಿ ಕುರಿಯ, ಅಭಯಾ ಹಿರಣ್ಮಯಿ, ರಂಜಿ ವೇಲಾಯುಧ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ.

ಕ್ರಿಸ್‌ಮಸ್‌ಗೆ ಕಿಚ್ಚನ ಮ್ಯಾಕ್ಸ್



ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಆರಂಭದಿಂದಲೂ ಕುತೂಹಲ ಮೂಡಿಸಿತ್ತು, ಚಿತ್ರದ ಬಿಡುಗಡೆಗಾಗಿ ಸಿನಿಪ್ರಿಯರು ಕಾದು ಕುಳಿತ್ತಿದ್ದರು. ಕಿಚ್ಚು ಸುದೀಪ್ ಅವರನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರರಾಗಿದ್ದರು. ಅಂತು ಮ್ಯಾಕ್ಸ್ ಟೀಮ್‌ನಿಂದ ಸಿಹಿ ಸುದ್ದಿ ಸಿಕ್ಕಿದೆ. ಡಿಸೆಂಬರ್ 25 ರಂದು ಮ್ಯಾಕ್ಸ್ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಆ ಮೂಲಕ ಕಿಚ್ಚ ಸುದೀಪ್ ಕ್ರಿಸ್‌ಮಸ್‌ಗೆ ಭರ್ಜರಿ ಉಡುಗೊರೆ ನೀಡಿದ್ದಾರೆ. ವಿಕ್ರಾಂತ್ ರೋಣ ಬಳಿಕ ಸುದೀಪ್ ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಹಾಗಾಗಿ ಅಭಿಮಾನಿಗಳು ಬೇಸರಗೊಂಡಿದ್ದರು. ಆ ಸಮಯದಲ್ಲಿಯೇ ಮ್ಯಾಕ್ಸ್ ಸೆಟ್ಟೇರಿತ್ತು. ಇದರ ಜತೆಗೆ ಪೋಸ್ಟರ್‌ನಲ್ಲಿಯೂ ಚಿತ್ರ ಗಮನಸೆಳೆದಿತ್ತು. ಆ ಬಳಿಕ ಟೀಸರ್ ಬಿಡುಗಡೆ ಮಾಡಿದ ಚಿತ್ರತಂಡ ಸಿನಿಪ್ರಿಯರ ಕುತೂಹಲವನ್ನು ದುಪ್ಪಟ್ಟುಗೊಳಿಸಿತು. ಮ್ಯಾಕ್ಸ್ ಆ್ಯಕ್ಷನ್ ಜತೆಗೆ ಥ್ರಿಲ್ಲರ್ ಕಥೆಯನ್ನೂ ಒಳಗೊಂಡಿದ್ದು, ಕಿಚ್ಚನನ್ನು ಆ್ಯಕ್ಷನ್ ಲುಕ್‌ನಲ್ಲಿ ನೋಡಿ ಅಭಿಮಾನಿಗಳು ಬಹುಪರಾಕ್ ಎಂದಿದ್ದರು. ಈ ಸಿನಿಮಾಗಾಗಿ ತಮಿಳುನಾಡಿನಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗಿದೆ. ಮ್ಯಾಕ್ಸ್‌ನಲ್ಲಿ, ಕಿಚ್ಚ ಮತ್ತೊಮ್ಮೆ ಖಾಕಿ ಲುಕ್‌ನಲ್ಲಿ ಮಿಂಚಿದ್ದಾರೆ. ವರಲಕ್ಷ್ಮಿ ಶರತ್ ಕುಮಾರ್, ಸಂಯುಕ್ತಾ ಹೊರನಾಡು, ಸುಕೃತಾ ವಾಗ್ಲೆ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ವಿಜಯ ಕಾರ್ತಿಕೇಯ ನಿರ್ದೇಶನದ ಈ ಚಿತ್ರ ವಿ.ಕ್ರಿಯೇಷನ್ಸ್ ಮತ್ತು ಕಿಚ್ಚ ಕ್ರಿಯೇಷನ್ಸ್‌ನಲ್ಲಿ ಬ್ಯಾನರ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ.

ಚಂದನವನಕ್ಕೆ ಶುಭ ಮಾಸ: ಚಂದನವನಕ್ಕೆ ಡಿಸೆಂಬರ್ ತಿಂಗಳು ಶುಭ ಮಾಸವಾಗಿದೆ. ಡಿಸೆಂಬರ್‌ನಲ್ಲಿ ತೆರೆಗೆ ಬರುವ ಬಹುತೇಕ ಸಿನಿಮಾಗಳು ಸೂಪರ್ ಹಿಟ್ ಆಗಿವೆ. ಹಾಗಾಗಿಯೇ ವರ್ಷಾಂತ್ಯದಲ್ಲಿ ಸ್ಟಾರ್ ನಟರ ಸಿನಿಮಾಗಳು ತೆರೆಗೆ ಬರಲು ರೆಡಿಯಾಗಿರುತ್ತವೆ. ಕಳೆದ ವರ್ಷ ಕಾಟೇರ ರಿಲೀಸ್ ಆಗಿ ಭರ್ಜರಿ ಪ್ರದರ್ಶನ ಕಂಡಿತ್ತು. ಅಂತೆಯೇ ಈ ವರ್ಷ ಮ್ಯಾಕ್ಸ್ ಅದ್ದೂರಿಯಾಗಿ ತೆರೆಕಾಣಲಿದೆ. ಉಪ್ಪಿ ಅಭಿನಯದ ಯುಐ ಡಿಸೆಂಬರ್ 20 ರಂದು ವಿಶ್ವಾದ್ಯಂತ ರಿಲೀಸ್ ಆಗಲಿದೆ. ಇದರ ಜತೆಗೆ ನವಿರಾದ ಪ್ರೇಮ ಕಾವ್ಯದ ಸಂಜು ವೆಡ್ಸ್ ಗೀತಾ 2 ಕೂಡ ರಿಲೀಸ್ ಆಗಲಿದೆ. ಕನ್ನಡ ಮಾತ್ರವಲ್ಲ ಹಿಂದಿ, ತಮಿಳು, ತೆಲುಗು ಭಾಷೆಯ ಹೈ ಬಜೆಟ್ ಸಿನಿಮಾಗಳೂ ಡಿಸೆಂಬರ್‌ನಲ್ಲಿಯೇ ಬಿಡುಗಡೆಯಾಗಲಿವೆ. ಆದರೆ ಈ ಬಾರಿ ಡಿಸೆಂಬರ್‌ನಲ್ಲಿ ಕನ್ನಡದಲ್ಲಿ ಸಾಲು ಸಾಲು ಸ್ಟಾರ್ ನಟರ ಸಿನಿಮಾಗಳು ಬಿಡುಗಡೆಯಾಗುತ್ತಿ ರುವುದು ಸಿನಿಪ್ರಿಯರಿಗೆ ಖುಷಿ ಕೊಟ್ಟಿದೆ.

ಟಾಲಿವುಡ್ ಅಂಗಳದಲ್ಲಿ ರಿಷಬ್

ಕಾಂತಾರ ಸಿನಿಮಾದ ಯಶಸ್ಸಿನ ಬಳಿಕ ಪ್ಯಾನ್ ಇಂಡಿಯಾ ಸ್ಟಾರ್ ಆಗಿರುವ ರಿಷಬ್ ಶೆಟ್ಟಿ, ಟಾಲಿವುಡ್ ಅಂಗಳಕ್ಕೂ ಕಾಲಿಟ್ಟಿದ್ದಾರೆ. ರಿಷಬ್ ತೆಲುಗಿನ ಜೈ ಹನುಮಾನ್ ಚಿತ್ರದಲ್ಲಿ ನಟಿಸುತ್ತಿದ್ದು, ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರಶಾಂತ್ ವರ್ಮಾ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಪೋಸ್ಟರ್ ಈಗಾಗಲೇ ರಿಲೀಸ್ ಆಗಿದ್ದು ಗಮನಸೆಳೆದಿದೆ. ಈ ನಡುವೆಯೇ ರಿಷಬ್ ಮತ್ತೊಂದು ಟಾಲಿವುಡ್ ಚಿತ್ರದಲ್ಲಿ ನಟಿಸಲು ಸಮ್ಮತಿಸಿದ್ದಾರಂತೆ. ಸೂಪರ್ ಹಿಟ್ ಚಿತ್ರ ಬಾಹುಬಲಿ ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಗಂಗರಾಜು ಹೊಸ ಸಿನಿಮಾ ನಿರ್ದೇಶನ ಮಾಡಲು ರೆಡಿಯಾಗಿದ್ದು, ಈ ಚಿತ್ರದಲ್ಲಿ ರಿಷಬ್ ನಾಯಕನಾಗಿ ನಟಿಸಲಿದ್ದಾರಂತೆ. ಕಥೆ ಕೇಳಿ ಮೆಚ್ಚಿರುವ ರಿಷಬ್ ನಟಿಸಲು ಸಮ್ಮತಿಸಿದ್ದಾರೆ ಎಂಬ ಮಾಹಿತಿಯೂ ಇದೆ. ಇದು ಪಿರಿಯಾಡಿಕ್ ಡ್ರಾಮಾ ಜಾನರ್‌ನಲ್ಲಿ ಮೂಡಿಬರುತ್ತಿದ್ದು, ಆ್ಯಕ್ಷನ್ ಕೂಡ ಬೆರೆತಿದೆ. ಚಿತ್ರದ ಪ್ರೀ ಪ್ರೊಡಕ್ಷನ್ ಕಾರ್ಯಗಳು ಆರಂಭವಾಗಿದ್ದು ಮುಂದಿನ ವರ್ಷದ ಆರಂಭದಲ್ಲಿ ಸಿನಿಮಾ ಸೆಟ್ಟೇರುವ ನಿರೀಕ್ಷೆ ಇದೆ. ಇದು ಹೈ ಬಜೆಟ್ ಸಿನಿಮಾವಾಗಿದ್ದು ಸಿತಾರ ಎಂಟರ್‌ಟೇನ್‌ಮೆಂಟ್ ಬ್ಯಾನರ್‌ನಲ್ಲಿ ನಿರ್ಮಾಣವಾಗಲಿದೆ. ಸದ್ಯ ರಿಷಬ್ ಕಾಂತಾರ ಚಾಪ್ಟರ್ 1 ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಕಾಂತಾರ ಚಿತ್ರದ ಪ್ರೀಕ್ವೆಲ್ ಆಗಿ ಈ ಸಿನಿಮಾ ಮೂಡಿಬರುತ್ತಿದ್ದು, ರಿಷಬ್ ಶೆಟ್ಟಿ ಕಥೆ ಬರೆದು ನಿರ್ದೇಶನ ಮಾಡುವ ಜತೆಗೆ ನಾಯಕನಾಗಿಯೂ ನಟಿಸುತ್ತಿದ್ದಾರೆ. ಕಾಂತಾರ ಚಾಪ್ಟರ್ 1 ಮುಂದಿನ ವರ್ಷದ ಅಕ್ಟೋಬರ್ 2 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ಬಾಯ್ ಫ್ರೆಂಡ್ ಪರಿಚಯಿಸಿದ ಕೀರ್ತಿ

ಬಹು ಭಾಷಾ ನಟಿಯಾಗಿ ಗುರುತಿಸಿಕೊಂಡಿರುವ ನಟಿ ಕೀರ್ತಿ ಸುರೇಶ್ ಅವರ ವಿವಾಹ ಯಾವಾಗ ಎಂಬ ಕುತೂಹಲ ಎಲ್ಲರನ್ನು ಕಾಡುತ್ತಿದೆ. ಹೀಗಿರುವಾಗಲೇ ಕೀರ್ತಿ ಸುರೇಶ್ ತಮ್ಮ ಗೆಳೆಯನೊಂದಿಗಿರುವ ಪೋಟೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಪೋಟೋದಲ್ಲಿ ಇರುವವರು ಆಂಟನಿ ಇಬ್ಬರು ಶೀಘ್ರದಲ್ಲಿಯೇ ಮದುವೆಯಾಗಲಿದ್ದಾರೆ ಎಂದು ಬರೆಯಲಾಗಿದೆ. ವೃತ್ತಿಯಲ್ಲಿ ಉದ್ಯಮಿಯಾಗಿರುವ ಆಂಟನಿ ಹಲವು ಕ್ಷೇತ್ರಗಳಲ್ಲಿ ಬಂಡವಾಳ ಹೂಡಿದ್ದಾರೆ. ಕೀರ್ತಿ ಹಾಗೂ ಆಂಟನಿ ಹದಿನಾರು ವರ್ಷಗಳಿಂದಲೂ ಪರಿಚಿತರು, ಇವರ ಸ್ನೇಹ ಪ್ರೀತಿಗೆ ತಿರುಗಿದ್ದು ಶೀಘ್ರದಲ್ಲಿಯೇ ಇಬ್ಬರು ವಿವಾಹವಾಗಲಿದ್ದಾರೆ ಎನ್ನಲಾಗುತ್ತಿದೆ.